ಮಂಗಳವಾರ, ಮೇ 16, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 135 | ಪುಟ 16

www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ-ಕುಶಲ
ಮಕ್ಕಳ ವ್ಯಕ್ತಿತ್ವ ನಿರ್ಮಾಣದಲ್ಲಿ ಪ್ರಕೃತಿಯ ಕೊಡುಗೆ ದೊಡ್ಡದು

ಆಳ-ಅಗಲ
ಕಾಂಗ್ರೆಸ್ ಬೆನ್ನಿಗೆ ನಿಂತ ಅಹಿಂದ ಮತದಾರರು

ವಿದ್ಯುತ್ ಬಿಲ್ ಪಾವತಿಗೆ ಹಿಂದೇಟು 8

ರೈಲಿಗೆ ಸಿಲುಕಿ 22 ಎಮ್ಮೆ ಸಾವು 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
62,345 ▲	18,399 ▲	₹63,050 (ಬೆಂಗಳೂರು)	₹74,500 (ಬೆಂಗಳೂರು)	82.33 ▼

ಶಾಸಕಾಂಗ ಪಕ್ಷದ ನಾಯಕನ ಆಯ್ಕೆ ಇಂದು ಸಾಧ್ಯತೆ; 18ಕ್ಕೆ ಮುಖ್ಯಮಂತ್ರಿ ಪ್ರಮಾಣ?

ಸಿ.ಎಂ ಗಾದಿಗೆ ಹಟ: ಹಾದಿ ಜಟಿಲ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಮುಖ್ಯಮಂತ್ರಿ ಸ್ಥಾನವು ತಮಗೇ ಸಿಗಬೇಕು ಎಂಬ ಪಟ್ಟನ್ನು ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸೋಮವಾರವೂ ಸಡಿಲಿಸಿಲ್ಲ. ಇದರಿಂದಾಗಿ, ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕನ (ಸಿಎಲ್‌ಪಿ) ಆಯ್ಕೆಯು ಕಾಂಗ್ರೆಸ್ ಹೈಕಮಾಂಡ್‌ಗೆ ಇನ್ನಷ್ಟು ಜಟಿಲವಾಗಿದೆ.

‘ಕೈ’ ಪಾಳಯದ 135 ಶಾಸಕರಿಂದ ಅಭಿಪ್ರಾಯ ಸಂಗ್ರಹಿಸಿದ್ದ ಎಐಸಿಸಿ ವೀಕ್ಷಕರಾದ ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಸುಶೀಲ್ ಕುಮಾರ್ ಶಿಂದೆ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಜಿತೇಂದ್ರ ಸಿಂಗ್ ಹಾಗೂ ಪಕ್ಷದ ಮಾಜಿ ಪ್ರಧಾನ ಕಾರ್ಯದರ್ಶಿ ದೀಪಕ್ ಬಾಬರಿಯಾ ಅವರು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಸೋಮವಾರ ಸಂಜೆ ವರದಿ ಸಲ್ಲಿಸಿದರು.

ಈ ವೇಳೆ, ಪಕ್ಷದ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಹಾಗೂ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಹಾಜರಿದ್ದರು. ನೂತನ ನಾಯಕನ ಆಯ್ಕೆ ಕಗ್ಗಂಟನ್ನು ಬಗೆಹರಿಸಲು ಖರ್ಗೆ ಅವರು ಹಿರಿಯ ನಾಯಕರ ಜತೆಗೆ ಸುದೀರ್ಘವಾಗಿ ಚರ್ಚೆ ನಡೆಸಿದರು.

ದೆಹಲಿಯಲ್ಲಿ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿ ಸಮಾಲೋಚನೆ ನಡೆಸುವಂತೆ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಅವರಿಗೆ ಕೆ.ಸಿ. ವೇಣುಗೋಪಾಲ್ ಸೋಮವಾರ ಬೆಳಿಗ್ಗೆ ಸೂಚಿಸಿದ್ದರು. ಸಿದ್ದರಾಮಯ್ಯ ಅವರು ಆಪ್ತ ಶಾಸಕರ ಜತೆಗೆ ವಿಶೇಷ ವಿಮಾನದಲ್ಲಿ ಸೋಮವಾರ ಸಂಜೆ ದೆಹಲಿಗೆ ಬಂದರು.

ಬಳಿಕ ಕೆ.ಜೆ.ಜಾರ್ಜ್, ಎಂ.ಬಿ. ಪಾಟೀಲ, ಜಮೀರ್ ಅಹ್ಮದ್ ಖಾನ್, ಬೈರತಿ ಸುರೇಶ್ ಮತ್ತಿತರ ಜತೆಗೆ ರಹಸ್ಯ ಸಭೆ ನಡೆಸಿ ಮುಂದಿನ ನಡೆ ಕುರಿತು ಸಮಾಲೋಚಿಸಿದರು. ಡಿ.ಕೆ. ಶಿವಕುಮಾರ್ ಅವರು ಅನಾರೋಗ್ಯದ ಕಾರಣ ವೈದ್ಯರ ಸೂಚನೆಯ ಮೇರೆಗೆ ದೆಹಲಿ ಭೇಟಿಯನ್ನು ಕೊನೆಯ ಕ್ಷಣದಲ್ಲಿ ಮುಂದೂಡಿದರು. ಅವರು ಮಂಗಳವಾರ ಮಧ್ಯಾಹ್ನದ ವೇಳೆಗೆ ದೆಹಲಿಗೆ ಬರುವ ಸಾಧ್ಯತೆ ಇದೆ. ಖರ್ಗೆ ಅವರು ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಅವರೊಂದಿಗೆ ಮಂಗಳವಾರ ಸಭೆ ನಡೆಸಲಿದ್ದಾರೆ.

ಬಳಿಕ ಉಭಯ ನಾಯಕರು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡುವ ಸಾಧ್ಯತೆಯೂ ಇದೆ. ಆ ಬಳಿಕವಷ್ಟೇ ನೂತನ ಮುಖ್ಯಮಂತ್ರಿಯ ಹೆಸರನ್ನು ಹೈಕಮಾಂಡ್ ಪ್ರಕಟಿಸಲಿದೆ ಎಂದು ಕಾಂಗ್ರೆಸ್ ಉನ್ನತ ಮೂಲಗಳು ತಿಳಿಸಿವೆ.

8ನೇ ಪುಟ ನೋಡಿ

ಬೆಂಬಲಿಗರ ವಾದ

- ಪಕ್ಷಕ್ಕಾಗಿ ಅವರು ಮಾಡಿರುವ ತ್ಯಾಗವನ್ನು ಕಡೆಗಣಿಸಲಾಗದು
- ಒಬ್ಬ ಸಂಘಟಕನಾಗಿ ಪಕ್ಷವನ್ನು ಇನ್ನಷ್ಟು ಬಲಪಡಿಸುತ್ತಾರೆ
- ಇತರೆ ರಾಜ್ಯಗಳಲ್ಲೂ ಪಕ್ಷದ ಪರ, ಸಂಘಟನೆಗೆ ಕೆಲಸ ಮಾಡಿದ್ದಾರೆ.

ಪ್ರತಿವಾದ

- ಮತ ಸೆಳೆಯಬಲ್ಲರು, ಮುಸಲ್ಮಾನರು, ಹಿಂದುಳಿದ ವರ್ಗಗಳ ಮತ ಪ್ರಮಾಣ ವೃದ್ಧಿ ಆಗಲಿದೆ.
- ಭ್ರಷ್ಟಾಚಾರ ವಿರುದ್ಧದ ಹೋರಾಟದ ಫಲವಾಗಿ ಕಾಂಗ್ರೆಸ್ ಈಗ ಜಯಗಳಿಸಿದೆ.
- ಇ.ಡಿ. ಪ್ರಕರಣ ಇರುವುದರಿಂದ ಡಿಕೆಶಿ ಹೊರೆ ಆಗಬಹುದು.



ಇಂದು ದೆಹಲಿಗೆ ಹೋಗುತ್ತೇನೆ: ಡಿಕೆಶಿ

ಬೆಂಗಳೂರು: ‘ನಾನು ಮಂಗಳವಾರ ಬೆಳಿಗ್ಗೆ ದೆಹಲಿಗೆ ಹೋಗುತ್ತೇನೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕನ ಆಯ್ಕೆಗೆ ಸಂಬಂಧಿಸಿದಂತೆ ಚರ್ಚಿಸಲು ಪಕ್ಷದ ವರಿಷ್ಠರ ಆಹ್ವಾನದ ಮೇರೆಗೆ ಸೋಮವಾರ ದೆಹಲಿಗೆ ತೆರಳಬೇಕಿದ್ದ ಶಿವಕುಮಾರ್, ತಮ್ಮ ಪ್ರವಾಸವನ್ನು ಸಂಜೆ ದಿಢೀರ್ ರದ್ದು ಮಾಡಿದ್ದರು. ಸದಾಶಿವನಗರದ ತಮ್ಮ ನಿವಾಸದಲ್ಲಿ ಸೋಮವಾರ ರಾತ್ರಿ ಸುದ್ದಿಗಾರರ ಜೊತೆ ಮಾತನಾಡಿದ ಶಿವಕುಮಾರ್, ‘ಆರೋಗ್ಯ ಸರಿಯಿಲ್ಲದ ಕಾರಣ ದೆಹಲಿಗೆ ಹೋಗಲು ಸಾಧ್ಯವಾಗಿಲ್ಲ. ವೈದ್ಯರು ವಿಶ್ರಾಂತಿ ತೆಗೆದುಕೊಳ್ಳು-ವಂತೆ ಸೂಚಿಸಿದ್ದಾರೆ’ ಎಂದರು.

8ನೇ ಪುಟ ನೋಡಿ

ಡಿ.ಕೆ.ಶಿವಕುಮಾರ್ ಆತಂಕವೇನು?

ರಾಜಸ್ಥಾನ ಹಾಗೂ ಛತ್ತೀಸಗಢದಲ್ಲಿ ಸಹ ತಲಾ ಎರಡೂವರೆ ವರ್ಷಗಳ ಅಧಿಕಾರ ಹಂಚಿಕೆಯ ಸೂತ್ರ ಹೆಣೆಯಲಾಗಿತ್ತು. ಆದರೆ, ಅಲ್ಲಿನ ಮುಖ್ಯಮಂತ್ರಿಗಳಾದ ಅಶೋಕ ಗೆಹಲೋತ್ ಹಾಗೂ ಭೂಪೇಶ್ ಬಘೆಲ್ ಅವರು ‘ಶಾಸಕರ ಬೆಂಬಲ ಇದೆ’ ಎಂಬ ಕಾರಣಕ್ಕೆ ಅಧಿಕಾರ ಹಸ್ತಾಂತರ ಮಾಡಿರಲಿಲ್ಲ.

ಕರ್ನಾಟಕದಲ್ಲೂ ಎರಡೂವರೆ ವರ್ಷಗಳ ಬಳಿಕ ಇದೇ ಸ್ಥಿತಿ ನಿರ್ಮಾಣವಾದರೆ ನನ್ನ ಗತಿಯೇನು ಎಂದು ಡಿ.ಕೆ. ಶಿವಕುಮಾರ್ ಅವರು ಪಕ್ಷದ ಹಿರಿಯ ನಾಯಕರಲ್ಲಿ ಪ್ರಶ್ನಿಸಿದ್ದಾರೆ. ಇದು ಸಹ ಶಿವಕುಮಾರ್ ಬಿಗಿ ಪಟ್ಟು ಹಿಡಿಯಲು ಕಾರಣ ಎಂದು ಪಕ್ಷದ ಮೂಲಗಳು ತಿಳಿಸಿವೆ.

8ನೇ ಪುಟ ನೋಡಿ

ಕೊಂಡ ಹಾಯುವಿಕೆ

ಜಲಂಧರ್‌ನಲ್ಲಿ ಸೋಮವಾರ ಜರುಗಿದ ‘ಮಾ ಮಾರಿಯಮ್ಮ ಮೇಳ’ದ ಧಾರ್ಮಿಕ ಉತ್ಸವದಲ್ಲಿ ಭಕ್ತರೊಬ್ಬರು ಕೊಂಡ ಹಾಯ್ದರು

-ಎಎಫ್‌ಪಿ ಚಿತ್ರ

ಐಐಎಸ್ಸಿ: ಡೆಂಗಿ ಪತ್ತೆಗೆ ‘ಡ್ಯಾಶ್‌ಬೋರ್ಡ್’

• ನವ್ಯಾ ಪಿ.ಕೆ.

ಬೆಂಗಳೂರು: ಡೆಂಗಿ ಪ್ರಕರಣಗಳು ಎಲ್ಲಿ ಮತ್ತು ಹೇಗೆ ಪತ್ತೆಯಾಗುತ್ತವೆ ಎಂದು ಮಾಹಿತಿ ನೀಡುವ ‘ಡ್ಯಾಶ್ ಬೋರ್ಡ್’ ಅನ್ನು ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿರುವ (ಐಐಎಸ್ಸಿ) ‘ಎಐ ಆ್ಯಂಡ್ ರೊಬೊಟಿಕ್ಸ್ ಟೆಕ್ನಾಲಜಿ ಪಾರ್ಕ್’ (ಎಆರ್‌ಟಿಪಿಎಆರ್‌ಕೆ) ಕೃತಕ ಬುದ್ಧಿಮತ್ತೆ ನೆರವಿನೊಂದಿಗೆ ಅಭಿವೃದ್ಧಿ-ಪಡಿಸುತ್ತಿದೆ.

ಮುಂಗಾರು ಹತ್ತಿರವಾಗುತ್ತಿರು-ವುದರಿಂದ ಮೇ ಮತ್ತು ಡಿಸೆಂಬರ್ ನಡುವೆ ಡೆಂಗಿ ಪ್ರಕರಣಗಳು ಹೆಚ್ಚಾಗುತ್ತವೆ. ಆಗಸ್ಟ್ ಮತ್ತು ಅಕ್ಟೋಬರ್‌ನಲ್ಲಿ ಪ್ರಕರಣಗಳು ಅಧಿಕವಾಗುತ್ತವೆ. ಈ ಸಂದರ್ಭದಲ್ಲಿ ಬಿಬಿಎಂಪಿಗೆ ನೆರವಾಗಲು ಈ ‘ಡ್ಯಾಶ್ ಬೋರ್ಡ್’ ರೂಪಿಸಲಾಗುತ್ತಿದೆ.

ಬಿಬಿಎಂಪಿಯೊಂದಿಗೆ 15 ದಿನಗಳ ಹಿಂದೆ ಎಆರ್‌ಟಿಪಿಎಆರ್‌ಕೆ ಫೌಂಡೇಷನ್ ಒಪ್ಪಂದಕ್ಕೆ ಸಹಿ ಹಾಕಿದ್ದು, ಕೇಂದ್ರ ಸರ್ಕಾರದ ಆರೋಗ್ಯ ಕಾರ್ಯ-ಕ್ರಮಗಳಲ್ಲಿ ಒಂದಾಗ ‘ಪ್ರಾಜೆಕ್ಟ್ ಪ್ರೊ ಬೊನೊ’ ಅಡಿ ಈ ಡ್ಯಾಶ್‌ಬೋರ್ಡ್ ಅಭಿವೃದ್ಧಿ ಕಾರ್ಯವನ್ನು ಫೌಂಡೇಷನ್ ಮಾಡುತ್ತಿದೆ.

ಮುನ್ಸೂಚನೆಯ ಮಾದರಿಯನ್ನು ಅಭಿವೃದ್ಧಿಪಡಿಸಲು ಎಆರ್‌ಟಿಪಿಎ-ಆರ್‌ಕೆ, ಬಿಬಿಎಂಪಿಯಿಂದ ಡೆಂಗಿ ಪ್ರಕರಣ, ಭಾರತೀಯ ಹವಾಮಾನ ಇಲಾಖೆಯಿಂದ ವಾತಾವರಣದ ವಿವರ, ಬಿಎಂಟಿಸಿಯಿಂದ ಸಂಚಾರ ದತ್ತಾಂಶ ಮತ್ತು ಹಲವು ಇಲಾಖೆಗಳಿಂದ ನಗರ ಬೆಳವಣಿಗೆಯ ರೂಪುರೇಷೆ ಸೇರಿದಂತೆ ಮೂರು ವರ್ಷಗಳ ಅಂಕಿ–ಅಂಶಗಳನ್ನುಸಂಗ್ರಹಿಸಿದೆ.



‘ಒಂದು ತಿಂಗಳಲ್ಲಿ ಡೆಂಗಿ ಪ್ರಕರಣಗಳ ಸ್ಥಿತಿ ವಿವರ ಮತ್ತು ವಿಶ್ಲೇಷಣೆ ಒದಗಿಸುವ ಡ್ಯಾಶ್‌ಬೋರ್ಡ್ ಸಿದ್ಧ-ವಾಗುತ್ತದೆ. ನಂತರ ವಿವಿಧ ಇಲಾಖೆಗಳಿಂದ ದತ್ತಾಂಶಗಳನ್ನು ಪಡೆದು, ಮುನ್ಸೂಚನೆಯ ಮಾದರಿ ಅಭಿವೃದ್ಧಿಪ-ಡಿಸಲಿದ್ದೇವೆ. ಆರರಿಂದ ಏಳು ತಿಂಗಳಲ್ಲಿ ಇದು ಸಿದ್ಧವಾಗಲಿದೆ’ ಎಂದು ಎಆರ್‌ಟಿ-ಪಿಎಆರ್‌ಕೆ ಯೋಜನಾ ನಿರ್ದೇಶಕ ಡಾ. ಭಾಸ್ಕರ್ ರಾಜ್‌ಕುಮಾರ್ ವಿವರಿಸಿದರು.

ಸರ್ಕಾರದ ದತ್ತಾಂಶಗಳ ವಿಷಯದಲ್ಲಿ ಸುಧಾರಣೆಯಾಗಬೇಕಾಗಿ-ದೆ. ಮತ್ತಷ್ಟು ನಿಖರವಾದ ಮಾಹಿತಿ ಸಂಗ್ರಹಿಸಬೇಕು. ಈ ನಿಟ್ಟಿನಲ್ಲಿ ಎಆರ್‌ಟಿ-ಪಿಎಆರ್‌ಕೆ ಇಲಾಖೆಗಳೊಂದಿಗೆ ಕಾರ್ಯನಿರ್ವಹಿಸಿ ಉನ್ನತೀಕರಿಸಲಿದೆ.

ಬಿಬಿಎಂಪಿಯ ಮುಖ್ಯ ಆರೋಗ್ಯಾಧಿಕಾರಿ ಡಾ. ಬಾಲಸುಂದರ್ ಮಾತನಾಡಿ, ‘ಮುನ್ಸೂಚನೆ ದೊರೆಯುವುದರಿಂದ ಬಿಬಿಎಂಪಿ ಔಷಧಗಳನ್ನು ಸಂಗ್ರಹಿಸಿಟ್ಟುಕೊಳ್ಳಬ-ಹುದು. ಪರೀಕ್ಷೆಗಳನ್ನು ಹೆಚ್ಚಿಸಿಕೊಂಡು, ಫಾಗಿಂಗ್‌ನಂತಹ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಬಹುದಾಗಿದೆ’ ಎಂದರು.

‘ಉದಾಹರಣೆಗೆ, ಪಾದ-ರಾಯನಪುರದಲ್ಲಿ 20 ಡೆಂಗಿ ಪ್ರಕರಣಗಳು ವರದಿಯಾದರೆ, ಜ್ವರ ಇರುವ ನೈಜ ಪ್ರಕರಣಗಳು 200ರ ಆಸುಪಾಸಿನಲ್ಲಿರುತ್ತವೆ. ಹೀಗಾಗಿ, ಪ್ರಾಥಮಿಕ ಆರೋಗ್ಯ ಕೇಂದ್ರ 200 ಜನರಿಗೆ ಔಷಧಿಯನ್ನು ನೀಡಬೇಕಾಗುತ್ತದೆ. ಎರಡು ವಾರದ ಮುನ್ನ ಈ ಪ್ರಕರಣಗಳನ್ನು ನಿರೀ-ಕ್ಷಿಸುವಂತಾದರೆ, ನಾವು ಮೊದಲೇ ಔಷಧಗಳನ್ನು ಸಂಗ್ರಹಿಸಿಟ್ಟುಕೊಳ್ಳ ಬಹುದಾಗಿದೆ’ ಎಂದರು.

ಡ್ಯಾಶ್‌ಬೋರ್ಡ್ ಮೂಲಕ ಯಾವ ವರ್ಗದ ಡೆಂಗಿ ವೈರಸ್ ನಾಗರಿಕರ ಮೇಲೆ ಹೆಚ್ಚು ಪರಿಣಾಮ ಬೀರುತ್ತಿದೆ ಎಂಬುದನ್ನು ಸಹ ಅರ್ಥೈಸಿಕೊಳ್ಳ ಬಹುದಾಗಿದೆ.

ರಾಜ್ಯದ ಇತರ ಜಿಲ್ಲೆಗಳಿಗೂ ಇದೇ ರೀತಿಯ ಡ್ಯಾಶ್‌ಬೋರ್ಡ್ ಅನ್ನು ಎಆರ್‌ಟಿಪಿಎಆರ್‌ಕೆ ಅಭಿವೃದ್ಧಿಪಡಿಸಲಿದೆ. ಇದು ಮತ್ತಷ್ಟು ವಿಸ್ತಾರವಾಗಿರ-ಲಿದೆ. ವಿವಿಧ ಜಿಲ್ಲೆಗಳಲ್ಲಿ ಪರಿಸ್ಥಿತಿ ಭಿನ್ನ-ವಾಗಿರುವುದರಿಂದ ಡೆಂಗಿ ಪ್ರಕರಣಗಳ ಪರಿಣಾಮದ ಅಂಶಗಳನ್ನು ವಿಶ್ಲೇಷಿಸಿ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ.

ನಕ್ಷೆ ಮಂಜೂರಾತಿಗೆ ಷರತ್ತು: ಹೈಕೋರ್ಟ್ ಛೀಮಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಡಾವಣೆ ನಿರ್ಮಾಣಕ್ಕೆ ನಕ್ಷೆ ಮಂಜೂರು ಮಾಡುವಂತೆ ಕೋರಿದ್ದ ವ್ಯಕ್ತಿಯೊಬ್ಬರಿಗೆ ಕಾನೂನು ಬಾಹಿರ ಷರತ್ತು ವಿಧಿಸಿದ ಹೊಸಕೋಟೆ ಯೋಜನಾ ಪ್ರಾಧಿಕಾರಕ್ಕೆ ಹೈಕೋರ್ಟ್ ಛೀಮಾರಿ ಹಾಕಿದೆ.

ಈ ಸಂಬಂಧ ನಗರದ, ‘ನ್ಯೂ ಟಿಂಬರ್ ಯಾರ್ಡ್’ ಬಡಾವಣೆ ನಿವಾಸಿ ವಿನೋದ್ ಡಿ. ಪಟೇಲ್ ಎಂಬುವರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದ ರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿ-ದ್ದು, ‘ಬಡಾವಣೆ ನಿರ್ಮಾಣಕ್ಕಾಗಿ ನಕ್ಷೆ ಮಂಜೂರಾತಿ ನೀಡಬೇಕು’ ಎಂದು ಖಡಕ್ ನಿರ್ದೇಶನ ನೀಡಿದೆ.

ಪ್ರಾಧಿಕಾರದ ನಡೆಗೆ ಕಿಡಿ ಕಾರಿ ರುವ ಪೀಠ, ‘ಪ್ರಾಧಿಕಾರವು ಖಾಸಗಿ ವ್ಯಕ್ತಿಗೆ ಸೇರಿದ ಜಾಗದಲ್ಲಿ ರಸ್ತೆ ನಿರ್ಮಿಸಲು ಉದ್ದೇಶಿಸಿದ್ದರೆ ಅಂತಹ ಜಾಗವನ್ನು ಸ್ವಾಧೀನಕ್ಕೆ ಪಡೆದು ಪರಿಹಾರ ನೀಡಬೇಕು. ರಸ್ತೆ ನಿರ್ಮಾಣಕ್ಕೆಂದು ಜಾಗ ಗುರುತಿಸಿದ ಮಾತ್ರಕ್ಕೆ, ಆ ಜಾಗವನ್ನು ಉಚಿತವಾಗಿ ನೀಡುವಂತೆ ಮಾಲಿಕನಿಗೆ ನಿರ್ದೇಶಿಸಲು ಸಾಧ್ಯವಿಲ್ಲ. ಈ ಪ್ರಕರಣದಲ್ಲಿ ಕರ್ನಾಟಕ ಪಟ್ಟಣ ಯೋಜನಾ ಕಾಯ್ದೆ (ಕೆಟಿಸಿಪಿ)-1961ರ ಕಲಂ 17(2-ಬಿ) ಅನ್ನು ತಪ್ಪಾಗಿ ವ್ಯಾ-ಖ್ಯಾನಿಸಲಾಗಿದೆ’ ಎಂಬ ಅಭಿಪ್ರಾ-ಯದೊಂದಿಗೆ ಪ್ರಾಧಿಕಾರ ನೀಡಿದ್ದ ಹಿಂಬರಹವನ್ನು ರದ್ದುಪಡಿಸಿದೆ.

ಏನಿದು ಪ್ರಕರಣ?

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ದಂಡುಪಾಳ್ಯ ಗ್ರಾಮದ ಸರ್ವೆ ನಂ-133 ಮತ್ತು 134ರಲ್ಲಿನ ಒಟ್ಟು 11 ಎಕರೆ 37 ಗುಂಟೆ ಜಮೀನನ್ನು ಕೃಷಿಯೇತರ ಬಳಕೆ ಮಾಡುವ ದಿಸೆಯಲ್ಲಿ ಜಿಲ್ಲಾಧಿಕಾರಿ ಭೂ ಪರಿವರ್ತನೆಗೆ ಅನುಮತಿ ನೀಡಿ 2005ರ ಏ. 28ರಂದು ಆದೇಶಿಸಿದ್ದರು.

ಅರ್ಜಿದಾರರು ಸರ್ವೆ ನಂ.133ರಲ್ಲಿನ ಎಂಟೂವರೆ ಗುಂಟೆ ಜಮೀನನ್ನು 2013ರ ಜುಲೈ 30ರಂದು ಖರೀದಿಸಿದ್ದರು. ಈ ಜಾಗದಲ್ಲಿ ಬಡಾವಣೆ ನಿರ್ಮಿಸಲು ನಕ್ಷೆ ಮಂಜೂರಾತಿ ಕೋರಿ ಹೊಸ ಕೋಟೆ ಯೋಜನಾ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿದ್ದರು.

ಈ ಅರ್ಜಿಗೆ ಪ್ರತ್ಯುತ್ತರವಾಗಿ 2022ರ ಜುಲೈ 27ರಂದು ಹಿಂಬರಹ ನೀಡಿದ್ದ ಪ್ರಾಧಿಕಾರವು, ‘ನಿಮ್ಮ ಜಾಗದ ಪೈಕಿ ಶೇ 80ರಷ್ಟನ್ನು ರಾಷ್ಟ್ರೀಯ ಹೆದ್ದಾರಿ ವಿಸ್ತರಣೆಗೆ ಗುರುತಿಸಲಾಗಿದೆ. ಅದನ್ನು ಪ್ರಾಧಿಕಾರಕ್ಕೆ ಉಚಿತವಾಗಿ ಒಪ್ಪಿಸಿದರೆ, ನಕ್ಷೆ ಮಂಜೂರಾತಿ ನೀಡಲಾಗುವುದು’ ಎಂದು ಉತ್ತರಿಸಿತ್ತು.

ಇದನ್ನು ರದ್ದುಪಡಿಸುವಂತೆ ಕೋರಿ ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು.

ಸಗಟು ಹಣದುಬ್ಬರ 34 ತಿಂಗಳ ಕನಿಷ್ಠ

ನವದೆಹಲಿ (ಪಿಟಿಐ): ಸಗಟು ಹಣದುಬ್ಬರವು ಏಪ್ರಿಲ್‌ನಲ್ಲಿ ಶೇಕಡ (–) 0.92ಕ್ಕೆ ಇಳಿಕೆ ಕಾಣುವ ಮೂಲಕ 34 ತಿಂಗಳ ಕನಿಷ್ಠ ಮಟ್ಟ ತಲುಪಿದೆ. 2020ರ ಜೂನ್‌ನಲ್ಲಿ ಸಗಟು ದರ ಸೂಚ್ಯಂಕವು (ಡಬ್ಲ್ಯುಪಿಐ) ಶೇ (–) 1.81ರಷ್ಟು ಇತ್ತು. ಅದಾದ ನಂತರ, ಸಗಟು ಹಣದುಬ್ಬರವು ಶೂನ್ಯಕ್ಕಿಂತ ಕಡಿಮೆ ಆಗಿರುವುದು ಈ ವರ್ಷದ ಏಪ್ರಿಲ್‌ನಲ್ಲಿ.

12

ಖರ್ಗೆಗೆ ಕೋರ್ಟ್ ನೋಟಿಸ್

ಸಂಗ್ರೂರ್ (ಪಂಜಾಬ್) (ಪಿಟಿಐ): ನಿಷೇಧಿತ ಪಿಎಫ್‌ಐ ಜತೆಗೆ ಬಜರಂಗ ದಳ ಸಂಘಟನೆಯನ್ನು ಕರ್ನಾಟಕ ವಿಧಾನಸಭಾ ಚುನಾವಣಾ ಪ್ರಚಾರದ ವೇಳೆ ಹೋಲಿಸಿರುವ ಪ್ರಕರಣದಲ್ಲಿ ₹100 ಕೋಟಿ ಪರಿಹಾರ ಕೇಳಿ ಸಲ್ಲಿಸಿರುವ ಮಾನನಷ್ಟ ಮೊಕದ್ದ-ಮೆಯೊಂದರಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಇಲ್ಲಿನ ನ್ಯಾಯಾಲಯವು ನೋಟಿಸ್ ಜಾರಿ ಮಾಡಿದೆ.

9

ಆಟೊ ಚಾಲಕರ ‘ಪರ್ಮಿಟ್’ ಮಾಹಿತಿಗೆ ಕ್ಯೂಆರ್ ಕೋಡ್

ಬೆಂಗಳೂರು: ನಗರದ ಆಟೊ ಚಾಲಕರ ಸ್ವ–ವಿವರವುಳ್ಳ ಪರ್ಮಿಟ್ ಬಗ್ಗೆ ಸಾರ್ವ-ಜನಿಕರಿಗೆ ಮಾಹಿತಿ ತಿಳಿಯಲು ಕ್ಯೂಆರ್ ಕೋಡ್ ವ್ಯವಸ್ಥೆ ರೂಪಿಸಲಾಗುತ್ತಿದ್ದು, ಸದ್ಯದಲ್ಲಿ ಜಾರಿಗೆ ಬರಲಿದೆ.

‘ಆಟೊದಲ್ಲಿ ಚಾಲಕರ ಪರ್ಮಿಟ್ ವಿವರದ ಪ್ರತಿಯನ್ನು ಪ್ರದರ್ಶಿಸುವಂತೆ ಈಗಾಗಲೇ ನಿಯಮವಿದೆ. ಆದರೆ, ಕೆಲ ಚಾಲಕರು ಪ್ರದರ್ಶಿಸುತ್ತಿಲ್ಲ. ಇದರಿಂದಾಗಿ ಚಾಲಕರು ಯಾರು, ಅವರ ವಿಳಾಸ ಯಾವುದು ಎಂಬ ಬಗ್ಗೆ ಪ್ರಯಾಣಿಕರಿಗೆ ಮಾಹಿತಿ ಸಿಗುತ್ತಿಲ್ಲ. ಇದೇ ಕಾರಣಕ್ಕೆ ಕ್ಯೂಆರ್ ಕೋಡ್ ವ್ಯವಸ್ಥೆ ರೂಪಿಸಲಾಗುತ್ತಿದೆ’ ಎಂದು ಸಂಚಾರ ವಿಭಾಗದ ವಿಶೇಷ ಕಮಿಷನರ್ ಎಂ.ಎ. ಸಲೀಂ ತಿಳಿಸಿದರು.

‘ಪ್ರಯಾಣಿಕರ ಸುರಕ್ಷತೆಗೆ ಹೆಚ್ಚಿನ ಒತ್ತು ನೀಡಲಾಗಿದೆ. ಚಾಲಕರ ವಿವರ ತಿಳಿಸುವ ಮಾಹಿತಿಯನ್ನು ಒಳಗೊಂಡು ಕ್ಯೂ ಆರ್ ಕೋಡ್ ರೂಪಿಸಲಾಗುವುದು. ಪ್ರಯಾಣಿಕರು, ತಮ್ಮ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಚಾಲಕರ ಮಾಹಿತಿ ತಿಳಿಯಬಹುದು’ ಎಂದರು.

ಸಿಕೆಪಿ ಅವ್ಯವಹಾರ ಆರೋಪ: ವಿಚಾರಣಾಧಿಕಾರಿ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರಕಲಾ ಪರಿಷತ್ತಿನಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಆರೋಪಗಳ ಬಗ್ಗೆ ವಿಚಾರಣೆ ನಡೆಸಿ ವರದಿ ಸಲ್ಲಿಸಲು ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಎಸ್‌.ಕೆ.ಕವಿತಾ ಅವರನ್ನು ವಿಚಾರಣಾ ಅಧಿಕಾರಿಯನ್ನಾಗಿ ನೇಮಕ ಮಾಡಲಾಗಿದೆ.

ಬೆಂಗಳೂರು ನಗರ ಜಿಲ್ಲೆ 4ನೇ ವಲಯದ ಸಂಘಗಳ ಜಿಲ್ಲಾ ನೋಂದಣಾಧಿಕಾರಿ ಪಿ.ಶಶಿಧರ ಅವರು ‘ಇತ್ತೀಚೆಗೆ ಈ ಕುರಿತಂತೆ ಆದೇಶಿಸಿದ್ದು, ವಿಚಾರಣಾ ಅಧಿಕಾರಿಯು ಆರೋಪಗಳಿಗೆ ಸಂಬಂಧಿಸಿದಂತೆ ಎರಡು ತಿಂಗಳ ಒಳಗಾಗಿ ವಿಚಾರಣೆ ನಡೆಸಿ ವರದಿ ಸಲ್ಲಿಸಬೇಕು’ ಎಂದು ನಿರ್ದೇಶಿಸಿದ್ದಾರೆ.

ಆರೋಪಗಳೇನು?: ಚಿತ್ರಕಲಾ ಪರಿಷತ್ ವತಿಯಿಂದ 2021ರಲ್ಲಿ ಜರುಗಿದ 18ನೇ ಆನ್‌ಲೈನ್ ಚಿತ್ರಸಂತೆಯಲ್ಲಿ ಸುಮಾರು ₹ 50 ಲಕ್ಷ ಮೊತ್ತವನ್ನು ವೆಚ್ಚ ಮಾಡಲಾಗಿದ್ದು, ಅತಿ ಹೆಚ್ಚಿನ ಮೊತ್ತಕ್ಕೆ ವೆಬ್ ಸೈಟ್ ನಿರ್ವಹಣೆಗಾಗಿ ಗುತ್ತಿಗೆ ನೀಡಲಾಗಿದೆ. ಈ ವೇಳೆ ಕಾನೂನುಬದ್ಧ ಟೆಂಡರ್ ಪ್ರಕ್ರಿಯೆಗಳನ್ನು ಪಾಲನೆ ಮಾಡಿಲ್ಲ’ ಎಂದು ಆರೋಪಿಸಿ ಕೆ.ಇ. ರಾಧಾಕೃಷ್ಣ ಅವರು ಪರಿಷತ್ತಿನ ಕಾರ್ಯಕಾರಿ ಸಮಿತಿಯ ವಿರುದ್ಧ ಸಹಕಾರ ಸಚಿವರಿಗೆ ದೂರು ಸಲ್ಲಿಸಿದ್ದರು.

‘ಚಿತ್ರಸಂತೆ ವೇಳೆ ಕ್ಯಾಂಪಸ್ ಸ್ಥಳವನ್ನು ಚಿತ್ತಾರ ಕರಕುಶಲ ಪ್ರದರ್ಶನ ಹಾಗೂ ಮಾರಾಟಕ್ಕಾಗಿ ನಿಯಮ ಉಲ್ಲಂಘಿಸಿ ಬಾಡಿಗೆಗೆ ನೀಡಲಾಗಿದೆ. ಪರಿಷತ್ತಿನ ಮೂಲಕ ಶಿವಮೊಗ್ಗ ಸ್ಮಾರ್ಟ್‌ಸಿಟಿ ಯೋಜನೆ ಮತ್ತು ಬಿಎಂಆರ್‌ಸಿಎಲ್ ಸಂಸ್ಥೆಗಳ ಮಧ್ಯದ ಒಪ್ಪಂದದಂತೆ ಮಾಡಲಾದ ಕಲಾ ಪ್ರಕಾರಗಳ ಮತ್ತು ಭಿತ್ತಿಚಿತ್ರಗಳ ರಚನೆಯಲ್ಲಿಯೂ ಅವ್ಯವಹಾರ ನಡೆದಿದೆ’ ಎಂದೂ ರಾಧಾಕೃಷ್ಣ ದೂರಿನಲ್ಲಿ ಆರೋಪಿಸಿದ್ದರು.

‘ಈ ದೂರು ದೂರಿನ ಕುರಿತಂತೆ 2022ರ ಡಿ. 9, 2023ರ ಜ. 6, 30, ಫೆ. 10, ಹಾಗೂ ಮಾರ್ಚ್ 27 ರಂದು ವಿಚಾರಣೆ ನಡೆಸಲಾಗಿದೆ. ವಿಚಾರಣೆ ವೇಳೆ ಪರಿಷತ್ತಿನಿಂದ ಸಲ್ಲಿಸಲಾದ ದಾಖಲೆಗಳನ್ನು ಪರಿಶೀಲಿಸಿದಾಗ 18ನೇ ಆನ್‌ಲೈನ್ ಚಿತ್ರಸಂತೆಯ ಬಗ್ಗೆ ಟೆಂಡರ್ ಪ್ರಕ್ರಿಯೆ ನಡೆಸದೇ ಇರುವುದೂ ಸೇರಿದಂತೆ ಹಲವು ಲೋಪದೋಷಗಳು ಕಂಡುಬಂದಿವೆ. ಈ ಹಿನ್ನೆಲೆಯಲ್ಲಿ, ಈ ಎಲ್ಲಾ ಆರೋಪಗಳ ಬಗ್ಗೆ ಶಾಸನಬದ್ಧ ವಿಚಾರಣೆ ನಡೆಸುವುದು ಸೂಕ್ತವೆಂಬ ಅಭಿಪ್ರಾಯದೊಂದಿಗೆ ವಿಚಾರಣಾಧಿಕಾರಿ ನೇಮಕ ಮಾಡಲಾಗುತ್ತಿದೆ’ ಎಂದು ಆದೇಶದಲ್ಲಿ ಹೇಳಲಾಗಿದೆ.

ಒಳ ಪುಟಗಳು



3 ಬೇಡಿಕೆ ಇಟ್ಟ ಸಚಿನ್ ಪೈಲಟ್ 13

‘ಪ್ರಬಲ ಪ್ರಾದೇಶಿಕ ಪಕ್ಷಗಳಿಗೆ ಮನ್ನಣೆ ಇರಲಿ’ 9

ಆದಾಯ ತೆರಿಗೆ ಇಲಾಖೆಯ ಜಾಲತಾಣ ದುರುಪಯೋಗ

ಐ.ಟಿ ಜಾಲತಾಣ ನ್ಯೂನತೆ: ₹ 1.41 ಕೋಟಿ ಅಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದಾಯ ತೆರಿಗೆದಾರರ ಹೆಸರಿನಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಿ, ಅವರಿಗೆ ಮರು ಪಾವತಿಯಾ-ಗಬೇಕಿದ್ದ ₹ 1.41 ಕೋಟಿ ಹಣವನ್ನು ತನ್ನದಾಗಿಸಿ ಕೊಂಡು ವಂಚಿಸಿದ್ದ ಆರೋಪಿ ದಿಲೀಪ್ ರಾಜೇಗೌಡ ಎಂಬುವವರನ್ನು ಸಿಐಡಿ ಸೈಬರ್ ಕ್ರೈಂ ಪೊಲೀಸರು ಬಂಧಿಸಿದ್ದಾರೆ.

‘ಹಾಸನ ಜಿಲ್ಲೆಯ ಹಿರೀಸಾವೆಯ ದಿಲೀಪ್, ಮೆಕ್ಯಾನಿಕಲ್ ಬಿ.ಇ ಪದವೀಧರ. ಸೈಬರ್ ವಂಚನೆ ಮೂಲಕ ಅಕ್ರಮವಾಗಿ ಸಂಪಾದನೆ ಮಾಡಿ, ಐಷಾರಾಮಿ ಜೀವನ ನಡೆಸುತ್ತಿದ್ದ’ ಎಂದು ಸಿಐಡಿ ಮೂಲಗಳು ಹೇಳಿವೆ.

‘ಉದ್ಯಮಿಯೊಬ್ಬರು ತಮ್ಮ ವ್ಯವಹಾರದ ಮಾಹಿತಿಯನ್ನು ಆದಾಯ ತೆರಿಗೆ ಇಲಾಖೆಯ ಜಾಲತಾಣದಲ್ಲಿ ನಮೂದಿಸಿದ್ದರು. ತೆರಿಗೆ ಮರುಪಾವತಿಗಾಗಿ ಹಲವು ದಾಖಲೆಗಳನ್ನು ಅಪ್‌ಲೋಡ್ ಮಾಡಿದ್ದರು. ಅದಕ್ಕಾಗಿ ಯೂಸರ್ ನೇಮ್ ಹಾಗೂ ಪಾಸ್‌ವರ್ಡ್ ಬಳಸಿದ್ದರು. ಉದ್ಯಮಿ ವ್ಯವಹಾರದ ಬಗ್ಗೆ ತಿಳಿದುಕೊಂಡಿದ್ದ ಆರೋಪಿ, ಅವರಿಗೆ ಮರು ಪಾವತಿಯಾಗಬೇಕಿದ್ದ ₹ 1.41 ಕೋಟಿಯನ್ನು ತನ್ನದಾಗಿಸಿಕೊಂಡಿದ್ದ’.

‘ಆರೋಪಿ ಕೃತ್ಯದ ಬಗ್ಗೆ ಉದ್ಯಮಿಯು ದೂರು ನೀಡಿದ್ದರು. ತನಿಖೆ ಕೈಗೊಂಡಾಗ ಆರೋಪಿ ಸುಳಿವು ಸಿಕ್ಕಿತ್ತು. ಧಾರವಾಡಕ್ಕೆ ಇತ್ತೀಚೆಗೆ ಹೋಗಿದ್ದ ವಿಶೇಷ ತಂಡ, ಆರೋಪಿ ದಿಲೀಪ್‌ನನ್ನು ಬಂಧಿಸಿ ನಗರಕ್ಕೆ ಕರೆ ತಂದಿದೆ’ ಎಂದು ಸಿಐಡಿ ಮೂಲಗಳು ತಿಳಿಸಿವೆ.

ಜಾಲತಾಣದಲ್ಲಿ ನ್ಯೂನ್ಯತೆ: ‘ಆದಾಯ ತೆರಿಗೆ ಇಲಾಖೆಯ ಜಾಲತಾಣದಲ್ಲಿ ಕೆಲ ತಾಂತ್ರಿಕ ನ್ಯೂನತೆಗಳಿವೆ. ಅವುಗಳನ್ನು ತಿಳಿದುಕೊಂಡಿದ್ದ ಆರೋಪಿ ದಿಲೀಪ್, ಅಕ್ರಮದ ಮೂಲಕ ಉದ್ಯಮಿ ಹೆಸರಿನಲ್ಲಿ ಜಾಲತಾಣದಲ್ಲಿ ಲಾಗ್–ಇನ್ ಆಗಿದ್ದ’ ಎಂದು ಸಿಐಡಿ ಮೂಲಗಳು ಹೇಳಿವೆ.

‘ಅಸಲಿ ತೆರಿಗೆದಾರರ ಬ್ಯಾಂಕ್ ಖಾತೆ ಹಾಗೂ ಮರು ಪಾವತಿ ವಿವರವನ್ನು ಆರೋಪಿ ಮಾರ್ಪಾಡು ಮಾಡಿದ್ದ. ನಿಗದಿತ ದಿನದಂದು ಮರು ಪಾವತಿ ಹಣವೆಲ್ಲ ಆರೋಪಿಯ ನಕಲಿ ಖಾತೆಗೆ ಜಮೆ ಆಗಿತ್ತು. ಕೆಲ ದಿನಗಳ ನಂತರ ವಂಚನೆ ಕೃತ್ಯ ಅಸಲಿ ತೆರಿಗೆದಾರರ ಗಮನಕ್ಕೆ ಬಂದಿತ್ತು’ ಎಂದು ತಿಳಿಸಿವೆ.

ಆರು ಪ್ರಕರಣಗಳಲ್ಲಿ ₹ 3.60 ಕೋಟಿ ವಂಚನೆ: ‘ಆದಾಯ ತೆರಿಗೆ ಮರು ಪಾವತಿ ವಂಚನೆ ಮಾತ್ರವಲ್ಲದೇ, ಹಲವು ಕೃತ್ಯಗಳಲ್ಲಿ ಆರೋಪಿ ದಿಲೀಪ್ ಭಾಗಿಯಾಗಿದ್ದ. ಆರು ಪ್ರಕರಣಗಳಲ್ಲಿ ₹ 3.60 ಕೋಟಿ ವಂಚನೆ ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ’ ಎಂದು ಸಿಐಡಿ ಮೂಲಗಳು ಹೇಳಿವೆ.

‘ಬ್ಯಾಂಕ್‌ಗಳಿಂದ ಸಾಲ ಪಡೆದು ವಂಚಿಸಿರುವ ಆರೋಪ ಸಹ ದಿಲೀಪ್ ಮೇಲಿದೆ. ರಾಜ್ಯ ಹಾಗೂ ಹೊರ ರಾಜ್ಯಗಳಲ್ಲಿ ನಡೆದಿರುವ ಹಲವು ಸೈಬರ್ ಅಪರಾಧಗಳಲ್ಲಿ ಈತ ಭಾಗಿಯಾಗಿರುವ ಅನುಮಾನವಿದೆ. ಈತನನ್ನು ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ಪಡೆಯಲಾಗಿದೆ’ ಎಂದು ಮೂಲಗಳು ತಿಳಿಸಿವೆ.

‘ಕಾವೇರಿ’ ಜಾಲತಾಣ ದುರುಪಯೋಗ

‘ಆಸ್ತಿ ನೋಂದಣಿ ಹಾಗೂ ಮಾಲೀಕತ್ವ ವಿವರಗಳನ್ನು ಆನ್‌ಲೈನ್ ಮೂಲಕ ಒದಗಿಸಲು ರಾಜ್ಯ ಸರ್ಕಾರ ಅಭಿವೃದ್ಧಿಪಡಿಸಿರುವ ಕಾವೇರಿ ಜಾಲತಾಣವನ್ನೂ ಆರೋಪಿ ದುರುಪಯೋಗಪಡಿಸಿಕೊಂಡಿದ್ದಾನೆ. ಈ ಮೂಲಕ ಕೆಲ ಆಸ್ತಿ ದಾಖಲೆಗಳನ್ನು ತಿದ್ದುಪಡಿ ಮಾಡಿರುವ ಸಾಧ್ಯತೆ ಇದ್ದು, ಈ ಬಗ್ಗೆ ತನಿಖೆ ಮುಂದುವರಿಸಲಾಗಿದೆ. ಜೊತೆಗೆ, ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೂ ಮಾಹಿತಿ ನೀಡಲಾಗಿದೆ’ ಎಂದು ಸಿಐಡಿ ಮೂಲಗಳು ತಿಳಿಸಿವೆ.

ಆದಾಯ ತೆರಿಗೆ ಇಲಾಖೆಗೆ ಪತ್ರ

‘ಆದಾಯ ತೆರಿಗೆ ಇಲಾಖೆಯ ಜಾಲತಾಣಗಳಲ್ಲಿ ಕೆಲ ತಾಂತ್ರಿಕ ನ್ಯೂನತೆಗಳಿದ್ದು, ಅದನ್ನು ಬಳಸಿಕೊಂಡು ಆರೋಪಿ ಕೃತ್ಯ ಎಸಗಿದ್ದಾನೆ. ಹೀಗಾಗಿ, ನ್ಯೂನ್ಯತೆಗಳನ್ನು ಸರಿಪಡಿಸುವಂತೆ ಇಲಾಖೆಯ ಅಧಿಕಾರಿಗಳಿಗೆ ಪತ್ರ ಬರೆಯಲಾಗಿದೆ’ ಎಂದು ಸಿಐಡಿ ಮೂಲಗಳು ಹೇಳಿವೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ

Subject Number	Parameter	Baseline Visit	Visit 3	Visit 4	Improvement Baseline to Visit 3	Improvement Baseline to Visit 4
Subject 01	HbA1c	8.2	7.1	5.9	Yes	Yes
Subject 05	HbA1c	8.1	7.1	6.0	Yes	Yes
Subject 08	HbA1c	8.8	7.6	5.7	Yes	Yes
Subject 09	HbA1c	9.2	8.3	6.1	Yes	Yes
Subject 10	HbA1c	9.4	8.7	7.4	Yes	Yes
Subject 11	HbA1c	8.9	7.2	5.9	Yes	Yes
Subject 12	HbA1c	8.2	7.6	6.0	Yes	Yes

ಭಾರತ ಸರ್ಕಾರದಿಂದ ಪರವಾನಗಿ ಪಡೆದ (CTRI Reg) ಸಂಶೋಧನಾ ಕೇಂದ್ರವಾದ ಸಿಂಕ್ರೆಟಿಕ್ ಕ್ಲಿನಿಕಲ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್‌ರವರು ಮಧುಮೇಹಿಗಳ ಮೇಲೆ ನಡೆಸಿದ ಕ್ಲಿನಿಕಲ್ ಟ್ರಯಲ್‌ನಲ್ಲಿ ಅಮೃತ್‌ನೋನಿ ಡಿ-ಪ್ಲಸ್ ಬಳಸಿದವರಲ್ಲಿ ಶೇ.100ರಷ್ಟು ಫಲಿತಾಂಶ ಹೊರಬಂದಿದ್ದು ಯಾವುದೇ ಅಡ್ಡ ಪರಿಣಾಮವಿಲ್ಲದೆ ಗಣನೀಯ ಪ್ರಮಾಣದಲ್ಲಿ ಮಧುಮೇಹವನ್ನು ನಿಯಂತ್ರಣಕ್ಕೆ ತರುವಲ್ಲಿ ಯಶಸ್ವಿಯಾಗಿದೆ ಎಂದು ಸಾಬೀತಾಗಿದೆ.

ಮಧುಮೇಹದ ಇಂತಹ ಅಡ್ಡ ಪರಿಣಾಮಗಳಿಂದ ಬಳಲುತ್ತಿದ್ದೀರಾ?

- ಪದೇ ಪದೇ ಮೂತ್ರ ವಿಸರ್ಜನೆ
- ಅತಿಯಾದ ಬಾಯಾರಿಕೆ
- ತೂಕ ಕಡಿಮೆಯಾಗುವುದು
- ಅತಿಯಾದ ಆಯಾಸ
- ಪಾದ ಉರಿ /ಊತ
- ಗಾಯವಾದಾಗ ನಿಧಾನವಾಗಿ ಗುಣವಾಗುವುದು

ಇಂತಹ ಸಮಸ್ಯೆಗಳನ್ನು ನಿವಾರಿಸಿ ಅಮೃತ್‌ನೋನಿ ಡಿ-ಪ್ಲಸ್ ದೇಹಕ್ಕೆ ನವಚೈತನ್ಯವನ್ನು ನೀಡುತ್ತದೆ.

ಅಮೃತ್‌ನೋನಿ ಹೆಲ್ತ್‌ಕೇರ್

ಎಲ್ಲಾ ಆಯುರ್ವೇದಿಕ್ ಹಾಗೂ ಮೆಡಿಕಲ್ ಸ್ಟೋರ್‌ಗಳಲ್ಲಿ ಲಭ್ಯ.

ವೈದ್ಯರೊಂದಿಗೆ ಉಚಿತ ಸಮಾಲೋಚನೆ ಹಾಗೂ ಸಲಹೆಗಾಗಿ ಸಂಪರ್ಕಿಸಿ

+91 95136 13362

Scan here to know How to use

www.amrithnoni.com

ಮಂಗಳವಾರದ ಉಷ್ಣಾಂಶ

34° ಗರಿಷ್ಠ 23° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಮೋಡ ಕವಿದ ವಾತಾವರಣ. ಅಲ್ಲಲ್ಲಿ ಮಳೆ ಸಾಧ್ಯತೆ.

ಹವಾಮಾನ	ಬುಧವಾರ	ಗುರುವಾರ	ಶುಕ್ರವಾರ
	34° 22°	34° 23°	34° 23°

‘ವಿಡಿಯೊ ಲೈಕ್’ ಕೆಲಸ: ವಂಚನೆ

ಬೆಂಗಳೂರು: ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡುವ ವಿಡಿಯೊಗಳನ್ನು ಲೈಕ್ ಹಾಗೂ ಶೇರ್ ಮಾಡಿದರೆ ಹಣ ನೀಡುವುದಾಗಿ ಹೇಳಿ ಶುಲ್ಕದ ಹೆಸರಿನಲ್ಲಿ ₹ 7.32 ಲಕ್ಷ ಪಡೆದು ವಂಚಿಸಲಾಗಿದೆ.

‘ಹುಳಿಮಾವು ನಿವಾಸಿಯಾಗಿರುವ 25 ವರ್ಷದ ಯುವಕ ವಂಚನೆ ಬಗ್ಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಆಗ್ನೇಯ ವಿಭಾಗದ ಸೈಬರ್ ಕ್ರೈಂ ಠಾಣೆ ಪೊಲೀಸರು ಹೇಳಿದರು.

‘ದೂರುದಾರರ ಮೊಬೈಲ್‌ಗೆ ಸಂದೇಶ ಕಳುಹಿಸಿದ್ದ ಆರೋಪಿಗಳು, ‘ನಾನು ವಿಡಿಯೊ ಮಾರುಕಟ್ಟೆ ಕಂಪನಿ ಪ್ರತಿನಿಧಿ. ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡುವ ನಮ್ಮ ವಿಡಿಯೊಗಳನ್ನು ಲೈಕ್ ಹಾಗೂ ಶೇರ್ ಮಾಡಿದರೆ, ಪ್ರತಿ ವಿಡಿಯೊಗೆ ₹ 150 ನೀಡಲಾಗುವುದು’ ಎಂದಿದ್ದರು.

ST.MARY'S INTERNATIONAL SCHOOL
THE BEST RESIDENTIAL & DAY BOARDING SCHOOL IN CHIKMAGALUR
ICSE 98.2% SAPHAL S SHETTY #1
ALL INDIA 10TH MERIT POSITION
ISC SCIENCE 97.25% DHANYA S H #1
2023 ICSE BOARD TOPPERS
97.6% MOULYA S #2
97% AMULYA K P #3
96.4% PANCHAMI J #4
96.2% VARSHINI #5
151 DISTINCTIONS 51 FIRST CLASSES 32 CENTUM SCORES
25 YEARS OF ACADEMIC EXCELLENCE
ISC SCIENCE BOARD TOPPERS
96.75% DEEKSHITHA P #2
94.75% SPOORTHI B M #3
94% DESHIKA LAXMAN #4
97.10 PERCENTILE 2023 JEE MAINS DISTRICT TOPPER
ABHISHEK C S
BEST JEE/NEET COACHING IN KARNATAKA
ISC COMMERCE BOARD TOPPERS
92.5% THABISH ABDULLA #1
92.25% MITALI LUNAWAT #2
90% SRIRAM DINESH #3
STUDY ABROAD
₹6.6 CRORES IN AWARDED MERIT SCHOLARSHIPS IN 2023!
ARIZONA STATE UNIVERSITY · SAINT LOUIS UNIVERSITY · DEPAUL UNIVERSITY CHICAGO, USA · Susquehanna PENNSYLVANIA, USA · NYIT New York Institute of Technology NEW YORK, USA · UNIVERSITY OF TORONTO CANADA
ADMISSIONS OPEN FOR ISC CLASS 11
ISC JEE/NEET COACHING & STUDY ABROAD PROGRAM
CALL +91 9449912599 or +91 9844718107
APPLY ONLINE AT SMIS.EDU.IN/ISC
ST MARY'S INTERNATIONAL SCHOOL, CHIKAMAGALUR 577101
SCAN TO APPLY

ಸಿಎನ್ ಸೂಪರ್ ಸಮ್ಮರ್ ಸ್ಕ್ವಾಡ್ ಮೇ 21ಕ್ಕೆ

ಬೆಂಗಳೂರು: ಲುಲು ಮಾಲ್‌ನಲ್ಲಿ ‘ಸಿಎನ್ ಸೂಪರ್ ಸಮ್ಮರ್ ಸ್ಕ್ವಾಡ್’ ಮೇ 21ರಂದು ನಡೆಯಲಿದೆ.

ಮಕ್ಕಳ ಬೇಸಿಗೆ ರಜೆಗಳನ್ನು ಮತ್ತಷ್ಟು ರೋಮಾಂಚನಕಾರಿ ಮಾಡಲು ‘ಲುಲು ಮಾಲ್‌ನ ಕಾರ್ಟೂನ್ ನೆಟ್‌ವರ್ಕ್ ಮತ್ತು ಸಿಎನ್ ಸೂಪರ್ ಸಮ್ಮರ್ ಸ್ಕ್ವಾಡ್ ಸಹಯೋಗದಲ್ಲಿ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಈ ಕಾರ್ಯಕ್ರಮದಲ್ಲಿ ಮಕ್ಕಳಿಗೆ ತಮ್ಮ ನೆಚ್ಚಿನ ಸೂಪರ್ ಸ್ಟಾರ್‌ಗಳಾದ ಬೆನ್10, ಸ್ಕೂಬಿ, ಟೀನ್ ಟೈಟಾನ್ಸ್ ಗೋ, ಅವರೊಂದಿಗೆ ಸಂವಾದಾತ್ಮಕ ಆಟಗಳು, ಕಾರ್ಯಾಗಾರ, ಫೋಟೊಬೂತ್ ಟ್ಯಾಟೂಗಳು ಮತ್ತು ಸಂವಾದ ಕಾರ್ಯಕ್ರಮಗಳಿವೆ ಎಂದು ಪ್ರಕಟಣೆ ತಿಳಿಸಿದೆ.

ಸಹಕಾರ ಸಂಘಗಳ ಪದಾಧಿಕಾರಿಗಳ ಪದಚ್ಯುತಿ ಪ್ರಕರಣ

ಅವಿಶ್ವಾಸ ನಿರ್ಣಯಕ್ಕೆ ಕಾರಣ ಬೇಕಿಲ್ಲ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಹಕಾರ ಸಂಘಗಳ ಅಧ್ಯಕ್ಷ ಮತ್ತು ಪದಾಧಿಕಾರಿಗಳ ವಿರುದ್ಧ ಶೇ 33ರಷ್ಟು ಸದಸ್ಯರು ಅವಿಶ್ವಾಸ ನಿರ್ಣಯ ಮಂಡಿಸಿದರೆ ಅದಕ್ಕೆ ಕಾರಣ ನೀಡುವ ಅಗತ್ಯವಿಲ್ಲ. ಆದರೆ, ನಿಯಮಾನುಸಾರ 15 ದಿನಗಳ ಮುಂಚಿತವಾಗಿ ನೋಟಿಸ್ ನೀಡಿದರೆ ಸಾಕು’ ಎಂದು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ ಬೆಳಗಾವಿಯ ಶ್ರೀ ಮಲಪ್ರಭ ಸಹಕಾರಿ ಸಕ್ಕರೆ ಕಾರ್ಖಾನೆ ಸೊಸೈಟಿ ಅಧ್ಯಕ್ಷ ನಾಸಿರುದ್ದೀನ್ ಭಗವಾನ್ ಎಂಬುವರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ಐ.ಅರುಣ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಜಾಗೊಳಿಸಿದ್ದು, ‘ಒಂದು ವೇಳೆ ಮೂರನೇ ಒಂದರಷ್ಟು ಅಂದರೆ ಶೇ 33ರಷ್ಟು ಸದಸ್ಯರು ಅವಿಶ್ವಾಸ ನಿರ್ಣಯ ಮಂಡಿಸಿದ್ದರೆ, ಯಾವುದೇ ಕಾರಣ ನೀಡುವ ಅಗತ್ಯವಿಲ್ಲ’ ಎಂದು ಸ್ಪಷ್ಟಪಡಿಸಿದೆ.

‘ಸೊಸೈಟಿಯ ಸದಸ್ಯರು ಮಂಡಿಸಿರುವ ಅವಿಶ್ವಾಸ ನಿರ್ಣಯದ ಕುರಿತು ರಿಜಿಸ್ಟ್ರಾರ್ ತೃಪ್ತರಾದರೆ ಸಾಕು. ಯಾರ ವಿರುದ್ಧ ಅವಿಶ್ವಾಸ ಮಂಡಿಸಲಾಗಿದೆಯೋ ಅಂತಹವರೂ ಸೇರಿದಂತೆ ಎಲ್ಲ ಸದಸ್ಯರಿಗೆ 15 ದಿನಗಳ ಮುಂಚಿತವಾಗಿಯೇ ನೋಟಿಸ್ ನೀಡಿ ನಿಯಮ ಪಾಲಿಸಬೇಕಾಗುತ್ತದೆ. ನೋಟಿಸ್ ನೀಡಿದ ನಂತರ ಯಾರ ವಿರುದ್ಧ ಅವಿಶ್ವಾಸ ಮಂಡಿಸಲಾಗಿರುತ್ತದೆಯೋ ಅಂತಹವರು ಇಚ್ಛಿಸಿದರೆ ಇತರೆ ಪದಾಧಿಕಾರಿಗಳನ್ನು ಹಾಗೂ ಸದಸ್ಯರನ್ನು ಭೇಟಿ ಮಾಡಿ ನೋಟಿಸ್ ವಾಪಸ್ ಪಡೆಯಲು ಮನವೊಲಿಸಬಹುದು’ ಎಂಬ ಅಭಿಪ್ರಾಯವನ್ನು ನ್ಯಾಯಪೀಠ ವ್ಯಕ್ತಪಡಿಸಿದೆ.

ಪ್ರಕರಣವೇನು?: ಶ್ರೀ ಮಲಪ್ರಭ ಸಹಕಾರಿ ಸಕ್ಕರೆ ಕಾರ್ಖಾನೆ ಸೊಸೈಟಿ ಅಧ್ಯಕ್ಷ ನಾಸಿರುದ್ದೀನ್ ಭಗವಾನ್ ವಿರುದ್ಧ 2023ರ ಮಾರ್ಚ್‌ನಲ್ಲಿ 9 ಸದಸ್ಯರು ಅವಿಶ್ವಾಸ ಮಂಡನೆ ನಿರ್ಣಯ ನೋಟಿಸ್ ಕಳುಹಿಸಿದ್ದರು. ಈ ನಿಟ್ಟಿನಲ್ಲಿ ಸಹಕಾರ ಸಂಘಗಳ ರಿಜಿಸ್ಟ್ರಾರ್ ಅವಿಶ್ವಾಸ ನಿರ್ಣಯವನ್ನು ಮತಕ್ಕೆ ಹಾಕಲು ಅಧಿಕಾರಿ ನಿಯೋಜನೆಗಾಗಿ 7 ದಿನಗಳಿಗೂ ಹೆಚ್ಚು ಕಾಲ ತೆಗೆದುಕೊಂಡಿದ್ದಾರೆ. ನನಗೆ ನೋಟಿಸ್ ಪ್ರತಿಯನ್ನು ನೀಡಿಲ್ಲ ಹಾಗೂ ಕಾರಣವನ್ನೂ ಉಲ್ಲೇಖಿಸಿಲ್ಲ ಎಂದು ಆಕ್ಷೇಪಿಸಿದ್ದ ನಾಸಿರುದ್ದೀನ್, ಹೈಕೋರ್ಟ್ ಮೆಟ್ಟಿಲೇರಿದ್ದರು.

ನೈಋತ್ಯ ರೈಲ್ವೆ G20

ಇ–ಟೆಂಡರು ಸೂಚನೆ ಸಂ.: ECN-TRD-06-2023-RT2
ದಿನಾಂಕ: 11.05.2023

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಪ್ರಸ್ತುತವಿರುವ ಓಹೆಚ್‌ಇ ಅನ್ನು ಮಾರ್ಪಡಿಸುವಿಕೆ ಮತ್ತು ಎರಡು ಹೊಸ ಲೂಪ್ ಲೈನ್‌ಗಳನ್ನು ವಿದ್ಯುದೀಕರಣಗೊಳಿಸುವುದು (ರಸ್ತೆ–5 ಮತ್ತು ರಸ್ತೆ–6)	ರೂ. 1,90,49,558.60

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 26.05.2023, 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ್ಯ ಎಲೆಕ್ಟ್ರಿಕಲ್ ಇಂಜಿನಿಯರ್/ಟ್ರ್ಯಾಕ್ಷನ್ ವಿನಿಯೋಗ, ಬೆಂಗಳೂರು ದಂಡು
PUB/91/AAD/PRB/SWR/2023-24
S.W.Railways SWRRLY SWRRLY

ನೈಋತ್ಯ ರೈಲ್ವೆ G20

ಇ–ಟೆಂಡರು ಸೂಚನೆ ಸಂ.: 10/2023
ದಿನಾಂಕ: 11.05.2023

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಐಟಂಗಳ ಪೂರೈಕೆಗಾಗಿ ಕೇವಲ ಐಆರ್‌ಇಪಿಎಸ್ ಮೂಲಕವಾಗಿ ಮಾತ್ರ ಇ–ಟೆಂಡರನ್ನು ಆಹ್ವಾನಿಸಿದ್ದಾರೆ.

ಸಂಕ್ಷಿಪ್ತ ವಿವರಣೆ: ಟಿಸಿಎನ್ ಓಪನ್ ಸ್ಟಾಂಡರ್ಡ್ ಸಿಎಲ್ ಡಬ್ಲ್ಯೂ/ಸಿ ಡಿ&ಡಿ/ಇಎಸ್/3 ಆಧಾರದ ಮೇಲೆ ವೆಹಿಕಲ್ ಕಂಟ್ರೋಲ್ ಯೂನಿಟ್‌ನ (ವಿಸಿಯು) ಪೂರೈಕೆ (ಪರಿಮಾಣ: 01 ಸೆಟ್) (ಟೆಂಡರು ಸಂ. ಎಲ್8235735)

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 06.06.2023, 10:30 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ವರಿಷ್ಠ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು ಬೆಂಗಳೂರು
PUB/89/AAD/PRB/SWR/2023-24
S.W.Railways SWRRLY SWRRLY

ನೈಋತ್ಯ ರೈಲ್ವೆ G20

ಇ–ಟೆಂಡರು ಸೂಚನೆ ಸಂ.: B/TRD.2023-24/02
ದಿನಾಂಕ: 12.05.2023

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
(1) ರಾಜನಕುಂಟೆ ಮತ್ತು ದೊಡ್ಡಬಳ್ಳಾಪುರ ನಿಲ್ದಾಣಗಳ ನಡುವೆ ಕಿಮೀ. 35/900–36/00 ರಲ್ಲಿ ಎನ್‌ಹೆಚ್‌ಎಐಯ ಪ್ರಸ್ತಾವಿತ ಆರ್‌ಒಬಿ ಸಂ. 478ಎ ಯ ಕಾರಣ ಓಹೆಚ್‌ಇಯ ಮೇಲಿನ ಬದಲಾವಣೆ ಕಾರ್ಯ. (2) ತೊಂಡೇಭಾವಿ ವಿಭಾಗದಲ್ಲಿ ಆರ್‌ಡಿ–3 ಎಸಿಸಿ/ಎಂಎಪಿಟಿಯ ಸೈಡಿಂಗ್‌ನಲ್ಲಿ ಹೊಸ ಐಸೊಲೇಟರ್‌ನ ಪೂರೈಕೆ.	ರೂ. 13,64,610.75

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 02.06.2023, 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ವರಿಷ್ಠ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್, ಟ್ರ್ಯಾಕ್ಷನ್ ವಿನಿಯೋಗ (ನಿರ್ಮಾಣ), ಬೆಂಗಳೂರು
PUB/92/AAD/PRB/SWR/2023-24
S.W.Railways SWRRLY SWRRLY

ರಸ್ತೆಗೆ ಉರುಳಿದ ಬೃಹತ್ ಮರ: ತಪ್ಪಿದ ಅನಾಹುತ

ಪ್ರಜಾವಾಣಿ ವಾರ್ತೆ

ರೆಸಿಡೆನ್ಸಿ ರಸ್ತೆಯಲ್ಲಿ ಉರುಳಿದ ಮರವನ್ನು ತೆರವುಗೊಳಿಸಲಾಯಿತು.

ಬೆಂಗಳೂರು: ನಗರದ ರೆಸಿಡೆನ್ಸಿ ರಸ್ತೆಯಲ್ಲಿರುವ ಬೆಂಗಳೂರು ಕ್ಲಬ್ ಆವರಣದಲ್ಲಿದ್ದ ಮರವೊಂದು ರಸ್ತೆಗೆ ಅಡ್ಡಲಾಗಿ ಬಿದ್ದಿದ್ದರಿಂದ ವಾಹನ ಸಂಚಾರಕ್ಕೆ ಅಡಚಣೆ ಉಂಟಾಗಿತ್ತು. ಯಾವುದೇ ಅಪಾಯ ಸಂಭವಿಸಿಲ್ಲ.

ಸ್ಥಳಕ್ಕೆ ಬಂದ ಅಶೋಕ ನಗರ ಸಂಚಾರ ಪೊಲೀಸರು ಮರ ತೆರವುಗೊಳಿಸಿ ವಾಹನ ಸಂಚಾರಕ್ಕೆ ವ್ಯವಸ್ಥೆ ಮಾಡಿದರು.

‘ಬಿದ್ದ ಮರವು ಹಳೆಯದಾಗಿತ್ತು. ಮರಕ್ಕೆ ಗೆದ್ದಲು ತಗುಲಿದ್ದರಿಂದ ಟೊಳ್ಳಾಗಿತ್ತು. ಸೋಮವಾರ ಸಂಜೆ 4.50ರ ಸಮಯಕ್ಕೆ ರಸ್ತೆಗೆ ಅಡ್ಡಲಾಗಿ ಬಿದ್ದಿದೆ. ಸಂಜೆ ಕಚೇರಿಯಿಂದ ಮನೆಗೆ ತೆರಳುವವರ ಸಂಖ್ಯೆ ಹೆಚ್ಚಾಗಿತ್ತು. ಇದರಿಂದ ಮಿಷನ್ ರಸ್ತೆ ಹಾಗೂ ಕೆಂಗಲ್ ಹನುಮಂತಯ್ಯ ರಸ್ತೆಯಲ್ಲಿ ಅರ್ಧ ತಾಸು ವಾಹನಗಳ ಸಂಚಾರ ಬಂದ್ ಆಗಿತ್ತು. ಸ್ಥಳೀಯರು ಹಾಗೂ ಪೊಲೀಸರು ಮರವನ್ನು ತೆರವುಗೊಳಿಸಿ ಸುಗಮ ಸಂಚಾರಕ್ಕೆ ವ್ಯವಸ್ಥೆ ಕಲ್ಪಿಸಿದರು ಎಂದು ಸ್ಥಳೀಯರು ತಿಳಿಸಿದರು.

ಅಶೋಕ ನಗರ ಪೊಲೀಸರು ಅದೇ ವೃತ್ತದಲ್ಲಿ ಕರ್ತವ್ಯದಲ್ಲಿದ್ದರು. ಕಾನ್‌ಸ್ಟೆಬಲ್ ಅರುಣ್ ಮರ ಬೀಳುತ್ತಿರುವುದನ್ನು ಗಮನಿಸಿ ವಾಹನಗಳನ್ನು ಮುಂದಕ್ಕೆ ಸಾಗುವುದನ್ನು ತಡೆದಿದ್ದರು. ಇದರಿಂದ ಅನಾಹುತ ತಪ್ಪಿದೆ.

ಕಾಂಪೌಂಡ್ ಸಮೀಪದಲ್ಲೇ ಸಾಯಿ ಈಶ್ವರ್ ಎಂಬುವವರು ಕ್ಯಾಬ್‌ಗೆ ಕಾಯುತ್ತಿದ್ದರು. ಅವರಿಗೆ ಮರ ಕೊಂಬೆ ತಗುಲಿ ಸಣ್ಣಪುಟ್ಟ ಗಾಯಗಳಾಗಿವೆ. ಬೌರಿಂಗ್ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಯಿತು. ಬಿಬಿಎಂಪಿ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

’ಪೊಲೀಸರು ಸಕಾಲದಲ್ಲಿ ಎಚ್ಚೆತ್ತು ಸಾರ್ವಜನಿಕರಿಗೆ ಮಾಹಿತಿ ನೀಡಿದ್ದರಿಂದ ಅಪಾಯ ತಪ್ಪಿದೆ. ಬಿಬಿಎಂಪಿ ಅಧಿಕಾರಿಗಳು ಕೆಲವು ದಿನಗಳ ಹಿಂದಷ್ಟೇ ಬಂದು ಮರಗಳ ಲೆಕ್ಕ ತೆಗೆದುಕೊಂಡಿದ್ದರು. ಅಪಾಯಕಾರಿ ಮರಗಳ ಕೊಂಬೆ ತೆರವು ಮಾಡಲು ಅರಣ್ಯ ಇಲಾಖೆ ಅನುಮತಿ ನಿರೀಕ್ಷೆಯಲ್ಲಿದ್ದೆವು. ಅಲ್ಲದೇ ಶೇ 50ರಷ್ಟು ಮರಗಳಲ್ಲಿ ಒಣಗಿದ ಕೊಂಬೆಗಳನ್ನು ಕಡಿಯಲಾಗಿತ್ತು. ಈ ಘಟನೆ ಹೇಗೆ ನಡೆಯಿತು ಎಂಬುದು ತಿಳಿದಿಲ್ಲ’ ಎಂದು ಬೆಂಗಳೂರು ಕ್ಲಬ್‌ನ ಕಾರ್ಯದರ್ಶಿ ಲೊಧ್ ಹೇಳಿದರು.

ಬ್ಯಾಂಕ್ ಆಫ್ ಇಂಡಿಯಾ Bank of India BOI

ಬೆಂಗಳೂರು ವಲಯ ಕಛೇರಿ, ಆಡಳಿತ ಮತ್ತು ಸೇವೆ ವಿಭಾಗ, ನಂ.11, ಬ್ಯಾಂಕ್ ಆಫ್ ಇಂಡಿಯ ಬಿಲ್ಡಿಂಗ್, ಕೆ.ಜಿ.ರಸ್ತೆ, ಬೆಂಗಳೂರು–560 009. ಫೋನ್ : 080–2295 9419/417, ಇ–ಮೇಲ್ : Bengaluru.AandS@bankofindia.co.in

ಬ್ಯಾಂಕಿನ ವಾಹನ ಮಾರಾಟಕ್ಕೆ

ಕ್ರಸಂ	ವಾಹನ ನೋಂದಣಿ ಸಂಖ್ಯೆ	ತಯಾರಿಕೆ ಮತ್ತು ಮಾಡಲ್	ಮೀಸಲು ಬೆಲೆ
1.	KA 02 MH 5187	Maruti SX4 VXI(BSIV)	ರೂ.1,50,000/– +ಜಿ.ಎಸ್.ಟಿ

ಹೆಚ್ಚಿನ ವಿವರಗಳಿಗೆ ನಮ್ಮ ಬ್ಯಾಂಕಿನ ವೆಬ್ ಸೈಟ್ www.bankofindia.co.in ನ ಟೆಂಡರ್ ವಿಭಾಗದಲ್ಲಿ ಲಾಗ್ ಆನ್ ಮಾಡಿ ನೋಡಬಹುದು ಅಥವಾ ಯಾವುದೇ ಕೆಲಸದ ದಿನ ಕಛೇರಿ ಸಮಯದಲ್ಲಿ ನಮ್ಮ ವಲಯ ಕಚೇರಿಯನ್ನು ಸಂಪರ್ಕಿಸಿ.

16.05.2023 ವಲಯ ವ್ಯವಸ್ಥಾಪಕರು

ಪ್ರಕಟಣೆ

ಟಿಮ್‌ಕೆನ್ ಇಂಡಿಯಾ ನಿಯಮಿತ
CIN - L29130KA1996PLC048230

ನೋಂದಣಿ ಕಛೇರಿ: ಸಂಖ್ಯೆ. 39–42, ಎಲೆಕ್ಟ್ರಾನಿಕ್ ಸಿಟಿ, ಫೇಸ್ II, ಹೊಸೂರು ರಸ್ತೆ, ಬೆಂಗಳೂರು–560 100 ದೂರವಾಣಿ : 080 41362000 ಫ್ಯಾಕ್ಸ್ : 080 41362010
ಇ–ಮೇಲ್: tilinvestor@timken.com ವೆಬ್‌ಸೈಟ್ : www.timken.com/en-in

ಈಕ್ವಿಟಿ ಷೇರುಗಳನ್ನು ಹೂಡಿಕೆದಾರರ ವಿದ್ಯಾಭ್ಯಾಸ ಮತ್ತು ಸಂರಕ್ಷಣ ನಿಧಿಗೆ ವರ್ಗಾಯಿಸಲು ಷೇರುದಾರರಿಗೆ ಸೂಚನೆ

ಹೂಡಿಕೆದಾರರ ವಿದ್ಯಾಭ್ಯಾಸ ಮತ್ತು ಸಂರಕ್ಷಣ ನಿಧಿಗಳ ಪ್ರಾಧಿಕಾರ (ಲೆಕ್ಕಪತ್ರ, ಪರಿಶೋಧನೆ, ವರ್ಗಾವಣೆ ಮತ್ತು ಹಿಂದಿರುಗಿಸುವುದು) ನಿಯಮ, 2016 ಆಗಿಂದಾಗ್ಗೆ ಬದಲಾವಣೆಯಾದ ಪ್ರಕಾರವಾಗಿ (“ಈ ನಿಯಮಗಳು”) ಸಂಸದೀಯ ವ್ಯವಹಾರಗಳ ಸಚಿವಾಲಯ, ಭಾರತ ಸರ್ಕಾರದಿಂದ ಸೂಚಿಸಲಾಗಿದೆ ಎಂದು ಓದಿಕೊಳ್ಳುವ ಕಂಪನಿಗಳ ಕಾಯಿದೆ, 2013 ರ ನಿಬಂಧನೆಗಳಿಗೆ ಅನುಗುಣವಾಗಿ ಈ ಸೂಚನೆಯನ್ನು ಪ್ರಕಟಿಸಲಾಗಿದೆ.

ಈ ನಿಯಮಗಳು, ಇನ್ನಿತರ ವಿಷಯಗಳೊಂದಿಗೆ, ಸತತವಾಗಿ ಏಳು ವರ್ಷಗಳಿಗೆ ಕೇಂದ್ರ ಸರ್ಕಾರ ಸ್ಥಾಪಿಸಿದ ಹೂಡಿಕೆದಾರರ ವಿದ್ಯಾಭ್ಯಾಸ ಮತ್ತು ಸಂರಕ್ಷಣ ನಿಧಿಗೆ (‘ಐಇಪಿಎಫ್’) ಡಿವಿಡೆಂಡ್‌ಗಳನ್ನು ಪಾವತಿಸದೆ ಅಥವಾ ಷೇರುದಾರರು ಪಡೆಯದೆ ಇರುವ ಎಲ್ಲಾ ರೀತಿಯ ಷೇರುಗಳಿಗೆ ಸಂಬಂಧಿಸಿದಂತೆ ವರ್ಗಾವಣೆಯನ್ನು ಒದಗಿಸುವುದು. ಅದರಂತೆ, ಸದರಿ ನಿಯಮದ ಅಡಿಯಲ್ಲಿ ಯಾರ ಷೇರುಗಳು ಐಇಪಿಎಫ್ ಡೀಮ್ಯಾಟ್ ಖಾತೆಗೆ 2023 ರ ಸೆಪ್ಟೆಂಬರ್ ತಿಂಗಳಲ್ಲಿ ವರ್ಗಾಯಿಸಲು ಅನ್ವಯಿಸುವಂತಹ ಸಂಬಂಧಿತ ಷೇರುದಾರರಿಗೆ ಸೂಚನೆ ನೀಡಿದೆ. ಕಂಪನಿಯು ಇಂತಹ ಷೇರುದಾರರ ಮತ್ತು ಐಇಪಿಎಫ್‌ಗೆ ಡೀಮ್ಯಾಟ್ ಖಾತೆಗೆ ವರ್ಗಾಯಿಸಲು ನಿಶ್ಚಯಿಸಿರುವ ಷೇರುಗಳ ವಿವರಗಳನ್ನು ತನ್ನ ವೆಬ್‌ಸೈಟ್ @https://www.timken.com/en-in/investors/statutory-compliances/ಕಂಪನಿ ನಲ್ಲಿ ಅಪ್‌ಲೋಡ್ ಮಾಡಿದೆ. ಕಂಪನಿಯು ಸಂಬಂಧಿತ ಷೇರುದಾರರಿಗೆ ಅಗತ್ಯವಿರುವ ಕ್ರಮ ಕೈಗೊಳ್ಳಲು ಲಭ್ಯವಿರುವ ಇತ್ತೀಚಿನ ವಿಳಾಸಕ್ಕೆ ಪ್ರತ್ಯೇಕವಾದ ಸಂದೇಶವನ್ನು ರವಾನಿಸಿದೆ.

ಐಇಪಿಎಫ್‌ಗೆ ವರ್ಗಾಯಿಸದೆ ಉಳಿದಿರುವ ಷೇರುಗಳ ಬಗ್ಗೆ 2015–16 ಹಾಗೂ ಮುಂದಿನ ಸಾಲುಗಳ (ಗಳಿಗೆ), ಯಾವುದೇ ಪಡೆಯದೆ ಉಳಿದಿರುವ ಅಂತಿಮ ಡಿವಿಡೆಂಡ್ ಅನ್ನು ಪಡೆಯಲು ಕಂಪನಿ / ರಿಜಿಸ್ಟ್ರಾರ್ ಹಾಗೂ ಟ್ರ್ಯಾನ್ಸ್‌ಫರ್ ಏಜೆಂಟ್ (ಆರ್‌ಟಿಎ) ಗೆ 31 ಆಗಸ್ಟ್, 2023 ರೊಳಗೆ ತಮ್ಮ ಅರ್ಜಿಯನ್ನು ಸಲ್ಲಿಸಲು ಸಂಬಂಧಪಟ್ಟ ಎಲ್ಲಾ ಷೇರುದಾರರಿಗೆ ಮನವಿ ಮಾಡಲಾಗಿದೆ. ತಾವುಗಳು ಗಮನಿಸಬೇಕಾದ ಅಂಶವೇನೆಂದರೆ ಮೇಲಿನ ನಿಗಧಿತ ದಿನದೊಳಗೆ ತಮಗೆ ಸಲ್ಲಬೇಕಾದ ಡಿವಿಡೆಂಡ್‌ಗಾಗಿ ಅರ್ಜಿ ಸಲ್ಲಿಸಲು ವಿಫಲವಾದರೆ, ಕಂಪನಿಯು ಮುಂದೆ ಷೇರುದಾರರಿಗೆ ಯಾವುದೇ ಸೂಚನೆ ನೀಡದೆ ಷೇರುಗಳನ್ನು ಐಇಪಿಎಫ್‌ಗೆ ವರ್ಗಾಯಿಸುವುದಲ್ಲದೆ ಬೇರೆ ದಾರಿ ಇರುವುದಿಲ್ಲ. ಷೇರುದಾರರಿಗೆ ತಿಳಿಸುವುದೇನೆಂದರೆ ಐಇಪಿಎಫ್‌ಗೆ ಷೇರುಗಳನ್ನು ವರ್ಗಾಯಿಸುವ ಉದ್ದೇಶ : ಕಂಪನಿಯು ತಾವು ಹೊಂದಿರುವ ಮೂಲ ಷೇರು ಪ್ರಮಾಣ ಪತ್ರ (ಗಳು)ದ ಬದಲಾಗಿ ಷೇರು ಪ್ರಮಾಣ ಪತ್ರ (ಗಳ)ದ ಪ್ರತಿಯನ್ನು ನೀಡುವುದು ಮತ್ತು ಇಂತಹ ಸಂದರ್ಭದಲ್ಲಿ, ಮೂಲ ಷೇರು ಪ್ರಮಾಣ ಪತ್ರ (ಗಳ)ದ ನೋಂದಾಯಿಸಲಾದ ತಮ್ಮ ಹೆಸರು ನಿಯಮಾನುಸಾರ ರದ್ದುಗೊಳ್ಳುತ್ತದೆ.

ಈ ಮೂಲಕ ಸೂಚಿಸುವುದೇನೇಂದರೆ ಐಇಪಿಎಫ್‌ಗೆ ವರ್ಗಾಯಿತಗೊಂಡ ಷೇರುಗಳು, ಯಾವುದೇ ಷೇರಿಗಗಳಿಗೆ ಅನ್ವಯಿಸುವ ಎಲ್ಲಾ ಸೌಲಭ್ಯಗಳು ಇದ್ದಲ್ಲಿ, ಇದನ್ನು ಒಳಗೊಂಡಂತೆ ಐಇಪಿಎಫ್ ಪ್ರಾಧಿಕಾರದಿಂದ ನಿಯಮದ ಅನುಸಾರ ಇವೆಲ್ಲವನ್ನು ಅನುಸರಿಸಿ ಅಂತಹ ಷೇರುಗಳನ್ನು ಪಡೆಯಬಹುದು. ಈ ವಿಷಯದ ಬಗ್ಗೆ ಸ್ಪಷ್ಟತೆಗಾಗಿ, ಕಂಪನಿ ರಿಜಿಸ್ಟ್ರಾರ್ಸ್ ಅಂಡ್ ಷೇರ್ ಟ್ರಾನ್ಸಫರ್ ಏಜೆಂಟ್ (ಆರ್‌ಟಿಎ), ಸಿಬಿ ಮ್ಯಾನೇಜ್‌ಮೆಂಟ್ ಸರ್ವಿಸಸ್ (ಪ್ರೈ) ಲಿಮಿಟೆಡ್, ಪಿ–22, ಬಾಂಡೆಲ್ ರಸ್ತೆ, ಕೋಲ್ಕತಾ – 700019 ದೂರವಾಣಿ ಸಂಖ್ಯೆ 033: 4011 6700/6725/6729, ಫ್ಯಾಕ್ಸ್ ಸಂಖ್ಯೆ 033–4011 6739, ಇ–ಮೇಲ್: rta@cbmsl.com, website: www.cbmsl.com ಮೂಲಕ ಸಂಪರ್ಕಿಸಬಹುದು.

ಟಿಮ್‌ಕೆನ್ ಇಂಡಿಯ ನಿಯಮಿತ ಪರವಾಗಿ
ಸಹಿ/– ಮಂದಾರ್ ವಸಮತ್‌ಕರ್
ಕಂಪನಿ ಕಾರ್ಯದರ್ಶಿ ಮತ್ತು ಮುಖ್ಯ–ಕಾಂಪ್ಲಯನ್ಸ್

ಸ್ಥಳ: ಬೆಂಗಳೂರು
ದಿನಾಂಕ: 15 ಮೇ, 2023

ದಕ್ಷಿಣ ಒಳನಾಡಲ್ಲಿ ಮಳೆ ಸಾಧ್ಯತೆ

ಬೆಂಗಳೂರು: ದಕ್ಷಿಣ ಒಳನಾಡು ವ್ಯಾಪ್ತಿಯ ಚಾಮರಾಜನಗರ, ಕೊಡಗು, ಮಂಡ್ಯ, ಮೈಸೂರು, ರಾಮನಗರ ಜಿಲ್ಲೆಗಳಲ್ಲಿ ಮಂಗಳವಾರ ಹಾಗೂ ಬುಧವಾರ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ದಕ್ಷಿಣ ಒಳನಾಡಿನ ಉಳಿದ ಜಿಲ್ಲೆಗಳು, ಕರಾವಳಿ ಹಾಗೂ ಉತ್ತರ ಒಳನಾಡಿನಲ್ಲಿ ಒಣಹವೆ ಇರಲಿದೆ. ಕರಾವಳಿ ಹಾಗೂ ಉತ್ತರ ಒಳನಾಡು ಭಾಗದಲ್ಲಿ ಸಾಮಾನ್ಯಕ್ಕಿಂತ ಉಷ್ಣಾಂಶವು 2 ಡಿಗ್ರಿ ಸೆಲ್ಸಿಯಸ್ ಹೆಚ್ಚಾಗಲಿದೆ ಎಂದು ಎಚ್ಚರಿಕೆ ನೀಡಿದೆ.

ನೈಋತ್ಯ ರೈಲ್ವೆ G20

ಇ–ಟೆಂಡರು ಸೂಚನೆ ಸಂ. CAO/CN/BNC/12/2023
ದಿನಾಂಕ: 11.05.2023

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ.ಸಂ.	ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
1	ಬೆಂಗಳೂರು ಕಂಟೋನ್ಮೆಂಟ್ ಯಾರ್ಡ್: ಎಫ್‌ಒಬಿ ಸಂ. 3 ರ ನಿರ್ಮಾಣಕ್ಕೆ ಸಂಬಂಧಿಸಿದಂತೆ ಬೆಂಗಳೂರು ಕಂಟೋನ್ಮೆಂಟ್ ನಿಲ್ದಾಣದ ಪ್ಲಾಟ್‌ಫಾರ್ಮ್ ಸಂ. 2 & 3 ರ ಅಗಲೀಕರಣ ಮತ್ತು ಪುನರಾಭಿವೃದ್ಧಿ (ಟೆಂಡರು ಉಲ್ಲೇಖ ಸಂ.: BNC-FOB-PF-2-3-R)	ರೂ. 1,19,34,941/-
2	ಗದಗ–ವಾಡಿ ಹೊಸ ಬಿಜಿ ಲೈನ್: ಲಿಂಗನಬಂಡಿ–ಹಣಮಾಪುರ ನಿಲ್ದಾಣಗಳ ನಡುವೆ ಕಿಮೀ. 42.625 ರಿಂದ ಕಿಮೀ. 44.600 ವರೆಗೆ ಹೆಚ್ಚಿನ ಸಾಮರ್ಥ್ಯವುಳ್ಳ ಸೂಕ್ತವಾದ ಆ್ಯಂಕರ್ ವ್ಯವಸ್ಥೆಯೊಂದಿಗೆ ಸ್ಟೀಲ್ ವೈರ್ ರೋಪ್ ನೆಟ್ ಮತ್ತು ಟರ್ಫ್ ಬಲವರ್ಧಿತ ಮ್ಯಾಟ್ ಮೂಲಕ ಬಂಡೆಗಳ ಉರುಳುವಿಕೆಯನ್ನು ತಡೆಯುವುದು ಮತ್ತು ಸ್ಲೋಪ್‌ಗಳನ್ನು ಕತ್ತರಿಸುವ ಮೂಲಕ ಸ್ಥಿರೀಕರಣಗೊಳಿಸುವುದು. (ಟೆಂಡರು ಉಲ್ಲೇಖ ಸಂ.: GDG-WD-48-R)	ರೂ. 22,86,86,373/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: ಕ್ರ.ಸಂ. 1ಕ್ಕೆ ದಿನಾಂಕ 30.05.2023 ರಂದು ಹಾಗೂ ಕ್ರ.ಸಂ. 2ಕ್ಕೆ ದಿನಾಂಕ 01.06.2023, 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ್ಯ ಇಂಜಿನಿಯರ್/ನಿರ್ಮಾಣ/ಕಾಮಗಾರಿ ಬೆಂಗಳೂರು ದಂಡು
PUB/90/AAD/PRB/SWR/2023-24
S.W.Railways SWRRLY SWRRLY

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಶ್ರೀ ವೆಂಕಟರಮಣೇಗೌಡ ಬಿನ್ ಲೇಟ್ ಹೊನ್ನೇಗೌಡ, ವಾಸ ನಂ. 251, 15ನೇ ಡಿ ಕ್ರಾಸ್, 2ನೇ ಹಂತ, 2ನೇ ಫೇಸ್, ಮಹಾಲಕ್ಷ್ಮೀಪುರಂ ಲೇಔಟ್, ಬೆಂಗಳೂರು–560 086, ಇವರು ನೀಡಿರುವ ಸೂಚನೆ ಮೇರೆಗೆ ಈ ಮೂಲಕ ಸಾರ್ವಜನಿಕರ ಗಮನಕ್ಕೆ ತಿಳಿಯಪಡಿಸುವುದೇನೆಂದರೆ, ನನ್ನ ಕಕ್ಷಿದಾರರು ಈ ಕೆಳಕಂಡ ಷೆಡ್ಯೂಲ್ ಸ್ವತ್ತನ್ನು ಲೆಫ್ಟಿನೆಂಟ್ ಕರ್ನಲ್ ರಮೇಶ್ ಕೌಶಿಕ್, ವಿಳಾಸ ನಂ. 399, 11ನೇ ಕ್ರಾಸ್, ಬಿ.ಡಿ.ಎ, ಹೆಚ್.ಐ.ಜಿ ಲೇಔಟ್, ಆರ್.ಎಂ.ವಿ. 2ನೇ ಹಂತ, ಬೆಂಗಳೂರು–560 094, ಇವರಿಂದ ಕೊಂಡುಕೊಳ್ಳಲು ಇಚ್ಛಿಸಿರುತ್ತಾರೆ.

ಈ ಕೆಳಕಂಡ ಷೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ವ್ಯಕ್ತಿ/ಗಳಿಗೆ, ಸಂಘ/ಸಂಸ್ಥೆಗಳಿಗೆ, ಯಾರಿಗಾದರು ಹಕ್ಕು, ಬಾಧ್ಯತೆ, ಹಿತಾಸಕ್ತಿಗಳು, ಮೈನರ್ ಹಕ್ಕು, ಕೋರ್ಟ್ ಅಟ್ಯಾಚ್‌ಮೆಂಟ್ ಇತ್ಯಾದಿ ಇದ್ದಲ್ಲಿ ಮತ್ತು ಈ ಕ್ರಯದ ಬಗ್ಗೆ ಯಾರಿಂದಲಾದರೂ ಯಾವುದಾದರೂ ತಂಟೆ ತಕರಾರು, ಆಕ್ಷೇಪಣೆಗಳು ಇದ್ದಲ್ಲಿ ಅಂತಹ ಆಕ್ಷೇಪಣೆಗಳನ್ನು ಈ ಪ್ರಕಟಣೆ ದಿನದಿಂದ 07 (ಏಳು) ದಿನಗಳೊಳಗಾಗಿ ತಮ್ಮ ತಕರಾರು/ಆಕ್ಷೇಪಣೆಗಳನ್ನು ಸಂಬಂಧಪಟ್ಟ ದಸ್ತಾವೇಜುಗಳ ಆಧಾರ ಸಹಿತವಾಗಿ ಈ ಕೆಳಗೆ ಸಹಿಮಾಡಿರುವ ನನಗೆ ಸಲ್ಲಿಸಲು ಕೋರಿದೆ.

ಒಂದು ವೇಳೆ ನಿಗಧಿತ ಅವಧಿಯಲ್ಲಿ ಯಾವುದೇ ತಕರಾರು ಅಥವಾ ಆಕ್ಷೇಪಣೆಗಳು ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತು ನಿರುಪಾಧಿಕವೆಂದು ಪರಿಗಣಿಸಿ ನನ್ನ ಕಕ್ಷಿದಾರರು ಕ್ರಯದ ಮುಂದಿನ ವ್ಯವಹಾರ ಮುಂದುವರೆಸಲಿದ್ದಾರೆ ಮತ್ತು ನಿಗಧಿತ ಅವಧಿಯ ನಂತರ ಬರತಕ್ಕ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲವೆಂದು ತಿಳಿಯತಕ್ಕದ್ದು.

ಷೆಡ್ಯೂಲ್

ಬೆಂಗಳೂರು, ರಾಜಮಹಲ್ ವಿಲಾಸ ಎಕ್ಸ್‌ಟೆನ್ಷನ್ 2ನೇ ಹಂತದ ಎಕ್ಸ್‌ಟೆನ್ಷನ್ ಬ್ಲಾಕ್ ನಂ. 24ರಲ್ಲಿರುವ ಸ್ಥಿರಾಸ್ತಿ ಸ್ವತ್ತು ಹೆಚ್.ಐ.ಜಿ. (ಎಸ್ ಎಫ್ ಹೆಚ್ ಎಸ್) ಮನೆ ನಂ. 399, ಪಿಐಡಿ ನಂ. 100–767–399ರ ವಿಸ್ತೀರ್ಣ ಪೂರ್ವ–ಪಶ್ಚಿಮ (16.60+16.90)/2 ಮೀಟರ್‌ಗಳು, ಉತ್ತರ–ದಕ್ಷಿಣ: 18.40 ಮೀಟರ್‌ಗಳು, ಒಟ್ಟು ವಿಸ್ತೀರ್ಣ 308.20 ಚದರ ಮೀಟರ್‌ಗಳು (3316 ಚದರ ಅಡಿಗಳು) ಹಾಗೂ ಎಲ್ಲಾ ಹಕ್ಕು ಮತ್ತು ಮೂಲಭೂತ ಸೌಕರ್ಯವನ್ನೊಳಗೊಂಡ ಸ್ವತ್ತಿಗೆ ಚೆಕ್ಕುಬಂದಿ–

ಪೂರ್ವಕ್ಕೆ : ಸೈಟ್ ನಂ. 400
ಪಶ್ಚಿಮಕ್ಕೆ : ಸೈಟ್ ನಂ. 398
ಉತ್ತರಕ್ಕೆ : ಸೈಟ್ ನಂ. 403,
ದಕ್ಷಿಣಕ್ಕೆ : 11ನೇ ಅಡ್ಡ ರಸ್ತೆ.

ಸಿ.ಆರ್. ಕೃಷ್ಣಪ್ಪ, ವಕೀಲರು,
ನಂ. 313, 3ನೇ ಮಹಡಿ, ಕುರುಬರ ಸಂಘ ಬಿಲ್ಡಿಂಗ್, 2ನೇ ಕ್ರಾಸ್, 2ನೇ ಮೈನ್, ಗಾಂಧಿನಗರ, ಬೆಂಗಳೂರು–560 009. ಮೊಬೈಲ್: 98455 77155
ಸ್ಥಳ: ಬೆಂಗಳೂರು. ದಿನಾಂಕ: 15–05–2023

ನಿಧನ ಸುದ್ದಿ

ಮರುಳಸಿದ್ಧಪ್ಪ

ಮರುಳಸಿದ್ಧಪ್ಪ

ಬೆಂಗಳೂರು: ರಾಜರಾಜೇಶ್ವರಿ ನಗರದ ನಿವಾಸಿ, ನಿವೃತ್ತ ಕಾರ್ಯನಿರ್ವಾಹಕ ಎಂಜಿನಿಯರ್ ಮರುಳಸಿದ್ದಪ್ಪ (80) ಭಾನುವಾರ ರಾತ್ರಿ ನಿಧನರಾದರು. ಇವರಿಗೆ ಇಬ್ಬರು ಪುತ್ರರು ಇದ್ದಾರೆ.

ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕು ಹಾದಿಕೆರೆ ಗ್ರಾಮದವರಾದ ಮುರುಳಸಿದ್ದಪ್ಪ ಅವರು, ಮಹಾರಾಷ್ಟ್ರ ಸರ್ಕಾರದಲ್ಲಿ ಎಂಜಿನಿಯರ್ ಆಗಿ ಮೂರು ದಶಕಗಳ ಕಾಲ ಕೆಲಸ ಮಾಡಿದ್ದರು. ರಾಜ್ಯಕ್ಕೆ ಮರಳಿದ ಮೇಲೆ ಎಂಜಿನಿಯರ್ ಸಂಘ ರಚಿಸಿ ಅನೇಕ ಸೇವಾ ಸೌಲಭ್ಯಗಳನ್ನು ಪಡೆಯಲು ಸರ್ಕಾರದ ಗಮನ ಸೆಳೆದಿದ್ದರು.ಕನ್ನಹಳ್ಳಿ ರುದ್ರಭೂಮಿಯಲ್ಲಿ ಸೋಮವಾರ ಮಧ್ಯಾಹ್ನ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಡಿ.ಕೆ. ಮಹೇಶ್

ಡಿ.ಕೆ. ಮಹೇಶ್

ಪೀಣ್ಯ ದಾಸರಹಳ್ಳಿ: ರಾಜ-ಗೋಪಾಲನಗರ ವಾರ್ಡ್ ಐ.ಪಿ. ನಗರದ ನಿವಾಸಿ, ದಾಸರಹಳ್ಳಿ ಕ್ಷೇತ್ರದ ಬಿಜೆಪಿ ಪ್ರಧಾನ ಕಾರ್ಯದರ್ಶಿ ಡಿ.ಕೆ. ಮಹೇಶ್(46) ಅವರು ಸೋಮವಾರ ನಿಧನರಾದರು.

ಅವರಿಗೆ ಪತ್ನಿ ಮತ್ತು ಇಬ್ಬರು ಪುತ್ರರು ಇದ್ದಾರೆ. ನಾಗಮಂಗಲದ ದಂಡಿಗನಹಳ್ಳಿ ಗ್ರಾಮದಲ್ಲಿ ಮಂಗಳವಾರ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಫುಟ್‌ಪಾತ್‌ನಲ್ಲಿಯೇ ವ್ಯಾಪಾರ ಚಟುವಟಿಕೆ • ಕ್ರಮ ಜರುಗಿಸದಿದ್ದರೆ ಅಧಿಕಾರಿಗಳೇ ಹೊಣೆ– ಬಿಬಿಎಂಪಿ

‘ಸ್ಮಾರ್ಟ್’ ಆಗದ ಪಾದಚಾರಿ ಮಾರ್ಗಗಳು

• ಖಲೀಲಅಹ್ಮದ ಶೇಖ

ಬೆಂಗಳೂರು: ನಗರದಲ್ಲಿನ ಪಾದಚಾರಿ ಮಾರ್ಗಗಳು ಈಗ ನಾಗರಿಕರಿಗೆ ಕಂಟಕವಾಗಿವೆ. ದುಃಸ್ಥಿತಿಯಲ್ಲಿರುವ ಪಾದಚಾರಿ ಮಾರ್ಗಗಳಿಂದ ನಾಗರಿಕರು ಆಯತಪ್ಪಿ ಗಾಯ ಮಾಡಿಕೊಳ್ಳುತ್ತಿರುವ ಪರಿಸ್ಥಿತಿ ಸೃಷ್ಟಿಯಾಗಿದೆ.

ರೆಸಿಡೆನ್ಸಿ ರಸ್ತೆ, ರಿಚ್‌ಮಂಡ್ ರಸ್ತೆ, ಟ್ರಿನಿಟಿ ವೃತ್ತ, ಅನಿಲ್ ಕುಂಬ್ಳೆ ವೃತ್ತ, ಮೈಸೂರು ರಸ್ತೆ, ಸಿರ್ಸಿ ವೃತ್ತ, ಸ್ವಾತಂತ್ರ್ಯ ಉದ್ಯಾನದ ಮುಂಭಾಗದ ಪಾದಚಾರಿ ಮಾರ್ಗದ ಕೆಲವೆಡೆ ಪೇವರ್ಸ್‌ಗಳು ಕಿತ್ತು ಹೋಗಿವೆ. ಕೆಲವೆಡೆ ಟೈಲ್ಸ್‌ಗಳು ಬಿರುಕು ಬಿಟ್ಟಿದ್ದು, ಅಲ್ಲಲ್ಲಿ ನೆಲಹಾಸು ಕುಸಿದು, ತಗ್ಗು ದಿಣ್ಣೆ ಸೃಷ್ಟಿಯಾಗಿದೆ. ಕೇಬಲ್ ಅಳವಡಿಸಲು ಪಾದಚಾರಿ ಮಾರ್ಗವನ್ನೇ ಅಗೆಯಲಾಗಿದೆ.

ಸಿರ್ಸಿ ವೃತ್ತದ ಪಾದಚಾರಿ ಮಾರ್ಗಕ್ಕೆ ಅಳವಡಿಸಿದ್ದ ಪೇವರ್ಸ್ ಕಿತ್ತು ಹೋಗಿರುವ ಕಡೆ ಎಚ್ಚರದಿಂದ ಸಾಗಬೇಕಾಗಿದೆ. ಎಡವದೆಯೇ ನಡೆಯುವ ಕಸರತ್ತುಗಳನ್ನು ಕರಗತ ಮಾಡಿಕೊಂಡರಷ್ಟೇ ನಡಿಗೆ ಸಲೀಸು ಎಂಬ ಪರಿಸ್ಥಿತಿ ಪಾದಚಾರಿಗಳದ್ದು. ಇದರಿಂದ ಪಾದಚಾರಿಗಳು ಸೊಂಟ, ಕಾಲು ಉಳುಕಿಸಿಕೊಂಡಿರುವ ಘಟನೆಗಳು ಸಹ ನಡೆದಿವೆ. ಹರಿಕೃಷ್ಣ ಮುಖ್ಯರಸ್ತೆಯ ಕುಮಾರಪಾರ್ಕ್‌ನ ಪಾದಚಾರಿ ಮಾರ್ಗಕ್ಕೆ ಅಳವಡಿಸಿದ್ದ ಚಪ್ಪಟ್ಟೆ ಕಲ್ಲುಗಳು ಕಿತ್ತು ಹೋಗಿದ್ದು, ವರ್ಷವಾದರೂ ಸರಿಪಡಿಸಿಲ್ಲ. ಮೈಸೂರು ಮುಖ್ಯರಸ್ತೆಯಲ್ಲಿನ ಪಾದಚಾರಿ ಮಾರ್ಗ ಸಹ ಕುಸಿದು ಬಿದ್ದಿದೆ.

‘ಟ್ರಿನಿಟಿ ವೃತ್ತದ ಎರಡು ಬದಿಯ ಪಾದಚಾರಿ ಮಾರ್ಗಗಳಲ್ಲಿ ಕೇಬಲ್ ಅಳವಡಿಸಲು ಗುಂಡಿ ಅಗೆಯಲಾಗಿದೆ. ಇದಕ್ಕೆ ಅಳವಡಿಸಿದ್ದ ಪೇವರ್ಸ್‌ಗಳು ಮಾರ್ಗದ ತುಂಬೆಲ್ಲ ಹರಡಿಕೊಂಡಿವೆ. ಇದುವರೆಗೂ ಬಿಬಿಎಂಪಿ ದುರಸ್ತಿಪಡಿಸಲು ಯಾವುದೇ ಕ್ರಮಕೈಗೊಂಡಿಲ್ಲ. ಇದರಿಂದ, ಸಾರ್ವಜನಿಕರು ಮುಖ್ಯರಸ್ತೆಯಲ್ಲಿಯೇ ಸಂಚರಿಸುವ ಪರಿಸ್ಥಿತಿ ನಿರ್ಮಾಣವಾಗಿದೆ’ ಎಂದು ಹಲಸೂರು ನಿವಾಸಿ ಸೋಮೇಶ್ ಹೇಳಿದರು.

ರಸ್ತೆ ಗುಂಡಿಗಳಿಂದ ಸಾಯುತ್ತಿರುವುದು ನೋಡುತ್ತಿದ್ದೇವೆ. ಈಗ ಪಾದಚಾರಿ ಮಾರ್ಗಗಳು ಸುರಕ್ಷಿತವಲ್ಲ ಎನ್ನುವಂತಾಗಿದೆ.

ಬಾಲಗಂಗಾಧರನಾಥ ಮೇಲ್ಸೇತುವೆ ಬಳಿ ಪಾದಚಾರಿ ಮಾರ್ಗದ ದುಸ್ಥಿತಿ

‘ಬೀದಿ ವ್ಯಾಪಾರಿಗಳ ಹಾವಳಿ’

‘ಪಾದಚಾರಿ ಮಾರ್ಗದಲ್ಲಿ ಬೀದಿ ವ್ಯಾಪಾರಿಗಳ ಹಾವಳಿ ಹೆಚ್ಚಾಗಿದೆ. ಕೆ.ಆರ್. ಮಾರುಕಟ್ಟೆ, ಶಿವಾಜಿನಗರ ಸೇರಿ ನಗರದ ಬಹುತೇಕ ಮಾರುಕಟ್ಟೆಗಳ ಬಳಿ ಈ ಸಮಸ್ಯೆ ತೀವ್ರವಾಗಿದೆ. ಫುಟ್‌ಪಾತ್‌ನಲ್ಲೇ ಬಟ್ಟೆ, ಚಪ್ಪಲಿ, ಸೊಪ್ಪು–ತರಕಾರಿ, ಹಣ್ಣು– ಹಂಪಲು, ಮುಂತಾದ ಸರಕುಗಳನ್ನು ಹರಡಿ ವ್ಯಾಪಾರ ಮಾಡುತ್ತಾರೆ. ಬೀದಿಬದಿ ವ್ಯಾಪಾರಿಗಳು ಜೋರು ಧ್ವನಿಯಲ್ಲಿ ಗಿರಾಕಿಗಳನ್ನು ಕರೆಯುವ ಅಬ್ಬರದ ನಡುವೆ, ಹೆಜ್ಜೆ ಇರಿಸಲು ಜಾಗವಿಲ್ಲದೇ ಪರದಾಡುವ ಪಾದಚಾರಿಗಳ ಗೋಣಗಾಟ ಯಾರಿಗೂ ಕೇಳಿಸುತ್ತಿಲ್ಲ’ ಎಂದು ಯಶವಂತಪುರದ ನಿವಾಸಿ ಮೊಹಮ್ಮದ್ ಅಲಿ ಮತ್ತು ಸುಶೀಲ್ ಹೇಳುತ್ತಾರೆ.

ಸದಾನಂದನಗರ 8ನೇ ಮುಖ್ಯರಸ್ತೆಯಲ್ಲಿರುವ ಪಾದಚಾರಿ ಮಾರ್ಗದ ದುಸ್ಥಿತಿ.

ಬಾಲಗಂಗಾಧರನಾಥ ಮೇಲ್ಸೇತುವೆ ಬಳಿಯ ಪಾದಚಾರಿ ಮಾರ್ಗ ಹಾಳಾಗಿದೆ. ವಿದ್ಯಾರ್ಥಿಗಳು, ಹಿರಿಯರು ಓಡಾಡುತ್ತಾರೆ. ಅನಾಹುತ ಸಂಭವಿಸುವ ಮುನ್ನ ಬಿಬಿಎಂಪಿ ಎಚ್ಚೆತ್ತುಕೊಳ್ಳಲಿ

ರಶ್ಮಿ ಅಂಜನಿ, ಕೆಂಗೇರಿ ಉಪನಗರ ನಿವಾಸಿ

ಬಹುತೇಕ ಪಾದಚಾರಿ ಮಾರ್ಗಗಳನ್ನು ವ್ಯಾಪಾರಿಗಳು ಅತಿಕ್ರಮಿಸಿದ್ದಾರೆ. ಪಾದಚಾರಿಗಳು ಜೀವ ಭಯದಲ್ಲಿ ಮುಖ್ಯರಸ್ತೆಯಲ್ಲಿ ಸಾಗುವ ಸ್ಥಿತಿ ಇದೆ.

ಯೋಗೇಶ್

ಪ್ರಮೋದ ಲೇಔಟ್, ಮೈಸೂರು ರಸ್ತೆ

‘ಅನುಮತಿ ಪಡೆಯುವುದು ಕಡ್ಡಾಯ’

‘ಪಾದಚಾರಿ ಮಾರ್ಗಗಳಲ್ಲಿ ಒಎಫ್‌ಸಿ ಸೇರಿ ಬೇರೆ ಯಾವುದೇ ಕೇಬಲ್ ಅಳವಡಿಸಲು ಬಿಬಿಎಂಪಿಯಿಂದ ಅನುಮತಿ ಪಡೆದುಕೊಳ್ಳಬೇಕು. ಪಾದಚಾರಿ ಮಾರ್ಗ ಅಗೆಯುವಾಗ ಬಿಬಿಎಂಪಿಯ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರುಗಳು (ಎಇಇ) ಸ್ಥಳದಲ್ಲಿರಬೇಕು. ಕೆಲಸವಾದ ನಂತರ ಗುಂಡಿಯನ್ನು ಮುಚ್ಚಲು ನಮ್ಮ ಸಿಬ್ಬಂದಿ ಕ್ರಮಕೈಗೊಳ್ಳದಿದ್ದರೇ ಅವರನ್ನೇ ಜವಾಬ್ದಾರರನ್ನಾಗಿ ಮಾಡಿ, ಅವರಿಂದಲೇ ಹಣ ವಸೂಲಿ ಮಾಡಲಾಗುವುದು’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ‘ಪ್ರಜಾವಾಣಿ’ಗೆ ತಿಳಿಸಿದರು.

ನಗರದ ಸಿರ್ಸಿ ವೃತ್ತದ ಪಾದಚಾರಿ ಮಾರ್ಗಕ್ಕೆ ಅಳವಡಿಸಿರುವ ಪೇವರ್ಸ್ ಕಿತ್ತು ಹೋಗಿದೆ —ಪ್ರಜಾವಾಣಿ ಚಿತ್ರಗಳು/ ಪ್ರಶಾಂತ್ ಎಚ್‌.ಜಿ.

ನದಿಯಲ್ಲಿ ಮುಳುಗಿ ಸಹೋದರರ ಸಾವು

ಸಿಂಧನೂರು (ವಿಜಯಪುರ ಜಿಲ್ಲೆ): ಇಲ್ಲಿನ ದಢೇಸುಗೂರು ಗ್ರಾಮದ ಬಳಿ ಸೋಮವಾರ ತುಂಗಭದ್ರಾ ನದಿಯಲ್ಲಿ ಮುಳುಗಿ ಸಹೋದರರಿಬ್ಬರು ಮೃತಪಟ್ಟಿದ್ದಾರೆ. ಅದೇ ಗ್ರಾಮದ ಮುದಿಯಪ್ಪ ಹರಿಜನ ಅವರ ಪುತ್ರರಾದ ಅಮರ (17) ಮತ್ತು ಮಲ್ಲಿಕಾರ್ಜುನ (15) ಮೃತರು. ಇಬ್ಬರೂ ಸ್ನಾನಕ್ಕೆಂದು ನದಿಗೆ ಇಳಿದಿದ್ದ ವೇಳೆ ದುರ್ಘಟನೆ ನಡೆದಿದೆ ಎಂದು ಸ್ಥಳೀಯರು ತಿಳಿಸಿದ್ದಾರೆ.

ಕರ್ನಾಟಕ ವಿಶ್ವವಿದ್ಯಾಲಯ
ಯುನಿವರ್ಸಿಟಿ ಪಬ್ಲಿಕ್ ಸ್ಕೂಲ,
ಧಾರವಾಡ–580001. Ph. No.: 0836-2442373

ಕೆಯು/ಯುಪಿಎಸ್/2023–24 ದಿನಾಂಕ: 15–05–2023

ಪ್ರವೇಶ ಪ್ರಕಟಣೆ

ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ಯುನಿವರ್ಸಿಟಿ ಪಬ್ಲಿಕ್ ಶಾಲೆಯ 2023–24 ನೇ ಶೈಕ್ಷಣಿಕ ಸಾಲಿಗೆ 5 ನೇ ತರಗತಿಯಿಂದ 10 ನೇ ತರಗತಿಯವರೆಗೆ ಶಾಲೆ ಮತ್ತು ವರದಾ ವಸತಿ ನಿಲಯದ ಪ್ರವೇಶಕ್ಕೆ ಅರ್ಜಿಯನ್ನು ಆಹ್ವಾನಿಸಲಾಗಿರುತ್ತದೆ. 8 ನೇ ತರಗತಿಯಿಂದ ಕನ್ನಡ ಹಾಗೂ ಆಂಗ್ಲ (ಇಂಗ್ಲೀಷ) ಮಾಧ್ಯಮದಲ್ಲಿ ವ್ಯಾಸಾಂಗ ಮಾಡಲು ಅವಕಾಶವಿರುತ್ತದೆ. 5 ಮತ್ತು 8 ನೇ ತರಗತಿಗಳಿಗೆ ಮಾತ್ರ ವಸತಿ ನಿಲಯದ ಪ್ರವೇಶಕ್ಕರ ಲಿಖಿತ ಪರೀಕ್ಷೆ ಇರುತ್ತದೆ. (ಉಳಿದ ವರ್ಗಗಳಿಗೆ ಪ್ರಸ್ತುತ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮುಂದಿನ ವರ್ಗದ ಪ್ರವೇಶಕ್ಕೆ ಲಿಖಿತ ಪರೀಕ್ಷೆ ಇರುವದಿಲ್ಲ)

1) ಪ್ರವೇಶ ಅರ್ಜಿ ಫಾರ್ಮಗಳನ್ನು **ದಿನಾಂಕ: 02.05.2023 ರಿಂದ ಕೊಡಲಾಗುವದು.**
2) ಅಜಿ ಸಲ್ಲಿಸುವ ಕೊನೆಯ **ದಿನಾಂಕ: 30.06.2023 ಮಧ್ಯಾಹ್ನ 4–00 ಘಂಟೆ ಒಳಗೆ.**
3) ಅರ್ಜಿ ಶುಲ್ಕ್ ಶಾಲಾ ಪ್ರವೇಶಕ್ಕೆ ರೂ. 55/– ಹಾಗೂ ವಸತಿ ನಿಲಯದ ಪ್ರವೇಶಕ್ಕೆ **ರೂ.110/–** ಗಳನ್ನು ಚಲನ ಮುಖಾಂತರ ಭರಣ ಮಾಡಿ ಅರ್ಜಿಯನ್ನು ಪಡೆಯಬಹುದು.

ಪ್ರವೇಶಕ್ಕೆ ಕಡ್ಡಾಯವಾಗಿ ಲಗತ್ತಿಸಬೇಕಾದ ಪ್ರಮಾಣ ಪತ್ರಗಳು:

1) ಹಿಂದಿನ ತರಗತಿಯ ಅಂಕಪಟ್ಟಿ (ಮಾರ್ಕ್ಸಕಾರ್ಡ) **2)** ಜಾತಿ ಹಾಗೂ ಅದಾಯ ಪ್ರಮಾಣಪತ್ರ **3)** ವರ್ಗಾವಣೆ ಪ್ರಮಾಣಪತ್ರ. (T.C) ಮೂಲ ಪ್ರತಿ **4)** 3 ಇತ್ತೀಚಿನ ಸ್ಟ್ಯಾಂಪ್ ಸೈಜಿನ ಭಾವಚಿತ್ರ **5)** ವಾಸಸ್ಥಳದ ದಾಖಲಾತಿ ಪ್ರತಿ (ವಿದ್ಯಾರ್ಥಿ ಆಧಾರ ಕಾರ್ಡ) **6)** ವಿದ್ಯಾರ್ಥಿಗಳ ಅಕೌಂಟನ ಪಾಸ್ ಬುಕ್ ಝರಾಕ್ಸ ಪ್ರತಿ **7)** ವಿದ್ಯಾರ್ಥಿ ತಂದೆ ತಾಯಿ ಆಧಾರಕಾರ್ಡ ಝರಾಕ್ಸ ಪ್ರತಿ **8)** ರೇಶನ ಕಾರ್ಡ ಪ್ರತಿ (ಪಡಿತರ ಚೀಟಿ)

ವಿಶೇಷ ಸೂಚನೆ:

1) ಈ ಶಾಲೆಯ ವಸತಿ ನಿಲಯಕ್ಕೆ 5 ನೇ ವರ್ಗದ ಪ್ರವೇಶಕ್ಕೆ ಪರೀಕ್ಷೆಯನ್ನು ನಡೆಸಿ ಮೇರಿಟ್ ಹಾಗೂ ರೋಸ್ಟರ್ ಅನುಗುಣವಾಗಿ ಪ್ರವೇಶವನ್ನು ನೀಡಲಾಗುವುದು.
2) 8 ನೇ ತರಗತಿಯ ವಿದ್ಯಾರ್ಥಿಗಳು ವಸತಿ ನಿಲಯಕ್ಕೆ ಪ್ರವೇಶ ಬಯಸಿದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಲಿಖಿತ ಪರೀಕ್ಷೆಯನ್ನು ನಡೆಸಲಾಗುವುದು ಮತ್ತು ಸದರಿ ಲಿಖಿತ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಸ್ಥಳಾವಕಾಶದ ಲಭ್ಯತೆಯ ಅನುಗುಣವಾಗಿ (ಶೇಕಡಾವಾರು ಅಧಾರದ ಮೇಲೆ) ಪ್ರವೇಶ ನೀಡಲಾಗುವುದು.
3) 5 ನೇ ಮತ್ತು 8 ನೇ ತರಗತಿಗಳಿಗೆ ಹೊಸದಾಗಿ ವಸತಿ ನಿಲಯಕ್ಕೆ ಪ್ರವೇಶ ಪಡೆಯಲು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದ ಅಂದರೆ **ದಿನಾಂಕ: 30.06.2023** ರ ನಂತರ ಲಿಖಿತ ಪರೀಕ್ಷೆಯ ದಿನಾಂಕವನ್ನು ವಿದ್ಯಾರ್ಥಿಗಳು ಶಾಲಾ ಕಚೇರಿ **ದೂರವಾಣಿ ಸಂಖ್ಯೆ: 0836–2442373** ಗೆ ಸಂಪರ್ಕಿಸಿ ಖಚಿತಪಡಿಸಿಕೊಳ್ಳುವುದು.
4) ಪ್ರವೇಶಾತಿಯ ಬಗ್ಗೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಶಾಲೆಯ ಕಾರ್ಯಾಲಯದಲ್ಲಿ ವಿಚಾರಿಸಬಹುದು. ಮುಂದುವರೆದು, ಮೇಲ್ಕಾಣಿಸಿದ ವಿಷಯದಲ್ಲಿ ಯಾವುದೇ ಬದಲಾವಣೆಯನ್ನು ಜಾರಿಗೆ ತರುವ ಹಕ್ಕನ್ನು ವಿಶ್ವವಿದ್ಯಾಲಯವು ಹೊಂದಿರುತ್ತದೆ.

ಕಛೇರಿಯ ದೂರವಾಣಿ ಸಂಖ್ಯೆ: 0836–2442373

ಸಹಿ/– ಪ್ರಾಚಾರ್ಯರು, ಕವಿವಿ ಪಬ್ಲಿಕ್ ಸ್ಕೂಲ, ಧಾರವಾಡ

ಸಹಿ/– ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮಗಳನ್ನೇ ಅಕ್ರಮವಾಗಿ ಬಂಧನದಲ್ಲಿ ಇರಿಸಿದ ಆರೋಪ

ಪುನರ್ವಸತಿ ಕೇಂದ್ರದಲ್ಲಿ ಇರಿಸಲು ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರೈಸ್ತ ಧರ್ಮದ ಯುವಕನೊಂದಿಗೆ ಮದುವೆ ಆಗುವುದನ್ನು ವಿರೋಧಿಸಿದ ಹಿಂದೂ ಧರ್ಮಕ್ಕೆ ಸೇರಿದ ಯುವತಿಯೊಬ್ಬಳನ್ನು ಆಕೆಯ ಪಾಲಕರು ಅಕ್ರಮ ಬಂಧನದಲ್ಲಿರಿಸಿದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಯುವತಿಯನ್ನು ಬೆಂಗಳೂರಿನ ಪುನರ್ವಸತಿ ಕೇಂದ್ರದಲ್ಲಿ ಉಳಿಯಲು ಹೈಕೋರ್ಟ್ ಅವಕಾಶ ಕಲ್ಪಿಸಿದೆ.

ದಕ್ಷಿಣ ಕನ್ನಡದ ಹಿಂದೂ ಧರ್ಮದ ಯುವತಿಯೊಬ್ಬಳನ್ನು ಆಕೆಯ ಪಾಲಕರು ಅಕ್ರಮ ಬಂಧನದಲ್ಲಿಟ್ಟಿದ್ದಾರೆ ಎಂದು ಆರೋಪಿಸಿ ಕ್ರೈಸ್ತ ಧರ್ಮಕ್ಕೆ ಸೇರಿದ ಯುವಕನೊಬ್ಬ ಸಲ್ಲಿಸಿದ್ದ ಹೇಬಿಯಸ್ ಕಾರ್ಪಸ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್. ಆರ್. ಕೃಷ್ಣಕುಮಾರ್ ಹಾಗೂ ನ್ಯಾಯಮೂರ್ತಿ ಟಿ. ವೆಂಕಟೇಶ್ ನಾಯ್ಕ ಅವರಿದ್ದ ರಜಾಕಾಲದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು. ಕೋರ್ಟ್‌ಗೆ ಹಾಜರಾಗಿದ್ದ ಯುವತಿಯನ್ನು ಇದೇ 16ರವರೆಗೆ ಪುನರ್ವಸತಿ ಕೇಂದ್ರದಲ್ಲಿ ಉಳಿದುಕೊಳ್ಳಲು ವ್ಯವಸ್ಥೆ ಮಾಡಿ ಆದೇಶಿಸಿತು.

‘ಪುನರ್ವಸತಿ ಕೇಂದ್ರಕ್ಕೆ ತೆರಳುವ ಯುವತಿಗೆ ಆಕೆಯ ಪಾಲಕರು ಅಥವಾ ಕುಟುಂಬದ ಬೇರಾವ ಸದಸ್ಯರೂ ತೊಂದರೆ ನೀಡಬಾರದು. ಇದು ಅರ್ಜಿದಾರ ಮತ್ತವನ ಪಾಲಕರಿಗೂ ಅನ್ವಯಿಸಲಿದೆ. ಪೊಲೀಸರು ಯುವತಿಯ ರಕ್ಷಣೆಗೆ ಸೂಕ್ತ ಕ್ರಮ ಕೈಗೊಳ್ಳಬೇಕು’ ಎಂದು ಸೂಚಿಸಿದ ನ್ಯಾಯಪೀಠ ವಿಚಾರಣೆಯನ್ನು ಮೇ 16ಕ್ಕೆ ಮುಂದೂಡಿದೆ.

ಈ ಮೊದಲು ಅರ್ಜಿ ವಿಚಾರಣೆ ನಡೆಸಿದ್ದ ಹೈಕೋರ್ಟ್, ಯುವತಿಯನ್ನು ಕೋರ್ಟ್‌ಗೆ ಹಾಜರುಪಡಿಸುವಂತೆ ಪುತ್ತೂರು ಮಹಿಳಾ ಪೊಲೀಸ್ ಠಾಣೆಗೆ ನಿರ್ದೇಶಿಸಿತ್ತು. ಯುವತಿಯ ಪಾಲಕರು ಹಾಗೂ ಅರ್ಜಿದಾರರ ಪಾಲಕರೂ ಹಾಜರಾಗುವಂತೆ ಸೂಚಿಸಿತ್ತು.

ನ್ಯಾಯಪೀಠದ ನಿರ್ದೇಶನದಂತೆ ಪೊಲೀಸರು ಯುವತಿಯನ್ನು ಕೋರ್ಟ್‌ಗೆ ಹಾಜರುಪಡಿಸಿದ್ದರು. ವಿಚಾರಣೆ ವೇಳೆ ಯುವತಿ, ‘ಪಾಲಕರಿಂದ ನನಗೆ ಬೆದರಿಕೆಯಿದೆ’ ಎಂಬ ಕಾರಣ ನೀಡಿ ಅವರೊಂದಿಗೆ ತೆರಳಲು ನಿರಾಕರಿಸಿದಳು. ಆದರೆ, ಪಾಲಕರು ಮಗಳ ಆರೋಪಗಳನ್ನು ಅಲ್ಲಗಳೆದಿದ್ದರು.

ಅಂತಿಮವಾಗಿ ನ್ಯಾಯಪೀಠವು, ಯುವತಿ ಇದೇ 16ರವರೆಗೆ ಬೆಂಗಳೂರಿನ ಪುನರ್ವಸತಿ ಕೇಂದ್ರವೊಂದರಲ್ಲಿ ತಾತ್ಕಾಲಿಕವಾಗಿ ಉಳಿದುಕೊಳ್ಳಲು ವ್ಯವಸ್ಥೆ ಕಲ್ಪಿಸಿತು.

ಎಸ್ಸೆಸ್ಸೆಲ್ಸಿ ಪರೀಕ್ಷೆ: ಉತ್ತಮ ಫಲಿತಾಂಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೇಂಟ್ ಮೇರಿ ಕಾನ್ವೆಂಟ್ ಪ್ರೌಢಶಾಲೆಯ ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ.

ಮೇಘಾ ಎಂ.ಡಿ. (ಶೇ 98.24), ಅವಿನಾಶ್ ಎಸ್. ಜೆ. (96.96), ಐಶ್ವರ್ಯ ಎಂ. (ಶೇ 96.80), ಹರ್ಷಿಣಿ ಎಸ್. (ಶೇ 96.48), ಶ್ರೇಯ ಜೆ. ಮೊಗವೀರ್ (ಶೇ 95.84), ಆಲಿಷ್ ಎಫ್. (ಶೇ 95.4), ಅಭಿಷೇಕ್ ಎಸ್.ಜೆ. (ಶೇ 94.54), ಚಂದನ ಎಂ. (ಶೇ 93.60), ನಿವೇದಿತಾ ಎಸ್. (ಶೇ 92.16), ಕಿರಣ್ ಎ. (ಶೇ 89.92) ಮತ್ತು ಅತಿಷಯ ಬಿ.ಎಸ್. (ಶೇ 89.92) ಅಂಕ ಪಡೆದುಕೊಂಡಿದ್ದಾರೆ.

R.E.S. POLYTECHNIC
Estd: 1986 - Recognised by Govt. of Karnataka & AICTE
Visit us for ADMISSIONS & CAREER GUIDANCE
JOIN DIPLOMA IN: ♦ Computer Science ♦ Civil ♦ Mechanical ♦ Automobile ♦ Electrical ♦ Electronics ♦ Fashion Tech ♦ Commerce (CP)
After Diploma can join JOB / 2nd year Engg OR Any Degree through LATERAL ENTRY QUOTA
PUC Pass Join 2 yrs Diploma Engineering
PUC Fail Join 3 yrs Diploma Engineering
5, Sunkadakatte, Magadi Road, Hegganahalli Cross, Bengaluru-91
Call: Secretary-99166 46466 / Principal-9916639466
RES-23402

ಎಫ್‌ಐಆರ್ ಬೆದರಿಕೆ: ವಕೀಲರ ಹೆಸರಿನಲ್ಲಿ ಸುಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಕ್ರಮ ವಸ್ತು ಸಾಗಣೆ ಆರೋಪದಡಿ ಎಫ್‌ಐಆರ್ ದಾಖಲಿಸಿರುವುದಾಗಿ ಬೆದರಿಸಿ ವಕೀಲರ ಶುಲ್ಕದ ಹೆಸರಿನಲ್ಲಿ ಹಣ ಸುಲಿಗೆ ಮಾಡಲಾಗಿದ್ದು, ಈ ಸಂಬಂಧ ಆಗ್ನೇಯ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಸುದ್ದಗುಂಟೆಪಾಳ್ಯದ ನಿವಾಸಿಯಾಗಿರುವ 20 ವರ್ಷದ ವಿದ್ಯಾರ್ಥಿನಿಯೊಬ್ಬರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸರು ಹೇಳಿದರು.

‘ವಿದ್ಯಾರ್ಥಿನಿಗೆ ಮೇ 6ರಂದು ಕರೆ ಮಾಡಿದ್ದ ಆರೋಪಿ, ತಾನೊಬ್ಬ ಫೆಡೆಕ್ಸ್ ಕಂಪನಿ ಪ್ರತಿನಿಧಿ ಎಂಬುದಾಗಿ ಪರಿಚಯಿಸಿಕೊಂಡಿದ್ದ. ‘ನಿಮ್ಮ ಹೆಸರಿನಲ್ಲಿ ಕೆಲ ವಸ್ತುಗಳು ಪಾರ್ಸೆಲ್ ಬಂದಿದೆ. ಅದರಲ್ಲಿ ಅಕ್ರಮ ವಸ್ತುಗಳಿವೆ. ಅವುಗಳನ್ನು ಪೊಲೀಸರಿಗೆ ನೀಡುತ್ತೇವೆ. ಅವರೇ ನಿಮ್ಮ ವಿರುದ್ಧ ಎಫ್‌ಐಆರ್ ದಾಖಲಿಸುತ್ತಾರೆ. ನೀವು ಪೊಲೀಸರ ಬಳಿ ಮಾತನಾಡಿ’ ಎಂದು ಹೇಳಿ ಕರೆ ಕಡಿತಗೊಳಿಸಿದ್ದ.’

‘ಕೆಲ ನಿಮಿಷಗಳ ನಂತರ ಮತ್ತೊಬ್ಬ ಆರೋಪಿ, ವಿದ್ಯಾರ್ಥಿನಿಗೆ ಕರೆ ಮಾಡಿದ್ದ. ‘ನಾನು ಪೊಲೀಸ್ ಅಧಿಕಾರಿ. ಅಕ್ರಮ ವಸ್ತು ಸಾಗಣೆ ಆರೋಪದಡಿ ನಿಮ್ಮ ವಿರುದ್ಧ ದೂರು ಬಂದಿದೆ. ಎಫ್‌ಐಆರ್ ದಾಖಲಿಸದಂತೆ ತಡೆಯಲು ನಿಮಗೆ ಅವಕಾಶ ವಿದೆ. ದೂರಿನ ವಿವರಗಳನ್ನು ನಿಮಗೆ ಕಳುಹಿಸುತ್ತೇವೆ. ವಕೀಲರ ಶುಲ್ಕ ನೀಡಿ’ ಎಂದಿದ್ದರು. ಅದನ್ನು ನಂಬಿದ್ದ ವಿದ್ಯಾರ್ಥಿನಿ, ₹ 98,600 ನೀಡಿದ್ದರು. ಬಳಿಕ, ಆರೋಪಿಗಳು ಮೊಬೈಲ್ ಸ್ವಿಚ್ ಆಫ್ ಮಾಡಿ ನಾಪತ್ತೆಯಾಗಿದ್ದಾರೆ’ ಎಂದು ಪೊಲೀಸರು ತಿಳಿಸಿದರು.

ವೈವಾಹಿಕ ಜಾಲತಾಣದಲ್ಲಿ ಪರಿಚಯ • ಆರೋಪಿ ವಿರುದ್ಧ ಎಫ್‌ಐಆರ್

₹ 43 ಲಕ್ಷ ಕಿತ್ತ ಆನ್‌ಲೈನ್ ವರ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಬ್ರಿಟನ್‌ನಿಂದ ಬೆಲೆಬಾಳುವ ಚಿನ್ನ ಕಳುಹಿಸುವ ಆಶ್ವಾಸನೆ
- ಪಾರ್ಸೆಲ್‌ಗೆ ಕಸ್ಟಮ್ ಶುಲ್ಕ ಪಾವತಿಸಲು ಹೇಳಿ ವಂಚನೆ

ಬೆಂಗಳೂರು: ವೈವಾಹಿಕ ಜಾಲತಾಣದಲ್ಲಿ ಪರಿಚಯವಾದ ಯುವಕನೊಬ್ಬ ಮದುವೆಯಾಗುವುದಾಗಿ ಹೇಳಿ ನಗರದ ಮಹಿಳೆಯೊಬ್ಬರಿಂದ ₹ 43.51 ಲಕ್ಷ ಪಡೆದು ವಂಚಿಸಿದ್ದು, ಈ ಸಂಬಂಧ ಉತ್ತರ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಆರ್.ಟಿ.ನಗರ ಬಳಿಯ ಗಂಗಾನಗರದ 39 ವರ್ಷದ ಮಹಿಳೆ ವಂಚನೆ ಬಗ್ಗೆ ದೂರು ನೀಡಿದ್ದಾರೆ. ಆರೋಪಿ ರಾಜೇಶ್‌ಕುಮಾರ್ ಎಂಬಾತನ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ದೂರುದಾರ ಮಹಿಳೆ, ಭಾರತ್ ಮ್ಯಾಟ್ರಿಮೋನಿಯಲ್ ಜಾಲತಾಣದಲ್ಲಿ ಖಾತೆ ತೆರೆದಿದ್ದರು. ಅಲ್ಲಿಯೇ ಅವರಿಗೆ ಆರೋಪಿ ರಾಜೇಶ್‌ಕುಮಾರ್ ಪರಿಚಯವಾಗಿತ್ತು. ಇಂಗ್ಲೆಂಡ್‌ನಲ್ಲಿ ವಾಸವಿರುವುದಾಗಿ ಹೇಳಿದ್ದ ರಾಜೇಶ್, ಹಲವು ದೇಶಗಳಲ್ಲಿ ನೂರಾರು ಕೋಟಿ ರೂಪಾಯಿ ವ್ಯವಹಾರ ಮಾಡುತ್ತಿರುವುದಾಗಿ ತಿಳಿಸಿದ್ದ. ಅದನ್ನು ನಂಬಿದ್ದ ಮಹಿಳೆ, ಆತನ ಜೊತೆ ಹೆಚ್ಚು ಮಾತನಾಡಲಾರಂಭಿಸಿದ್ದರು’

‘ಏಪ್ರಿಲ್ 6ರಂದು ದೂರುದಾರ ಮಹಿಳೆಗೆ ಸಂದೇಶ ಕಳುಹಿಸಿದ್ದ ಆರೋಪಿ, ‘ಹೊಸ ಉದ್ಯಮ ಆರಂಭಿಸಲು ದುಬೈಗೆ ಹೊರಟಿದ್ದೇನೆ. ಬ್ರಿಟನ್‌ನಲ್ಲಿರುವ ಬೆಲೆಬಾಳುವ ಚಿನ್ನಾಭರಣ ಹಾಗೂ ಇತರೆ ವಸ್ತುಗಳನ್ನು ನಿನಗೆ ಕಳುಹಿಸುತ್ತೇನೆ. ದುಬೈನಿಂದ ನೇರವಾಗಿ ಭಾರತಕ್ಕೆ ಬಂದು ನಿನ್ನನ್ನು ಮದುವೆಯಾಗುತ್ತೇನೆ’ ಎಂದು ಆರೋಪಿ ಹೇಳಿದ್ದ. ಅದನ್ನು ಮಹಿಳೆ ನಂಬಿದ್ದರು’ ಎಂದು ಪೊಲೀಸರು ತಿಳಿಸಿದರು.

‘ಏಪ್ರಿಲ್ 10ರಂದು ಮಹಿಳೆಗೆ ಕರೆ ಮಾಡಿದ್ದ ಆರೋಪಿಯೊಬ್ಬ, ‘ನಿಮ್ಮ ಹೆಸರಿಗೆ ಪಾರ್ಸೆಲ್ ಬಂದಿದೆ. ಚಿನ್ನಾಭರಣ ಹಾಗೂ ಇತರೆ ಬೆಲೆಬಾಳುವ ವಸ್ತುಗಳಿವೆ. ಕಸ್ಟಮ್ಸ್ ಶುಲ್ಕ ಪಾವತಿ ಮಾಡಿದರೆ, ನಿಮ್ಮ ವಿಳಾಸಕ್ಕೆ ಪಾರ್ಸೆಲ್ ಕಳುಹಿಸುತ್ತೇವೆ’ ಎಂದಿದ್ದ. ಅದನ್ನು ನಂಬಿದ್ದ ಮಹಿಳೆ, ಆರಂಭದಲ್ಲಿ 32,000 ಪಾವತಿಸಿದ್ದರು.’

‘ಪುನಃ ಕರೆ ಮಾಡಿದ್ದ ಆರೋಪಿ, ‘ಪಾರ್ಸೆಲ್‌ನಲ್ಲಿ ದೊಡ್ಡ ಪ್ರಮಾಣದ ಹಣವಿದೆ. ಹೀಗಾಗಿ, ಮತ್ತಷ್ಟು ಕಸ್ಟಮ್ಸ್ ಹಾಗೂ ಇತರೆ ಶುಲ್ಕ ಪಾವತಿಸಬೇಕು’ ಎಂದಿದ್ದ. ಅದನ್ನೂ ನಂಬಿದ್ದ ದೂರುದಾರ ಮಹಿಳೆ, ಹಂತ ಹಂತವಾಗಿ ₹ 43.51 ಲಕ್ಷ ವರ್ಗಾಯಿಸಿದ್ದರು. ಇದಾದ ನಂತರ, ಆರೋಪಿಗಳು ಯಾವುದೇ ಪಾರ್ಸೆಲ್ ಕಳುಹಿಸಿಲ್ಲ. ಆನ್‌ಲೈನ್ ವರ ಹಾಗೂ ಇತರೆ ಆರೋಪಿಗಳು ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ನಾಪತ್ತೆಯಾಗಿದ್ದಾರೆ’ ಎಂದು ಪೊಲೀಸರು ಹೇಳಿದರು.

ಅಂಬೇಡ್ಕರ್ ಪ್ರತಿಮೆಗೆ ಬೆಂಕಿ: ಆಕ್ರೋಶ

ಪ್ರಜಾವಾಣಿ ವಾರ್ತೆ

ಹೊಸಕೋಟೆ (ಬೆಂಗಳೂರು ಗ್ರಾಮಾಂತರ ಜಿಲ್ಲೆ): ತಾಲ್ಲೂಕಿನ ಸೂಲಿಬೆಲೆ ಹೋಬಳಿಯ ಯನಗುಂಟೆ ಗ್ರಾಮದಲ್ಲಿ ಭಾನುವಾರ ತಡರಾತ್ರಿ ದುಷ್ಕರ್ಮಿಗಳು ಡಾ.ಬಿ. ಆರ್.ಅಂಬೇಡ್ಕರ್ ಪ್ರತಿಮೆಗೆ ಸೀಮೆಎಣ್ಣೆ ಮತ್ತು ಡೀಸೆಲ್ ಸುರಿದು ಬೆಂಕಿ ಹಚ್ಚಿದ್ದಾರೆ.

ಘಟನೆ ನಂತರ ಗ್ರಾಮದಲ್ಲಿ ಉದ್ವಿಗ್ನ ವಾತಾವರಣ ನಿರ್ಮಾಣವಾಗಿದ್ದು, ಮುಂಜಾಗ್ರತಾ ಕ್ರಮವಾಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ.

ಕಿಡಿಗೇಡಿಗಳನ್ನು ಬಂಧಿಸುವಂತೆ ಗ್ರಾಮಸ್ಥರು ಮತ್ತು ದಲಿತ ಸಂಘಟನೆಗಳು ಸೋಮವಾರ ರಾಷ್ಟ್ರೀಯ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದರು. ಆದಷ್ಟು ಬೇಗ ದುಷ್ಕರ್ಮಿಗಳನ್ನು ಬಂಧಿಸಬೇಕು. ಇಲ್ಲದಿದ್ದರೆ ರಾಜ್ಯದಾದ್ಯಂತ ಹೋರಾಟ ನಡೆಸುವುದಾಗಿ ಕರ್ನಾಟಕ ಅಹಿಂದ ರಕ್ಷಣಾ ಸಮಿತಿ ಸಂಸ್ಥಾಪನಾ ರಾಜ್ಯಾಧ್ಯಕ್ಷರಾದ ಕಿರಣ್ ಕುಮಾರ್ ಎಚ್ಚರಿಕೆ ನೀಡಿದರು.

ಪ್ರತಿಭಟನಾ ಸ್ಥಳಕ್ಕೆ ಬಂದ ಡಿವೈಎಸ್‌ಪಿ ಎಸ್.ಎಸ್. ಪಾಟೀಲ, ಘಟನೆಗೆ ಕಾರಣರಾದವರನ್ನು ಬಂಧಿಸುವ ಭರವಸೆ ನೀಡಿದ ನಂತರ ಪ್ರತಿಭಟನೆಯನ್ನು ಕೈಬಿಡಲಾಯಿತು.

ಹೊಸಕೋಟೆ ತಾಲ್ಲೂಕಿನ ಯನಗುಂಟೆ ಗ್ರಾಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಬೆಂಕಿ ಹಚ್ಚಿದ ದುಷ್ಕರ್ಮಿಗಳನ್ನು ಬಂಧಿಸುವಂತೆ ಆಗ್ರಹಿಸಿ ದಲಿತ ಸಂಘಟನೆಗಳ ಸದಸ್ಯರು ಸೋಮವಾರ ಪ್ರತಿಭಟಿಸಿದರು

EDUCATION SUCCESS ಕ್ಲಾಸಿಫೈಡ್ಸ್

PRIYADARSHINI PUBLIC SCHOOL
(Recog. by Govt. Of Karnataka)
#30, 80 Feet Road, Narasimha Swamy Layout, Laggere, Bangalore- 560 058, Off: 080-28370098, Mob: 9739334968
SSLC RESULT 2022-23
Heartly Congratulations from Management and Staff
VANAJA S R - 98% | PREETHAM A C - 93% | GOWTHAM N D - 88% | MANASA M.L - 85% | TEJASWINI .T - 84%
ADMISSION OPEN YEAR 2023-24

JNANAPEETA EDUCATIONAL TRUST
STATE- 6th RANK
JNANAVAHINI PUBLIC SCHOOL
(Recognized by Govt. of Karnataka)
3rd Block, Near Ring Road, Opp.RajPunyabhoomi, Nandini Layout, Bangalore-96
Congratulations to all the students of JVPS for success in SSLC Exam 2022-23
CHANDANA.K.S
619 (99.04%)
Kannada-125/125, English-98/100, Hindi-100/100
Mathematics-99/100, Science-99/100, Social Science-98/100
In the Academic year 2022-23, March/ April Annual Examination, Kumari. Chandana.K.S has scored 619/625 (99.04%) having secured the State 6th Rank. 15 students have scored Distinction and 28 Students have passed with First Class. Credits to the hardworking students, their supportive parents, Chairman Mr.Channappa.K, HM Mr.Joshy.A.V and the dedicated JVPS team, which has managed to add more diamonds to the JVPS crown.

PLACEMENT OF OUR STUDENTS IN LEADING COMPANIES (2022-23)
ADMISSIONS ARE OPEN
We are proud of our students who have been placed in leading Companies in India and around the world.
Our industry and career focused courses include - Aircraft Maintenance Engineering, Business and Management Courses - • B.Com • BBA • BCA • M.Com • MBA
Diploma Courses in • Aeronautical • Mechanical • Automobile • Computer Science.
AIRBUS | Umlaut Part of Accenture | Indigo | TEXTRON | DEP | Tentacle Aerologistix | AIR INDIA sats | AKKA | TOYOTA KIRLOSKAR MOTOR | AME students placed in an MRO BASED IN SINGAPORE | ENGRAV Aviation
HINDUSTAN ACADEMY
BANGALORE, KARNATAKA
P. B. No. 3776, Ashwathanagar, Marathahalli, Bangalore - 560037
Ph: 080-25238650, 25232217 • Toll free: 18004258650
Email: admissions@hindustanacademy.edu.in
8971404357 • 9740037853
www.hindustanacademy.edu.in

HMR GROUP HMR INTERNATIONAL SCHOOL
HEARTIEST CONGRATULATIONS!
Grade X TOPPERS 2022-23
Pranav Pandey 92.8% | Syed Ali Amaan 91.8% | Rimza 91.4% | Rumaisa Fathima 89.4% | Shashank Shekhar Singh 87.8%
Grade XII TOPPERS 2022-23
AHANA GHOSH 97% | AGNIK PATRA 96.6% | ABHINAV SREEJITH 95% | AVANEESH KARTHIK S 94.8% | BHAVIKA BABURAJ 94.8% | A A SIDDESHWARAN 94.6%
100 RESULTS
HMR NATIONAL PU COLLEGE II PUC TOPPERS
YASEERA MUSKAN — COLLEGE & COMMERCE TOPPER 567/600 (94.5%), EABC TOPPER – 387/400 (96.75%)
PRATHAM CHINTAMANI — SCIENCE TOPPER – 553/600 (92.17%)
VIGNESH.S — ARTS TOPPER 549/600 (91.5%) & ESPPy TOPPER – 363/400 (90.75%)
JISHNU.V — PCMC 378/400 (94.5%)
VALARMATHI.T — PCMB TOPPER – 370/400 (92.5%)
RAHIYA KOUSER — PCBH TOPPER – 363/400 M (90.75%)
Congratulations

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

BUSINESS

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

JOB OPPORTUNITIES

Multiple Vacancy

RECEPTIONISTS/ SUPERVISORS M/F needed for our offices in Varthur & Whitefields Ph: 8008117725

General

BOOKING EXECUTIVE required to manage corporate cab bookings. WhatsApp CV to 9019043325. Work from Home/ KR Puram. Salary: 16k- 24k. Good English communication.

Teachers/ Professors

WANTED
Wanted Trained Teacher for High Shcool section subjects Mathematics, Hindi, English & Socical Science
Contact: Secreatary Isaac Newton English School, #10, Mill Road, Cottonpet, Bangalore-53
Mob: 9844013632

WANTED TRAINED Lady TEACHERS to teach ALL SUBJECTS in Lower Primary, MATHS, KANNADA and COMPUTER in English Medium Primary and High Schools. Wanted Trained Male/ Female PHYSICAL EDUCATION and SANSKRIT Teacher for Primary and High School. Also required FRONT OFFICE ASSISTANT. Walkin Interview on 17.05.2023, Wednesday between 11.00AM and 1.00PM at 'PRATHIBHA SHIKSHANA SAMITHI', #9, 18th Main, BSK II Stage, Bangalore70. Ph: 08026710170/ 7483377387

ST.MARY'S PUBLIC SCHOOL St. Mary's Public School
SINCE 1983 Inspiring Excellence.
#13, Queens Road, Bengaluru - 560052
080 2220 2854
www.stmaryspublicschool.co.in
ICSE Results 2022-23
First Rank Prajwal S 98.6% All India Level 7th
Second Rank Noor Aiman Rabbani 98% All India Level 12th
Third Rank Ishana Nizar Dhanani 97.8% All India Level 14th
43 Distinctions | 24 First Classes
A Veritas Assurance International USA Accredited Institution
TOPPERS
Zeba Iffath S M 97.6% | Maxwin Mathew 94.6% | Diksha Shinde 94.4% | Shreevatsan K 94% | Ruchitha J M 93.4% | Prakalya S R 93.4% | Dheer Porwal 93.4% | Sara Fatima Khan 93.2% | Rohan Kanthraj 92%
Thejas R 90.8% | Noor Fathima 90.4% | Misbah Iram 90.4% | M Likith 90% | Mohammed Essam 90% | Syed Afnan 90%
Congratulations to the batch of 2022-2023 — Be — Marian

ಹೋಲಿ ಏಂಜಲ್ಸ್ ಹೈಸ್ಕೂಲ್
ಬೆಂಗಳೂರಿನ ಹಂಪಿನಗರದಲ್ಲಿರುವ ಹೋಲಿ ಏಂಜಲ್ಸ್ ಹೈಸ್ಕೂಲ್‌ನಲ್ಲಿ ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ.
ICSE TOPPERS 2023
ಶರತ್ ಎ. 96.20% | ಭಾವನ ಕೆ.ಎ. 95.40% | ಅಸ್ಮಿತ ಸಿ. 95.00% | ಚಿನ್ಮಯಿ ನಾರಾಯಣನ್ 95.00% | ಸೃಷ್ಟಿ ಎಲ್. 94.20% | ಹೇಮಶ್ರೀ ಡಿ.ಪಿ. 93.80% | ಸರ್ವಿಕಾ ಎಸ್.ಹೆಚ್. 93.80% | ಸ್ವಾಗತ್ ಬಿ.ಎಸ್. 93.60%
ನಾಗ ಲಿಖಿತ್ ಎಂ.ವಿ. 92.60% | ಪಲಕ್ ಜೈನ್ 92.60% | ತನಿಷ ಎಸ್. 92.60% | ಪ್ರಣವ್ 91.60% | ಪ್ರಣತಿ ಹೆಚ್.ಸಿ. 91.20% | ಮನೋಜ್ಞ ಜೆ. 91.00% | ರಿತು ಜೆ. 90.80% | ಜಾಹ್ನವಿ ಆರ್. ಯಾದವ್ 90.60%
ರಚನ ಆದ್ಯ 90.40% | ಸಿಂಚನ ಜೆ. 90.00% | ವೀರೇಶ್ ಮುಲ್ಗೆ 89.80% | ಶೈಲಶ್ರೀ ಎಂ. 89.40% | ಮೊಹಮದ್ ರಿಹಾನ್ ಖಾನ್ 88.80% | ಶ್ರೀನಿಧಿ ಎಂ.ಎಂ. 88.80% | ಅನಿಷ್ಕ ಕೃಷ್ಣನ್ 88.60% | ಪ್ರವೀಣ ಬಿ. ಯಾತಗಿರಿ 88.00%
ಸರಯು ನಕ್ಷತ್ರ 88.00% | ಹರಿಪ್ರಿಯ ಎಸ್. 87.60% | ನಿಹಾಲ್ ಕಿರಣ್ ಕುಮಾರ್ 87.60% | ಹರ್ಷ ವಿ. ಪಟೇಲ್ 87.20% | ಸ್ಫೂರ್ತಿ ಕೆ.ಟಿ. 87.00% | ಆದಿತ್ಯ ಗಿರಿಯ 86.80% | ಸ್ಫೂರ್ತಿ ಬಡಿಗೇರ್ 86.60% | ನೇಹ ನೀಲೇಶ್ 86.40%
ಶ್ರಾವ್ಯ ಎಂ. 86.40% | ತ್ರಿಷ ಮೇರಿ 85.80% | ದೈವಿಕ್ ಸುಬ್ರಹ್ಮಣ್ಯ ಎಸ್. 85.60% | ಅನಿಷ್ ಶ್ಯಾಮ್‌ಸುಖ 85.20% | ಮಧುಸೂಧನ್ ಬಿ. 85.20% | ಪೂರ್ವಿ ಕತ್ರಿ ಎಂ. 85.20% | ಪ್ರಿಯಾಂಕ ಸಾಹು 85.00% | ಕಸ್ವಿ ಮಿಟ್ಟಲ್ 85.00% | ಪ್ರಜ್ವಲ್ ಜೆ. 85.00% | ಮಾಧುರಿ ಎಂ. 85.00%

ASTRO YATRA

ಓಂ ಶ್ರೀ ಸಾಯಿದುರ್ಗಾ ಜ್ಯೋತಿಷ್ಯ ಕೇಂದ್ರ
ಪಂಡಿತ್ ಶ್ರೀ ರಾಮ್ ಭಟ್
ವಿದ್ಯೆ-ಉದ್ಯೋಗ,ಪ್ರೀತಿ-ಪ್ರೇಮ, ವ್ಯಾಪಾರ ಲಾಭ-ನಷ್ಟ, ಶತ್ರುಕಾಟ, ರಾಜಕೀಯ, ಆರೋಗ್ಯ, ಶಿಕ್ಷಣ, ವಿಚ್ಛೇದನ, ವಿದೇಶ ಪ್ರಯಾಣ, ಹಣಕಾಸು, ಮಕ್ಕಳ ಸಮಸ್ಯೆ, ಕೋರ್ಟ್ ಕೇಸ್, ಪ್ರಾಪರ್ಟಿ, ಮನೆಫ್ಯಾಕ್ಟರಿಗೆ ವಾಸ್ತು ದೋಷ, ಮಾನಸಿಕ ಸಮಸ್ಯೆ, ಮದುವೆ, ಸಂತಾನದಲ್ಲಿ ವಿಳಂಬ, ಸ್ತ್ರೀಪ್ರೇಮ, ಸ್ತ್ರೀ-ಪುರುಷ ವಶೀಕರಣ, ಸ್ತ್ರೀ-ಪುರುಷ ಗುಪ್ತ ಸಮಸ್ಯೆ, ಶತ್ರುಕಾಟ, ಮಾಟ-ಮಂತ್ರ ವಶೀಕರಣ, ದುಷ್ಟಶಕ್ತಿ, ಭೂತಚೇಷ್ಟೆ ನಿವಾರಣೆ ಹಾಗು ನಿಮ್ಮ ಯಾವುದೇ ಸಮಸ್ಯೆ ಇದ್ದರೂ ಯಂತ್ರ-ಮಂತ್ರ ಹಾಗೂ ಕೇರಳದ ಗುಪ್ತ ವಿದ್ಯೆಯಿಂದ 11 ದಿನದಲ್ಲಿ ಶಾಶ್ವತ ಪರಿಹಾರ ಮಾಡುತ್ತಾರೆ. ಪೋನಿನ ಮೂಲಕ ಉತ್ತಮ ಸಲಹೆ ಶಾಶ್ವತ ಪರಿಹಾರ.
ವಿಳಾಸ: ನಂ.747, ಚಿನ್ಮಯ್ ಆಸ್ಪತ್ರೆ ಹತ್ತಿರ, ಕೃಷ್ಣ ದೇವಸ್ಥಾನದ ಹಿಂಭಾಗ ಇಂದಿರಾನಗರ, ಬೆಂಗಳೂರು-560038 ಅಪಾಯಿಂಟ್ಮೆಂಟ್‌ಗಾಗಿ ಕರೆ ಮಾಡಿ
ಸಮಯ: ಬೆಳಿಗ್ಗೆ 9 ರಿಂದ ರಾತ್ರಿ 8 ರವರೆಗೆ ಸಂಪರ್ಕಿಸಿ: 9880403406

PERSONAL

Lost

DOCUMENT LOST
I, ALTHAF B S/o BABU M. S. Residing at No.4, 1st Main, Najundeshwara Nagar, Nandini Layout Bangalore-560096 have lost Educational Certificate Document No. TGOU/BA/PRV/0011658/G place of issue Bangalore while Transit Founder please Contact : 9902999881

EDUCATION
To Place your Classified Ads Contact: 9845114560

Change of Name

I, RAFIYA SULTANA W/o.Mohammed Yahya R/o.New N.T.New Mandli, Shivamogga- 577202 have changed my name to RAFIYA BEGUM vide`affidavit dated:15.5.2023 before notay Pramila.T.H. Shivamogga.

CHANGE OF NAME
I, ZEEKARAIAH. N S/o Late Nanjappa K. R/@ No.43, Flat No. 107, Pruthvi Enclave, Deshabandhunagar, Doddabommasandra, Vidyaranyapura Post, Bengaluru-97 have changed my name to ZECHARIAH. N vide affidavit dated 15.05.2023 before Notary A. Manjula Bangalore.

I, BHAGYAMMA, residing at Kapanigowdanapalya Village, Doddasomanahalli Post,Kasaba Hobli,Magadi Taluk,Ramanagara District, today in Bengaluru, have changed my name from BHAGYAMMA to SOWBHAGYA,vide affidavit dated 04/05/2023,sworn before Kundan Babu.M.,Notary,Bangalore.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

ನವ ಭಾರತಕ್ಕೆ
ಬುನಾದಿಯಾಗಬಲ್ಲ
ಯುವಜನತೆಗೆ
ಅವಕಾಶಗಳ ಆಗರ

"ಭಾರತದ ಅಭಿವೃದ್ಧಿ ಸಂಕಲ್ಪವನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ, ಸಶಕ್ತ ಮತ್ತು ಪ್ರತಿಭಾವಂತ ಯುವಜನತೆಗೆ ಸೂಕ್ತ ಅವಕಾಶಗಳನ್ನು ಒದಗಿಸಲು ನಮ್ಮ ಸರ್ಕಾರ ಬದ್ಧವಾಗಿದೆ."

– ನರೇಂದ್ರ ಮೋದಿ, ಪ್ರಧಾನಮಂತ್ರಿ

ದೇಶದ ಯುವಜನತೆಗೆ

10 ಲಕ್ಷ

ಸರ್ಕಾರಿ ಉದ್ಯೋಗಗಳನ್ನು ಒದಗಿಸುವ ಉದ್ದೇಶವನ್ನು ಸಾಕಾರಗೊಳಿಸುವ

ಉದ್ಯೋಗ ಮೇಳ

ಪ್ರಧಾನಮಂತ್ರಿ ನರೇಂದ್ರ ಮೋದಿ

ಇವರಿಂದ

ದೇಶಾದ್ಯಂತ **45** ಸ್ಥಳಗಳಲ್ಲಿ **71 ಸಾವಿರಕ್ಕೂ** ಅಧಿಕ ಹೊಸದಾಗಿ ನಿಯೋಜಿತ ಯುವಜನತೆಗೆ

ನೇಮಕಾತಿ ಪತ್ರ ವಿತರಣೆ

16 ಮೇ, 2023 ಬೆಳಗ್ಗೆ 10:30

- ಭಾರತ ಸರ್ಕಾರವು ತನ್ನ ಪಾಲುದಾರ ರಾಜ್ಯ ಸರ್ಕಾರಗಳ ಸಹಭಾಗಿತ್ವದ ಜೊತೆಗೆ, ಪ್ರತಿ ತಿಂಗಳು ಸುಮಾರು ಒಂದು ಲಕ್ಷ ಹೊಸ ಉದ್ಯೋಗಗಳನ್ನು ಸೃಷ್ಟಿಸುತ್ತಲಿದೆ.
- ವಿಶೇಷ ಆನ್‌ಲೈನ್ ವ್ಯವಸ್ಥೆಯ ಮುಖಾಂತರ ಖಾಲಿಹುದ್ದೆಗಳ ಮೇಲೆ ಹಾಗೂ ನೇಮಕಾತಿ ಪ್ರಕ್ರಿಯೆಯ ಮೇಲೆ ನಿರಂತರವಾಗಿ ನಿಗಾವಹಿಸಲಾಗುತ್ತದೆ.
- ವಿಶೇಷವಾಗಿ ಮಹಿಳೆಯರು, ದಿವ್ಯಾಂಗಜನರು ಮತ್ತು ಆಕಾಂಕ್ಷಿ ಜಿಲ್ಲೆಗಳ ಅಭ್ಯರ್ಥಿಗಳು ಇದರ ಫಲಾನುಭವಿಗಳಾಗುತ್ತಾರೆ.
- ವಿವಿಧ ಸರ್ಕಾರಿ ಇಲಾಖೆಗಳಲ್ಲಿ ಹೊಸದಾಗಿ ನೇಮಕಗೊಂಡ ಎಲ್ಲರಿಗೂ ಆನ್‌ಲೈನ್ ತರಬೇತಿಗಾಗಿ ಕರ್ಮಯೋಗಿ ಪ್ರಾರಂಭ ಮಾಡ್ಯೂಲ್.
- ಯುಪಿಎಸ್‌ಸಿ, ಎಸ್‌ಎಸ್‌ಸಿ, ರೈಲ್ವೆ ನೇಮಕಾತಿ ಮಂಡಳಿ ಇಂತಹ ಸಂಸ್ಥೆಗಳ ಮುಖಾಂತರ ಎಲ್ಲಾ ನೇಮಕಾತಿಗಳನ್ನು ಕೈಗೊಳ್ಳಲಾಗುತ್ತದೆ.
- ಸರಳ, ನ್ಯಾಯಯುತ ಮತ್ತು ಪಾರದರ್ಶಕ ಆಯ್ಕೆ ಪ್ರಕ್ರಿಯೆ.

DD NEWS ಡಿಡಿ ನ್ಯೂಸ್ ವಾಹಿನಿಯಲ್ಲಿ ನೇರಪ್ರಸಾರ ಕಾರ್ಯಕ್ರಮ ವೀಕ್ಷಿಸಿ

CBC 06305/15/0001/2324

190 ಕೆರೆಗಳು



6,618 ಎಕರೆ ಒಟ್ಟು ನೀರಿನ ಪ್ರದೇಶ

2,316 ಎಕರೆ ನಶಿಸಿರುವ ನೀರಿನ ಪ್ರದೇಶ

ಒಟ್ಟು ನೀರಿನ ಸಂಗ್ರಹ ಪ್ರದೇಶ **1.78** ಕೋಟಿ ಚ. ಮೀ.

ಈಗಿರುವ ನೀರಿನ ಸಂಗ್ರಹ **1.16** ಕೋಟಿ ಚ. ಮೀ.

ಒಟ್ಟು ನೀರಿನ ಸಂಗ್ರಹ **4.46** ಕೋಟಿ ಕ್ಯೂಬಿಕ್ ಮೀಟರ್ (44,657 ದಶಲಕ್ಷ ಲೀಟರ್/ 1.57 ಟಿಎಂಸಿ)

ಈಗಿರುವ ಸಂಗ್ರಹ ಸಾಮರ್ಥ್ಯ **2.90** ಕೋಟಿ ಕ್ಯೂಬಿಕ್ ಮೀಟರ್ (29,007 ದಶಲಕ್ಷ ಲೀಟರ್/ 1.02 ಟಿಎಂಸಿ)

261 ಎಕರೆ **21** ಗುಂಟೆ **19** ಬಳಸಲಾಗದ ಕೆರೆಗಳ ವಿಸ್ತೀರ್ಣ

ಕೆರೆ ಸಂಗ್ರಹ ಸಾಮರ್ಥ್ಯ ಶೇ 35ರಷ್ಟು ಕುಸಿತ

‘ಡಿಪಿಆರ್‌ನಂತೆ ಅಭಿವೃದ್ಧಿ ಕಾಮಗಾರಿ’

‘ಬಿಬಿಎಂಪಿ ವ್ಯಾಪ್ತಿಯಲ್ಲಿ ಅನುಮೋದಿತ ವಿಸ್ತೃತ ಯೋಜನಾ ವರದಿಯಂತೆಯೇ (ಡಿಪಿಆರ್) ಕೆರೆಗಳ ಅಭಿವೃದ್ಧಿಯಾಗಿದೆ ಹಾಗೂ ಅಭಿವೃದ್ಧಿಯಾಗುತ್ತಿವೆ. ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರಕ್ಕೆ ಸಲ್ಲಿಸಲಾಗುವ ಡಿಪಿಆರ್‌ನಲ್ಲಿ ಎಲ್ಲ ರೀತಿಯ ಮಾಹಿತಿಗಳೂ ಇರುತ್ತವೆ. ಅದರಂತೆಯೇ ಕಟ್ಟಡ, ಉಪಕರಣ, ದ್ವೀಪ, ನಡಿಗೆದಾರಿ ನಿರ್ಮಿಸಲಾಗುತ್ತದೆ’ ಎಂದು ಬಿಬಿಎಂಪಿ ಕೆರೆಗಳ ವಿಭಾಗದ ಮುಖ್ಯ ಎಂಜಿನಿಯರ್ ವಿಜಯಕುಮಾರ್ ಹರಿದಾಸ್ ತಿಳಿಸಿದರು.

ಹಣಕ್ಕೆ ಶೃಂಗಾರದಂತೆ!

ಕೆರೆಗಳನ್ನು ಜೀವವೈವಿಧ್ಯಕ್ಕೆ ಅನುಗುಣವಾಗಿ ಉಳಿಸುವ ಕೆಲಸಗಳನ್ನು ಮಾಡಿದರೆ ಸಾಕು. ಆದರೆ, ಬಿಬಿಎಂಪಿ ವ್ಯಾಪ್ತಿಯಲ್ಲಿ ಕೆರೆಗಳಿಗೆ ಹಣಕ್ಕೆ ಮಾಡಲಾಗುವ ಸಿಂಗಾರದಂತೆ ಅಭಿವೃದ್ಧಿ ಹೆಸರಿನಲ್ಲಿ ಅನಗತ್ಯ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಫ್ರೆಂಡ್ಸ್ ಆಫ್ ಲೇಕ್ಸ್‌ನ ರಾಮ್‌ಪ್ರಸಾದ್ ಬೇಸರ ವ್ಯಕ್ತಪಡಿಸಿದರು.

ಕೆರೆಗಳಲ್ಲಿ ವಾಕಿಂಗ್ ಟ್ರ್ಯಾಕ್ ಅನ್ನು ಅನಗತ್ಯವಾಗಿ ವಿಸ್ತರಿಸಲಾಗುತ್ತಿದ್ದು, ಮೆಕ್ಸಿಗ್ರಾಸ್, ಅಲಂಕಾರಿಕ ಗಿಡಗಳು ಸೇರಿದಂತೆ ಉದ್ಯಾನಗಳನ್ನಾಗಿ ಮಾಡಲಾಗುತ್ತಿದೆ. ಮತ್ತಿಕೆರೆಯನ್ನು ಜೆ.ಪಿ. ಪಾರ್ಕ್ ಎಂದು, ಚಳ್ಳಕೆರೆಯನ್ನು ಸಂಗೊಳ್ಳಿರಾಯಣ್ಣ ಉದ್ಯಾನ ಎಂದು ಮರುನಾಮಕರಣ ಮಾಡಿ ಕೆರೆಯ ಅಸ್ತಿತ್ವವನ್ನೇ ಕಳೆಯಲಾಗುತ್ತಿದೆ. ಉದ್ಯಾನವಾದರೆ ಏನನ್ನಾದರೂ ಮಾಡಬಹುದು ಎಂಬ ಹುನ್ನಾರ ನಡೆಯುತ್ತಿದೆ ಎಂದು ದೂರಿದರು.

• ಆರ್. ಮಂಜುನಾಥ್

ಬೆಂಗಳೂರು: ನಗರದಲ್ಲಿರುವ ಕೆರೆಗಳ ನೀರಿನ ಸಾಮರ್ಥ್ಯ ‘ಅಭಿವೃದ್ಧಿ ನೆಪದಲ್ಲಿ’ ಕುಸಿತವಾಗುತ್ತಿದೆ. ಮಳೆಗಾಲದಲ್ಲಿ ಪ್ರವಾಹದ ಭೀತಿ ನಿವಾರಿಸಿ, ನೀರನ್ನು ಉಳಿಸಿಕೊಳ್ಳಬೇಕಾದ ಕೆರೆಗಳ ಸಂಗ್ರಹ ಸಾಮರ್ಥ್ಯ ಶೇ 35ರಷ್ಟು ಕಡಿಮೆಯಾಗಿದೆ.

ಕೆರೆಗಳ ಏರಿಯನ್ನು ಅಗತ್ಯಕ್ಕಿಂತ ವಿಸ್ತರಿಸುವುದು, ಅಲಂಕಾರಿಕ ಗಿಡಗಳಿಗಾಗಿ ಉದ್ಯಾನ, ವ್ಯಾಯಾಮ ಸಲಕರಣೆಗಳು, ಗಜೆಬೊ, ಕಲ್ಲಿನ ಸಿಂಗಾರ ತಾಣಗಳು ಸೇರಿದಂತೆ ಹೆಚ್ಚು ಹಣ ವೆಚ್ಚವಾಗುವ ಹೈಟೆಕ್ ಸೌಲಭ್ಯಗಳ ಕಾಮಗಾರಿಗಳನ್ನೇ ಮಾಡಲಾಗುತ್ತಿದೆ. ಇದರಿಂದ ಬೆಂಗಳೂರಿನ 190 ಕೆರೆಗಳಲ್ಲಿ 2,316 ಎಕರೆ ನೀರಿನ ಪ್ರದೇಶ ನಶಿಸಿಹೋಗಿದೆ.

ನಗರದಲ್ಲಿ ಮಳೆ ಬಂದಾಗ ಇತ್ತೀಚಿನ ವರ್ಷಗಳಲ್ಲಿ ಕೆರೆಗಳು ತುಂಬಿಹರಿದು ಪ್ರವಾಹ ಪರಿಸ್ಥಿತಿ ಉದ್ಭವಿಸುತ್ತಿದೆ. ಇದಕ್ಕೆ ಪ್ರಮುಖ ಕಾರಣ ನೀರಿನ ಸಂಗ್ರಹ ಸಾಮರ್ಥ್ಯ ಕಡಿಮೆಯಾಗಿರುವುದು. ತ್ಯಾಜ್ಯ, ಹೂಳು ತುಂಬಿಕೊಂಡಿರುವ ಜತೆಗೆ, ಕೆರೆಗಳ ಅಭಿವೃದ್ಧಿ ಸಂದರ್ಭದಲ್ಲಿ ಸೌಂದರ್ಯೀಕರಣಕ್ಕಾಗಿ ನೀರಿನ ಪ್ರದೇಶವನ್ನೇ ಕಡಿಮೆ ಮಾಡಲಾಗುತ್ತಿದೆ. ಹೀಗಾಗಿ, ನಗರದಲ್ಲಿರುವ 190 ಕೆರೆಗಳಲ್ಲಿ 62 ಲಕ್ಷ ಚದರ ಮೀಟರ್ ನೀರಿನ ಪ್ರದೇಶ ಇಲ್ಲದಂತಾಗಿದೆ.

ರಾಜರಾಜೇಶ್ವರಿನಗರದಲ್ಲಿ 3ನೇ ಬಾರಿ ಅಭಿವೃದ್ಧಿಯಾಗುತ್ತಿರುವ ಹಲಗೇವಡೇರಹಳ್ಳಿ ಕೆರೆ ಅಂಗಳದಲ್ಲಿ ಕಲ್ಲು, ಮಣ್ಣಿನ ಕಾಮಗಾರಿ

ಕಳೆದ ವರ್ಷ ಭಾರಿ ಮಳೆಯ ಸಂದರ್ಭದಲ್ಲಿ ನಗರದ ಪೂರ್ವದಲ್ಲಿ ಮುಳುಗಡೆಯಾಗಿದ್ದ ಪ್ರದೇಶದಲ್ಲಿನ ಕೆರೆಗಳೇ ಅತಿಹೆಚ್ಚು ಸಂಗ್ರಹ ಸಾಮರ್ಥ್ಯವನ್ನು ಕಳೆದುಕೊಂಡಿವೆ. ಮಹದೇವಪುರ ವಲಯದ 51 ಕೆರೆಗಳಲ್ಲಿ 615 ಎಕರೆ ಸಂಗ್ರಹ ಸಾಮರ್ಥ್ಯ ಇಲ್ಲದಾಗಿದೆ. ನಂತರದ ಸ್ಥಾನ ಬೊಮ್ಮನಹಳ್ಳಿ ವಲಯದ್ದು. ಇಲ್ಲಿ 43 ಕೆರೆಗಳಲ್ಲಿ 476 ಎಕರೆ ನೀರಿನ ಪ್ರದೇಶ ನಶಿಸಿಹೋಗಿದೆ. ಈ ಎರಡೂ ವಲಯದಲ್ಲೇ ಜನರು ಪ್ರವಾಹದಿಂದ ಸಾಕಷ್ಟು ನಲುಗಿಹೋಗಿದ್ದರು.

ಒಂದು ಸಣ್ಣ ಕೆರೆಗೂ ನಾಲ್ಕಾರು ಕೋಟಿ ವೆಚ್ಚ ಮಾಡಲಾಗುತ್ತಿದ್ದು, ವಾಕಿಂಗ್ ಟ್ರ್ಯಾಕ್, ಜಾಗಿಂಗ್ ಟ್ರ್ಯಾಕ್, ಸೈಕಲ್ ಪಾಥ್ ಎಂದೆಲ್ಲ ನೀರಿನ ಅಂಗಳವನ್ನು ಬರಿದು ಮಾಡಿ, ಮಣ್ಣು ಸುರಿಯಲಾಗುತ್ತಿದೆ. ಇಂತಹ ಅಭಿವೃದ್ಧಿ ಬೇಕೇ ಎಂಬ ಪ್ರಶ್ನೆಗೆ ಸ್ಥಳೀಯರು ಬಯಸುತ್ತಿದ್ದಾರೆ ಎಂಬ ಸಬೂಬು ನೀಡಲಾಗುತ್ತಿದೆ.

‘ಜೀವವೈವಿಧ್ಯ ಉಳಿಸಲು ಮತ್ತು ನೀರಿನ ಸಾಮರ್ಥ್ಯ ವೃದ್ಧಿಸುವ ಕಾರ್ಯಗಳಿಗಿಂತಲೂ ಹೆಚ್ಚಿನ ಸೌಂದರ್ಯೀಕರಣದ ಕಾಮಗಾರಿಗಳನ್ನೇ ಕೆರೆಗಳಲ್ಲಿ ಮಾಡಲಾಗುತ್ತಿದೆ. ಕೆರೆಯಲ್ಲಿ ನೀರು ನಿಲ್ಲದೆ ಹೋದರೆ ಕಾಂಕ್ರೀಟ್ ನಗರಿಯಾಗಿರುವ ಬೆಂಗಳೂರಿನಲ್ಲಿ ಮನೆಗಳಿಗೇ ನೀರು ನುಗ್ಗುತ್ತದೆ ಎಂಬುದನ್ನು ‘ಹೈಟೆಕ್ ಸೌಲಭ್ಯವನ್ನು’ ಕೆರೆಯಲ್ಲಿ ಬಯಸುವ ನಾಗರಿಕರೂ ತಿಳಿದುಕೊಳ್ಳಬೇಕು ಎಂಬುದು ತಜ್ಞರ ಅಭಿಪ್ರಾಯ.

ಕೆರೆಗಳ ಸಂಗ್ರಹ ವಿಸ್ತೀರ್ಣ / ಈಗಿರುವ ಸಂಗ್ರಹ ಪ್ರದೇಶ

ವಲಯ	ಕೆರೆಗಳು	ಕೆರೆಗಳ ಸಂಗ್ರಹ ವಿಸ್ತೀರ್ಣ	ಈಗಿರುವ ಸಂಗ್ರಹ ಪ್ರದೇಶ
ಮಹದೇವಪುರ ವಲಯ	51	1815ಎ 31ಗು	1200ಎ 12ಗು
ಬೊಮ್ಮನಹಳ್ಳಿ ವಲಯ	43	1322ಎ 21ಗು	846ಎ 12ಗು
ರಾಜರಾಜೇಶ್ವರಿ ನಗರ ವಲಯ	30	692ಎ 6ಗು	396ಎ 10ಗು
ಪೂರ್ವ ವಲಯ	6	241ಎ 35ಗು	175ಎ
ಪಶ್ಚಿಮ ವಲಯ	3	60ಎ 16ಗು	41ಎ 1ಗು
ದಕ್ಷಿಣ ವಲಯ	6	109ಎ 6ಗು	49ಎ 1ಗು
ದಾಸರಹಳ್ಳಿ ವಲಯ	6	151ಎ 44ಗು	110ಎ 2ಗು
ಬಿಬಿಎಂಪಿ ಹೊರಭಾಗ	16	559ಎ 17ಗು	309ಎ 2ಗು
ಯಲಹಂಕ ವಲಯ	29	1664ಎ 33ಗು	1175ಎ 8ಗು

ಸುಸ್ಥಿರ ಅಭಿವೃದ್ಧಿಗಾಗಿ ಯೋಜನೆ ರೂಪಿಸಿ: ಡಾ. ನಾಗಹನುಮಯ್ಯ

ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಆರ್‌ಐಟಿ) ಸೋಮವಾರ ಆಯೋಜಿಸಿದ್ದ ‘ಪ್ರಾಜೆಕ್ಟ್ ಪ್ರದರ್ಶನ’ ಕಾರ್ಯಕ್ರಮದಲ್ಲಿ ಎಂ.ಆರ್. ಜಯರಾಂ ಮಾತನಾಡಿದರು. ಡಾ. ನಾಗಹನುಮಯ್ಯ, ಎಂ.ಆರ್. ರಾಮಯ್ಯ, ಎಂ.ಆರ್. ಶ್ರೀನಿವಾಸ್ ಮೂರ್ತಿ, ಬಿ.ಎಸ್. ರಾಮಪ್ರಸಾದ್, ಪ್ರಾಂಶುಪಾಲ ಎನ್.ವಿ.ಆರ್. ನಾಯ್ಡು ಇದ್ದಾರೆ.

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸುಸ್ಥಿರ ಅಭಿವೃದ್ಧಿಗೆ ಪೂರಕವಾಗುವ ಯೋಜನೆಗಳನ್ನು ರೂಪಿಸುವ ಬಗ್ಗೆ ವಿದ್ಯಾರ್ಥಿಗಳು ಚಿಂತನೆ ಮಾಡಬೇಕು’ ಎಂದು ಕೇಂದ್ರೀಯ ಉತ್ಪಾದನಾ ತಂತ್ರಜ್ಞಾನ ಸಂಸ್ಥೆ (ಸಿಎಂಟಿಐ) ನಿರ್ದೇಶಕ ಡಾ. ನಾಗಹನುಮಯ್ಯ ಹೇಳಿದರು.

ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಆರ್‌ಐಟಿ) ಸೋಮವಾರ ಆಯೋಜಿಸಿದ್ದ ‘ಪ್ರಾಜೆಕ್ಟ್ ಪ್ರದರ್ಶನ’ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ‘ಜನಪ್ರಿಯವಾಗಿರುವ ಪ್ರತಿಯೊಂದು ಯೋಜನೆಗಳ ಹಿಂದೆ ನಮ್ಮ ಭಾರತೀಯರ ಶ್ರಮ ಹೆಚ್ಚಾಗಿದೆ. ಸುಸ್ಥಿರ ಅಭಿವೃದ್ಧಿಯ ಕಡೆಗೆ ನಾವು ಹೆಚ್ಚು ಗಮನ ನೀಡಬೇಕಾಗಿದೆ. ಇಂದು ಮೇಕ್ ಇನ್ ಇಂಡಿಯಾ ಪರಿಕಲ್ಪನೆಯಲ್ಲಿ ಬಹುತೇಕ ಯೋಜನೆಗಳನ್ನು ದೇಶಿಯವಾಗಿ ರೂಪಿಸಲಾಗುತ್ತಿದೆ. ಪ್ರಾಧ್ಯಾಪಕರು ಸಹ ವಿದ್ಯಾರ್ಥಿಗಳಿಗೆ ನೂತನ ಆವಿಷ್ಕಾರಗಳನ್ನು ಮಾಡುವಂತೆ ಪ್ರೋತ್ಸಾಹ ನೀಡಬೇಕು. ತಂತ್ರಜ್ಞಾನದ ಯುಗದಲ್ಲಿ ಪ್ರಾಧ್ಯಾಪಕರು ವಿದ್ಯಾರ್ಥಿಗಳಿಗೆ ಬೋಧನೆ ಮಾಡುವುದು ಒಂದು ಸವಾಲಿನ ಕೆಲಸವಾಗಿದೆ’ ಎಂದು ತಿಳಿಸಿದರು.

ಗೋಕುಲ ಶಿಕ್ಷಣ ಫೌಂಡೇಷನ್ ಅಧ್ಯಕ್ಷ ಎಂ.ಆರ್. ಜಯರಾಂ ಮಾತನಾಡಿ, ‘ವಿದ್ಯಾರ್ಥಿಗಳಿಗೆ ಪಠ್ಯದ ಜತೆಗೆ ಕೌಶಲ ಬೋಧಿಸುವ ಶಿಕ್ಷಣದ ಅವಶ್ಯಕತೆ ಹೆಚ್ಚಿದೆ. ಇದನ್ನು ರಾಮಯ್ಯ ವಿದ್ಯಾಸಂಸ್ಥೆ ನೀಡುತ್ತಿದೆ. ಇಂದು ಹೊಸ ಆವಿಷ್ಕಾರಗಳನ್ನು ಕೈಗೊಳ್ಳಲು ಉತ್ತೇಜನ ನೀಡುವ ವಾತಾವರಣವನ್ನು ನಮ್ಮ ಸಂಸ್ಥೆ ಸಂಸ್ಥೆ ರೂಪಿಸಿದೆ’ ಎಂದರು.

ಕಾಲೇಜಿನ ವಿವಿಧ ವಿಭಾಗಗಳ ತಂಡಗಳು ರೂಪಿಸಿದ 400ಕ್ಕೂ ಹೆಚ್ಚು ಪ್ರಾಜೆಕ್ಟ್‌ಗಳನ್ನು ಇದೇ 16ರವರೆಗೆ ಪ್ರದರ್ಶಿಸಲಾಗುತ್ತದೆ.

ಬೆಂಕಿ ನಂದಿಸುವ ವಾಹನದ ಪ್ರದರ್ಶನವು ಗಮನ ಸೆಳೆಯಿತು. ಕೆರೆಯಲ್ಲಿ ಬಿದ್ದಿರುವ ಪ್ಲಾಸ್ಟಿಕ್, ಕಲುಷಿತ ನೀರನ್ನು ಶುದ್ಧಿಕರಿಸುವ ಯಂತ್ರವನ್ನು ರಾಮಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ವಿದ್ಯಾರ್ಥಿಗಳು ಈ ಸಂದರ್ಭದಲ್ಲಿ ಪ್ರದರ್ಶಿಸಿದರು.

ಗೋಕುಲ ಫೌಂಡೇಷನ್‌ನ ಕಾರ್ಯದರ್ಶಿ ಎಂ.ಆರ್. ರಾಮಯ್ಯ, ಎಂ.ಆರ್. ಶ್ರೀನಿವಾಸ್ ಮೂರ್ತಿ, ಬಿ.ಎಸ್. ರಾಮಪ್ರಸಾದ್, ಪ್ರಾಂಶುಪಾಲ ಎನ್.ವಿ.ಆರ್. ನಾಯ್ಡು ಇದ್ದರು.

ಬಿಜೆಪಿ ಅಭ್ಯರ್ಥಿಯ ಸಂಬಂಧಿ ಬೈಕ್‌ಗೆ ಬೆಂಕಿ: ಇಬ್ಬರು ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪದ್ಮನಾಭ ರೆಡ್ಡಿ ಅವರ ಸಹೋದರನ ಮಗ ಅನಿಲ್ ರೆಡ್ಡಿ ಎಂಬುವರ ಮನೆಗೆ ನುಗ್ಗಿ ಬೈಕ್‌ಗೆ ಬೆಂಕಿ ಹೊತ್ತಿಕೊಳ್ಳಲು ಕಾರಣವಾಗಿದ್ದ ಇಬ್ಬರು ಆರೋಪಿಗಳನ್ನು ಬಾಣಸವಾಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಕಾಡುಗೊಂಡನಹಳ್ಳಿಯ ನಿವಾಸಿಗಳಾದ ಮುಬಾರಕ್ ಹಾಗೂ ಹಫೀಜ್ ಬಂಧಿತರು. ಮೇ 13ರಂದು ಮಧ್ಯಾಹ್ನ ನಡೆದಿದ್ದ ಘಟನೆ ಸಂಬಂಧ ಪ್ರಕರಣ ದಾಖಲಾಗಿತ್ತು. ಇಬ್ಬರನ್ನೂ ಸೆರೆ ಹಿಡಿಯಲಾಗಿದ್ದು, ನ್ಯಾಯಾಂಗ ಬಂಧನದಲ್ಲಿದ್ದಾರೆ’ ಎಂದು ಪೊಲೀಸರು ಹೇಳಿದರು.

‘ಕೋಳಿ ಮಾಂಸ ಮಾರಾಟ ಮಳಿಗೆಯಲ್ಲಿ ಕೆಲಸ ಮಾಡುತ್ತಿದ್ದ ಮುಬಾರಕ್ ಹಾಗೂ ಹಫೀಜ್, ಗ್ರಾಹಕರ ಮನೆಗಳಿಗೆ ಮಾಂಸ ತಲುಪಿಸುವ ಜವಾಬ್ದಾರಿ ವಹಿಸಿಕೊಂಡಿದ್ದರು. ಮೇ 13ರಂದು ಕೋಳಿ ಮಾಂಸದ ಪೊಟ್ಟಣಗಳನ್ನು ತೆಗೆದುಕೊಂಡು ಗ್ರಾಹಕರ ಮನೆಗಳಿಗೆ ತಲುಪಿಸಲು ಬೈಕ್‌ನಲ್ಲಿ ತೆರಳುತ್ತಿದ್ದರು.’ ‘ಮಾರ್ಗಮಧ್ಯೆ ಪೆಟ್ರೋಲ್ ಖಾಲಿ ಆಗಿತ್ತು. ಹೀಗಾಗಿ, ಇಬ್ಬರೂ ಬೈಕ್ ತಳ್ಳಿಕೊಂಡು ಮುಂದಕ್ಕೆ ಹೊರಟಿದ್ದರು. ಅದೇ ಸಂದರ್ಭದಲ್ಲಿ ಕಾಚರಕನಹಳ್ಳಿಯಲ್ಲಿರುವ ಅನಿಲ್ ರೆಡ್ಡಿ ಮನೆಯ ಕಾಂಪೌಂಡ್‌ನಲ್ಲಿ ಬೈಕ್ ನಿಂತಿರುವುದನ್ನು ಕಂಡು, ಅದರ ಪೆಟ್ರೋಲ್ ಕದಿಯಲು ಮುಂದಾಗಿದ್ದರು. ಕಾಂಪೌಂಡ್ ಒಳಗೆ ಹೋಗಿ, ಬೈಕ್‌ನಿಂದ ಪ್ಲಾಸ್ಟಿಕ್ ಬಾಟಲಿಯಲ್ಲಿ ಪೆಟ್ರೋಲ್ ಹಿಡಿಯುತ್ತಿದ್ದರು’ ಎಂದು ತಿಳಿಸಿದರು.

‘ಅದೇ ಸಂದರ್ಭದಲ್ಲಿ ಆರೋಪಿಯೊಬ್ಬ, ಸಿಗರೇಟ್ ಸೇದಲು ಮುಂದಾಗಿದ್ದ. ಇಬ್ಬರನ್ನೂ ನೋಡಿದ್ದ ವ್ಯಕ್ತಿಯೊಬ್ಬರು, ಕೂಗಾಡಿದ್ದರು. ಹೆದರಿದ್ದ ಆರೋಪಿಗಳು, ಪೆಟ್ರೋಲ್ ಹಾಗೂ ಸಿಗರೇಟ್ ಸ್ಥಳದಲ್ಲಿ ಬಿಸಾಕಿ ಓಡಿ ಹೋಗಿದ್ದರು. ಪೆಟ್ರೋಲ್‌ಗೆ ಸಿಗರೇಟ್ ಕಿಡಿ ತಾಗಿ ಬೆಂಕಿ ಹೊತ್ತಿಕೊಂಡಿತ್ತು. ಆರೋಪಿಗಳು ಓಡಾಡಿದ್ದ ದೃಶ್ಯ, ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು’ ಎಂದರು.

ದಾಳಿ ಮಾಡಿ ಬೆಂಕಿ ಹಚ್ಚಿದ್ದ ಆರೋಪ: ‘ಮತ ಎಣಿಕೆ ದಿನದಂದು ಇಬ್ಬರೂ ಆರೋಪಿಗಳು ಉದ್ದೇಶಪೂರ್ವಕವಾಗಿ ಮನೆ ಮೇಲೆ ದಾಳಿ ಮಾಡಿ ಬೆಂಕಿ ಹಚ್ಚಿದ್ದಾರೆ. ಇದು ಕಾಂಗ್ರೆಸ್ ಕಾರ್ಯಕರ್ತರ ಕೃತ್ಯ’ ಎಂದು ಬಿಜೆಪಿ ಕಾರ್ಯಕರ್ತರು ಆರೋಪಿಸಿದ್ದರು.ಈ ಬಗ್ಗೆ ಪ್ರತಿಕ್ರಿಯಿಸಿದ ಪೊಲೀಸರು, ‘ಆರೋಪಿಗಳು ಪೆಟ್ರೋಲ್ ಕದಿಯಲು ಹೋದಾಗ ಬೆಂಕಿ ಹೊತ್ತಿಕೊಂಡಿರುವುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ. ರಾಜಕೀಯ ಉದ್ದೇಶಕ್ಕೆ ಯಾವುದೇ ಪುರಾವೆ ಸಿಕ್ಕಿಲ್ಲ’ ಎಂದರು.

ಚುನಾವಣಾ ಅಖಾಡದಲ್ಲಿ ದಲಿತ ಚಳವಳಿಯ ಸದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಿಸೆಂಬರ್ ತಿಂಗಳಿನಲ್ಲೇ ‘ಐಕ್ಯತಾ ಸಮಾವೇಶ’ ನಡೆಸುವ ಮೂಲಕ ಬಿಜೆಪಿ ವಿರುದ್ಧ ಚಳವಳಿಗೆ ಕರೆ ನೀಡಿದ್ದ ರಾಜ್ಯದ ವಿವಿಧ ದಲಿತ ಸಂಘಟನೆಗಳು, ಚುನಾವಣೆಯಲ್ಲೂ ಜೋರಾಗಿ ಸದ್ದು ಮಾಡಿದವು.

ದಲಿತ ಸಂಘರ್ಷ ಸಮಿತಿಯ ವಿವಿಧ ಬಣಗಳ ಪ್ರಮುಖರೂ ಸೇರಿದಂತೆ ದಲಿತ ಚಳವಳಿಯ ಹಲವು ನಾಯಕರು ಬಿಜೆಪಿ ವಿರುದ್ಧ ಮತ ಚಲಾಯಿಸುವಂತೆ ಅಭಿಯಾನ ನಡೆಸಿದರು. ಕೆಲವು ಸಂಘಟನೆಗಳು ನೇರವಾಗಿಯೇ ಕಾಂಗ್ರೆಸ್ ಪರ ಮತ ಯಾಚಿಸಿದವು.

ಡಿಸೆಂಬರ್ 6ರಂದು ನಗರದ ಬಸವನಗುಡಿಯ ನ್ಯಾಷನಲ್ ಕಾಲೇಜು ಮೈದಾನದಲ್ಲಿ ನಡೆದ ಐಕ್ಯತಾ ಸಮಾವೇಶದಲ್ಲಿ ಭಾರೀ ಸಂಖ್ಯೆಯ ಜನರು ಭಾಗವಹಿಸಿದ್ದರು. ಆಗಲೇ ಕೇಂದ್ರ ಮತ್ತು ರಾಜ್ಯದಲ್ಲಿನ ಬಿಜೆಪಿ ಸರ್ಕಾರಗಳ ವಿರುದ್ಧ ನಿರ್ಣಯ ಅಂಗೀಕರಿಸಲಾಗಿತ್ತು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿ ಹೆಚ್ಚಳ ಹಾಗೂ ಒಳ ಮೀಸಲಾತಿ ಅನುಷ್ಠಾನಕ್ಕೆ ಬಸವರಾಜ ಬೊಮ್ಮಾಯಿ ಅವರ ನೇತೃತ್ವದ ಬಿಜೆಪಿ ಸರ್ಕಾರ ನಿರ್ಧಾರ ಕೈಗೊಂಡಿತ್ತು. ಅದರ ನೆರವಿನಲ್ಲೇ ಪರಿಶಿಷ್ಟರ ಮತಗಳನ್ನು ಸೆಳೆಯಬಹುದು ಎಂಬ ಲೆಕ್ಕಾಚಾರದಲ್ಲಿ ಬಿಜೆಪಿ ಇತ್ತು. ಈ ವಿಷಯದಲ್ಲೂ ಪರಿಶಿಷ್ಟರಿಗೆ ಬಿಜೆಪಿ ಮೋಸ ಮಾಡುತ್ತಿದೆ ಎಂದು ದಲಿತ ಸಂಘಟನೆಗಳ ಪ್ರಮುಖರು ಚುನಾವಣೆಯುದ್ದಕ್ಕೂ ನೆನಪಿಸುವ ಕೆಲಸ ಮಾಡಿದರು.

ನೇರವಾಗಿ ಪಕ್ಷ ಸೇರಿದರು: ಪರಿಶಿಷ್ಟ ಜಾತಿಯವರಿಗೆ ಒಳ ಮೀಸಲಾತಿ ಅನುಷ್ಠಾನಗೊಳಿಸುವಂತೆ ಆಗ್ರಹಿಸಿ ದೀರ್ಘ ಕಾಲದಿಂದ ಹೋರಾಟ ನಡೆಸುತ್ತಿದ್ದ ಪ್ರಮುಖರಾದ ಅಂಬಣ್ಣ ಅರೋಲಿ, ಸುಧಾಮದಾಸ್ ಸೇರಿದಂತೆ ಹಲವರು ನೇರವಾಗಿ ಕಾಂಗ್ರೆಸ್ ಪಕ್ಷವನ್ನೇ ಸೇರಿದರು. ಇದು ಕೂಡ ಈ ಚುನಾವಣೆಯಲ್ಲಿ ಬಿಜೆಪಿಯ ಹಿನ್ನಡೆಗೆ ಕಾರಣವಾಗಿರಬಹುದು ಎಂದು ವಿಶ್ಲೇಷಿಸಲಾಗುತ್ತಿದೆ.

ಸಿದ್ದರಾಮಯ್ಯ ಸಿ.ಎಂ; ಶೋಷಿತ ಸಮುದಾಯಗಳ ಆಗ್ರಹ

ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಎದುರು ರಾಜ್ಯದಲ್ಲಿ ಸಮರ್ಥ ಆಡಳಿತ ನೀಡಲು ಕಳಂಕರಹಿತ ವ್ಯಕ್ತಿತ್ವದ ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಮಾಡಬೇಕು ಎಂದು ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟ ಒತ್ತಾಯಿಸಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ನಾಯಕರಾದ ಸೋನಿಯಾ ಗಾಂಧಿ, ರಾಹುಲ್, ಪ್ರಿಯಾಂಕಾ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಸಿದ್ದರಾಮಯ್ಯ ಸೇರಿದಂತೆ ಕಾಂಗ್ರೆಸ್ ನಾಯಕರು ಒಗ್ಗಟ್ಟಿನ ಹೋರಾಟ ನಡೆಸಿದ್ದರಿಂದ ವಿಧಾನಸಭಾ ಚುನಾವಣೆಯಲ್ಲಿ ಭಾರಿ ಬಹುಮತ ಪಡೆದಿದೆ. 2024ಕ್ಕೆ ಲೋಕಸಭಾ ಚುನಾವಣೆಯೂ ಬರುತ್ತದೆ. ಆ ಚುನಾವಣೆಯಲ್ಲಿ ಬಿಜೆಪಿಯನ್ನು ಸಮರ್ಥವಾಗಿ ಎದುರಿಸಲು, ಸಾಮಾಜಿಕ ನ್ಯಾಯದಡಿ ಆಡಳಿತ ನಡೆಸಲು ಸಿದ್ದರಾಮಯ್ಯ ಅವರು ಸಮರ್ಥರಿದ್ದಾರೆ. ಅವರನ್ನೇ ಮುಖ್ಯಮಂತ್ರಿ ಸ್ಥಾನಕ್ಕೆ ಪರಿಗಣಿಸಬೇಕು ಎಂದು ಒಕ್ಕೂಟದ ಪ್ರಧಾನ ಸಂಚಾಲಕ ಕೆ.ಎಂ.ರಾಮಚಂದ್ರಪ್ಪ, ಸಂಚಾಲಕರಾದ ಮಾವಳ್ಳಿ ಶಂಕರ್, ಎಣ್ಣೆಗೆರೆ ಆರ್.ವೆಂಕಟರಾಮಯ್ಯ, ಜಾಫೆಟ್, ಬಿ.ಟಿ.ಲಲಿತಾ ನಾಯಕ್, ಇಂದೂಧರ ಹೊನ್ನಾಪುರ, ಗುರುಪ್ರಸಾದ್ ಕೆರಗೋಡು, ವಿ.ನಾಗರಾಜ್, ಆದರ್ಶ ಎಲ್ಲಪ್ಪ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಆಗ್ರಹಿಸಿದರು.

ಎಲ್ಲ ಜನಾಂಗದ ಜನರನ್ನೂ ಒಟ್ಟಿಗೆ ತೆಗೆದುಕೊಂಡು ಹೋಗುವ ಶಕ್ತಿ ಸಿದ್ದರಾಮಯ್ಯ ಅವರಿಗಿದೆ. ಅವರು 2013–2018ರ ಅವಧಿಯಲ್ಲಿ ಮುಖ್ಯಮಂತ್ರಿಯಾಗಿ ಮಾಡಿದ ಜನಪರ ಕಾರ್ಯಗಳೇ ಸಾಕ್ಷಿ. ’ಡಬಲ್ ಎಂಜಿನ್‘ ಸರ್ಕಾರ ಎಂದು ಹೇಳಿಕೊಂಡು ಅಧಿಕಾರ ನಡೆಸಿದ ಬಿಜೆಪಿ ಬಡವರಿಗಾಗಿ ಜಾರಿಗೆ ತಂದ ಯೋಜನೆಗಳನ್ನೇ ರದ್ದು ಮಾಡಿತ್ತು. ಸರ್ವಾಧಿಕಾರಿ ನಡೆ, ಭ್ರಷ್ಟಾಚಾರಕ್ಕೆ ಜನರು ತಕ್ಕಪಾಠ ಕಲಿಸಿದ್ದಾರೆ. ಇಂತಹ ಸಮಯದಲ್ಲಿ ಆಡಳಿತ ನಡೆಸಲು ಸಿದ್ದರಾಮಯ್ಯ ಸೂಕ್ತ ವ್ಯಕ್ತಿ ಎಂದು ಪ್ರತಿಪಾದಿಸಿದರು.

ಸಮಾನ ಮನಸ್ಕರ ಒಕ್ಕೂಟದಿಂದಲೂ ಬಿಜೆಪಿ ವಿರುದ್ಧ ಅಭಿಯಾನ

40 ಮಂದಿ ಸಾಹಿತಿಗಳು, ಚಿಂತಕರನ್ನು ಒಳಗೊಂಡಿರುವ ‘ಸಮಾನ ಮನಸ್ಕರ ಒಕ್ಕೂಟ’ವೂ ಈ ಚುನಾವಣೆಯಲ್ಲಿ ರಾಜ್ಯದ ಉದ್ದಗಲಕ್ಕೆ ಬಿಜೆಪಿ ವಿರುದ್ಧ ಪ್ರಚಾರ ನಡೆಸಿತ್ತು.

ಸಾಹಿತಿಗಳಾದ ಕೆ. ಮರುಳಸಿದ್ದಪ್ಪ ಒಕ್ಕೂಟದ ಗೌರವಾಧ್ಯಕ್ಷರಾಗಿದ್ದು, ಜಿ. ರಾಮಕೃಷ್ಣ, ಜಾಣಗೆರೆ ವೆಂಕಟರಾಮಯ್ಯ, ರಾಜೇಂದ್ರ ಚೆನ್ನಿ ಸೇರಿದಂತೆ 40 ಮಂದಿ ಇದ್ದಾರೆ. ಮೂರು ತಂಡಗಳಲ್ಲಿ ರಾಜ್ಯದ ವಿವಿಧೆಡೆ ಪ್ರವಾಸ ಮಾಡಿ, ‘ಕೋಮುವಾದಿ ಬಿಜೆಪಿಯನ್ನು ತಿರಸ್ಕರಿಸಿ’ ಎಂಬ ಜಾಗೃತಿ ಅಭಿಯಾನ ನಡೆಸಿದ್ದರು.

ಕಡಿಮೆಯಾದ ಗೆಲುವಿನ ಅಂತರ: ಸೋಮಶೇಖರ್ ಬೇಸರ

ಮಾಗಡಿ ರಸ್ತೆಯ ಮಾರುತಿನಗರದಲ್ಲಿ ಶಾಸಕ ಎಸ್.ಟಿ.ಸೋಮಶೇಖರ್ ಅವರನ್ನು ಸನ್ಮಾನಿಸಲಾಯಿತು.

ರಾಜರಾಜೇಶ್ವರಿನಗರ: ಇಪ್ಪತ್ತು ವರ್ಷಗಳಿಂದ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡು ನಿಮ್ಮೆಲ್ಲರ ನೋವು, ನಲಿವು, ಕಷ್ಟ–ಸುಖದಲ್ಲಿ ಜೊತೆಯಲ್ಲಿದ್ದೇನೆ. ಸೇವಕನಾಗಿ ದುಡಿಯುತ್ತಿವೆ. ಆದರೂ ಈ ಚುನಾವಣೆಯಲ್ಲಿ ನಿರೀಕ್ಷೆಯಂತೆ ಮತಗಳು ಬರಲಿಲ್ಲ ಎಂದು ಶಾಸಕ ಎಸ್.ಟಿ.ಸೋಮಶೇಖರ್ ಬೇಸರ ವ್ಯಕ್ತಪಡಿಸಿದರು.

ಹೇರೋಹಳ್ಳಿ, ಮಾರುತಿನಗರ, ನಾಗರಹೊಳೆನಗರ, ವಿಘ್ನೇಶ್ವರನಗರ, ಅಂದ್ರಹಳ್ಳಿ, ಅಂಜನಾನಗರ, ಕೆಂಪೇಗೌಡನಗರ, ಬಿಇಎಲ್ ಬಡಾವಣೆ, ಬ್ಯಾಡರಹಳ್ಳಿಯಲ್ಲಿ ಮತದಾರರಿಗೆ ಕೃತಜ್ಞತೆ ಸಲ್ಲಿಸಿ ಮಾತನಾಡಿ, ‘ಸಾವಿರಾರು ಕೋಟಿ ಅನುದಾನ ತಂದು ಯಶವಂತಪುರ ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸ ಮಾಡಿದ್ದೇನೆ. ಕೋವಿಡ್ ಸಮಯದಲ್ಲಿ ಸದಾ ನಿಮ್ಮ ಜೊತೆಯಲ್ಲಿದ್ದು, ಜಾತಿ, ಧರ್ಮ, ಪಕ್ಷ ಭೇದವಿಲ್ಲದೆ ನಿರಂತರವಾಗಿ ಸೇವೆ ಮಾಡಿದ್ದೇನೆ. ಮುಂದೆಯೂ ಸೇವೆ ಮಾಡುತ್ತೇನೆ. ಚುನಾವಣೆ ನಂತರ ಪಕ್ಷ ಭೇದಭಾವ ಮಾಡುವುದಿಲ್ಲ ಮುಂದೆಯೂ ಎಂದಿನಂತೆ ಸೇವೆ ಮಾಡಿಕೊಂಡು ಹೋಗುತ್ತೇನೆ’ ಎಂದರು.

ಬಿಬಿಎಂಪಿ ಮಾಜಿ ಸದಸ್ಯ ರಾಜಣ್ಣ, ಮುಖಂಡರಾದ ನಾಗವೇಣಿ, ರವಿಶಂಕರ್, ಕಾಚೋಹಳ್ಳಿ ಲೋಕೇಶ್, ರೇಣುಕಪ್ಪ, ರಘು, ನಾಗರಹೊಳೆ ನಗರ ಗಿರಿಗೌಡ ಸೇರಿದಂತೆ ಹಲವಾರು ಮುಖಂಡರು ಇದ್ದರು.

ಚಿತ್ರಾವಳಿ



ಛಾಯಾಗ್ರಾಹಕ ಎಸ್. ಈಶ್ವರ ಅವರ ‘ಡ್ರೀಮ್ ವೀವರ್’ ಪುಸ್ತಕವನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಇತ್ತೀಚೆಗೆ ಬಿಡುಗಡೆ ಮಾಡಿದರು.

ಶಿವಾಜಿನಗರದ ವಾಹನ ದಟ್ಟಣೆ ಮಧ್ಯೆ ತೂಕವಿಲ್ಲದ ಥರ್ಮಾಕೋಲ್ ಬಾಕ್ಸ್‌ಗಳನ್ನು ಬ್ಯಾಲೆನ್ಸ್ ಮಾಡಿಕೊಂಡು ಹೋಗುತ್ತಿರುವ ಕಾರ್ಮಿಕ .

–ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

ವಿಮಾನ ನಿಲ್ದಾಣದಲ್ಲಿ ವಸೂಲಿ: ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನನ್ನ ತಂದೆ ಸಾಯುವ ಸ್ಥಿತಿಯಲ್ಲಿದ್ದು, ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ಮಾಡಬೇಕಿದೆ’ ಎಂದು ಸುಳ್ಳು ಹೇಳಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರಿಂದ ಹಣ ವಸೂಲಿ ಮಾಡುತ್ತಿದ್ದ ಆರೋಪಿ ವಿಘ್ನೇಶ್ (27) ಎಂಬುವವರನ್ನು ಪೊಲೀಸರು ಬಂಧಿಸಿದ್ದಾರೆ.

‘ಚೆನ್ನೈ ನಿವಾಸಿ ವಿಘ್ನೇಶ್, ಡಿಪ್ಲೊಮಾ ಮಾಡಿದ್ದು ಸುಳ್ಳು ಕಥೆ ಹೇಳಿ ನಿಲ್ದಾಣದಲ್ಲಿ ಹಣ ಪಡೆಯುತ್ತಿದ್ದ. ಈತನ ಬಗ್ಗೆ ಅನುಮಾನಗೊಂಡ ಪ್ರಯಾಣಿಕರೊಬ್ಬರು ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆಯ (ಸಿಐಎಸ್‌ಎಫ್) ಸಿಬ್ಬಂದಿಗೆ ಮಾಹಿತಿ ನೀಡಿದ್ದರು. ಅವರೇ ವಿಘ್ನೇಶ್‌ನನ್ನು ಹಿಡಿದು ಠಾಣೆಗೆ ಒಪ್ಪಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡು ಈತನನ್ನು ಬಂಧಿಸಲಾಗಿದೆ’ ಎಂದು ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಪೊಲೀಸರು ತಿಳಿಸಿದರು.

‘ಆರೋಪಿ ವಿಘ್ನೇಶ್ ಹೆಸರಿನಲ್ಲಿ ವಿವಿಧ ಬ್ಯಾಂಕ್‌ಗಳಲ್ಲಿ 12 ಖಾತೆಗಳಿವೆ. ಈತನ ಬಳಿ ಕ್ರೆಡಿಟ್, ಡೆಬಿಟ್ ಕಾರ್ಡ್‌ಗಳು ಸಿಕ್ಕಿವೆ. ಪ್ರಯಾಣಿಕರಿಂದ ಕನಿಕರ ಗಿಟ್ಟಿಸಿಕೊಂಡು ಹಣ ಪಡೆಯುವುದನ್ನೇ ಆರೋಪಿ ವೃತ್ತಿ ಮಾಡಿಕೊಂಡಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಈತನ ಬ್ಯಾಂಕ್ ಖಾತೆ ವಿವರ ಸಂಗ್ರಹಿಸಲಾಗುತ್ತಿದೆ. ಈತನ ಜೊತೆ ಮತ್ತಷ್ಟು ಮಂದಿ ಇದೇ ರೀತಿಯಲ್ಲಿ ಹಣ ಪಡೆಯುತ್ತಿರುವ ಮಾಹಿತಿಯಿದೆ’ ಎಂದು ಹೇಳಿದರು.

ಚೆನ್ನೈಗೆ ಹೋಗಲು ಟಿಕೆಟ್ ಕಾಯ್ದಿರಿಸಿದ್ದ: ‘ವಿಮಾನ ನಿಲ್ದಾಣದ ಒಳಗೆ ಪ್ರಯಾಣಿಕರನ್ನು ಹೊರತುಪಡಿಸಿ ಬೇರೆಯವರಿಗೆ ಪ್ರವೇಶವಿಲ್ಲ. ಇದೇ ಕಾರಣಕ್ಕೆ ಆರೋಪಿ, ಚೆನ್ನೈಗೆ ಹೋಗಲು ವಿಮಾನ ಟಿಕೆಟ್ ಕಾಯ್ದಿರಿಸಿ ನಿಲ್ದಾಣದೊಳಗೆ ಹೋಗಿದ್ದ’ ಎಂದು ಪೊಲೀಸರು ತಿಳಿಸಿದರು.

‘ವಿಮಾನಕ್ಕಾಗಿ ಕಾಯುತ್ತ ಕುಳಿತಿರುತ್ತಿದ್ದ ಪ್ರಯಾಣಿಕರ ಬಳಿ ಹೋಗಿ ಆರೋಪಿ ಗೋಳಾಡುತ್ತಿದ್ದ. ಆರೋಪಿ ಮಾತು ನಂಬುತ್ತಿದ್ದ ಪ್ರಯಾಣಿಕರು, ₹1000ರಿಂದ ₹ 10,000ವರೆಗೂ ನೀಡುತ್ತಿದ್ದರು. ಇದೇ ರೀತಿಯಲ್ಲಿ ಆರೋಪಿ, ದಿನವೊಂದಕ್ಕೆ 10ಕ್ಕೂ ಹೆಚ್ಚು ಪ್ರಯಾಣಿಕರ ಬಳಿ ಹಣ ಪಡೆಯುತ್ತಿದ್ದ’ ಎಂದು ಹೇಳಿದರು.

‘ಏಪ್ರಿಲ್‌ನಲ್ಲಿ ನಿಲ್ದಾಣಕ್ಕೆ ಬಂದಿದ್ದ ಪ್ರಯಾಣಿಕರೊಬ್ಬರು ಆರೋಪಿಗೆ ಹಣ ನೀಡಿದ್ದರು. ಅದೇ ಪ್ರಯಾಣಿಕ, ಶನಿವಾರ ರಾತ್ರಿ ನಿಲ್ದಾಣಕ್ಕೆ ಬಂದಿದ್ದರು. ಅವರ ಬಳಿ ಹೋಗಿದ್ದ ಆರೋಪಿ, ಪುನಃ ಸುಳ್ಳು ಕಥೆ ಹೇಳಿ ಹಣ ಕೇಳಿದ್ದ. ಅನುಮಾನಗೊಂಡ ಅದೇ ಪ್ರಯಾಣಿಕ ಸಿಬ್ಬಂದಿಗೆ ಮಾಹಿತಿ ನೀಡಿದ್ದರು’ ಎಂದು ತಿಳಿಸಿದರು.

ಸಚಿವರ ಕೊಠಡಿ ಸ್ವಚ್ಛ

ವಿಧಾನಸಭಾ ಚುನಾವಣೆಯಲ್ಲಿ ಬಹುಮತ ಪಡೆದಿರುವ ಕಾಂಗ್ರೆಸ್ ಹೊಸ ಸರ್ಕಾರ ರಚಿಸಲಿದ್ದು, ವಿಧಾನಸೌಧದಲ್ಲಿರುವ ಸಚಿವರ ಕೊಠಡಿಗಳನ್ನು ಸಿಬ್ಬಂದಿ ಸೋಮವಾರ ಸ್ವಚ್ಛಗೊಳಿಸಿದರು –ಪ್ರಜಾವಾಣಿ ಚಿತ್ರ

‘ಗೌರಿ’ ಸಾಕ್ಷ್ಯಚಿತ್ರಕ್ಕೆ ದಕ್ಷಿಣ ಏಷ್ಯಾ ಪ್ರಶಸ್ತಿ

ಬೆಂಗಳೂರು: ಮಾಂಟ್ರಿಯಲ್‌ನ ದಕ್ಷಿಣ ಏಷ್ಯಾ ಚಲನಚಿತ್ರೋತ್ಸವದಲ್ಲಿ ಕವಿತಾ ಲಂಕೇಶ್ ನಿರ್ದೇಶನದ ‘ಗೌರಿ’ ಸಾಕ್ಷ್ಯಚಿತ್ರಕ್ಕೆ ‘ಅತ್ಯುತ್ತಮ ದೀರ್ಘ ಸಾಕ್ಷ್ಯಚಿತ್ರ’ ಪ್ರಶಸ್ತಿ ಲಭಿಸಿದೆ.

2017ರಲ್ಲಿ ಹತ್ಯೆಗೊಳಗಾದ ಪತ್ರಕರ್ತೆ ಗೌರಿ ಲಂಕೇಶ್ ಕುರಿತು ಅವರ ಸಹೋದರಿ ಕವಿತಾ ಸಾಕ್ಷ್ಯಚಿತ್ರವನ್ನು ಸಿದ್ಧಪಡಿಸಿದ್ದರು. ಆಸ್ಕರ್ ಪ್ರಶಸ್ತಿಗೆ ನಾಮನಿರ್ದೇಶನಗೊಂಡ ‘ಆಲ್ ದಟ್ ಬ್ರೀಥ್ಸ್’ ಸಾಕ್ಷ್ಯಚಿತ್ರವೂ ಈ ಸ್ಪರ್ಧೆಯಲ್ಲಿದ್ದು, ‘ರನ್ನರ್ ಅಪ್’ ಪ್ರಶಸ್ತಿ ಪಡೆದಿದೆ.

‘ಆಮ್‌ಸ್ಟರ್‌ಡ್ಯಾಮ್‌ನ ಫ್ರೀ ಪ್ರೆಸ್ ಅನ್‌ಲಿಮಿಟೆಡ್’ ಗೌರಿ ಸಾಕ್ಷ್ಯಚಿತ್ರ ನಿರ್ಮಾಣಕ್ಕೆ ಸಹಕರಿಸಿತ್ತು. ವೃತ್ತಿಪರ ಸೇವೆಯ ಕಾರಣದಿಂದಾಗಿ ಹಿಂಸಾಚಾರಕ್ಕೆ ಒಳಗಾಗಿ ಪ್ರಾಣ ಕಳೆದುಕೊಂಡ ಪತ್ರಕರ್ತರ ಸಾಕ್ಷ್ಯಚಿತ್ರಗಳನ್ನು ಸಿದ್ಧಪಡಿಸಲು ಸಂಸ್ಥೆ ಕೋರಿತ್ತು. ಸುಮಾರು 300 ಪ್ರಸ್ತಾವನೆಗಳು ಬಂದಿದ್ದವು. ಆಯ್ಕೆಯಾದ ನಾಲ್ಕು ಚಿತ್ರಗಳಲ್ಲಿ ‘ಗೌರಿ’ ಸಾಕ್ಷ್ಯಚಿತ್ರವೂ ಒಂದು.

ನಗರದಲ್ಲಿ ಇಂದು

‘ಅಡ್ವಾನ್ಸ್ಸ್ ಇನ್ ಎಂಜಿನಿಯರಿಂಗ್ ಆ್ಯಂಡ್ ಟೆಕ್ನಾಲಜಿ ಫಾರ್ ಇಂಟ್ಲಿಜೆಂಟ್ ಸಿಸ್ಟಮ್ಸ್’ ಕುರಿತ ಅಂತರರಾಷ್ಟ್ರೀಯ ಸಮ್ಮೇಳನ: ಅತಿಥಿಗಳು: ಬಿ.ಎನ್. ರಾಮಕೃಷ್ಣ, ಕುಲದೀಪ್ ಕುಮಾರ್ ರೈನಾ, ಅಧ್ಯಕ್ಷತೆ: ಗಾಳಿಸ್ವಾಮಿ, ಉಪಸ್ಥಿತಿ: ತಿಂತಿಷಾ ಎಚ್. ಸಾಗರ್, ರೋಹನ್ ಪಿ. ಸಾಗರ್, ನತಾಶಾ ಎಚ್. ಸಾಗರ್, ನಿಶಾನ್ ಎಚ್. ಸಾಗರ್, ಆಯೋಜನೆ ಮತ್ತು ಸ್ಥಳ: ದಯಾನಂದ ಸಾಗರ್ ಕಾಲೇಜ್ ಆಫ್ ಎಂಜಿನಿಯರಿಂಗ್, ಕುಮಾರಸ್ವಾಮಿ ಲೇಔಟ್, ಬೆಳಿಗ್ಗೆ 9.30

ಉದ್ಯೋಗ ಮೇಳ: ಅತಿಥಿ: ಪ್ರಲ್ಹಾದ ಜೋಶಿ, ಆಯೋಜನೆ: ಭಾರತೀಯ ಅಂಚೆ ಇಲಾಖೆ, ಸ್ಥಳ: ಜ್ಞಾನ ಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜು ಆವರಣ, ಅರಮನೆ ರಸ್ತೆ, ಬೆಳಿಗ್ಗೆ 10

‘ಗಾಂಧೀಜಿ ಅವರ ಮೂಲಭೂತ ಆರ್ಥಿಕ ಚಿಂತನೆಗಳು ಒಂದು ವಿಶ್ಲೇಷಣೆ’ ಕುರಿತು ಉಪನ್ಯಾಸ: ಉದ್ಘಾಟನೆ: ಕೆ.ಎಸ್. ಸಮೀರ ಸಿಂಹ, ಉಪನ್ಯಾಸ: ಮಹಾಬಲೇಶ್ವರ ಗುಪ್ತ, ಅಧ್ಯಕ್ಷತೆ: ಎಚ್.ಎಸ್. ಸುರೇಶ್, ಆಯೋಜನೆ: ಕರ್ನಾಟಕ ಸರ್ವೋದಯ ಮಂಡಲ, ವಿಜಯ ಟೀಚರ್ಸ್ ಕಾಲೇಜು, ಸ್ಥಳ: ವಿಜಯ ಟೀಚರ್ಸ್ ಕಾಲೇಜು ಸಭಾಂಗಣ, ಜಯನಗರ, ಬೆಳಿಗ್ಗೆ 10.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ ಕಳುಹಿಸಿ
nagaradalli_indu@prajavani.co.in

SIDDAGANGA

HIGH SCHOOL, SIDDAGANGA CBSE,
SIDDAGANGA PU SCIENCE COLLEGE, DAVANAGERE.
Ph: 8073301604

SSLC RESULT - 2023 Congratulations..!

624/625

District Topper State 2nd Rank

CHETANA R. 99.84%

District Topper State 2nd Rank

ದಾವಣಗೆರೆ ದಕ್ಷಿಣವಲಯ ಶಿಕ್ಷಣಾಧಿಕಾರಿಗಳಾದ ದಾರುಕೇಶ್‌ರವರಿಂದ ಅಭಿನಂದನೆ.

620/625

District 3rd Topper State 5th Rank

BHOOMIKA B. MUTTAGI 99.20%

SSLC ಮತ್ತು CBSEಯಲ್ಲಿ ಹೆಚ್ಚು ಅಂಕಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ

2 ವರ್ಷ PUC NEET/JEE/K-CET FREE EDUCATION

MSS Scholarshipನ ಸಂಪೂರ್ಣ ಮಾಹಿತಿ ನಿಮಗಾಗಿ

ಹೆಚ್ಚಿನ ಮಾಹಿತಿಗಾಗಿ QR Code Scan ಮಾಡಿ ಅಥವಾ www.siddaganga.com ಭೇಟಿ ನೀಡಿ.

IIT

THILAK B R Rank 3133 IIT DHARWAD

JEE Mains ಹಾಗೂ JEE Advanced Coaching ಸಿದ್ಧಗಂಗಾ ಕಾಲೇಜಿನಲ್ಲಿ ಮುಗಿಸಿ ಪ್ರತಿಷ್ಠಿತ IIT College ನಲ್ಲಿ ಓದುತ್ತಿರುವುದು ನನ್ನ ಹಳ್ಳಿಯಲ್ಲಿ ಎಲ್ಲರಿಗೂ ಸಂಭ್ರಮವನ್ನುಂಟು ಮಾಡಿದೆ. Siddaganga The Pride of Davangere.

ತಿಲಕ್ ಬಿ.ಆರ್.
IIT Dharwad

NEET

659/720

Harshith S. NEET 2021 : 659

ನನಗೆ ತಾಯಿ ಮಾತ್ರ ಇರುವುದು. Staff Nurse ಕೆಲಸ ಮಾಡುತ್ತಿದ್ದಾರೆ. ಸಿದ್ಧಗಂಗಾ ವಿದ್ಯಾಸಂಸ್ಥೆಯಲ್ಲಿ Free ಓದಲು ಅವಕಾಶ ಸಿಕ್ಕಿತ್ತು. ನಾನೀಗ BMC ಯಲ್ಲಿ MBBS ಓದುತ್ತಿದ್ದೇನೆ. ಸಿದ್ಧಗಂಗಾ ವಿದ್ಯಾಸಂಸ್ಥೆಯ ಸಾಮಾಜಿಕ ಕಳಕಳಿಗೆ ನನ್ನ ಧನ್ಯವಾದಗಳು.

ಹರ್ಷಿತ್ ಎಸ್.
Bangalore Medicacal College (BMC)

NEET

654/720

Abhilasha K.S. NEET 2021 : 654

ನನ್ನದು ನಾಗರಕಟ್ಟೆ ಗ್ರಾಮದ ರೈತರ ಕುಟುಂಬ. ನಮ್ಮ ಊರಿಗೆ ನಾನೇ 1st Doctor ಎನ್ನುವ ಹೆಮ್ಮೆ ನನ್ನದು. ಎರಡು ವರ್ಷ ಸಿದ್ಧಗಂಗಾ ವಿದ್ಯಾಸಂಸ್ಥೆಯಲ್ಲಿ Free ಓದಲು ಅವಕಾಶ ದೊರೆತಿದ್ದು ಹಾಗೂ ಅತ್ಯುತ್ತಮ NEET Coaching ಸಿಕ್ಕಿದ್ದು ನನ್ನ ಅದೃಷ್ಟ.

ಅಭಿಲಾಷ ಕೆ.ಎಸ್.
Bangalore Medicacal College (BMC)

NEET

611/720

CHINMAY M D NEET 2022 : 611

ಬಡ ಕುಟುಂಬದಿಂದ ಬಂದ ನನಗೆ ಎರಡು ವರ್ಷದ ಸಿದ್ಧಗಂಗಾ ವಿದ್ಯಾಸಂಸ್ಥೆಯ Free Scholorship ವರದಾನವಾಯಿತು. ನನ್ನ ಹಾಗೆ ಸಾವಿರಾರು ವಿದ್ಯಾರ್ಥಿಗಳು ಈ ಅವಕಾಶ ಪಡೆಯುವಂತಾಗಲಿ. Thanks to Siddaganga.

ಚಿನ್ಮಯ್ ಎಂ.ಡಿ.
Bangalore Medicacal College (BMC)

MSS
M.S. Shivanna

Admissions Open For
I PUC
PCMB/PCMC

For Scholarship & Free Seat Scan this



HOSTEL ಲಭ್ಯತೆಗೆ ಅನುಗುಣವಾಗಿ

SSLC	COLLEGE FEES	HOSTEL FEES	TOTAL PACKAGE
615-625	FREE	20,000	20,000
600-614	FREE	60,000	60,000
594-599	25,000	80,000	1,05,000
563-593	50,000	80,000	1,30,000
531-562	70,000	80,000	1,50,000

CBSE/ ICSE (CBSE / ICSE (500 Marks))	COLLEGE FEES	HOSTEL FEES	TOTAL PACKAGE
490-500	FREE	20,000	20,000
470-489	FREE	60,000	60,000
450-469	50,000	80,000	1,30,000
425-449	70,000	80,000	1,50,000
400-424	85,000	80,000	1,65,000

Including NEET/JEE/K-CET Call: 8073301604

SIDDAGANGA PU COLLEGE

II PU 2022

PU SCIENCE COLLEGE, DAVANAGERE. Ph: 8073301604

593/600

VINAYAKA L. 98.83%

591/600

CHINMAY M D 98.50%

ಕ್ಷೇಮ ಕುಶಲ

ಮಕ್ಕಳಿಗೆ ಪ್ರಕೃತಿಪಾಠ

ರಮ್ಯಾ ಶ್ರೀಹರಿ

ಪ್ರಕೃತಿಯೆಂದರೆ ಸಹಜತೆ, ನಿಯಮ, ಚಲನೆ; ಅದೊಂದು ನಿರಂತರ ಸತ್ಯ. ಮನುಷ್ಯ ಕಂಡುಕೊಂಡ ಬದುಕಿನ ಎಲ್ಲ ಸತ್ಯಗಳೂ, ಅರ್ಥಗಳೂ, ಮೌಲ್ಯಗಳೂ ಮಾನವ ಪ್ರಪಂಚಕ್ಕಷ್ಟೇ ಸೀಮಿತ, ಪ್ರಕೃತಿಗೆ ಅದರಲ್ಲಿ ಆಸಕ್ತಿಯಿಲ್ಲ. ಪ್ರಕೃತಿಗೆ ಜೀವಿಯ ಮುಂದುವರಿಕೆ ಮುಖ್ಯ, ಜೀವನದ ಅರ್ಥವಲ್ಲ. ಪ್ರಕೃತಿಯಲ್ಲಿ ಸೌಂದರ್ಯವಿದೆ, ಹಾಗಾಗಿ ಮನಸ್ಸು ಅಲ್ಲಿ ನಿಲ್ಲುತ್ತದೆ, ಪ್ರಕೃತಿಯ ಮಡಿಲನ್ನು ಅರಸಿ ಅಲೆಯುತ್ತದೆ; ಪ್ರಕೃತಿಯಲ್ಲಿ ರೌದ್ರವಿದೆ, ಅಪಾಯವೂ ಇದೆ. ಹಾಗಾಗಿ ಅಲ್ಲಿ ಭಯವೂ ಹಿಂಜರಿಕೆಯೂ ಇದೆ. ಹೀಗಿರುವ ಪ್ರಕೃತಿಯೊಂದಿಗೆ ಮನುಷ್ಯನ ಒಡನಾಟ ಹೇಗಿರಬೇಕು? ಮಕ್ಕಳು ಪ್ರಕೃತಿಯನ್ನು ಹೇಗೆ ನೋಡಬೇಕು?

ಪ್ರಕೃತಿಯೆಂದರೆ ಬೆಟ್ಟ, ನದಿ, ಸಮುದ್ರವಷ್ಟೇ ಅಲ್ಲ; ನಮ್ಮ ದೇಹವೇ ಪ್ರಕೃತಿ; ನಮ್ಮ ಮನಸ್ಸೂ ಪ್ರಕೃತಿಯೇ ಹೌದು; ನಮ್ಮ ದಿನನಿತ್ಯದ ಜೀವನವೂ ಪ್ರಾಕೃತಿಕ ನಿಯಮಗಳಿಗೆ ಅನುಗುಣವಾಗಿಯೇ ರೂಪಿತವಾಗಿದೆ. ಹಗಲು, ರಾತ್ರಿ, ಬದಲಾಗುವ ಋತುಮಾನ, ದೈಹಿಕ ಬೆಳವಣಿಗೆ, ಮಾನಸಿಕ ಬದಲಾವಣೆ, ಹರಿಯುವ ನೀರು, ಸುಡುವ ಬೆಂಕಿ – ಎಲ್ಲವೂ ಪ್ರಕೃತಿಯೇ ಹೌದು. ಮಕ್ಕಳಿಗೆ ವಿಜ್ಞಾನದ ಮೊದಲ ಪಾಠವೇ ಪ್ರಕೃತಿ ಹೇಗಿದೆ ಎನ್ನುವುದನ್ನು ಗಮನಿಸುವುದು. ಪ್ರಕೃತಿಯ ವಿಸ್ಮಯಗಳನ್ನು ಕುತೂಹಲದಿಂದ ಗಮನಿಸುತ್ತಾ ಹೋದಾಗ ಹೊಸ ಕಲಿಕೆಗೂ ದಾರಿಯಾಗುತ್ತದೆ.

ನಗರ ಪ್ರದೇಶಗಳಲ್ಲಿ ಬೆಳೆದು ಕೇವಲ ಪ್ರವಾಸಕ್ಕೆಂದು ಕಾಡು, ಬೆಟ್ಟ ಪ್ರದೇಶಗಳಿಗೆ, ಸಮುದ್ರ ತೀರಕ್ಕೆ ಹೋಗುವ ಮಕ್ಕಳ ಮನಸ್ಸಿನ ಪ್ರಕೃತಿಯ ಚಿತ್ರಣಕ್ಕೂ, ದಿನನಿತ್ಯ ಕಾಡು-ಬೆಟ್ಟಗಳನ್ನೋ ಸಮುದ್ರವನ್ನೋ ನೋಡಿ ಬೆಳೆದ ಮಕ್ಕಳ ಮನಸ್ಸಿನ ಪ್ರಕೃತಿಯ ಚಿತ್ರಣಕ್ಕೂ ವ್ಯತ್ಯಾಸವಿರುತ್ತದೆ; ಪ್ರಕೃತಿಯನ್ನು ನೋಡುವ, ಅನುಭವಿಸುವ ರೀತಿಯೇ ವಿಭಿನ್ನವಾಗಿರುತ್ತದೆ.

ಪ್ರಕೃತಿಯಲ್ಲಿ ಅಗಾಧ ಶಾಂತಿಯಿದೆ, ಸೌಖ್ಯವಿದೆ. ಪ್ರಕೃತಿಯನ್ನು ಹೇಗೆ ಆಸ್ವಾದಿಸುತ್ತೇವೆ, ಆ ಸವಿಯನ್ನು ಸಹಜೀವಿಗಳೊಟ್ಟಿಗೆ ಸೇರಿ ಹೇಗೆ ಆನಂದಿಸುತ್ತೇವೆ ಎನ್ನುವುದು ನಮ್ಮ ನಮ್ಮ ವ್ಯಕ್ತಿತ್ವವನ್ನು ಅವಲಂಬಿಸಿರುತ್ತದೆ. ಹಾಗೆಯೇ ಪ್ರಕೃತಿಯೊಂದಿಗಿನ ನಮ್ಮ ಸಂಬಂಧ ನಮ್ಮ ವ್ಯಕ್ತಿತ್ವವನ್ನೂ ರೂಪಿಸುತ್ತದೆ. ನಾವು ಮನುಷ್ಯರು ಪ್ರಕೃತಿಯನ್ನು ಪ್ರಾಣಿಗಳಂತೆ ನೋಡುವುದಿಲ್ಲ. ಪ್ರಾಣಿಗಳಿಗೆ ಪ್ರಕೃತಿಯಲ್ಲಿ ಸೌಂದರ್ಯ ಕಾಣುತ್ತದೋ ಇಲ್ಲವೋ ಗೊತ್ತಿಲ್ಲ. ನಮಗಂತೂ ಸೌಂದರ್ಯವನ್ನು ಕಾಣಲು ಕೇವಲ ಕಣ್ಣು ಸಾಲದು, ಹೃದಯವೂ ಬೇಕು. ಹೃದಯಕ್ಕೆ ಬೇಕಾದ ಸಿದ್ಧತೆಯನ್ನು, ಹದವನ್ನು ಮಕ್ಕಳಿಗೆ ಒದಗಿಸಿಕೊಡುವುದರಲ್ಲಿ ಸಮಾಜದ, ಸಂಸ್ಕೃತಿಯ ಪಾತ್ರವಿದೆ. ಕಣ್ಣೆದುರಿಗೆ ಮರವಿರಬಹುದು; ಆದರೆ ಮರದಲ್ಲಿ ಸೌಂದರ್ಯವನ್ನು ಕಾಣಲು ಸಂಸ್ಕಾರ ಬೇಕು.

ಪ್ರಕೃತಿಗೆ ನಮ್ಮ ಮನಸ್ಸು ಸ್ಪಂದಿಸುವ ರೀತಿ, ಪ್ರಕೃತಿಯ ನಿಯಮಗಳನ್ನು ಅರ್ಥೈಸುವ ರೀತಿ; ಪ್ರಕೃತಿಯನ್ನು ಮೀರಿ ಮತ್ತೊಂದು ಲೋಕವನ್ನು ಕಲ್ಪನೆಯಲ್ಲಿ ಸಾಕಾರಗೊಳಿಸಿಕೊಳ್ಳುವುದು ಎಲ್ಲವೂ ಮನುಷ್ಯನ ವೈಶಿಷ್ಟ್ಯ. ಅಂತರಂಗದ ಭಾವಗಳನ್ನೂ, ಪ್ರಾಕೃತಿಕವಲ್ಲದ ಎಷ್ಟೋ ಅನುಭವಗಳನ್ನೂ ಪ್ರಕೃತಿಯಲ್ಲಿರುವ ಅನೇಕ ವಿದ್ಯಮಾನಗಳನ್ನೇ ರೂಪಕಗಳಂತೆ ಆಶ್ರಯಿಸಿ ಹೇಳಿಕೊಳ್ಳುತ್ತೇವೆ. ಇದೆಲ್ಲದರ ಹಿನ್ನೆಲೆಯಲ್ಲಿ ಪ್ರಕೃತಿಗೂ ತಮ್ಮ ಮನಸ್ಸಿಗೂ, ಜೀವನಕ್ಕೂ ನಡುವಿನ ಸಂಬಂಧವನ್ನು ಮಕ್ಕಳು ತಾವಾಗೇ ಕಂಡುಕೊಳ್ಳುವಂತೆ ಪ್ರೇರೇಪಿಸಬಹುದು.

ಪ್ರಕೃತಿಗೂ ಬದುಕನ್ನು ನೋಡುವ ಬಗೆಗೂ ಅವಿನಾಭಾವ ನಂಟಿದೆ. ಉದಾಹರಣೆಗೆ ಹೇಳಬೇಕೆಂದರೆ, ಸೂರ್ಯೋದಯವನ್ನು ಆಸ್ವಾದಿಸುವ ಯಾರೂ ಬದುಕಿನಲ್ಲಿ ಭರವಸೆ ಕಳೆದುಕೊಳ್ಳಲಾರರು. ಪ್ರತಿದಿನವೂ ಸೂರ್ಯ ಉದಯಿಸುವುದು, ಅದರಿಂದ ನಮ್ಮ ಮೈಮನಗಳಲ್ಲಿ ಶಕ್ತಿಸಂಚಾರವಾಗುವುದು ಯಾವ ಪವಾಡಕ್ಕೂ ಕಡಿಮೆಯಿಲ್ಲ. ರಾತ್ರಿಯ ಎಲ್ಲ ಭಯ, ಗೊಂದಲ, ಆಲಸ್ಯವನ್ನು ತೊಡೆದುಹಾಕಿ ಮತ್ತೆ ಜೀವನವನ್ನು ಹೊಸದಾಗಿ ಕಟ್ಟಿಕೊಳ್ಳಬಹುದಾದ ಸಾಧ್ಯತೆಯ ಕಡೆ ನಮ್ಮನ್ನು ಪ್ರಚೋದಿಸುವ ಪ್ರತಿದಿನದ ಬೆಳಗನ್ನು, ‘ಇನ್ನು ಕತ್ತಲು ಕಳೆಯಿತು, ಬೆಳಕಿಗೆ ಮುಖಮಾಡು’ ಎಂಬಂತಿರುವ ಹಕ್ಕಿಗಳ ಕಲರವವನ್ನು ಆಸ್ವಾದಿಸಲಾರದವರು ಬದುಕಿನ ಯಾವ ಸೌಂದರ್ಯವನ್ನೂ ಅನುಭವಿಸಲಾರರು. ನಿಜವಾದ ಸಂತೋಷ ಹೇಗಿರುತ್ತದೆ ಎಂದು ಯಾರಾದರೂ ಕೇಳಿದರೆ ನಿಸ್ಸಂಶಯವಾಗಿ ‘ನಿಜವಾದ ಸಂತೋಷ ಸೂರ್ಯೋದಯದ ಹಾಗಿರುತ್ತದೆ’ ಎಂದೇ ಹೇಳಬಹುದು. ನಿತ್ಯವೂ ಸೂರ್ಯೋದಯದ ಮೊದಲು ಎದ್ದು ಆ ಕಾಲದಲ್ಲಿ ಪ್ರಕೃತಿ ಹೇಗೆ ತನ್ನ ‘ಬಣ್ಣ ಬದಲಾಯಿಸುತ್ತದೆ’ ಎನ್ನುವುದನ್ನು ಮಕ್ಕಳು ಸ್ವತಃ ಕಾಣುವುದಕ್ಕೆ ಪೋಷಕರೂ ಜೊತೆಯಾಗಬಹುದು.

ನಮ್ಮ ಎಷ್ಟೋ ಕವಿಗಳು, ಅನುಭಾವಿಗಳು ಪ್ರಕೃತಿಯನ್ನು ಕಾಣುವ, ಆಂತರ್ಯದಲ್ಲಿ ಸೌಂದರ್ಯವನ್ನು ಕಂಡುಕೊಳ್ಳುವ ಹಲವು ಬಗೆಗಳನ್ನು ನಮಗೆ ದಕ್ಕಿಸಿಕೊಟ್ಟಿದ್ದಾರೆ. ಪ್ರಕೃತಿಯೊಂದಿಗಿನ ಅನುಭವವೊಂದು ಕವಿಯ ಹೃದಯದಲ್ಲಿ ಬೆಳೆದು, ಹೊಳೆದು, ಲೋಕಕ್ಕೇ ಬೆಳಕಾಗಬಲ್ಲ ದರ್ಶನವಾಗಿ, ಕಾಣ್ಕೆಯಾಗಿ ಹೊರಹೊಮ್ಮುವುದನ್ನು ಕುವೆಂಪು, ವರ್ಡ್ಸ್ ವರ್ತ್ ಮುಂತಾದವರ ಪದ್ಯಗಳಲ್ಲಿ ಕಾಣುತ್ತೇವೆ. ಸೂರ್ಯೋದಯದ ಬಗೆಗಿನ ಪದ್ಯವನ್ನು ಸೂರ್ಯೋದಯವನ್ನು ಕಾಣುವ ಹೊತ್ತಿಗೇ, ಹೂವೊಂದರ ಬಗೆಗಿನ ಪದ್ಯವನ್ನು ಹೂದೋಟದಲ್ಲೇ ವಾಚಿಸುವುದು ಮಕ್ಕಳ ಅನುಭವಲೋಕವನ್ನು ಮತ್ತಷ್ಟು ಸಮೃದ್ಧಗೊಳಿಸುತ್ತದೆ.

ಹರಿಯುವ ನದಿಗೆ, ಬೀಳುವ ಮಳೆಗೆ ಎಂತಹ ಸಂಮೋಹನ ಶಕ್ತಿಯಿದೆ ಎಂದು ಯಾರಾದರೂ ಪದಗಳಲ್ಲಿ ಹೇಳಿ ಮುಗಿಸಬಲ್ಲರೇ? ಮಳೆ ಎಂದರೇನು? ಬರೀ ಆಗಸದಿಂದ ಬೀಳುವ ಜಲಧಾರೆಯೇ? ನದಿಸಾಗರಗಳು ಕೇವಲ ಜಲರಾಶಿಯೇ? ಮಳೆಯನ್ನು ನೋಡುವುದು, ಮಳೆಯಲ್ಲಿ ನೆನೆಯುವುದು ಎಲ್ಲರ ಬಾಲ್ಯದಲ್ಲಿಯೂ ಇರಲೇಬೇಕಾದ ಅನುಭವ. ಹರಿಯುವ ನೀರಿಗೆ, ಅದರ ತಂಪಿಗೆ, ಜುಳು ಜುಳು ನಿನಾದಕ್ಕೆ ಮನಸ್ಸನ್ನು ಶಾಂತಗೊಳಿಸುವ ಶಕ್ತಿಯಿದೆ. ಹರಿಯುವ ನೀರಿಗೆ ಮೈ ತಾಗಿದಾಗ ಹೊಸ ಮನುಷ್ಯರೇ ಆಗಿಬಿಟ್ಟೆವೇನೋ ಅನಿಸುವುದು ಹೊಸ ಮನುಷ್ಯರಾಗುವುದಕ್ಕೆ ಹರಿಯುವುದು, ಚಲನಶೀಲರಾಗಿರುವುದು ಎಷ್ಟು ಮುಖ್ಯ ಎನ್ನುವುದನ್ನು ತಿಳಿಸಿಕೊಡುವಂತಿದೆ. ಮಕ್ಕಳು ಮಳೆಯನ್ನು ಆಸಕ್ತಿಯಿಂದ ನೋಡುವುದೂ, ತಮ್ಮನ್ನೇ ತಾವು ಮಳೆಗೆ ಒಡ್ಡಿಕೊಳ್ಳುವುದು ಮಳೆಯನ್ನೂ ಜೀವನವನ್ನೂ ಹಲವು ರೀತಿಗಳಲ್ಲಿ ಅರ್ಥ ಮಾಡಿಕೊಳ್ಳಲು ಅವಶ್ಯಕ.

ಪ್ರಕೃತಿ ಮತ್ತು ಕಲೆಗಿರುವ ಸಂಬಂಧವನ್ನು ಮಕ್ಕಳಿಗೆ ತಿಳಿಸಿಕೊಡಬಹುದಾದ ಸುಲಭೋಪಾಯವೆಂದರೆ ಪ್ರಕೃತಿಯನ್ನು ನೋಡಿ ಚಿತ್ರರಚಿಸುವ ಚಟುವಟಿಕೆ ಮಾಡಿಸುವುದು. ಆಗಸದ ನೀಲಿಯಲ್ಲೂ, ಸಮುದ್ರದ ನೀಲಿಯಲ್ಲೂ ಎಷ್ಟೊಂದು ವೈವಿಧ್ಯಗಳಿವೆ; ಮೋಡದ ಚಲನೆಯೂ ಅಲೆಗಳ ಚಲನೆಯೂ ಹುಟ್ಟಿಸುವ ಭಾವಗಳೆಷ್ಟು ವಿಭಿನ್ನ ಎನ್ನುವುದೆಲ್ಲಾ ಗೊತ್ತಾಗುತ್ತಹೋಗುತ್ತದೆ. ನೀರಿನಲ್ಲಿ ಬೆಳಕಿನ ಪ್ರತಿಫಲನವನ್ನು ದಿನನಿತ್ಯದ ಬದುಕಿನಲ್ಲಿ ಹೀಗೆ ಧ್ಯಾನಸ್ಥರಾಗಿ ನೋಡೇ ಇಲ್ಲವಲ್ಲಾ, ಪಕ್ಷಿಯ ಆಕಾರವೂ, ಎಲೆಯ ಆಕಾರವೂ, ಬೆಟ್ಟಗುಡ್ಡಗಳ ತಿರುವುಗಳೂ ನಿಜವಾಗಿ ಹೀಗಿದೆಯೇ, ಹೂವುಗಳು ದೂರದಿಂದ ಕೇವಲ ಬಣ್ಣದ ಬಿಂದುಗಳಂತೆ ಕಾಣುತ್ತವೆಯಲ್ಲಾ ಎನ್ನುವ ಆಶ್ಚರ್ಯ ಪ್ರಕೃತಿಯನ್ನು ಚಿತ್ರಿಸುವಾಗ ಉಂಟಾಗದೇ ಇರದು. ಪ್ರಕೃತಿಯನ್ನು ಕಣ್ಣು, ಮೈ, ಮನಗಳನ್ನು ತೆರೆದು ತಮ್ಮೊಳಗೆ ಬರಮಾಡಿಕೊಳ್ಳುವ ಅಭ್ಯಾಸವಿರುವ ಮಕ್ಕಳ ಬದುಕು ನಿತ್ಯನೂತನವಾಗಿರುತ್ತದೆ.

❖

ರೋಗ ತಪಾಸಣೆಗೆ ಹಿಂಜರಿಕೆ ಬೇಡ

ಡಾ. ಶ್ರೀನಿವಾಸ ಹರಪನಹಳ್ಳಿ

‘**ಅವರ** ಕಾಲಲ್ಲಿ ಕೀವು ತುಂಬಿ, ಡಾಕ್ಟ್ರ ಹತ್ರ ಹೋಗಿದ್ರಂತೆ. ಆವಾಗ್ಲೇ ಅವರಿಗೆ ಡಯಾಬಿಟಿಸ್ ಇರೋದು ಗೊತ್ತಾಯ್ತಂತೆ.’ ‘ಬಚ್ಚಲಲ್ಲಿ ತಲೆತಿರುಗಿ ಬಿದ್ದರಂತೆ. ಹಾಸ್ಪಿಟಲ್‌ನಲ್ಲಿ ತಪಾಸಣೆ ಮಾಡಿದಾಗ ಬಿಪಿ ಹೆಚ್ಚಾಗಿ ಸ್ಟ್ರೋಕ್ ಆಗಿದ್ದು ತಿಳಿದುಬಂತಂತೆ.’

ಈ ರೀತಿಯ ಸಂಭಾಷಣೆಗಳನ್ನು ನಾವು ಅವಾಗಾವಾಗ ಕೇಳುತ್ತಿರುತ್ತೇವೆ. ಆರೋಗ್ಯವಾಗಿದ್ದವರು ಒಮ್ಮೆಲೇ ಸೀರಿಯಸ್ ಆದಾಗ ಮನೆಮಂದಿಗೆಲ್ಲ ತುಂಬಾ ಗಾಬರಿಯಾಗುವುದು ಸಹಜವೇ. ಆದ್ದರಿಂದ ಈ ರೀತಿ ಆಗಲು ಕಾರಣಗಳೇನು, ಇವನ್ನು ತಪ್ಪಿಸಲು ಸಾಧ್ಯವೇ ಎಂದು ಕೊಂಚ ತಿಳಿದುಕೊಳ್ಳುವುದು ಉತ್ತಮ.

ಅನೇಕರು ಹುಟ್ಟಿನಿಂದ ಆರೋಗ್ಯದಿಂದಿದ್ದು, ಕ್ರಮೇಣ ವಯೋಸಹಜ ಕಾಯಿಲೆಗಳಿಗೆ ತುತ್ತಾಗುತ್ತಾರೆ. ಕೆಲವರು ಜನ್ಮಜಾತ ಕಾಯಿಲೆಯಿಂದಲೋ ಅಥವಾ ಆನುವಂಶಿಕವಾಗಿ ಬರುವ ಕಾಯಿಲೆಗಳಿಂದಲೋ ಬಳಲುತ್ತಾರೆ. ಕೆಲವೇ ಕೆಲವು ಅದೃಷ್ಟಶಾಲಿಗಳು ತಮ್ಮ ಜೀವಮಾನದ ಏಳೆಂಟು ದಶಕಗಳನ್ನು ಆರೋಗ್ಯಪೂರ್ಣರಾಗಿಯೇ ಕಳೆಯುತ್ತಾರೆ. ಇದರ ಜೊತೆ ಇಂದಿನ ಕಲುಷಿತ ವಾತಾವರಣ, ಧಾವಂತದ ಜೀವನಶೈಲಿ ಮತ್ತು ಸಂಸ್ಕರಿತ ಆಹಾರಪದಾರ್ಥಗಳ ಸೇವನೆ ಅರೋಗ್ಯ-ಅನಾರೋಗ್ಯದ ನಡುವಿನ ಅಂತರವನ್ನು ಕಡಿಮೆ ಮಾಡಿಬಿಟ್ಟಿವೆ.



ಅನೇಕರಲ್ಲಿ ಕಾಯಿಲೆಗಳು ಯಾವುದೋ ಒಂದು ಹಂತದಲ್ಲಿ ದೇಹದಲ್ಲಿ ಬೀಡುಬಿಡುತ್ತವೆ. ಕ್ರಮೇಣ ಮುಂದಿನ ಹಂತಕ್ಕೆ ಬೆಳೆಯುತ್ತವೆ. ಪ್ರಾಥಮಿಕ ಹಂತದಲ್ಲಿ ಈ ಕಾಯಿಲೆಗಳು ಯಾವುದೇ ರೋಗಲಕ್ಷಣಗಳನ್ನು ಹೊಂದಿರುವುದಿಲ್ಲ. ಹಾಗಾಗಿ ಇವುಗಳ ಪತ್ತೆಯು ಕಷ್ಟ. ನಂತರ ರೋಗಲಕ್ಷಣಗಳು ಕಾಣಿಸಿಕೊಳ್ಳಲು ಆರಂಭವಾದಾಗ ಕೂಡ ಕೆಲವರು ವೈದ್ಯರ ಬಳಿ ಹೋಗಲು ಮೀನಾಮೇಷ ಎಣಿಸುತ್ತಾರೆ. ತೊಂದರೆ ಎದುರಾಗುವುದು ಇಲ್ಲಿಯೇ! ರೋಗಲಕ್ಷಣಗಳು ಕಾಣಿಸಿಕೊಳ್ಳುವ ಮುನ್ನವೇ ಕಾಯಿಲೆಗಳನ್ನು ಪತ್ತೆಮಾಡಿ ಸೂಕ್ತಚಿಕಿತ್ಸೆ ನೀಡಿ ಗುಣಪಡಿಸುವಂತಿದ್ದರೆ ಎಷ್ಟು ಚೆನ್ನವಲ್ಲವೇ?

ಹಿಂದೆ ಕಾಡುತ್ತಿದ್ದ ಟಿಬಿ, ಕುಷ್ಠರೋಗ, ಕಾಲರಾ ಮತ್ತು ಅಯೋಡಿನ್ ಕೊರತೆಯಂತಹ ರೋಗಗಳು ವಿರಳವಾಗಿರುವುದರಿಂದ ಜೀವನಶೈಲಿ ಸಂಬಂಧಿತ ರೋಗಗಳು ಈಗ ಮುಂಚೂಣಿಗೆ ಬಂದಿವೆ. ಬಿಪಿ, ಮಧುಮೇಹ, ಬೊಜ್ಜು, ಕ್ಯಾನ್ಸರ್ ಮತ್ತು ಆಸ್ತಮಾದಂತಹ ಕಾಯಿಲೆಗಳು ಈಗ ಜನರನ್ನು ಹೆಚ್ಚು ಕಾಡುತ್ತಿವೆ. ಇವುಗಳಲ್ಲಿ ಬಹುತೇಕ ಕಾಯಿಲೆಗಳು ತಲೆಮಾರಿನಿಂದ ತಲೆಮಾರಿಗೆ ದಾಟಿಬರುತ್ತವೆ. ನಾವು ಕೆಲವೊಂದು ತಪಾಸಣೆಗಳನ್ನು ಮಾಡಿಸುವ ಮೂಲಕ ಈ ಕಾಯಿಲೆಗಳನ್ನು ಪ್ರಾಥಮಿಕ ಹಂತದಲ್ಲೇ ಪತ್ತೆಮಾಡಿ ಚಿಕಿತ್ಸೆ ನೀಡಬಹುದು. ಆಹಾರ, ವ್ಯಾಯಾಮ, ಜೀವನಶೈಲಿ ಬದಲಾವಣೆ ಅಥವಾ ಕೆಲವೇ ಮಾತ್ರೆಗಳಿಂದ ರೋಗವನ್ನು ಗುಣಪಡಿಸಬಹುದು ಅಥವಾ ಹದ್ದುಬಸ್ತಿನಲ್ಲಿಡಬಹುದು. ಅನೇಕ ಆಸ್ಪತ್ರೆಗಳಲ್ಲಿ ಆರೋಗ್ಯ ತಪಾಸಣೆಗೆಂದೇ ವಿವಿಧ ಪ್ಯಾಕೇಜುಗಳು ಇರುತ್ತವೆ.

ಈ ಮುಂಜಾಗ್ರತಾ ತಪಾಸಣೆಗಳನ್ನು ಎರಡು ರೀತಿ ವರ್ಗೀಕರಿಸಬಹುದು. ಕುಟುಂಬದಲ್ಲಿ ಈಗಾಗಲೇ ಯಾವುದೇ ಆರೋಗ್ಯಸಮಸ್ಯೆಗಳಿಂದ ಬಳಲುತ್ತಿರುವವರಿಗಾಗಿ. ಮೊದಲನೇ ವರ್ಗದ ಆರೋಗ್ಯವಂತ ಜನರು ಸುಮಾರು 40 ವರ್ಷದವರೆಗೆ ಯಾವುದೇ ಮುಂಜಾಗೃತಾ ತಪಾಸಣೆಗಳನ್ನು ಮಾಡಿಸಿಕೊಳ್ಳುವ ಅವಶ್ಯಕತೆಯಿಲ್ಲ. 40 ವರ್ಷದ ನಂತರ ವರ್ಷಕ್ಕೊಮ್ಮೆ ತೂಕ, ಬಿಪಿ ಮತ್ತು ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ಪರೀಕ್ಷಿಸಿಕೊಂಡರೆ ಸಾಕು. ಸಂದರ್ಭನುಸಾರ ಕೆಲವೊಮ್ಮೆ ತಜ್ಞವೈದ್ಯರ ಸಲಹೆಯ ಪ್ರಕಾರ ಕಣ್ಣಿನ ಪರೀಕ್ಷೆ ಮತ್ತು ಇಸಿಜಿ ಬೇಕಾಗಬಹುದು. ಅದೇ ರೀತಿ ಸ್ತ್ರೀಯರು ಗರ್ಭಕೋಶದ ಕೊರಳಿನ ಕ್ಯಾನ್ಸರನ್ನು ತಡೆಗಟ್ಟಲು 3 ವರ್ಷಕ್ಕೊಮ್ಮೆ PAP ಪರೀಕ್ಷೆಯೊಂದನ್ನು ಮಾಡಿಸಿಕೊಳ್ಳಬೇಕು.

ಇನ್ನು ಎರಡನೆಯ ವರ್ಗಕ್ಕೆ ಬಂದರೆ ಇವರ ಸಂಖ್ಯೆಯೇ ಈಗ ಹೆಚ್ಚು. ಸಂಪೂರ್ಣ ಆರೋಗ್ಯವಂತ ತುಂಬುಕುಟುಂಬವನ್ನು ಹುಡುಕುವುದು ಸಾವಿಲ್ಲದ ಮನೆಯಿಂದ ಸಾಸಿವೆ ತಂದಂತೆಯೇ! ಇನ್ನೂ ಕಾಯಿಲೆಗೆ ಸಿಲುಕದ ಯುವಪೀಳಿಗೆಯನ್ನು ಸಂರಕ್ಷಿಸುವುದೇ ಈ ಮುಂಜಾಗ್ರತಾ ತಪಾಸಣೆಗಳನ್ನು ಮಾಡಿಸುವ ಮುಖ್ಯ ಉದ್ದೇಶ.

ಇಲ್ಲಿಯೂ ಕೂಡ ಸುಮಾರು 30 ವರ್ಷದೊಳಗಿನ ಸಂಪೂರ್ಣ ಆರೋಗ್ಯವಂತ ಯುವಪೀಳಿಗೆ ಯಾವುದೇ ಪರೀಕ್ಷೆಗಳನ್ನು ಮಾಡಿಸಿಕೊಳ್ಳುವ ಅವಶ್ಯಕತೆ ಇಲ್ಲ. ಆದರೆ ನಂತರದ ವರ್ಷಗಳಲ್ಲಿ ಅವರ ಕುಟುಂಬದಲ್ಲಿ ಈಗಾಗಲೇ ಕಾಣಿಸಿಕೊಂಡಿರುವ ಕಾಯಿಲೆಯ ಆಧಾರದ ಮೇಲೆ ಕೆಲವು ಪರೀಕ್ಷೆಗಳನ್ನು ಮಾಡಿಸಿಕೊಳ್ಳಬೇಕಾಗುತ್ತದೆ. ಉದಾಹರಣೆಗೆ, ಹಿರಿಯರಲ್ಲಿ ಬಿಪಿ ಅಥವಾ ಹೃದಯಸಂಬಂಧಿ ಕಾಯಿಲೆ ಇದ್ದಲ್ಲಿ ಅವರ ಮಕ್ಕಳು ಕೂಡ ಮೇಲೆ ತಿಳಿಸಿದಂತೆ ಕಾಲಕಾಲಕ್ಕೆ ತೂಕ, ಬಿಪಿ ಮತ್ತು ಕೆಲವೊಮ್ಮೆ ಇಸಿಜಿ ಪರೀಕ್ಷೆಗಳನ್ನು ಮಾಡಿಸಿಕೊಳ್ಳಬೇಕಾಗುತ್ತದೆ. ಕಾನ್ಸರ್ ಪೀಡಿತರ ಮಕ್ಕಳಿಗೂ ಮುಂಜಾಗ್ರತೆಯಾಗಿ ಕೆಲವು ತಪಾಸಣೆಗಳನ್ನು ಮಾಡಿಸಬಹುದು. ಪಾಶ್ಚಾತ್ಯ ದೇಶಗಳಲ್ಲಿ ‘ಜೀನೋಮ್ ಸೀಕ್ವೆನ್ಸಿಂಗ್’ ಎಂಬ ಪರೀಕ್ಷೆಯನ್ನು ಮಕ್ಕಳಲ್ಲಿ ಮಾಡಿ, ಅವರ ಆಯುಸ್ಸು ಮತ್ತು ಅವರಿಗೆ ಮುಂದೆ ಬರಬಹುದಾದ ಕೆಲವು ಕಾಯಿಲೆಗಳನ್ನು ಅಂದಾಜಿಸಿ, ಅವುಗಳನ್ನು ತಡೆಗಟ್ಟುವ ಜೀವನಶೈಲಿಯನ್ನು ಕಲಿಸುತ್ತಾರೆ.

ರೋಗಗಳು ಬರದಂತೆ ತಡೆಗಟ್ಟುವಲ್ಲಿ ಆಹಾರ, ವ್ಯಾಯಾಮ ಮತ್ತು ಸಕ್ರಿಯ ಜೀವನಶೈಲಿಯ ಮಹತ್ವವನ್ನು ಯಾರೂ ಅಲ್ಲಗಳೆಯಲಾರರು. ಹೀಗಿದ್ದರೂ ಈ ಮುಂಜಾಗ್ರತಾ ಪರೀಕ್ಷೆಗಳು ನಮ್ಮನ್ನು ರೋಗಪತ್ತೆಯಲ್ಲಿ ಒಂದು ಹೆಜ್ಜೆ ಮುಂದಿರುವಂತೆ ನೋಡಿಕೊಳ್ಳುತ್ತವೆ.

❖

ಪಿಯುಸಿ– ಸಿಇಟಿ ಪರೀಕ್ಷೆ ದಿಕ್ಸೂಚಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

PHYSICS

91) In the diagram, I_1, I_2 are the strength of the currents in the loop and straight conductors respectively. $OA = AB = R$. The net magnetic field at the centre O is zero. Then the ratio of the currents in the loop and the straight conductors is



(a) π (b) 2π (c) $\frac{1}{\pi}$ (d) $\frac{1}{2\pi}$

Ans:- (d)

Expln- Given that the net magnetic field at the centre O is zero. Therefore, magnetic field at O due to circular coil and straight conductor must be equal and opposite in direction.

$$\therefore \frac{\mu_0 I_1}{2R} = \frac{\mu_0 I_2}{2\pi(2R)} \Rightarrow \frac{I_1}{I_2} = \frac{1}{2\pi}$$

92) When an additional charge of 2C is given to a capacitor, energy stored in it is increased by 21%. The original charge of the capacitor is ……….

(a) 30C (b) 40 C
(c) 10 C (d) 20 C

Ans:- (d)

Expln– Energy stored by a capacitor, $U = \frac{1}{2}\frac{q^2}{C}$

So, here $U_1 = \frac{1}{2}\frac{q_1^2}{C}$; $U_2 = \frac{1}{2}\frac{q_2^2}{C}$

$\therefore \frac{U_1}{U_2} = \left(\frac{q_1}{q_2}\right)^2 = \left(\frac{q}{q+2}\right)^2$

Given, $\frac{U_2 - U_1}{U_1} = 0.21$

(or) $\frac{U_2}{U_1} = 1.21 \Rightarrow \left(\frac{q}{q+2}\right)^2 = 1.21$

On solving we get $q = 20$ C

93) Masses of three wires of copper are in the ratio of 1 : 3 : 5 and their lengths are in the ratio of 5 : 3 : 1. The ratio of their electrical resistances is

(a) 1 : 3 : 5 (b) 5 : 3 : 1
(c) 1 : 15 : 125 (d) 125 : 15 : 1

Ans:- (d)

Expln- Given, $m_1 : m_2 : m_3 = 1 : 3 : 5$ and $l_1 : l_2 : l_3 = 5 : 3 : 1$

We know that, electrical resistance,

$R = \rho\frac{l}{A}$ and $d = \frac{m}{V} = \frac{m}{Al}$ (or) $A = \frac{m}{dl}$

$\Rightarrow A \alpha \frac{m}{l}$ ($\because$ *density is same for the 3 wires*)

$\therefore R_1 : R_2 : R_3 = \frac{l_1}{A_1} : \frac{l_2}{A_2} : \frac{l_3}{A_3}$

(or) $R_1 : R_2 : R_3 = \frac{l_1^2}{m_1} : \frac{l_2^2}{m_2} : \frac{l_3^3}{m_3} = \frac{25}{1} : \frac{9}{3} : \frac{1}{5}$

$\Rightarrow R_1 : R_2 : R_3 = 125 : 15 : 1$

94) A and B are the two radioactive elements. The mixtures of these elements show a total activity of 1200 disintergrations/minute. The half-life of A is 1 day and that of B is 2 days. What will be the total activity after 4 days?

(Given, the initial number of atoms in A and B are equal)

(a) 200 dis/min (b) 250 dis/min
(c) 500 dis/min (d) 150 dis/min

Ans:- (d)

Expln– We have, $A = \lambda(N) = \frac{0.693}{T_{1/2}}(N)$

Initial number of atoms in A and B are same

$\therefore A_0 \alpha \frac{1}{T_{1/2}}$

$\Rightarrow \frac{A_0(A)}{A_0(B)} = \frac{48\text{ hr}}{24\text{ hr}} = 2$

Also, $A_0(A) + A_0(B) = 1200$

$\Rightarrow 3A_0(B) = 1200$

$\Rightarrow A_0(B) = 400$ and $A_0(A) = 800$

So, $A(A) = \frac{A_0(A)}{2^2} = \frac{800}{16} = 50$

and $A(B) = \frac{A_0(B)}{(2)^2} = \frac{400}{4} = 100$

Hence, total activity after 4 days is $= A_0(A) + A_0(B) = 50 + 100 = 150$ dis/min.

95) From a fixed support, two small identical spheres are suspended by means of strings of length 1 m each. They are pulled aside as shown and then released. B is the mean position. Then the two spheres collide



(a) At B after 0.25 s
(b) At B after 0.5 s
(c) On the right side of B after some time
(d) On the right side of B when the strings are inclined at 15^0 with B

Ans:- (b)

MATHEMATICS

MULTIPLE CHOICE QUESTIONS

99) In a class of 60 students, 25 students play cricket and 20 students play tennis and 10 students play both the games, then the number of students who play neither is……….

a) 45 b) 0
c) 25 d) 35

Ans:- c

Expln- Total number of students, (N) = 60

Let $n(C)$ be the number of students who play cricket and $n(T)$ be the number of students who play tennis.

$\therefore n(C) = 25, n(T) = 20, n(C \cap T) = 10$

So, $n(C \cup T) = n(C) + n(T) - n(T \cap C) = 25 + 20 - 10 = 35$

Now, number of students who play neither game = $n(C \cup T)' = N - n(C \cup T) = 60 - 35 = 25$

100) The value of the integral

$$\int_{-\pi/4}^{\pi/4} \log(\sec\theta - \tan\theta)d\theta \text{ is}$$

a) 0 b) $\frac{\pi}{4}$ c) π d) $\frac{\pi}{2}$

Ans:- a

Expln– Let $I = \int_{-\pi/4}^{\pi/4} \log(\sec\theta - \tan\theta)\,d\theta$

$\Rightarrow I = \int_{-\pi/4}^{\pi/4} \log(1-\sin\theta)\,d\theta - \int_{-\pi/4}^{\pi/4} \log\cos\theta\,d\theta$ ……..(1)

$\Rightarrow I = \int_{-\pi/4}^{\pi/4} \log\left(1-\sin\left(\frac{\pi}{4}-\frac{\pi}{4}-\theta\right)\right)d\theta - \int_{-\pi/4}^{\pi/4} \log\cos\left(\frac{\pi}{4}-\frac{\pi}{4}-\theta\right)d\theta$

$\Rightarrow \int_{-\pi/4}^{\pi/4} \log(1+\sin\theta)d\theta - \int_{-\pi/4}^{\pi/4} \log\cos\theta\,d\theta$ …….(2)

Adding (1) and (2), we get

$2I = \int_{-\pi/4}^{\pi/4} \log(1-\sin^2\theta)d\theta - \int_{-\pi/4}^{\pi/4} \log(\cos^2\theta)d\theta = 0$

101) Consider the following statements:

(i) If any two rows or columns of a determinant are identical, then the value of the determinant is zero.
(ii) If the corresponding rows and columns of a determinant are interchanged, then the value of the determinant does not change.
(iii) If any two rows (or columns) of a determinant are interchanged, then the value of the determinant changes in sign.

Which of these are correct?

a) (i) and (iii) b) (i) and (ii)
c) (i), (ii) and (iii) d) (ii) and (iii)

Ans:- c;

102) A straight line passes through the points (5, 0) and (0, 3). The length of perpendicular from the point (4, 4) on the line is

a) $\frac{15}{\sqrt{34}}$ b) $\frac{\sqrt{17}}{2}$
c) $\frac{17}{2}$ d) $\sqrt{\frac{17}{2}}$

Ans:- d;

Expln- Equation of line passing through (5, 0) and (0, 3) is

$y - 3 = \frac{-3}{5}(x - 0)$

$\Rightarrow 5y - 15 = -3x$

$\Rightarrow 3x + 5y - 15 = 0$ ………………(1)

Now, perpendicular distance

$= \left|\frac{4\times3+4\times5-15}{\sqrt{9+25}}\right| = \left|\frac{12+20-15}{\sqrt{34}}\right| = \sqrt{\frac{17}{2}}$

103) Equation of circle with centre (-a, -b) and radius $\sqrt{a^2-b^2}$ is

a) $x^2 + y^2 + 2ax + 2by + 2b^2 = 0$
b) $x^2 + y^2 - 2ax - 2by - 2b^2 = 0$
c) $x^2 + y^2 - 2ax - 2by + 2b^2 = 0$
d) $x^2 + y^2 - 2ax + 2by + 2a^2 = 0$

Ans:- a;

Expln- Equation of circle is

$(x+a)^2 + (y+b)^2 = \left(\sqrt{a^2-b^2}\right)^2$

$\Rightarrow x^2 + a^2 + 2ax + y^2 + b^2 + 2by = a^2 - b^2$

$\Rightarrow x^2 + y^2 + 2ax + 2by + 2b^2 = 0$

104) If the coefficient of variation and standard deviation are 60 and 21 respectively, the arithmetic mean of distribution is…….

a) 60 b) 30
c) 35 d) 21

Ans:- c;

Expln– We know that, C.V. $= \frac{\sigma}{\bar{x}} \times 100$

$\Rightarrow 60 = \frac{21}{\bar{x}} \times 100 \Rightarrow \bar{x} = 35$

105) The equation of a hyperbola whose asymptotes are $3x \pm 5y = 0$ and vertices are(±5, 0) is

a) $9x^2 - 25y^2 = 225$ b) $25x^2 - 9y^2 = 225$
c) $5x^2 - 3y^2 = 225$ d) $3x^2 - 5y^2 = 25$

Ans:- a;

106) If A, B, C are the vertices of a triangle whose position vectors are $\vec{a}$, $\vec{b}$, $\vec{c}$ and G is the centroid of the Δ ABC, then $\overrightarrow{GA} + \overrightarrow{GB} + \overrightarrow{GC} =$

a) $\frac{\vec{a}+\vec{b}+\vec{c}}{3}$ b) $\frac{\vec{a}+\vec{b}+\vec{c}}{2}$
c) $\vec{0}$ d) $\vec{a}+\vec{b}+\vec{c}$

Ans:- c;

ಆಂಧ್ರಪ್ರದೇಶದ ಕಡಪಾ ಜಿಲ್ಲೆಯ ಚಿತ್ರಾವತಿ ಸೇತುವೆ ಸಮೀಪ ಅಪಘಾತ

ಲಾರಿ– ಕ್ರೂಸರ್ ಡಿಕ್ಕಿ: 7 ಜನ ಸಾವು

ಪ್ರಜಾವಾಣಿ ವಾರ್ತೆ

ಕಂಪ್ಲಿ: ಆಂಧ್ರಪ್ರದೇಶದ ಕಡಪಾ ಜಿಲ್ಲೆಯ ಕೊಂಡಾಪುರ ಮಂಡಲದ ಏಟೂರು ಗ್ರಾಮದ ಚಿತ್ರಾವತಿ ಸೇತುವೆ ಸಮೀಪ ಅದಿರು ಸಾಗಿಸುತ್ತಿದ್ದ ಲಾರಿ ಮತ್ತು ಕ್ರೂಸರ್ ವಾಹನದ ನಡುವೆ ಸೋಮವಾರ ನಸುಕಿನಲ್ಲಿ ಸಂಭವಿಸಿದ ಅಪಘಾತದಲ್ಲಿ ನಾಲ್ವರು ಸಹೋದರಿಯರು, ಕ್ರೂಸರ್ ಚಾಲಕ ಸೇರಿ ಏಳು ಜನರು ಮೃತಪಟ್ಟಿದ್ದಾರೆ.

ಮೃತರನ್ನು ಕಂಪ್ಲಿಯ ಲಕ್ಷ್ಮಿದೇವಿ, ಅವರ ಸಹೋದರಿಯರಾದ, ಬಳ್ಳಾರಿಯ ಸುಭದ್ರ, ಕಡಪಾ ಜಿಲ್ಲೆಯ ಕೊಂಡಾಪುರಂನವರಾದ ಸುಮಾ, ಪದ್ಮಕ್ಕ ಮತ್ತು ಪದ್ಮಕ್ಕನ ಪುತ್ರ ದಿಲೀಪ್ ಕುಮಾರ್ ರೆಡ್ಡಿ ಮತ್ತು ಸುನಿಲ್ ಕುಮಾರ್ ಎಂದು ಗುರುತಿಸಲಾಗಿದೆ. ಕ್ರೂಸರ್ ಚಾಲಕನ ಹೆಸರು ತಿಳಿದು ಬಂದಿಲ್ಲ.

ಲಕ್ಷ್ಮಿದೇವಿ ಅವರ ಪುತ್ರಿಯರಾದ ಮೇಘನಾ ರೆಡ್ಡಿ ಮತ್ತು ಶಿಲ್ಪಾ ರೆಡ್ಡಿ ಅಪಘಾತದಲ್ಲಿ ಗಾಯಗೊಂಡಿದ್ದು, ಅನಂತಪುರದ ಕಿಮ್ಸ್ ಸವೇರಾ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಪಘಾತದಲ್ಲಿ ನಜ್ಜುಗುಜ್ಜಾದ ಕ್ರೂಸರ್ ವಾಹನ

ಕ್ರೂಸರ್‌ನಲ್ಲಿ ಪ್ರಯಾಣಿಸುತ್ತಿದ್ದ 15 ಜನ ತಿರುಪತಿ ತಿಮ್ಮಪ್ಪ ದರ್ಶನ ಮುಗಿಸಿಕೊಂಡು ತಾಡಪತ್ರಿ ಕಡೆಗೆ ಹಿಂತಿರುಗುತ್ತಿದ್ದಾಗ ಬೆಳಗಿನ ಜಾವ 5.30ರ ಸುಮಾರಿಗೆ ಈ ಘಟನೆ ನಡೆದಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪ್ರಕರಣ ದಾಖಲಾಗಿದ್ದು, ತನಿಖೆ ನಡೆಯುತ್ತಿದೆ.

ಹಳಿ ತಪ್ಪಿದ ಡಬಲ್ ಡೆಕ್ಕರ್ ರೈಲು: ಪ್ರಯಾಣಿಕರು ಸುರಕ್ಷಿತ

ಕೆಜಿಎಫ್: ಚೆನ್ನೈನಿಂದ ಬೆಂಗಳೂರಿಗೆ ಹೊರಟಿದ್ದ ಚೆನ್ನೈ–ಬೆಂಗಳೂರು ಡಬಲ್ ಡೆಕ್ಕರ್ ಎಕ್ಸ್‌ಪ್ರೆಸ್ ರೈಲು ಸೋಮವಾರ ಕೋಲಾರ ಜಿಲ್ಲೆ ಗಡಿ ಭಾಗದ ಬಿಸಾನತ್ತಂ ರೈಲ್ವೆ ನಿಲ್ದಾಣದ ಬಳಿ ಹಳಿ ತಪ್ಪಿದೆ. ಎಲ್ಲ ಪ್ರಯಾಣಿಕರೂ ಸುರಕ್ಷಿತವಾಗಿದ್ದಾರೆ.

ಬೆಳಿಗ್ಗೆ ಸುಮಾರು 11.30ರ ವೇಳೆಯಲ್ಲಿ ಹಳಿ ತಪ್ಪಿದ್ದನ್ನು ಗಮನಿಸಿದ ಲೋಕೊ ಪೈಲಟ್, ರೈಲು ನಿಲ್ಲಿಸಿ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದು, ಅನಾಹುತ ತಪ್ಪಿದೆ.

ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ಬಿಸಾನತ್ತಂ ರೈಲು ನಿಲ್ದಾಣವು ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲ್ಲೂಕಿನಿಂದ 20 ಕಿ.ಮೀ ದೂರದಲ್ಲಿದೆ.

ಹಿಂಬದಿಯಿಂದ ಎರಡನೇ ಬೋಗಿಯ ಎರಡು ಚಕ್ರಗಳು ಹಳಿ ಬಿಟ್ಟು ಬದಿಗೆ ಸರಿದಿದ್ದವು ಎಂಬುದು ಗೊತ್ತಾಗಿದೆ. ಆ ಬೋಗಿಯಲ್ಲಿ ಸುಮಾರು 130 ಜನರಿದ್ದರು. ಅವರನ್ನು ಬೇರೆ ಬೋಗಿಗೆ ಸ್ಥಳಾಂತರಿಸಲಾಯಿತು. ನಂತರ ಅಧಿಕಾರಿಗಳು, ಸಿಬ್ಬಂದಿ ಹಾಗೂ ರೈಲ್ವೆ ವಿಪತ್ತು ನಿರ್ವಹಣಾ ತಂಡದವರು (ಎಆರ್‌ಟಿ) ಸ್ಥಳಕ್ಕೆ ಧಾವಿಸಿ ಸರಿಪಡಿಸಿದ್ದಾರೆ. ರೈಲು ಮಧ್ಯಾಹ್ನ 1.30ಕ್ಕೆ ಬೆಂಗಳೂರಿಗೆ ತಲುಪಬೇಕಿತ್ತು. ಆದರೆ, ತಡವಾಗಿ ಇಲ್ಲಿಂದ ಬೆಂಗಳೂರಿನತ್ತ ತೆರಳಿತು.

4 ಕರು ಸೇರಿ 22 ಎಮ್ಮೆ ಸಾವು

ಗೂಡ್ಸ್ ರೈಲು ಡಿಕ್ಕಿ– ಹಳಿಗುಂಟ ಬಿದ್ದಿದ್ದ ಮೃತದೇಹಗಳು

ಪ್ರಜಾವಾಣಿ ವಾರ್ತೆ

ಮಂಗಳೂರು: ನಗರ ಹೊರ ವಲಯದ ಜೋಕಟ್ಟೆ ಅಂಗರಗುಂಡಿ ಬಳಿ ಸರಕು ಸಾಗಣೆ ರೈಲು ಡಿಕ್ಕಿ ಹೊಡೆದು ನಾಲ್ಕು ಕರುಗಳು ಸೇರಿ 22 ಬಿಡಾಡಿ ಎಮ್ಮೆಗಳು ಸೋಮವಾರ ನಸುಕಿನಲ್ಲಿ ಮೃತಪಟ್ಟಿವೆ.

ಇಲ್ಲಿ ರೈಲು ಹಳಿಯ ಉದ್ದಕ್ಕೂ ಅಲ್ಲಲ್ಲಿ ಎಮ್ಮೆಗಳ ಮೃತದೇಹಗಳು ಕಂಡು ಬಂದಿವೆ. ರೈಲು ಹಳಿಯಲ್ಲೂ ಕೆಲವೆಡೆ ಮಾಂಸದ ಮುದ್ದೆಗಳು ಬಿದ್ದಿವೆ. ಹಳಿಯ ಪಕ್ಕದಲ್ಲಿದ್ದ ಐದು ಎಮ್ಮೆಗಳನ್ನಷ್ಟೇ ಸಂಜೆ ವರೆಗೆ ಹೂಳಲಾಗಿದೆ. 'ಇನ್ನು 15ಕ್ಕೂ ಹೆಚ್ಚು ಎಮ್ಮೆಗಳ ಶವ ಹಾಗೆಯೇ ಇದ್ದು, ದುರ್ನಾತ ಬೀರುತ್ತಿದೆ' ಎಂದು ಸ್ಥಳೀಯರು ದೂರಿದ್ದಾರೆ.

ರೈಲ್ವೆ ಅಧಿಕಾರಿಗಳು ಸ್ಥಳಕ್ಕೆ ಬರಬೇಕೆಂದು ಸಾರ್ವಜನಿಕರು ರಾತ್ರಿವರೆಗೂ ಪಟ್ಟುಹಿಡಿದಿದ್ದರು. ರೈಲ್ವೆ ಅಧಿಕಾರಿ ಸ್ಥಳಕ್ಕೆ ಭೇಟಿ ನೀಡಿದಾಗ ಅವರ ವಿರುದ್ಧ ಘೋಷಣೆ ಕೂಗಿದರು.

'ನಸುಕಿನಲ್ಲಿ ಗೂಡ್ಸ್ ರೈಲು ನಿಧಾನವಾಗಿ ಚಲಿಸುತ್ತಿತ್ತು, ಸ್ಥಳಕ್ಕೆ ಹೋಗಿ ನೋಡಿದಾಗ ಎಮ್ಮೆಗಳು ಸತ್ತಿರುವುದು ಕಂಡು ಬಂತು. ಸಿಗ್ನಲ್ ನಿಂದ ಪಣಂಬೂರಿಗೆ ಸರಕು ಸಾಗಣೆ ರೈಲು ಸಾಗುವ ಹಳಿಯಲ್ಲಿ ಎಮ್ಮೆಗಳು ಮಲಗಿದ್ದಾಗ ರೈಲು ಹಾದು ಹೋಗಿರಬಹುದು' ಎಂದು ಸ್ಥಳೀಯರೊಬ್ಬರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

'ರೈಲು ಹಳಿಯ ಪಕ್ಕದಲ್ಲಿ ಬಿದ್ದಿದ್ದ ಕೆಲವು ಎಮ್ಮೆಗಳ ಮೃತದೇಹವನ್ನು ಜೆಸಿಬಿಯಿಂದ ಗುಂಡಿ ತೆಗೆದು ಹೂತಿದ್ದೇವೆ. ಜೆಸಿಬಿ ತಲುಪಲು ಸಾಧ್ಯವಾಗದ ಕಡೆ ಮೃತದೇಹಗಳಿವೆ. ಇಲ್ಲಿನ ಸೇತುವೆಯ ಕೆಳಗಿನ ಹಳ್ಳದಲ್ಲೂ ಮೃತದೇಹ ಬಿದ್ದಿವೆ. ಅವುಗಳನ್ನು ವಿಲೇ ಮಾಡಲು ಸಾಧ್ಯವಾಗಿಲ್ಲ' ಎಂದು ಪಾಲಿಕೆ ಸದಸ್ಯೆ ಸುಮಿತ್ರ ಕರಿಯ 'ಪ್ರಜಾವಾಣಿ'ಗೆ ತಿಳಿಸಿದರು.

'ಸೋಮವಾರ ನಸುಕಿನಲ್ಲೇ ಎಮ್ಮೆಗಳು ಸತ್ತಿದ್ದರೂ ಸಂಜೆ ವರೆಗೂ ಅವುಗಳನ್ನು ವಿಲೇ ಮಾಡಲು ಸಾಧ್ಯವಾಗಿಲ್ಲ. ಕನಿಷ್ಠ ಪಕ್ಷ ಮೃತ ದೇಹಗಳನ್ನು ತಂದು ಒಂದೆಡೆ ಹಾಕಿದರೆ ಸ್ಥಳೀಯರೇ ಅವುಗಳನ್ನು ವಿಲೇವಾರಿ ಮಾಡಲಿದ್ದಾರೆ' ಎಂದು ಡಿವೈಎಫ್‌ಐ ಮುಖಂಡ ಬಿ.ಕೆ.ಇಮ್ತಿಯಾಜ್ ತಿಳಿಸಿದರು.

'ಸ್ಥಳಕ್ಕೆ ಇಲಾಖೆಯ ಅಧಿಕಾರಿಗಳು ಭೇಟಿ ನೀಡಿದ್ದಾರೆ. ಗಾಯಗೊಂಡಿದ್ದ ಎಮ್ಮೆಗಳಲ್ಲಿ ಒಂದನ್ನು ಮಾತ್ರ ಬದುಕಿಸಿ ಕೊಳ್ಳಲು ಸಾಧ್ಯವಾಗಿದೆ. ಅದನ್ನು ಗೋಶಾಲೆಗೆ ರವಾನಿಸಲು ಕ್ರಮ ಕೈಗೊಂಡಿದ್ದೇವೆ' ಎಂದು ಪಶುಪಾಲನಾ ಇಲಾಖೆಯ ದಕ್ಷಿಣ ಕನ್ನಡ ಜಿಲ್ಲಾ ಉಪನಿರ್ದೇಶಕ ಡಾ.ಅರುಣ್ ಕುಮಾರ್ ಶೆಟ್ಟಿ ತಿಳಿಸಿದರು. 2021ರಲ್ಲೂ ಇದೇ ರೀತಿ ಅವಘಡ ಸಂಭವಿಸಿ 13 ಎಮ್ಮೆಗಳು ಸತ್ತಿದ್ದವು. ಈ ಪ್ರದೇಶದಲ್ಲಿ ನೂರಾರು ಬಿಡಾಡಿ ಎಮ್ಮೆಗಳಿವೆ. ಇಂತಹ ಅವಘಡಗಳು ಮತ್ತೆ ಘಟಿಸದಂತೆ ಇಲಾಖೆಯವರು ಕ್ರಮಕೈಗೊಳ್ಳಬೇಕು' ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ಆಂಬುಲೆನ್ಸ್‌ನಲ್ಲೇ ಅವಳಿಗೆ ಜನ್ಮ

ಕೋಲಾರ: ಆಸ್ಪತ್ರೆಗೆ ಕರೆದೊಯ್ಯುತ್ತಿದ್ದ ವೇಳೆ ಗರ್ಭಿಣಿಯೊಬ್ಬರು ಆಂಬುಲೆನ್ಸ್‌ನ-ಲ್ಲಿಯೇ ಅವಳಿ ಮಕ್ಕಳಿಗೆ ಜನ್ಮ ನೀಡಿದರು. ಮಾಲೂರು ತಾಲ್ಲೂಕಿನ ಕನವನಹಳ್ಳಿ ಗ್ರಾಮದ ನಿವಾಸಿ ಸುಜಾತಾ (ಪುಟುಲಿ) ಅವರಿಗೆ ಸೋಮವಾರ ಬೆಳಿಗ್ಗೆ ಹೆರಿಗೆ ನೋವು ಕಾಣಿಸಿಕೊಂಡಿತ್ತು. ನಂತರ ಪತಿ 108 ಆಂಬು ಲೆನ್ಸ್‌ನಲ್ಲಿ ಎಸ್‌ಎನ್‌ಆರ್ ಜಿಲ್ಲಾಆಸ್ಪತ್ರೆಗೆ ಕರೆದುಕೊಂಡು ಹೋದರು.

ಅಲ್ಲಿನ ಸಿಬ್ಬಂದಿ ತುರ್ತು ಚಿಕಿತ್ಸೆಗಾಗಿ ಆರ್.ಎಲ್.ಜಾಲಪ್ಪ ಆಸ್ಪತ್ರೆಗೆ ಕರೆದೊಯ್ಯುವಂತೆ ಹೇಳಿದ್ದಾರೆ. ಜಾಲಪ್ಪ ಆಸ್ಪತ್ರೆಗೆ ಹೋಗುತ್ತಿರುವಾಗ ಸುಜಾತಾ ಅವರಿಗೆ ಹೆರಿಗೆ ನೋವು ಹೆಚ್ಚಿದೆ. ತಕ್ಷಣ ಶುಶ್ರೂಷಕ ಹರೀಶ್ ಮತ್ತು ಚಾಲಕ ಕರಿಯಪ್ಪ ಆಂಬುಲೆನ್ಸ್‌ನಲ್ಲಿಯೇ ಸುರಕ್ಷಿತವಾಗಿ ಹೆರಿಗೆ ಮಾಡಿಸಿದರು. ಸುಜಾತಾ ಅವಳಿ ಹೆಣ್ಣು ಮಕ್ಕಳಿಗೆ ಜನ್ಮ ನೀಡಿದ್ದಾರೆ. ಅವರನ್ನು ಜಾಲಪ್ಪ ಆಸ್ಪತ್ರೆಗೆ ದಾಖಲಿಸಲಾಗಿದೆ.

5 ತಾಸು ಅನಾಥವಾಗಿ ಬಿದ್ದಿದ್ದ ಶವ

ಕೊಳ್ಳೇಗಾಲ (ಚಾಮರಾಜನಗರ ಜಿಲ್ಲೆ): ತಾಲ್ಲೂಕಿನ ಪಾಳ್ಯ ಗ್ರಾಮದಲ್ಲಿ ಶವ ಸಂಸ್ಕಾರಕ್ಕೆ ತೆರಳಿದವರ ಹೆಜ್ಜೇನು ದಾಳಿ ಮಾಡಿದ್ದರಿಂದ ಶವವನ್ನು ಅಲ್ಲಿಯೇ ಬಿಟ್ಟು ದಿಕ್ಕಾಪಾಲಾಗಿ ಓಡಿದ ಘಟನೆ ನಡೆದಿದೆ. ಹೀಗಾಗಿ ಐದು ಗಂಟೆಗಳವರೆಗೆ ಶವ ರಸ್ತೆಯಲ್ಲೇ ಅನಾಥವಾಗಿ ಬಿದ್ದಿತ್ತು.

ಹೆಜ್ಜೇನುಗಳ ಕಡಿತದಿಂದ 25 ಮಂದಿ ಗಾಯಗೊಂಡಿದ್ದು, ನಗರದ ಸರ್ಕಾರಿ ಉಪವಿಭಾಗ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದಾರೆ.

ಪಾಳ್ಯ ಗ್ರಾಮದಲ್ಲಿ ರಾಜಮ್ಮ ಎಂಬುವರು ತೀರಿಕೊಂಡಿದ್ದರು. ಶವ ಸಂಸ್ಕಾರಕ್ಕಾಗಿ ಮಾವಿನ ತೋಟಕ್ಕೆ ಸಂಬಂಧಿಕರು ಹಾಗೂ ಗ್ರಾಮಸ್ಥರು ಹೋಗಿದ್ದರು. ಆಗ ಹೆಜ್ಜೇನುಗಳು ಜನರ ಮೇಲೆ ದಾಳಿ ಮಾಡಿವೆ. ಇದರಿಂದ, ಜನರು ಶವವನ್ನು ಸ್ಥಳದಲ್ಲೇ ಬಿಟ್ಟು ದಿಕ್ಕಾಪಾಲಾಗಿ ಓಡಿದರು. ಒಬ್ಬರ ದೇಹದಲ್ಲಿ 20ಕ್ಕೂ ಹೆಚ್ಚು ಜೇನುನೊಣಗಳ ಮುಳ್ಳುಗಳು ಚುಚ್ಚಿವೆ. ಗಾಯಗೊಂಡವರನ್ನು ಆಟೊರಿಕ್ಷಾ, ಕಾರು, ಬೈಕ್, ಆಂಬುಲೆನ್ಸ್ ಮೂಲಕ ಆಸ್ಪತ್ರೆಗೆ ಕರೆತರಲಾಗಿದೆ.

ಡಾ.ರವಿಶಂಕರ್ ಅವರು ಸಿಬ್ಬಂದಿಯ ಸಹಾಯದಿಂದ ಚಿಕಿತ್ಸೆ ನೀಡಿ, ಹೆಜ್ಜೇನಿನ ಮುಳ್ಳುಗಳನ್ನು ಜನರ ದೇಹದಿಂದ ಹೊರತೆಗೆದಿದ್ದಾರೆ. ಕೆಲವರು ಹೆಚ್ಚು ಅಸ್ವಸ್ಥಗೊಂಡಿದ್ದರಿಂದ ಮೈಸೂರಿಗೆ ಆಸ್ಪತ್ರೆಗೆ ಕಳಿಸಿಕೊಡಲಾಗಿದೆ ಎಂಬುದು ಗೊತ್ತಾಗಿದೆ.

'ಶವಸಂಸ್ಕಾರ ವೇಳೆ ಕೆಲವರು ಮಾವಿನ ಮರದಲ್ಲಿ ಮಾವಿನ ಕಾಯಿ ಕೀಳಲು ಹೋದಾಗ ಈ ಘಟನೆ ನಡೆದಿದೆ. ಇದರಿಂದ ಐದು ತಾಸಿಗೂ ಹೆಚ್ಚಿನ ಸಮಯದವರೆಗೆ ಶವ ಅನಾಥವಾಗಿ ಬಿದ್ದಿತ್ತು. ನಂತರ ಹೊಗೆ ಹಾಕಿ ಜೇನುನೊಣಗಳನ್ನು ಓಡಿಸಿದ ಬಳಿಕ ಅಂತ್ಯಕ್ರಿಯೆ ನಡೆಸಲಾಯಿತು' ಎಂದು ಪ್ರತ್ಯಕ್ಷದರ್ಶಿಯೊಬ್ಬರು ತಿಳಿಸಿದರು.

ಕೂಡಲಿ ಮಠಕ್ಕೆ ಉತ್ತರಾಧಿಕಾರಿ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಹೊಳೆಹೊನ್ನೂರು ಕೂಡಲಿ ಶೃಂಗೇರಿ ಶಾರದಾ ಪೀಠದ 72ನೇ ಪೀಠಾಧಿಪತಿಯಾಗಿ ದತ್ತರಾಜ ದೇಶಪಾಂಡೆ ನೇಮಕಗೊಂಡಿದ್ದಾರೆ.

ಹೆಬ್ಬಳ್ಳಿಯ ಬ್ರಹ್ಮಚೈತನ್ಯ ಮಹಾರಾಜ ಸ್ಥಿರಪಾದುಕಾ ಆಶ್ರಮದ ದತ್ತಾವಧೂತ ಗುರುಗಳ ಸಾನಿಧ್ಯದಲ್ಲಿ ನಗರದಲ್ಲಿ ಸೋಮವಾರ ನಡೆದ ವಿಪ್ರ ಸಮಾಜದ ಮುಖಂಡರ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

ಪೀಠಾಧಿಪತಿ ವಿದ್ಯಾಭಿನವ ವಿದ್ಯಾರಣ್ಯ ಭಾರತೀ ಸ್ವಾಮೀಜಿ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ಮೇ 11ರಂದು ನೂತನ ಯತಿಗಳ ಆಯ್ಕೆ ಕುರಿತು ಸಭೆ ನಡೆಸಿ ಚರ್ಚಿಸಲಾಗಿತ್ತು.

ಶ್ರೀಗಳ ಪರಿಚಯ



ದತ್ತರಾಜ ದೇಶಪಾಂಡೆ

ದತ್ತರಾಜ್ ದೇಶಪಾಂಡೆ ಅವರು ಧಾರವಾಡ ಮೂಲದವರು. ತಂದೆ, ಅಶೋಕ ರಾವ್ ದೇಶ ಪಾಂಡೆ ಹಾಗೂ ತಾಯಿ ಸೀತಾಲಕ್ಷ್ಮಿ ದೇಶಪಾಂಡೆ. ಶ್ರೀಗಳು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿಯಲ್ಲಿ ಸ್ವರ್ಣ ಪದಕ ಪಡೆದಿದ್ದಾರೆ. 10 ಭಾಷೆಗಳು ಮಾತನಾಡಲು ಹಾಗೂ 5 ಭಾಷೆಗಳನ್ನು ಬರೆಯುವ ಪರಿಣತಿ ಹೊಂದಿದ್ದಾರೆ. ಅವರು 9 ಪುಸ್ತಕಗಳು ಹಾಗೂ 300ಕ್ಕೂ ಹೆಚ್ಚು ಲೇಖನಗಳು ಪ್ರಕಟವಾಗಿವೆ.

ಮೇ 22ರಂದು ಕೂಡಲಿಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಉತ್ತರಾಧಿಕಾರಿ ದತ್ತರಾಜ ದೇಶಪಾಂಡೆ ಸನ್ಯಾಸತ್ವ ಸ್ವೀಕರಿಸಿ ಪೀಠಾರೋಹಣ ಮಾಡಲಿದ್ದಾರೆ. ಕಂಚಿ ಕಾಮಕೋಟಿ ಪೀಠದ ಶಂಕರ ವಿಜಯೇಂದ್ರ ಸರಸ್ವತಿ ಸ್ವಾಮೀಜಿ ಸಾನಿಧ್ಯ ವಹಿಸಲಿದ್ದಾರೆ. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಅಶೋಕ್ ಹಾರನಹಳ್ಳಿ ಹಾಗೂ ಪ್ರಮೋದ್ ಮುತಾಲಿಕ್ ಭಾಗವಹಿಸಲಿದ್ದಾರೆ ಎಂದು ಮಠದ ಮೂಲಗಳು ತಿಳಿಸಿವೆ.

ರಾಧಾಕೃಷ್ಣಗೆ 'ಚಾವುಂಡರಾಯ ಪ್ರಶಸ್ತಿ'

ಬೆಂಗಳೂರು: 2022ನೇ ಸಾಲಿನ 'ಚಾವುಂಡರಾಯ ಪ್ರಶಸ್ತಿ'ಗೆ ಲೇಖಕ, ನಿವೃತ್ತ ಪ್ರಾಧ್ಯಾಪಕ ಕೆ.ಇ.ರಾಧಾಕೃಷ್ಣ ಅವರು ಭಾಜನರಾಗಿದ್ದಾರೆ.

ಪ್ರಶಸ್ತಿ ₹ 30 ಸಾವಿರ ನಗದು, ಪ್ರಶಸ್ತಿ ಫಲಕ, ತಾಂಬೂಲ ಒಳಗೊಂಡಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಮಹೇಶ ಜೋಶಿ ತಿಳಿಸಿದ್ದಾರೆ.

ಶ್ರವಣಬೆಳಗೊಳದ ಚಾರುಕೀರ್ತಿಭಟ್ಟಾರಕ ಸ್ವಾಮೀಜಿ ಅವರು ಎಸ್‌ಡಿಜಿಎಂಎ ಮ್ಯಾನೇಜ್‌ಮೆಂಟ್ ಸಮಿತಿ ಪರ ದತ್ತಿನಿಧಿಯನ್ನು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಸ್ಥಾಪಿಸಿದ್ದರು.

ಕೆ.ಇ.ರಾಧಾಕೃಷ್ಣ

ಪ್ರಾಚೀನ ಜೈನ ಸಾಹಿತ್ಯವನ್ನು ಆಧರಿಸಿ ಆಧುನಿಕ ಕನ್ನಡ ಭಾಷೆಯಲ್ಲಿ ರಚಿಸಿ ಪ್ರಕಟಗೊಂಡಿರುವ ಪ್ರಬಂಧ, ವಿಮರ್ಶೆ, ಕಾದಂಬರಿ, ನಾಟಕ, ಕಥಾ ಸಾಹಿತ್ಯದ ಲೇಖಕರು, ಅನುವಾದಕರು ಮತ್ತು ಗ್ರಂಥ ಸಂಪಾದಕರಿಗೆ ಈ ಪ್ರಶಸ್ತಿ ಪ್ರದಾನ ಮಾಡಬೇಕೆಂಬ ಆಶಯವಿದೆ. 1995ರಿಂದ ಇದುವರೆಗೂ 27 ಮಂದಿಗೆ ಈ ಪ್ರಶಸ್ತಿ ಪ್ರದಾನ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಜಿನಸೇನಾಚಾರ್ಯ ಮತ್ತು ಗುಣ-ಭದ್ರಾಚಾರ್ಯ ಅವರು ರಚಿಸಿದ ಸಂಸ್ಕೃತದ ಜೈನ ಮಹಾಪುರಾಣ-ವನ್ನು ಎರ್ತೂರ್ ಶಾಂತಿರಾಜ ಶಾಸ್ತ್ರಿ ಅವರು ಕನ್ನಡಕ್ಕೆ ಅನುವಾದಿಸಿದ್ದರು. ಈ ಕೃತಿಯನ್ನು ರಾಧಾಕೃಷ್ಣ ಇಂಗ್ಲಿಷ್‌ಗೆ ಅನುವಾದಿಸಿದ್ದರು. ಈ ಕೃತಿಗೆ ಪ್ರಶಸ್ತಿ ಸಂದಿದೆ ಎಂದು ತಿಳಿಸಿದ್ದಾರೆ.

ಮಹೇಶ ಜೋಶಿ ಅಧ್ಯಕ್ಷತೆಯ ಸಮಿತಿ ಈ ಆಯ್ಕೆಯನ್ನು ಮಾಡಿದೆ.

ಪಳಗಿದ ಆನೆಗಳೊಂದಿಗೆ ಕಾರ್ಯಾಚರಣೆ ಆರಂಭ

2 ಹೆಣ್ಣಾನೆಗೆ ರೇಡಿಯೊ ಕಾಲರ್

ಪ್ರಜಾವಾಣಿ ವಾರ್ತೆ

ಸಕಲೇಶಪುರ (ಹಾಸನ ಜಿಲ್ಲೆ): ಕಾಡಾನೆಗಳ ಹಾವಳಿಯಿಂದ ಬೇಸತ್ತಿರುವ ಸಕಲೇಶಪುರ ಮತ್ತು ಆಲೂರು ತಾಲ್ಲೂಕುಗಳಲ್ಲಿ ಅರಣ್ಯ ಇಲಾಖೆಯು ವಿಶೇಷ ಕಾರ್ಯಾಚರಣೆ ಆರಂಭಿಸಿದ್ದು, ಆನೆಗಳ ಚಲನವಲನ-ಗಳ ಮೇಲೆ ನಿಗಾ ಇಡಲು ಸೋಮವಾರ ರೇಡಿಯೊ ಕಾಲರ್ ಅಳವಡಿಕೆಗೆ ಚಾಲನೆ ನೀಡಿತು.

ಸಕಲೇಶಪುರ ತಾಲ್ಲೂಕಿನಲ್ಲಿ ಕಾರ್ಯಾಚರಣೆ ನಡೆಸಿದ ಅರಣ್ಯ ಇಲಾಖೆ ಸಿಬ್ಬಂದಿ, ಒಂದು ಹೆಣ್ಣಾನೆಗೆ ರೇಡಿಯೊ ಕಾಲರ್ ಅಳವಡಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಪಳಗಿದ ಆನೆಗಳಾದ ಅಭಿಮನ್ಯು, ಮಹೇಂದ್ರ, ಅಜೇಯ, ಪ್ರಶಾಂತ್ ಹಾಗೂ ವಿಕ್ರಮ್ ನೇತೃತ್ವದಲ್ಲಿ ಬೆಳಿಗ್ಗೆ ಕಾರ್ಯಾಚರಣೆಗೆ ಇಳಿದ ಸಿಬ್ಬಂದಿ, ಸಕಲೇಶಪುರ ತಾಲ್ಲೂಕಿನ ಕೆರೋಡಿ ಗ್ರಾಮದಲ್ಲಿ ಒಂದು ಹಾಗೂ ಉದನೆ ಬಳಿಯ ಬ್ಯಾದನೆಯಲ್ಲಿ ಬೀಡುಬಿಟ್ಟಿದ್ದ ಇನ್ನೊಂದು ಹೆಣ್ಣಾನೆಗೆ ಅರಿವಳಿಕೆ ಚುಚ್ಚುಮದ್ದು ನೀಡಿ, ರೇಡಿಯೊ ಕಾಲರ್ ಅಳವಡಿಸಿದರು. ಆ ಗ್ರಾಮದಲ್ಲಿ ಹತ್ತಕ್ಕೂ ಹೆಚ್ಚು ಕಾಡಾನೆಗಳ ಗುಂಪು ಇರುವುದನ್ನು ಪತ್ತೆ ಮಾಡಿದ ತಂಡ, ಅವುಗಳನ್ನು ಚದುರಿಸಿದರು.



ಸಕಲೇಶಪುರ ತಾಲ್ಲೂಕಿನ ಕೆರೋಡಿಯಲ್ಲಿ ಹೆಣ್ಣಾನೆಗೆ ರೆಡಿಯೊ ಕಾಲರ್ ಅಳವಡಿಸಲಾಯಿತು – ಪ್ರಜಾವಾಣಿ ಚಿತ್ರ/ಅತೀಖುರ್ ರಹಮಾನ್

ಒಂದು ಹೆಣ್ಣಾನೆಯನ್ನು ಗುರಿಯಾಗಿಸಿ, ಅರಿವಳಿಕೆ ಚುಚ್ಚುಮದ್ದು ನೀಡಿದರು. ಹೆಣ್ಣಾನೆ ಕಾಫಿ ತೋಟದಲ್ಲಿ ಹೋಗಿ ನಿಲ್ಲುತ್ತಿದ್ದಂತೆಯೇ, ಪಳಗಿದ ಆನೆಗಳೊಂದಿಗೆ ಸುತ್ತುವರಿದು ರೇಡಿಯೊ ಕಾಲರ್ ಅಳವಡಿಸಿದರು.

ಈ ಬಗ್ಗೆ ವಿವರಣೆ ನೀಡಿದ ಡಿಎಫ್‌ಒ ಹರೀಶ್, 'ಕಾಡಾನೆಗಳು ಗುಂಪಿನಲ್ಲಿ ಓಡಾಡುತ್ತಿದ್ದು, ಗ್ರಾಮಸ್ಥರಿಗೆ ಆನೆಗಳ ಚಲನವಲನದ ಕುರಿತು ಮಾಹಿತಿ ನೀಡಲಾಗುತ್ತದೆ. ಅದಕ್ಕಾಗಿ ಆನೆಗಳಿಗೆ ರೇಡಿಯೊ ಕಾಲರ್ ಅಳವಡಿಸಲಾಗುತ್ತಿದೆ' ಎಂದು ತಿಳಿಸಿದರು.

ಸಂಗೀತೋತ್ಸವ ನಾಳೆಯಿಂದ

ಪ್ರಜಾವಾಣಿ ವಾರ್ತೆ

ಅರಕಲಗೂಡು (ಹಾಸನ ಜಿಲ್ಲೆ): 'ತಾಲ್ಲೂಕಿನ ಸಂಗೀತ ಗ್ರಾಮ ರುದ್ರಪಟ್ಟಣದಲ್ಲಿ ಮೇ 17 ರಿಂದ 21ರವರೆಗೆ 20ನೇ ವಾರ್ಷಿಕ ಸಂಗೀತೋತ್ಸವ ಆಯೋಜಿಸಲಾಗಿದೆ' ಎಂದು ಸಂಗೀತೋತ್ಸವ ಸಮಿತಿ ಟ್ರಸ್ಟ್ ಅಧ್ಯಕ್ಷ ಹಾಗೂ ವಿದ್ವಾನ್ ಆರ್.ಕೆ.ಪದ್ಮನಾಭ ತಿಳಿಸಿದರು.

'ಕೋವಿಡ್–19 ಹಿನ್ನೆಲೆಯಲ್ಲಿ ಎರಡು ವರ್ಷ ಕಾರ್ಯಕ್ರಮ ನಡೆಸಲಾಗಿರಲಿಲ್ಲ. ಕಳೆದ ವರ್ಷ 2 ದಿನಗಳಷ್ಟೇ ಸರಳವಾಗಿ ಆಯೋಜಿಸಲಾಗಿತ್ತು. ಈ ಬಾರಿ 5 ದಿನ ಉತ್ಸವ ಇರಲಿದೆ. ರಾಜ್ಯದ ಜೊತೆಗೆ ಹೊರ ರಾಜ್ಯಗಳ ಕರ್ನಾಟಕ ಶಾಸ್ತ್ರೀಯ ಸಂಗೀತ ವಿದ್ವಾಂಸರು ಗಾನ ಸುಧೆ ಹರಿಸಲಿದ್ದಾರೆ' ಎಂದು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'ಯುವ ಕಲಾವಿದರು ಹಾಗೂ ಮಕ್ಕಳನ್ನು ಪ್ರೋತ್ಸಾಹಿಸಲು ಈ ಬಾರಿ ಕಾರ್ಯಕ್ರಮ ರೂಪಿಸಲಾಗಿದೆ. ಮೇ 20ರಂದು ಕಾವೇರಿ ನದಿಯಲ್ಲಿ ನಡೆಯುವ ತೆಪ್ಪೋತ್ಸವದಲ್ಲಿ ತೆಪ್ಪದ ಮೇಲೆ ಭರತನಾಟ್ಯ ಪ್ರದರ್ಶನ ವಿಶೇಷವಾಗಿದೆ. ವಿದುಷಿ ಡಾ.ಆರ್.ಎನ್.ಶ್ರೀಲತಾ ಅವರಿಗೆ 2023ನೇ ಸಾಲಿನ 'ನಾಚಾರಮ್ಮ ಪ್ರಶಸ್ತಿ' ಹಾಗೂ 'ಗಾನ ಕಲಾ ಸ್ಪರ್ಷಮಣಿ' ಬಿರುದು ನೀಡಲಾಗುತ್ತದೆ. ಪ್ರಶಸ್ತಿಯು ₹ 10 ಸಾವಿರ ನಗದು ಒಳಗೊಂಡಿದೆ' ಎಂದರು.

ನಿಧನ ವಾರ್ತೆ

ಮಾಜಿ ಶಾಸಕ ಉಮಾಕಾಂತ್ ಬೋರ್ಕರ್

ರಿಪ್ಪನ್ ಪೇಟೆ: ಮಾಜಿ ಶಾಸಕ, ಸಮೀಪದ ಅರಸಾಳು ಗ್ರಾಮದ ನಿವಾಸಿ ಡಾ. ಉಮಾಕಾಂತ್ ಬೋರ್ಕರ್ (84) ಸೋಮವಾರ ಹೃದಯಘಾತದಿಂದ ನಿಧನರಾದರು.

ಶಿರಸಿ ವಿಧಾನಸಭಾ ಕ್ಷೇತ್ರದಿಂದ 1978ರಲ್ಲಿ ಜನತಾ ಪಕ್ಷದಿಂದ ಆಯ್ಕೆಯಾಗಿದ್ದ ಇವರು, ನಂತರ ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕಿನ ಅರಸಾಳು ಗ್ರಾಮದಲ್ಲಿ ನೆಲೆಸಿದ್ದರು. ಮೃತರಿಗೆ ಪತ್ನಿ, ಪುತ್ರಿ ಇದ್ದಾರೆ. ಅಂತ್ಯಕ್ರಿಯೆ ಗ್ರಾಮದಲ್ಲಿ ಸಂಜೆ ನೆರವೇರಿತು.

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ

(ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರದ ಜಂಟಿ ಸಹಭಾಗಿತ್ವದಲ್ಲಿ)

ಇ-ಮೇಲ್ : contracts@bmrc.co.in ವೆಬ್‌ಸೈಟ್ : www.bmrc.co.in

ಬಿಡ್ ಸಂಖ್ಯೆ: ಬಿಎಂಆರ್‌ಸಿಎಲ್/ಡಿಜಿಎಂ(ಸಿ)/ಪಿಡಿ/ಪಾರ್ಕಿಂಗ್ ಟೆಂಡರ್/ ರೀಚ್–1,2,3,4/XLII/2023–24 ದಿನಾಂಕ: 15.05.2023

ಟೆಂಡರ್ ಕಂ ಹರಾಜು ಪ್ರಕಟಣೆ

ವಿಷಯ: ನಮ್ಮ ಮೆಟ್ರೋ ನಿಲ್ದಾಣಗಳ ರೀಚ್–1, 2, 3, 4ರಲ್ಲಿ ಪಾರ್ಕಿಂಗ್ ಲಾಟ್‌ಗಳ ಕಾರ್ಯಾಚರಣೆಗೆ ಪರವಾನಗಿ ನೀಡುವುದು. **ಬಿಡ್ ವೇಳಾಪಟ್ಟಿ:** ಬಿಡ್ ದಸ್ತಾವೇಜುಗಳ ಮಾರಾಟ: **16.05.2023 ರಿಂದ 03.06.2023.** ಟೆಂಡರ್ ಶುಲ್ಕ: ಬೆಂಗಳೂರಿನಲ್ಲಿ ಪಾವತಿಯಾಗುವಂತೆ ಬಿಎಂಆರ್‌ಸಿಎಲ್ ಹೆಸರಲ್ಲಿ ಡಿಡಿ ರೂಪದಲ್ಲಿ **ರೂ.5,000/-.** ಖರೀದಿಸುವ ಸ್ಥಳ: ಬಿಎಂಆರ್‌ಸಿಎಲ್, 3ನೇ ಮಹಡಿ, ಬಿಎಂಟಿಸಿ ಕಾಂಪ್ಲೆಕ್ಸ್, ಶಾಂತಿನಗರ, ಕೆ.ಹೆಚ್.ರಸ್ತೆ, ಬೆಂಗಳೂರು–560 027. ಪ್ರೀ ಬಿಡ್ ಸಭೆ: **03.06.2023, ಮಧ್ಯಾಹ್ನ 3.00 ಗಂಟೆಗೆ.** ಬಿಡ್ ಸಲ್ಲಿಸಲು ಕೊನೆಯ ದಿನಾಂಕ: **09.06.2023, ಮಧ್ಯಾಹ್ನ 3.00 ಗಂಟೆವರೆಗೆ.** ಟೆಂಡರ್ ತೆರೆಯುವ ದಿನಾಂಕ: **09.06.2023, ಮಧ್ಯಾಹ್ನ 3.30 ಗಂಟೆಗೆ.** ಟೆಂಡರ್‌ನ ನಿಯಮ ಹಾಗೂ ನಿಬಂಧನೆಗಳು ಮತ್ತು ಹೆಚ್ಚಿನ ಮಾಹಿತಿಗಾಗಿ **www.bmrc.co.in/Tender Section**ಗೆ ಭೇಟಿ ನೀಡಿ.

ಸಹಿ/- ಉಪ ಪ್ರಧಾನ ವ್ಯವಸ್ಥಾಪಕರು (ಸಿ)

ನಗರಸಭಾ ಕಾರ್ಯಾಲಯ, ತಿಪಟೂರು

ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ ದೂ: 08134–250785, E-mail:itstaff_ulb_tiptur@yahoo.co.in, www.tipturcity.mrc.gov.in

ನಂ.ನ.ಸ.ತಿ/ತಾಂಶಾ/ಸಿ.ಆರ್/11/2023–24 ದಿನಾಂಕ: 08.05.2023

ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆಯಲ್ಲಿ ಆದ್ಯಾದೇಶ 1999 – 2000ರ ನಿಯಮದಂತೆ ನಗರಸಭೆಯ ಎಸ್.ಡಬ್ಲ್ಯೂ.ಎಂ ಹಾಗೂ ಇತರೆ ಅನುದಾನದಲ್ಲಿ ಈ ಕೆಳಕಂಡ ಕಾಮಗಾರಿಯನ್ನು ನಿರ್ವಹಿಸಲು A company incorporated under Indian Companies Act 1956/2013 ರಡಿ ನೊಂದಾಯಿಸಿರುವ ಅರ್ಹ ಗುತ್ತಿಗೆದಾರರಿಂದ ಇ–ಪ್ರಕ್ಯೂರ್‌ಮೆಂಟ್ ವೆಬ್‌ಸೈಟ್‌ನಲ್ಲಿ (https://eproc.karnataka.gov.in) ಟೆಂಡರ್‌ನ್ನು ಆಹ್ವಾನಿಸಿದೆ. (ಹೆಚ್ಚಿನ ಮಾಹಿತಿಗಳ ಅಗತ್ಯವಿದ್ದಲ್ಲಿ ಕಛೇರಿಯಿಂದ ಪಡೆಯಬಹುದು)

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್

ಕ್ರ. ಸಂ	ಕಾಮಗಾರಿಯ ಹೆಸರು	ಅಂದಾಜು ಮೊತ್ತ ರೂ.ಲಕ್ಷ	ಇ.ಎಂ.ಡಿ ರೂಗಳಲ್ಲಿ	ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ	ಟೆಂಡರ್ ತೆರೆಯುವ ಕಡೆಯ ದಿನಾಂಕ
1	DMA/2023-24/OW/WORK_INDENT149993	377.84	5,67,000/-	05.06.2023	08.06.2023

ಸಹಿ/– ಪೌರಾಯುಕ್ತರು, ನಗರಸಭೆ, ತಿಪಟೂರು.

DIPR/TUM/4/KSMCA/2023-24

ಮೆ॥ ಸಿಬಿಐಸಿ ತುಮಕೂರು ಇಂಡಸ್ಟ್ರಿಯಲ್ ಟೌನ್‌ಶಿಪ್ ನಿಯಮಿತ

(ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರದ ಜಂಟಿ ಉದ್ಯಮ)

(CIN: U74999KA2018PLC118247)

ನಂ.49, 5ನೇ ಮಹಡಿ, ಪೂರ್ವ ವಿಭಾಗ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560 001. ದೂರವಾಣಿ ಸಂ. +91–80–22267383, ಇ–ಮೇಲ್: mdcbic24@gmail.com

ಮೆ॥ ಸಿಬಿಐಸಿ ತುಮಕೂರು ಇಂಡಸ್ಟ್ರಿಯಲ್ ಟೌನ್ ಶಿಪ್ ಲಿಮಿಟೆಡ್ ಗೆ ವಿಶಿಷ್ಟ ವಿನ್ಯಾಸ /ಲಾಂಛನವನ್ನು ಸೂಚಿಸಲು ಆಹ್ವಾನ

ಸಿಬಿಐಸಿ ತುಮಕೂರು ಇಂಡಸ್ಟ್ರಿಯಲ್ ಟೌನ್ ಶಿಪ್ ಲಿಮಿಟೆಡ್ (ಸಿಬಿಐಸಿ ಟಿಐಟಿಎಲ್) ಒಂದು ಸಾರ್ವಜನಿಕ ನಿಯಮಿತ ಕಂಪನಿಯಾಗಿದ್ದು, ಭಾರತ ಸರ್ಕಾರವನ್ನು ಪ್ರತಿನಿಧಿಸುವ ರಾಷ್ಟ್ರೀಯ ಕೈಗಾರಿಕಾ ಕಾರಿಡಾರ್ ಅಭಿವೃದ್ಧಿ ಮತ್ತು ಅನುಷ್ಠಾನ ಟ್ರಸ್ಟ್ (ಎನ್‌ಐಸಿಡಿಐಟಿ) ಕರ್ನಾಟಕ ಸರ್ಕಾರವನ್ನು ಪ್ರತಿನಿಧಿಸುವ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಇದರ ಜಂಟಿ ಉದ್ಯಮದೊಂದಿಗೆ ಚೆನ್ನೈ ಬೆಂಗಳೂರು ಕೈಗಾರಿಕಾ ಕಾರಿಡಾರ್ ಯೋಜನೆಯಡಿ ವಸಂತನರಸಾಪುರ, ತುಮಕೂರು ಜಿಲ್ಲೆ ಇಲ್ಲಿ 8484 ಎಕರೆ ಪ್ರದೇಶದಲ್ಲಿ ಕೈಗಾರಿಕಾ ಕಾರಿಡಾರ್ ಅಭಿವೃದ್ಧಿಗೆ ಸಮಾನ ಪಾಲನ್ನುಹೊಂದಿರುತ್ತದೆ ಮತ್ತು 01.11.2018 ರಲ್ಲಿ ಸಂಯೋಜನೆಗೊಂಡಿರುತ್ತದೆ.

ಈ ನಿಟ್ಟಿನಲ್ಲಿ ಕಂಪನಿಯ ವಿಶಿಷ್ಟ ಗುರುತನ್ನು ಪ್ರತಿನಿಧಿಸುವ ಮೆ॥ ಸಿಬಿಐಸಿ ಟಿಐಟಿಎಲ್‌ಗೆ ಲಾಂಛನವನ್ನು ವಿನ್ಯಾಸಗೊಳಿಸಲು ಕಂಪನಿಯು ಸಾರ್ವಜನಿಕರಿಂದ ಆಹ್ವಾನಿಸುತ್ತಿದೆ. ವಿನ್ಯಾಸಗೊಳಿಸಿದ ಕಂಪನಿಯ ಲಾಂಛನವನ್ನು ಈ ಅಧಿಸೂಚನೆಯ ದಿನಾಂಕದಿಂದ 10 ದಿನಗಳ ಒಳಗೆ ಇಮೇಲ್ mdcbic24@gmail.com ಮೂಲಕ ಸಲ್ಲಿಸಬೇಕು.

ಯಾವುದೇ ಸ್ಪಷ್ಟೀಕರಣ/ಮಾಹಿತಿಗಾಗಿ ದಯವಿಟ್ಟು ಕಂಪನಿಯ ಕಾರ್ಯದರ್ಶಿ ಶ್ರೀ ಮಾಧವ್ ಭಟ್ ಅವರನ್ನು ಸಂಪರ್ಕಿಸಬಹುದು. ಇಮೇಲ್: cscbic@kiadb.in. ಆಯ್ಕೆಮಾಡಿದ ವಿನ್ಯಾಸಗಳಿಗೆ ಸೂಕ್ತವಾದ ಬಹುಮಾನ ನೀಡಲಾಗುವುದು.

ಸ್ಥಳ: ಬೆಂಗಳೂರು
ದಿನಾಂಕ: 15.05.2023 DIPR/CP/041/Zenkar/2023-24
ಸಹಿ/– ಕಂಪನಿ ಕಾರ್ಯದರ್ಶಿ

रजिस्ट्री सं. डी.एल. -33004/99 REGD. NO. D.L.-33004/99

भारत का राजपत्र
The Gazette of India

सी.जी.-डी.एल.-अ.- 28042023-245511
CG-DL-E- 28042023-245511

असाधारण
EXTRAORDINARY
भाग II-खण्ड 3-उप-खण्ड (ii)
PART II-Section 3-Sub-section (ii)
प्राधिकार से प्रकाशित
PUBLISHED BY AUTHORITY

सं : 1873] नई दिल्ली, शुक्रवार, अप्रैल 28, 2023/वैशाख 8, 1945
No. 1873] NEW DELHI, FRIDAY, APRIL 28, 2023/VAISAKHA 8, 1945

ರಸ್ತೆ ಸಾರಿಗೆ ಮತ್ತು ರಾಷ್ಟ್ರೀಯ ಹೆದ್ದಾರಿಗಳ ಸಚಿವಾಲಯ

ಅಧಿಸೂಚನೆ

ನವದೆಹಲಿ, ದಿನಾಂಕ: 28ನೇ ಏಪ್ರಿಲ್ 2023

ಎಸ್.ಓ. 1961(ಇ) – : ಕೇಂದ್ರ ಸರ್ಕಾರಕ್ಕೆ ಇದೀಗ ಸಾರ್ವಜನಿಕ ಉದ್ದೇಶಕ್ಕಾಗಿ ಇದರೊಂದಿಗೆ ಲಗತ್ತಿಸಿರುವ ಅಧಿಸೂಚನೆಯಲ್ಲಿ ಜಮೀನುಗಳನ್ನು ಕರ್ನಾಟಕ ರಾಜ್ಯದ ಉಡುಪಿ ಜಿಲ್ಲೆಯ ಸಾಣೂರುನಿಂದ ಬಿಕರ್ನಕಟ್ಟೆ ವರೆಗೆ ಅಸ್ತಿತ್ವದಲ್ಲಿರುವ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 169 (ಹಳೆಯ ಸಂಖ್ಯೆ 13)ರ ಕಿ.ಮೀ. 691.350 ರಿಂದ ಕಿ.ಮೀ.736.362 ರವರೆಗೆ ಭಾರತ್ ಮಾಲ್ ಪರಿಯೋಜನಾ ಅಡಿಯಲ್ಲಿ ಹೈಬ್ರಿಡ್ ಆನ್ಯೂಟಿ ಮೋಡ್ (ಪ್ಯಾಕೇಜ್ III) ರಸ್ತೆ ನಿರ್ಮಾಣ (ಅಗಲೀಕರಣ/ ಎರಡು ಲೇನ್ ಸುಸಜ್ಜಿತ ಭುಜ/ನಾಲ್ಕು ಲೇನಿಂಗ್ ಇತ್ಯಾದಿ) ವ್ಯವಸ್ಥಾಪನೆ, ಕಾರ್ಯನಿರ್ವಹಣೆ ಮತ್ತು ಪ್ರಕ್ರಿಯ ಮಾಡುವ ಸಲುವಾಗಿ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲು ಅವಶ್ಯಕವಾಗಿರುತ್ತದೆ. ಆದ ಕಾರಣ ಕೇಂದ್ರ ಸರ್ಕಾರವು ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 (1956ರ 48) ರ ಪ್ರಕಾರ ನಿಯಮ (3) ಉಪನಿಯಮ (1) ರಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಇದರೊಂದಿಗೆ ಲಗತ್ತಿಸಿರುವ ಅನುಸೂಚಿಯಲ್ಲಿ ವಿವರಿಸಿರುವ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲು ಈ ಮೂಲಕ ಸೂಚನೆ ನೀಡಿದೆ.

ಸದರಿ ಜಮೀನುಗಳ ಬಗ್ಗೆ ಹಿತಾಸಕ್ತಿ ಉಳ್ಳವರು ಈ ಅಧಿಸೂಚನೆ ಹೊರಡಿಸಿರುವ ಹಾಗೂ ಸಾರ್ವಜನಿಕ ಅವಗಾಹನೆಗಾಗಿ ಈ ಪ್ರಕಟಣೆ ಪ್ರಕಟಿಸಿದ ದಿನಾಂಕದಿಂದ **ಇಪ್ಪತ್ತೊಂದು ದಿವಸಗಳ** ಒಳಗಾಗಿ ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 (1956ರ 48) ಸೆಕ್ಷನ್ 3C (1) ರ ಅನ್ವಯ ಆಕ್ಷೇಪಣೆಯನ್ನು ಸಲ್ಲಿಸಬಹುದಾಗಿರುತ್ತದೆ.

ಅಂತಹ ಆಕ್ಷೇಪಣೆಯನ್ನು ಸಕ್ಷಮ ಪ್ರಾಧಿಕಾರಿಗಳು ಅಂದರೆ ವಿಶೇಷ ಭೂಸ್ವಾಧೀನಾಧಿಕಾರಿಗಳು, ಕ್ಲಾಕ್ ಟವರ್, ಹಂಪನಕಟ್ಟೆ, ಮಂಗಳೂರು, ಇವರಿಗೆ ಬರಹದ ಮೂಲಕ ಸಕಾರಣಗಳೊಂದಿಗೆ ಸಲ್ಲಿಸತಕ್ಕದ್ದು ಹಾಗೂ ಸಕ್ಷಮ ಪ್ರಾಧಿಕಾರಿಗಳು ಆಕ್ಷೇಪಣೆದಾರರ ಅಹವಾಲುಗಳನ್ನು ಆಲಿಸಲು ಆಕ್ಷೇಪಣೆದಾರರಿಗೆ ಅಥವಾ ಅವರ ವಕೀಲರಿಗೆ ಅವಕಾಶ ನೀಡಿ ಅವರು ಸಲ್ಲಿಸಿರುವ ಆಕ್ಷೇಪಣೆಗಳ ಬಗ್ಗೆ ವಿಚಾರಣೆ ನಡೆಸಿ ಸೂಕ್ತವೆಂದು ಎಂಬುದು ಕಂಡುಬಂದಲ್ಲಿ ಇತರೆ ಅಂಶಗಳನ್ನು ಪರಿಗಣಿಸಿ ಪುರಸ್ಕರಿಸಬಹುದು ಅಥವಾ ತಿರಸ್ಕರಿಸಬಹುದು.

ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 (1956ರ 48) ಪ್ರಕಾರ ಕಲಂ ನಿಯಮ 3ಸಿ (2) ರಂತೆ ಸಕ್ಷಮ ಪ್ರಾಧಿಕಾರಿಗಳು ಮಾಡಿದ ಆದೇಶ ಅಂತಿಮವಾಗಿರುತ್ತದೆ.

ಈ ಅಧಿಸೂಚನೆಯಲ್ಲಿ ಪ್ರಕಟಿಸಿರುವ ಜಮೀನುಗಳ ನಕಾಶೆಗಳು ಮತ್ತು ಇತರೆ ವಿವರಗಳು ಹಿತಾಸಕ್ತಿ ಉಳ್ಳವರ ಪರಿಶೀಲನೆಗೆ ಸದರಿ ಸಕ್ಷಮ ಪ್ರಾಧೀಕಾರ ರವರ ಕಛೇರಿಯಲ್ಲಿ ಲಭ್ಯವಿರುತ್ತವೆ ಮತ್ತು ಈ ಜಮೀನುಗಳ ಬಗ್ಗೆ ಹಿತಾಸಕ್ತಿವುಳ್ಳವರು ಸಕ್ಷಮ ಪ್ರಾಧಿಕಾರಿಯವರ ಕಛೇರಿಯಲ್ಲಿ ಪರಿಶೀಲಿಸಬಹುದಾಗಿದೆ.

ಅನುಸೂಚಿ

ಕರ್ನಾಟಕ ರಾಜ್ಯದ ಉಡುಪಿ ಜಿಲ್ಲೆಯ ಸಾಣೂರುನಿಂದ ಬಿಕರ್ನಕಟ್ಟೆ ವರೆಗೆ ಅಸ್ತಿತ್ವದಲ್ಲಿರುವ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 169 (ಹಳೆಯ ಸಂಖ್ಯೆ 13)ರಲ್ಲಿ ಕಿ.ಮೀ 691.350 ಇಂದ 736.362 ಕಿ.ಮೀ ರವರೆಗೆ ಭಾರತ್ ಮಾಲ್ ಪರಿಯೋಜನಾ ಅಡಿಯಲ್ಲಿ ಹೈಬ್ರಿಡ್ ಆನ್ಯೂಟಿ ಮೋಡ್ (ಪ್ಯಾಕೇಜ್ III) ರಾಷ್ಟ್ರೀಯ ಹೆದ್ದಾರಿ ನಿರ್ಮಾಣಕ್ಕಾಗಿ, ಭೂಸ್ವಾಧೀನಪಡಿಸಿಕೊಳ್ಳುವ ಕಟ್ಟಡ ಇರುವ ಅಥವಾ ಕಟ್ಟಡ ಇಲ್ಲದೆ ಇರುವ ಜಮೀನುಗಳ ಸಂಕ್ಷಿಪ್ತ ವಿವರಗಳು:

ರಾಜ್ಯ: ಕರ್ನಾಟಕ — ಜಿಲ್ಲೆ: ಉಡುಪಿ

ಕ್ರ. ಸಂ.	ಸರ್ವೆ/ ಪ್ಲಾಟ್ ನಂಬರ್	ಜಮೀನಿನ ತರಹೆ	ಜಮೀನಿನ ವಿವರಣೆ	ವಿಸ್ತೀರ್ಣ (ಚದರ.ಮೀಟರ್.ಗಳಲ್ಲಿ)
ತಾಲ್ಲೂಕು: ಕಾರ್ಕಳ (ಟಿ)				ಗ್ರಾಮ : ಸಾಣೂರು(ಸಿಟಿ)
1	144/7	ಖಾಸಗಿ	ಖುಷ್ಕಿ	203
2	160/2ಎ	ಖಾಸಗಿ	ಖುಷ್ಕಿ	607
3	160/2ಬಿ1	ಖಾಸಗಿ	ಖುಷ್ಕಿ	324
4	160/3	ಖಾಸಗಿ	ಖುಷ್ಕಿ	243
5	160/5	ಖಾಸಗಿ	ಖುಷ್ಕಿ	203
6	160/7	ಖಾಸಗಿ	ಖುಷ್ಕಿ	203
7	166/3ಎ2	ಖಾಸಗಿ	ಕೃಷಿಯೇತರ	404
8	166/3ಎ3	ಖಾಸಗಿ	ಖುಷ್ಕಿ	122
9	166/3ಎ6	ಖಾಸಗಿ	ಖುಷ್ಕಿ	324
10	166/3ಬಿ	ಖಾಸಗಿ	ಖುಷ್ಕಿ	324
11	166/4	ಖಾಸಗಿ	ಖುಷ್ಕಿ	810
12	166/5	ಖಾಸಗಿ	ಖುಷ್ಕಿ	202
13	166/8	ಖಾಸಗಿ	ಖುಷ್ಕಿ	202
14	166/9	ಖಾಸಗಿ	ಖುಷ್ಕಿ	202
15	174/1	ಖಾಸಗಿ	ತರಿ	253
16	174/3	ಖಾಸಗಿ	ತರಿ	62
17	174/4	ಖಾಸಗಿ	ತರಿ	253
18	174/5	ಖಾಸಗಿ	ತರಿ	122
19	201/2	ಖಾಸಗಿ	ಖುಷ್ಕಿ	122
20	226/1	ಖಾಸಗಿ	ಖುಷ್ಕಿ	122
21	226/2	ಖಾಸಗಿ	ಖುಷ್ಕಿ	445
22	226/3	ಖಾಸಗಿ	ಖುಷ್ಕಿ	21
23	226/4	ಖಾಸಗಿ	ಖುಷ್ಕಿ	103
24	337/2ಎ	ಖಾಸಗಿ	ಖುಷ್ಕಿ	41
25	412/5	ಸಾಮಾನ್ಯ	ಖುಷ್ಕಿ	40.47
26	64/3	ಖಾಸಗಿ	ಬಾಗಾಯ್ತು	243
27	65/1ಎ2ಎ	ಖಾಸಗಿ	ಖುಷ್ಕಿ	100
28	65/1ಬಿ	ಖಾಸಗಿ	ಬಾಗಾಯ್ತು	81
29	65/2ಬಿ	ಖಾಸಗಿ	ಕೃಷಿಯೇತರ	202
30	65/4ಎ1	ಖಾಸಗಿ	ಖುಷ್ಕಿ	404
31	65/4ಎ2	ಖಾಸಗಿ	ಖುಷ್ಕಿ	162
32	65/6	ಖಾಸಗಿ	ಖುಷ್ಕಿ	122
33	65/7	ಖಾಸಗಿ	ಖುಷ್ಕಿ	193
34	65/8	ಖಾಸಗಿ	ಬಾಗಾಯ್ತು	41
35	65/9	ಖಾಸಗಿ	ಖುಷ್ಕಿ	324
36	89/17	ಖಾಸಗಿ	ಬಾಗಾಯ್ತು	162
37	89/18	ಖಾಸಗಿ	ಬಾಗಾಯ್ತು	101
38	89/2	ಖಾಸಗಿ	ಬಾಗಾಯ್ತು	81
39	89/3	ಖಾಸಗಿ	ಖುಷ್ಕಿ	130
40	89/4	ಖಾಸಗಿ	ಕೃಷಿಯೇತರ	61
41	89/5	ಖಾಸಗಿ	ಖುಷ್ಕಿ	61
42	89/6	ಖಾಸಗಿ	ಬಾಗಾಯ್ತು	520
			ಒಟ್ಟು	8,945.47

[F. No. 13011/1/2013/PIU-Mangalore/Shimoga-Mangalore Section/3A1]
ABHAY JAIN, Dy. Secy.

ಭಾನುವಾರ ತಡರಾತ್ರಿವರೆಗೆ ಶಾಸಕರಿಂದ ಅಭಿಪ್ರಾಯ ಸಂಗ್ರಹ • ವರಿಷ್ಠರಿಗೆ ಸಲ್ಲಿಸಿದ ವೀಕ್ಷಕರು

ನಾಯಕತ್ವ: ಇಡೀ ದಿನ ಕುತೂಹಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂದಿನ ಮುಖ್ಯಮಂತ್ರಿಯನ್ನು ಆಯ್ಕೆ ಮಾಡುವ ತೀರ್ಮಾನವನ್ನು ಎಐಸಿಸಿ ಅಧ್ಯಕ್ಷರ ವಿವೇಚನೆಗೆ ಬಿಟ್ಟ ಬಳಿಕವೂ ನಾಯಕರಿಬ್ಬರ ಪೈಪೋಟಿ ನಿಂತಿಲ್ಲ.

ಸೋಮವಾರ ಇಡೀ ದಿನ ಉಭಯ ನಾಯಕರ ಸುತ್ತವೇ ಬಿರುಸಿನ ರಾಜಕೀಯ ಚಟುವಟಿಕೆಗಳಿಗೆ ನಾಡಿನ ರಾಜಕೀಯ ಸಾಕ್ಷಿಯಾಯಿತು.

ಶಾಸಕಾಂಗ ಪಕ್ಷದ ನಾಯಕನ ಆಯ್ಕೆಗೆ ಸಂಬಂಧಿಸಿದಂತೆ ಭಾನುವಾರ ತಡರಾತ್ರಿವರೆಗೂ ಶಾಂಗ್ರಿಲಾ ಹೋಟೆಲ್‌ನಲ್ಲಿ ಪಕ್ಷದ ಶಾಸಕರಿಂದ ಅಭಿಪ್ರಾಯ ಸಂಗ್ರಹಿಸಿದ ಎಐಸಿಸಿ ವೀಕ್ಷಕರು, ವರದಿ ಸಹಿತ ದೆಹಲಿಗೆ ಮರಳಿದರು. ಅದಕ್ಕೂ ಮೊದಲು ವೀಕ್ಷಕರನ್ನು ಡಿ.ಕೆ. ಶಿವಕುಮಾರ್ ಭೇಟಿ ಮಾಡಿ ಮಾತುಕತೆ ನಡೆಸಿದರು. ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಮತ್ತು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರನ್ನೂ ಶಿವಕುಮಾರ್ ಭೇಟಿ ಮಾಡಿದರು.

ಆ ಬೆನ್ನಲ್ಲೇ, ದೆಹಲಿಗೆ ಬರುವಂತೆ ವರಿಷ್ಠರಿಂದ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರಿಗೆ ಆಹ್ವಾನ ಬಂದಿತ್ತು. ಹೀಗಾಗಿ, ಮಧ್ಯಾಹ್ನ 1 ಗಂಟೆಗೆ ಎಚ್‌ಎಎಲ್ ವಿಮಾನ ನಿಲ್ದಾಣದಿಂದ ತಮ್ಮ ಆಪ್ತ ಶಾಸಕರಾದ ಎಂ.ಬಿ. ಪಾಟೀಲ, ಕೆ.ಜೆ. ಜಾರ್ಜ್, ಜಮೀರ್ ಅಹ್ಮದ್, ಬೈರತಿ ಸುರೇಶ್ ಜೊತೆ ವಿಶೇಷ ವಿಮಾನದಲ್ಲಿ ಸಿದ್ದರಾಮಯ್ಯ ದೆಹಲಿಗೆ ಪ್ರಯಾಣ ಬೆಳೆಸಿದರು.

ಡಿ.ಕೆ. ಶಿವಕುಮಾರ್ ಅವರ ಜನ್ಮದಿನದ ಅಂಗವಾಗಿ ಬೆಂಗಳೂರಿನ ಕೆಪಿಸಿಸಿ ಕಚೇರಿ ಮುಂದೆ ಹಾಕಿರುವ ಬೃಹತ್ ಕಟೌಟ್ ಮುಂದೆ ಉತ್ತರಪ್ರದೇಶದ ಕಾಂಗ್ರೆಸ್ ಬೆಂಬಲಿಗ ಅನುಕಿಲಾಲ್ ತಿವಾರಿ ಅವರು ಸೋಮವಾರ ಪಕ್ಷದ ಬಾವುಟ ಹಾರಿಸಿದರು –ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಆದರೆ, ದೆಹಲಿಗೆ ತೆರಳುವ ಬಗ್ಗೆ ಏನನ್ನೂ ಹೇಳದ ಡಿ.ಕೆ. ಶಿವಕುಮಾರ್, 'ಶಾಸಕಾಂಗ ಪಕ್ಷದ ನಾಯಕನ ಆಯ್ಕೆಗೆ ಕಾಂಗ್ರೆಸ್ ಸಂಪ್ರದಾಯದಂತೆ ಶಾಸಕರು ಅಭಿಪ್ರಾಯ ನೀಡಿದ್ದಾರೆ. ಹೈಕಮಾಂಡ್ ನನಗೆ ಉಡುಗೊರೆ ಕೊಡುತ್ತದೋ ಬಿಡುತ್ತದೋ ಗೊತ್ತಿಲ್ಲ. ವರಿಷ್ಠರಿಂದ ಆಹ್ವಾನ ಬಂದಿದೆ. ಆದರೆ, ದೆಹಲಿಗೆ ಹೋಗುವ ಬಗ್ಗೆ ನಿರ್ಧರಿಸಿಲ್ಲ' ಎಂದರು.

ಈ ರಾಜಕೀಯ ಬೆಳವಣಿಗೆಗಳ ಮಧ್ಯೆಯೇ ಶಿವಕುಮಾರ್ ಅವರು ಬಾಗಲೂರಿನಲ್ಲಿರುವ ತಮ್ಮ ಫಾರ್ಮ್ ಹೌಸ್‌ಗೆ ತೆರಳಿ ಜನ್ಮದಿನ ಆಚರಿಸಿಕೊಂಡರು. ಬಳಿಕ ಬಸವೇಶ್ವರ ನಗರದಲ್ಲಿರುವ ನೊಣವಿನಕೆರೆ ಸೋಮೆಕಟ್ಟೆಯ ಕಾಡುಸಿದ್ದೇಶ್ವರ ಮಠದ ಶಾಖಾಮಠದಲ್ಲಿರುವ ಅಜ್ಜಯ್ಯನ ಪಾದುಕೆಗೆ ನಮಸ್ಕರಿಸಿ ಆಶೀರ್ವಾದ ಪಡೆದರು.

'ರಾಜ್ಯದ ಜನತೆ ನನ್ನ ಅಧ್ಯಕ್ಷತೆಯಲ್ಲಿ ವಿಶ್ವಾಸ ಇಟ್ಟ ಕಾರಣ ಪಕ್ಷಕ್ಕೆ ದೊಡ್ಡ ಮಟ್ಟದ ಬಹುಮತ ಬಂದಿದೆ. ಎಲ್ಲ ಕಷ್ಟ, ದೌರ್ಜನ್ಯ, ಡಬಲ್ ಎಂಜಿನ್ ಬಲದ ನಡುವೆಯೂ ಜನತೆ ನಮಗೆ 135 ಸೀಟುಗಳನ್ನು ಕೊಟ್ಟಿದ್ದಾರೆ. ಜನರು ನನಗೆ ನೀಡಿದ ಜನ್ಮದಿನದ ಉಡುಗೊರೆಯಿದು' ಎಂದೂ ಹೇಳಿದರು.

ಸುದ್ದಿಗಾರರ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ ಶಿವಕುಮಾರ್, 'ನನಗೆ ತಾಳ್ಮೆ ಇದೆ. ಹೋರಾಟದ ಛಲ ಇದೆ. ಎಲ್ಲ ತಂತ್ರಗಾರಿಕೆಯನ್ನು ಬಳಸಿ ಪಕ್ಷವನ್ನು ಅಧಿಕಾರಕ್ಕೆ ತಂದಿದ್ದೇನೆ. ನನಗೆ ಇಷ್ಟು ಸಾಕು' ಎಂದರು.

'ನನ್ನನ್ನು ಬಂಡೆ ಎಂದು ನೀವು ಕರೆದಿದ್ದೀರಾ. ಆಕೃತಿಯಾದರೂ ಮಾಡಿ, ವಿಧಾನಸೌಧಕ್ಕೆ ಚಪ್ಪಡಿಯಾದರೂ ಮಾಡಿ ಅಥವಾ ಮರಳಾದರೂ ಮಾಡಿ. ಗರುಡಗಂಬವಾದರೂ ಮಾಡಿ. ಒಟ್ಟಿನಲ್ಲಿ ವಿಧಾನಸೌಧಕ್ಕೆ ಚಪ್ಪಡಿ ಮಾಡಿ ಎಂದು ಹೇಳಿದ್ದೆ' ಎಂದರು.

ಹೊಸ ಸರ್ಕಾರದ ಸಂಪುಟಕ್ಕೆ 'ದಶ ಸೂತ್ರ' ಸಲಹೆ

ಬೆಂಗಳೂರು: ಸಚಿವ ಸಂಪುಟ ರಚಿಸುವಾಗ 'ದಶ ಸೂತ್ರ'ಗಳನ್ನು ಅಳವಡಿಸಿಕೊಳ್ಳಬೇಕು ಎಂದು ಹೊಸತಾಗಿ ಅಸ್ತಿತ್ವಕ್ಕೆ ಬರಲಿರುವ ಕಾಂಗ್ರೆಸ್ ಸರ್ಕಾರಕ್ಕೆ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಮತ್ತು ಚುನಾವಣಾ ಕಾರ್ಯತಂತ್ರದ ಉಸ್ತುವಾರಿ ಸುನೀಲ್ ಕನುಗೋಲು ಸಲಹೆ ನೀಡಿದ್ದಾರೆ.

1 2013ರಲ್ಲಿ ಕಾರ್ಯದಕ್ಷತೆಯಿಂದ ಕೆಲಸ ನಿರ್ವಹಿಸದವರಿಗೆ ಈ ಬಾರಿ ಅವಕಾಶ ಇಲ್ಲ
2 ಯುವ ಶಾಸಕರಿಗೆ ಅವಕಾಶ
3 ಮುಂಬರುವ ಲೋಕಸಭೆ ಚುನಾವಣೆ ಹಿನ್ನೆಲೆಯಲ್ಲಿ ಸಚಿವ ಸಂಪುಟ ರಚನೆ
4 ಪ್ರಣಾಳಿಕೆಯಲ್ಲಿರುವ ಅಂಶಗಳನ್ನು ಜಾರಿಗೊಳಿಸಿ, ಜನಮಾನಸಕ್ಕೆ ತಲುಪಿಸುವವರಿಗೆ ಅವಕಾಶ
5 ಬಿಜೆಪಿ ಸರ್ಕಾರದ ಸಚಿವರ ಬಳಿ ಕೆಲಸ ಮಾಡಿದ ಅಧಿಕಾರಿಗಳನ್ನು ಹೊಸ ಸಚಿವರು ತಮ್ಮ ಕಚೇರಿಗೆ ತೆಗೆದುಕೊಳ್ಳುವಾಗ ಎಚ್ಚರಿಕೆ ವಹಿಸಬೇಕು
6 ಸಂಪುಟಕ್ಕೆ ತೆಗೆದುಕೊಳ್ಳುವಾಗ ಪ್ರದೇಶ, ಜಾತಿ, ಯುವಕರು, ಪಕ್ಷನಿಷ್ಠೆ, ಕಾರ್ಯದಕ್ಷತೆ, ವಯೋಮಾನ ಮಾನದಂಡವಾಗಿ ಪರಿಗಣಿಸಬೇಕು
7 ಶಾಸಕಿಯರಿಗೆ ಉತ್ತಮ ಖಾತೆ
8 ತಮ್ಮ ಬೆಂಬಲಿಗರು ಎನ್ನುವ ಅಂಶ ಬಿಟ್ಟು ಪಕ್ಷಕ್ಕೆ ಅನುಕೂಲವಾಗುವ, ಸಂಘಟನೆಗೆ ಒತ್ತು ಕೊಡುವವರಿಗೆ ಆದ್ಯತೆ
9 ವಿಧಾನಪರಿಷತ್ ಸದಸ್ಯರಿಗೂ ಹೆಚ್ಚಿನ ಅವಕಾಶ.
10 ಜನಸಾಮಾನ್ಯರಿಗೆ ಸ್ಪಂದಿಸುವ ಅಧಿಕಾರಿಗಳನ್ನು ಪ್ರಮುಖ ಇಲಾಖೆಗಳಿಗೆ ನಿಯೋಜನೆ.

ಅಪರಾಧ ಪ್ರಕರಣ: ಶಾಸಕರ ಸಂಖ್ಯೆ ಹೆಚ್ಚಳ

ಕರ್ನಾಟಕ ವಿಧಾನಸಭೆಗೆ ಆಯ್ಕೆಯಾದ ಅಪರಾಧ ಹಿನ್ನೆಲೆಯ ಶಾಸಕರ ಸಂಖ್ಯೆಯಲ್ಲಿ ಭಾರಿ ಏರಿಕೆಯಾಗಿದೆ. 2018ಕ್ಕೆ ಹೋಲಿಸಿದರೆ ಗಂಭೀರ ಅಪರಾಧ ಪ್ರಕರಣಗಳಿರುವ ಶಾಸಕರ ಸಂಖ್ಯೆಯಲ್ಲೂ ಹೆಚ್ಚಳ ಕಂಡುಬಂದಿದೆ.

'ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಶಾಸಕರಾಗಿ ಆಯ್ಕೆಯಾದವರ ಅಪರಾಧ, ಆರ್ಥಿಕ ಹಾಗೂ ಶೈಕ್ಷಣಿಕ ಹಿನ್ನೆಲೆ'ಯ ಮಾಹಿತಿಯನ್ನು ಎಡಿಆರ್ ಬಿಡುಗಡೆ ಮಾಡಿದೆ. ವಿಧಾನಸಭೆಗೆ ಆಯ್ಕೆಯಾದ 224ರ ಶಾಸಕರ ಪೈಕಿ ಸರ್ವಜ್ಞನಗರದ ಶಾಸಕ ಕೆ.ಜೆ.ಜಾರ್ಜ್ ಅವರನ್ನು ಹೊರತು ಪಡಿಸಿ ಉಳಿದ 223 ಶಾಸಕರ ಮಾಹಿತಿ ಆಧರಿಸಿ ಈ ವರದಿ ಸಿದ್ಧಪಡಿಸಲಾಗಿದೆ.



ಎಜಿಗಳ ರಾಜೀನಾಮೆ

ಬೆಂಗಳೂರು: ಹೆಚ್ಚುವರಿ ಅಡ್ವೊಕೇಟ್ ಜನರಲ್‌ಗಳಾದ ಎಂ.ಅರುಣ್ ಶ್ಯಾಮ್ ಮತ್ತು ಆರ್.ಸುಬ್ರಹ್ಮಣ್ಯ ಅವರು ತಮ್ಮ ಹುದ್ದೆಗಳಿಗೆ ರಾಜೀನಾಮೆ ನೀಡಿದ್ದಾರೆ.

ಸೋಮವಾರ ರಾಜಭವನಕ್ಕೆ ತೆರಳಿದ ಇಬ್ಬರೂ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ತಮ್ಮ ರಾಜೀನಾಮೆ ಪತ್ರ ಸಲ್ಲಿಸಿದರು.

ಡಿಕೆಶಿ ಇಂದು ದೆಹಲಿಗೆ

ಒಂದನೇ ಪುಟದಿಂದ...

'ಅಲ್ಲದೆ, ಸೋನಿಯಾ ಗಾಂಧಿ ಅವರು ಶಿಮ್ಲಾದಿಂದ ಮಂಗಳವಾರ ದೆಹಲಿಗೆ ವಾಪಸಾಗುತ್ತಾರೆ. ಅವರು ಬರಲಿ ಎಂದು ನಾನು ಕಾಯುತ್ತಿದ್ದೆ. ಅವರನ್ನು ಭೇಟಿ ಮಾಡುವುದು ನನ್ನ ಕರ್ತವ್ಯ' ಎಂದು ಹೇಳಿದರು.

'ಯಾರಿಗೆ ಶಾಸಕರ ಬೆಂಬಲ ಇದೆ ಎಂಬುವುದು ಮುಖ್ಯವಲ್ಲ. ನನ್ನ ಅಧ್ಯಕ್ಷತೆಯಲ್ಲಿ 135 ಶಾಸಕರು ಆಯ್ಕೆಯಾಗಿದ್ದಾರೆ. ಮುಖ್ಯಮಂತ್ರಿ ಆಯ್ಕೆ ವಿಚಾರವನ್ನು ಪಕ್ಷದ ವರಿಷ್ಠರ ತೀರ್ಮಾನಕ್ಕೆ ಬಿಟ್ಟಿದ್ದೇವೆ. ನನ್ನ ಜೊತೆ ಯಾವ ಶಾಸಕರೂ ಇಲ್ಲ. ನನಗೆ ಯಾರ ಬೆಂಬಲವೂ ಬೇಡ. ಯಾರು, ಯಾರನ್ನು ಬೇಕಾದರೂ ಕರೆದುಕೊಂಡು ಹೋಗಬಹುದು' ಎಂದೂ ಹೇಳಿದರು.

ಶಿವಕುಮಾರ್ ಅವರ ಆರೋಗ್ಯ ಪರಿಶೀಲಿಸಿದ ವೈದ್ಯ ಡಾ. ಶಂಕರ್ ಗುಹಾ ಮಾತನಾಡಿ, 'ರಕ್ತದೊತ್ತಡ ಚೆಕ್ ಮಾಡಲಾಗಿದೆ. ಚುನಾವಣಾ ಫಲಿತಾಂಶ ಬಂದ ಬಳಿಕ ಸತತವಾಗಿ ಓಡಾಡಿದ್ದಾರೆ. ಸದ್ಯಕ್ಕೆ ಪ್ರಯಾಣ ಬೇಡವೆಂದು ಸಲಹೆ ನೀಡಲಾಗಿದೆ' ಎಂದರು.

ಡಿಕೆಎಸ್–ಖರ್ಗೆ ಭೇಟಿ: ಈ ಮಧ್ಯೆ, ಸಂಸದ ಮತ್ತು ಡಿ.ಕೆ.ಶಿವಕುಮಾರ್ ಸಹೋದರ ಡಿ.ಕೆ.ಸುರೇಶ್ ನವದೆಹಲಿಯಲ್ಲಿ ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿಯಾಗಿ ಚರ್ಚಿಸಿದರು.

ಬಳಿಕ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, 'ಹೌದು, ಶಿವಕುಮಾರ್ ಅವರು ಮಂಗಳವಾರ ದೆಹಲಿಗೆ ಬರುತ್ತಿದ್ದಾರೆ' ಎಂದು ಪ್ರತಿಕ್ರಿಯಿಸಿದರು.

ಡಿಕೆಶಿ ಪ್ರಚಾರ ಕಾರ್ಯದ ಉಸ್ತುವಾರಿ ವಹಿಸಿದ್ದ ನರೇಶ್ ಅಭಿಮತ

ಗ್ಯಾರಂಟಿಗಳೇ ಗೆಲುವಿನ ರೂವಾರಿ

ನವದೆಹಲಿ (ಪಿಟಿಐ): ಕರ್ನಾಟಕ ವಿಧಾನಸಭೆ ಚುನಾವಣೆ ಫಲಿತಾಂಶದಿಂದ ಕಾಂಗ್ರೆಸ್ ಪಕ್ಷ ಕಲಿಯಬೇಕಾದ ಪಾಠ ಯಾವುದು? ಶೀಘ್ರ ಸಿದ್ಧತೆ ಆರಂಭಿಸುವುದು ಮತ್ತು ಪರಿಶ್ರಮ –ರಾಜಕೀಯ ಪ್ರಚಾರ ತಜ್ಞ ನರೇಶ್ ಅರೋರಾ ಅವರ ಅಭಿಪ್ರಾಯವಿದು.

ಕಾಂಗ್ರೆಸ್ ಪಕ್ಷದ ಅಭೂತಪೂರ್ವ ಚುನಾವಣಾ ಜಯಭೇರಿಗಾಗಿ ಅದು ನೀಡಿದ್ದ ಐದು ಗ್ಯಾರಂಟಿ ಭರವಸೆಗಳು ಕಾರಣ ಎಂಬುದು ಅವರ ಅಭಿಮತ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ಜೊತೆ ನಿಕಟವಾಗಿ ಕಾರ್ಯನಿರ್ವಹಿಸಿದ ಅರೋರಾ, ಪಕ್ಷದ ಹಲವು ಚುನಾವಣಾ ಪ್ರಚಾರ ತಂತ್ರಗಳ ರೂವಾರಿ. ಅವರು ಡಿಸೈನ್ ಬಾಕ್ಸ್‌ಡ್ ಸಂಸ್ಥೆಯ ನೇತೃತ್ವ ವಹಿಸಿದ್ದಾರೆ.

ಈ ಫಲಿತಾಂಶ ಖಂಡಿತವಾಗಿ ರಾಷ್ಟ್ರಮಟ್ಟದಲ್ಲಿ ವಿರೋಧಪಕ್ಷಗಳಿಗೆ ಹೆಚ್ಚಿನ ಬಲ ನೀಡಿದೆ. ಬಿಜೆಪಿ ಜೊತೆಗೆ ಮುಖಾಮುಖಿಯಾಗಿ ಹೋರಾಟದಲ್ಲಿ ಗೆಲುವು ಕಾಣಬಹುದು ಎಂಬ ವಿಶ್ವಾಸ ಮೂಡಿಸಿದೆ ಎನ್ನುತ್ತಾರೆ.

ಡಿ.ಕೆ.ಶಿವಕುಮಾರ್ ಜೊತೆಗೆ ನರೇಶ್ ಅರೋರಾ –ಪಿಟಿಐ ಚಿತ್ರ

ಮುಖ್ಯಮಂತ್ರಿ ಸ್ಥಾನ ಕುರಿತು ಶಾಸಕರ ಜೊತೆಗೆ ಚರ್ಚಿಸಿ ಒಂದು ಸಾಲಿನ ನಿರ್ಣಯ ಅಂಗೀಕರಿಸಿದೆ. ಸಿದ್ದರಾಮಯ್ಯ, ಶಿವಕುಮಾರ್ ಜೊತೆಗೆ ಚರ್ಚಿಸಿ ತೀರ್ಮಾನಿಸುವ ವಿಶ್ವಾಸ ನಮಗಿದೆ ಎಂದು ಸುದ್ದಿಸಂಸ್ಥೆ ಜೊತೆಗೆ ಮಾತನಾಡಿ ಪ್ರತಿಕ್ರಿಯಿಸಿದರು.

ಬಿಜೆಪಿ ಜೊತೆಗೆ ಹೋರಾಟ ಇದ್ದಾಗ ಬಿಜೆಪಿಯೇ ಗೆಲ್ಲಲಿದೆ ಎಂಬ ಅಭಿಪ್ರಾಯವಿತ್ತು. ಕರ್ನಾಟಕದಲ್ಲಿ ಬಿಜೆಪಿ ಸರ್ಕಾರವಿತ್ತು. ಆದರೆ, ಬಿಜೆಪಿಯೇತರ ಪಕ್ಷ ಗೆದ್ದಿತು. ಈ ಬೆಳವಣಿಗೆ ಕಾಂಗ್ರೆಸ್, ಇತರೆ ಪ್ರತಿಪಕ್ಷಗಳ ವಿಶ್ವಾಸವನ್ನು ಖಂಡಿತವಾಗಿ ಹೆಚ್ಚಿಸಲಿದೆ ಎಂದರು.

ಶೀಘ್ರ ಚುನಾವಣಾ ಸಿದ್ಧತೆ ಆರಂಭಿಸುವುದು ಮುಖ್ಯ. ಕನಿಷ್ಠ ಎರಡೂವರೆ ವರ್ಷ ಮೊದಲು ಸಿದ್ಧತೆ ಆರಂಭವಾಗಿತ್ತು. ಅದಕ್ಕಾಗಿ ದಿನಪೂರ್ತಿ ತೊಡಗಿಕೊಳ್ಳುವ ಸಿಬ್ಬಂದಿ ಬೇಕು. ಎರಡು ತಿಂಗಳಿದ್ದಾಗ ಸಿದ್ಧತೆ ಆರಂಭಿಸಿ ಜನರನ್ನು ತಲುಪಲು ಆಗದು ಎಂದರು.

ಗ್ಯಾರಂಟಿ ಭರವಸೆಗಳೇ ಗೆಲುವಿಗೆ ಕಾರಣ ಎಂದ ಅವರು, ಅಸ್ಸಾಂನಲ್ಲಿಯೂ ಹೀಗೇ ಭರವಸೆ ನೀಡಲಾಗಿತ್ತು. ಆದರೆ, ಅಲ್ಲಿ ಸಮಯ ಕಡಿಮೆ ಇತ್ತು. ಈ ಭರವಸೆಗಳು ಅಲ್ಲಿ ಜನರ ಮನದಲ್ಲಿ ನೆಲೆಯೂರಲಿಲ್ಲ ಎಂದು ಹೇಳಿದರು.

'ಭರವಸೆ ಅರ್ಥಮಾಡಿಕೊಳ್ಳಲು ಜನರಿಗೆ ಸಮಯ ಬೇಕು. ಗ್ಯಾರಂಟಿ ಎಂದರೆ ಅದು ಬದ್ಧತೆಯನ್ನೂ ಮೀರಿದ್ದು. ಆಮ್ ಆದ್ಮಿ ಪಕ್ಷ ಪಂಜಾಬ್‌ನಲ್ಲಿ ಇದೇ ತಂತ್ರ ಬಳಸಿ, ಯಶಸ್ವಿಯೂ ಆಯಿತು. ಈಗ ಕರ್ನಾಟಕದಲ್ಲೂ ಯಶಸ್ಸು ಕಂಡಿತು' ಎಂದರು.

ಚುನಾವಣೆಯ ಪೂರ್ವದಲ್ಲಿ ಸಿದ್ದರಾಮಯ್ಯ ಮತ್ತು ಶಿವಕುಮಾರ್ ಪರಸ್ಪರ ಚರ್ಚೆಯಲ್ಲಿ ತೊಡಗಿರುವ ಕುರಿತ ವಿಡಿಯೊ ಉಲ್ಲೇಖಿಸಿ, ಇಬ್ಬರು ಹಿರಿಯ ನಾಯಕರು ಒಟ್ಟಿಗಿದ್ದಾಗ ಚರ್ಚಿಸುತ್ತಾರೆ ಎಂಬ ಸಂದೇಶ ಸಾರುವುದು ಇದರ ಉದ್ದೇಶವಾಗಿತ್ತು ಎಂದರು.

'ಪರಸ್ಪರ ಟೀಕಿಸುತ್ತಾರೆ ಎಂಬ ನಂಬಿಕೆಗೆ ವಿರುದ್ಧವಾಗಿ ಇಬ್ಬರೂ ಮುಖಂಡರು ಪಕ್ಷದ ಬಗ್ಗೆ ಚರ್ಚಿಸಿದರು. ಪರಸ್ಪರರ ಬಗ್ಗೆ ಮಾತನಾಡಿದರು. ಜನರ ಬಗ್ಗೆ ಚರ್ಚಿಸಿದರು. ಆಂತರಿಕವಾಗಿ ಸ್ಪರ್ಧೆ ಇರಬಹುದು, ಅದರರ್ಥ ಕಚ್ಚಾಡುತ್ತಾರೆ ಎಂಬುದಲ್ಲ' ಎಂದರು.

ಡಿಕೆಶಿ ಪರ ಪ್ರಚಾರದ ನೇತೃತ್ವ ವಹಿಸಿದ್ದ ಅರೋರಾ, 'ಶಿವಕುಮಾರ್ ಅನುಭವವುಳ್ಳ, ರಾಜಕಾರಣದ ಬದ್ಧತೆಯುಳ್ಳ ವ್ಯಕ್ತಿ. ಅತ್ಯಧಿಕ ಅಂತರದಿಂದ ಗೆದ್ದಿದ್ದಾರೆ. ಅವರಿಗೆ ಸಾಮರ್ಥ್ಯ, ದೂರದೃಷ್ಟಿ ಇದೆ. ಸಿ.ಎಂ ಆಗಲು ಅರ್ಹರಿದ್ದಾರೆ ಎಂದು ಹೇಳಿದರು.

ನಿಗಮ, ಮಂಡಳಿಗಳಿಗೆ ರಾಜೀನಾಮೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಸರ್ಕಾರದ ಅವಧಿಯಲ್ಲಿ ನಿಗಮ ಮತ್ತು ಮಂಡಳಿಗಳ ಅಧ್ಯಕ್ಷರಾಗಿ ನೇಮಕಗೊಂಡಿದ್ದ ಸಚ್ಚಿದಾನಂದ ಮೂರ್ತಿ, ಎಂ.ಜಿ. ಮುಳೆ ಮತ್ತು ಎಸ್. ನರೇಶ್ ಕುಮಾರ್ ತಮ್ಮ ಸ್ಥಾನಗಳಿಗೆ ಸೋಮವಾರ ರಾಜೀನಾಮೆ ಸಲ್ಲಿಸಿದ್ದಾರೆ.

ಎಚ್.ಎಸ್. ಸಚ್ಚಿದಾನಂದ ಮೂರ್ತಿ ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಅಧ್ಯಕ್ಷರಾಗಿದ್ದರು. ಎಂ.ಜಿ. ಮುಳೆ ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮಕ್ಕೆ ಹಾಗೂ ನರೇಶ್ ಕುಮಾರ್ ಕರ್ನಾಟಕ ಸವಿತಾ ಸಮಾಜದ ಅಭಿವೃದ್ಧಿ ನಿಗಮಕ್ಕೆ ಅಧ್ಯಕ್ಷರಾಗಿದ್ದರು.

ರಂಗಾಯಣ ನಿರ್ದೇಶಕ ರಾಜೀನಾಮೆ(ಶಿವಮೊಗ್ಗ): ಇಲ್ಲಿನ ರಂಗಾಯಣ ನಿರ್ದೇಶಕ ಸಂದೇಶ್ ಜವಳಿ ಅವರು ತಮ್ಮ ಸ್ಥಾನಕ್ಕೆ ಸೋಮವಾರ ರಾಜೀನಾಮೆ ಸಲ್ಲಿಸಿದ್ದಾರೆ.

ಬಿಜೆಪಿಗೆ ಸೋಲು: ಶ್ರದ್ಧಾಂಜಲಿ ಬ್ಯಾನರ್–ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಪುತ್ತೂರು (ದಕ್ಷಿಣ ಕನ್ನಡ): ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹಾಗೂ ಬೆಂಗಳೂರು ಉತ್ತರ ಕ್ಷೇತ್ರದ ಸಂಸದ ಡಿ.ವಿ. ಸದಾನಂದ ಗೌಡ ಅವರೇ ಪುತ್ತೂರು ಕ್ಷೇತ್ರದಲ್ಲಿ ಬಿಜೆಪಿ ಸೋಲಿಗೆ ಕಾರಣ ಎಂಬ ಒಕ್ಕಣೆಯ ಬ್ಯಾನರ್ ಅನ್ನು ನಗರದ ಸರ್ಕಾರಿ ಬಸ್ ನಿಲ್ದಾಣದ ಮುಂಭಾಗದಲ್ಲಿ ಅಳವಡಿಸಲಾಗಿತ್ತು. ಆ ಬ್ಯಾನರ್‌ಗೆ ಚಪ್ಪಲಿ ಹಾರವನ್ನೂ ಹಾಕಲಾಗಿತ್ತು.

'7 ಮಂದಿಯ ತಂಡ ಸೋಮವಾರ ನಸುಕಿನಲ್ಲಿ 1 ಗಂಟೆ ಸುಮಾರಿಗೆ ಈ ಬ್ಯಾನರ್ ಅಳವಡಿಸಿರುವ ಮಾಹಿತಿ ಲಭಿಸಿದೆ. ಈ ಸಂಬಂಧ ತಾಲ್ಲೂಕಿನ ನರಿಮೊಗ್ರುವಿನ ವಿಶ್ವನಾಥ್ ಹಾಗೂ ಮಾಧವ ಎಂಬುವರನ್ನು ವಶಕ್ಕೆ ಪಡೆದಿದ್ದೇವೆ. ಉಳಿದ ಆರೋಪಿಗಳ ಪತ್ತೆಗೆ ಕ್ರಮಕೈಗೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸೋಮವಾರ ಬೆಳಿಗ್ಗೆ ಕಂಡುಬಂದ ಈ ಬ್ಯಾನರ್‌ನಲ್ಲಿ ನಳಿನ್ ಹಾಗೂ ಸದಾನಂದಗೌಡ ಅವರ ಭಾವಚಿತ್ರಗಳನ್ನು ಹಾಕಲಾಗಿತ್ತು. 'ಭಾವಪೂರ್ಣ ಶ್ರದ್ಧಾಂಜಲಿ... ಬಿಜೆಪಿ ಹೀನಾಯವಾಗಿ ಸೋಲಲು ಕಾರಣರಾದ ನಿಮಗೆ ಶ್ರದ್ಧಾಂಜಲಿ' ಎಂದು ಹಾಗೂ ಕೆಳಗಡೆ ನೊಂದ ಹಿಂದೂ ಕಾರ್ಯಕರ್ತರು ಎಂದು ಬರೆಯಲಾಗಿತ್ತು.

ಗಮನಕ್ಕೆ ಬರುತ್ತಿದ್ದಂತೆಯೇ ನಗರಸಭೆಯವರು ಬ್ಯಾನರ್ ತೆರವುಗೊಳಿಸಿದರು.

ದೂರು: ಬ್ಯಾನರ್ ಅಳವಡಿಸಿರುವುದರ ವಿರುದ್ಧ ಬಿಜೆಪಿಯ ಪುತ್ತೂರು ಗ್ರಾಮಾಂತರ ಮಂಡಲ ಅಧ್ಯಕ್ಷ ಸಾಜ ರಾಧಾಕೃಷ್ಣ ಆಳ್ವ, ನಗರ ಮಂಡಲ ಅಧ್ಯಕ್ಷ ಪಿ.ಜಿ.ಜಗನ್ನಿವಾಸ ರಾವ್ ಅವರು ಪುತ್ತೂರು ನಗರ ಠಾಣೆಯಲ್ಲಿ ದೂರು ನೀಡಿದ್ದಾರೆ. ಜನಪ್ರತಿನಿಧಿಗಳಿಗೆ ಅಗೌರವ ತೋರಿರುವ ಕಿಡಿಗೇಡಿಗಳನ್ನು ತಕ್ಷಣ ಬಂಧಿಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ.

ಗಾದಿಗೆ ಹಟ: ಹಾದಿ ಜಟಿಲ

ಒಂದನೇ ಪುಟದಿಂದ

'ಸಿಎಲ್‌ಪಿ ನಾಯಕ ಹುದ್ದೆಗೆ ಸಿದ್ದರಾಮಯ್ಯ ಪರವಾಗಿ ಹೆಚ್ಚಿನ ಶಾಸಕರು ಒಲವು ವ್ಯಕ್ತಪಡಿಸಿದ್ದಾರೆ. ಈ ವಿಷಯವನ್ನು ಎಐಸಿಸಿ ವೀಕ್ಷಕರು ಖರ್ಗೆ ಅವರ ಗಮನಕ್ಕೆ ತಂದಿದ್ದಾರೆ. ಮುಖ್ಯಮಂತ್ರಿ ಸ್ಥಾನವನ್ನು ತಲಾ ಎರಡೂವರೆ ವರ್ಷ ಹಂಚಿಕೆ ಮಾಡುವ ವಿಚಾರವೂ ವರಿಷ್ಠರ ಮುಂದಿದೆ. ಶಿವಕುಮಾರ್ ಅವರೊಂದಿಗೆ ಸಮಾಲೋಚನೆ ನಡೆಸಿದ ಬಳಿಕವಷ್ಟೇ ಈ ಬಗ್ಗೆ ಅಂತಿಮ ತೀರ್ಮಾನ ತೆಗೆದುಕೊಳ್ಳಲಿದ್ದಾರೆ. ಬುಧವಾರ ಅಥವಾ ಗುರುವಾರ ನೂತನ ಮುಖ್ಯಮಂತ್ರಿ ಪ್ರಮಾಣವಚನ ಸ್ವೀಕರಿಸುವ ಸಾಧ್ಯತೆ ಇದೆ' ಎಂದು ಮೂಲಗಳು ಹೇಳಿವೆ.

'ಮುಖ್ಯಮಂತ್ರಿ ಸ್ಥಾನವನ್ನು ಸಿದ್ದರಾಮಯ್ಯ ಅವರಿಗೆ ನೀಡಬೇಕು ಎಂದು ಹೆಚ್ಚಿನ ಶಾಸಕರು ಅಭಿಪ್ರಾಯ ನೀಡಿರುವುದು ನಿಜ. ಆದರೆ, ಕಳೆದ ಮೂರು ವರ್ಷಗಳಲ್ಲಿ ಶಿವಕುಮಾರ್ ಅವರು ಅದ್ಭುತವಾಗಿ ಪಕ್ಷ ಸಂಘಟನೆ ಮಾಡಿದ್ದಾರೆ. ಮುಖ್ಯಮಂತ್ರಿ ಸ್ಥಾನದ ವಿಚಾರದಲ್ಲಿ ಅವರಿಗೂ ನ್ಯಾಯ ಸಿಗಬೇಕು. ಕನಿಷ್ಠ ಎರಡೂವರೆ ವರ್ಷವಾದರೂ ಅವರಿಗೆ ಮುಖ್ಯಮಂತ್ರಿ ಹುದ್ದೆ ನೀಡಬೇಕು. ಈ ವಿಷಯದಲ್ಲಿ ಸಿದ್ದರಾಮಯ್ಯ ಉದಾರಿಯಾಗಬೇಕು. ಇದು ಅನೇಕ ಶಾಸಕರ ಅಭಿಪ್ರಾಯವೂ ಹೌದು' ಎಂದು ಪಕ್ಷದ ಹಿರಿಯ ನಾಯಕರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

> **ನೂತನ ಮುಖ್ಯಮಂತ್ರಿಯ ಆಯ್ಕೆ ಪ್ರಕ್ರಿಯೆ ನಡೆಯುತ್ತಿದೆ. ಮಂಗಳವಾರ ಸಂಜೆ ವೇಳೆಗೆ ನೂತನ ಮುಖ್ಯಮಂತ್ರಿಯ ಹೆಸರು ಘೋಷಣೆಯಾಗಲಿದೆ**
> **ಎಚ್.ಕೆ.ಪಾಟೀಲ,** ಕಾಂಗ್ರೆಸ್‌ನ ಹಿರಿಯ ಶಾಸಕ

> **ಹೈಕಮಾಂಡ್‌ನಿಂದ ಬಂದಿದ್ದ ವೀಕ್ಷಕರು ಎಲ್ಲ ಶಾಸಕರಿಂದ ವರದಿ ಪಡೆದಿದ್ದಾರೆ. ಕರ್ನಾಟಕದಲ್ಲಿ ಶೀಘ್ರವೇ ನೂತನ ಸರ್ಕಾರ ರಚನೆ ಮಾಡುತ್ತೇವೆ**
> **ರಣದೀಪ್ ಸಿಂಗ್ ಸುರ್ಜೇವಾಲಾ**
> ಪಕ್ಷದ ರಾಜ್ಯ ಉಸ್ತುವಾರಿ

ಡಿ.ಕೆ.ಶಿವಕುಮಾರ್ ಆತಂಕವೇನು?

ಒಂದನೇ ಪುಟದಿಂದ

ಪಟ್ಟಕ್ಕೆ ಉಭಯ ನಾಯಕರ ಪ್ರತಿಪಾದನೆ: ಮತ್ತೊಮ್ಮೆ ಮುಖ್ಯಮಂತ್ರಿ ಸ್ಥಾನಕ್ಕೆ ಪಟ್ಟು ಹಿಡಿದಿರುವ ಸಿದ್ದರಾಮಯ್ಯ, 'ಅತ್ಯುತ್ತಮ, ಜನಪರ ಆಡಳಿತವನ್ನು 2013ರಿಂದ 2018ರ ಅವಧಿಯಲ್ಲಿ ನೀಡಿದ್ದೇನೆ. ಆದರೆ, ಸೂಕ್ತ ಪ್ರಚಾರ ಸಿಗದ ಕಾರಣ ಪಕ್ಷ ಮರಳಿ ಅಧಿಕಾರಕ್ಕೆ ಬರಲಿಲ್ಲ. ಈಗ ಪೂರ್ಣ ಬಹುಮತದ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ. ಮತ್ತೊಮ್ಮೆ ಅಂತಹ ಆಡಳಿತವನ್ನು ಜನ ಬಯಸಿ ಕಾಂಗ್ರೆಸ್ ಪಕ್ಷವನ್ನು ಗೆಲ್ಲಿಸಿದ್ದಾರೆ. ಹೀಗಾಗಿ ನನಗೆ ಮುಖ್ಯಮಂತ್ರಿ ಸ್ಥಾನ ನೀಡಬೇಕು' ಎಂದು ಪಟ್ಟು ಹಿಡಿದಿದ್ದಾರೆ.

'ಪಕ್ಷದ ಶೇ 70ಕ್ಕೂ ಹೆಚ್ಚು ಶಾಸಕರು ನನ್ನ ನಾಯಕತ್ವಕ್ಕೆ ಬೆಂಬಲ ವ್ಯಕ್ತಪಡಿಸಿದ್ದಾರೆ. ಮತ್ತೆ ಅವಕಾಶ ನೀಡಿದರೆ ಅದೇ ಮಾದರಿಯಲ್ಲಿ ಉತ್ತಮ ಹಾಗೂ ಪಾರದರ್ಶಕ ಆಡಳಿತ ನೀಡುತ್ತೇನೆ ಎಂಬ ಭರವಸೆ ನೀಡುತ್ತೇನೆ' ಎಂದೂ ಹೇಳಿದ್ದಾರೆ.

ಮತ್ತೊಂದೆಡೆ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಕೂಡಾ ಸಿಎಲ್‌ಪಿ ನಾಯಕನ ಸ್ಥಾನಕ್ಕೆ ಹಟ ಹಿಡಿದು ಕುಳಿತಿದ್ದಾರೆ. ತಮ್ಮ ಆಯ್ಕೆಗೆ ಅವರೂ ಸಾಕಷ್ಟು ವಿವರಣೆಯನ್ನು ಹೈಕಮಾಂಡ್ ಮುಂದಿಟ್ಟಿದ್ದಾರೆ. 'ಕಳೆದ ಮೂರು ವರ್ಷ ಪಕ್ಷ ಸಂಘಟನೆಗೆ ಶ್ರಮಿಸಿದ್ದೇನೆ. ಪಕ್ಷ ಅಧಿಕಾರಕ್ಕೆ ಬರುವಲ್ಲಿ ನನ್ನ ಪ್ರಯತ್ನ ದೊಡ್ಡದಿದೆ. ಕೆಪಿಸಿಸಿ ಅಧ್ಯಕ್ಷರಾದವರಿಗೆ ಮುಖ್ಯಮಂತ್ರಿ ಸ್ಥಾನ ನೀಡಬೇಕು' ಎಂದು ಬಲವಾಗಿ ಪ್ರತಿಪಾದಿಸಿದ್ದಾರೆ.

ಕೋಮು ಸಾಮರಸ್ಯಕ್ಕೆ ಭಂಗ ಯತ್ನ: 13 ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ವಿಧಾನಸಭೆ ಚುನಾವಣೆ ನಂತರ ಕೋಮುಸಾಮರಸ್ಯಕ್ಕೆ ಭಂಗ ಉಂಟು ಮಾಡುವ ಸುಳ್ಳು ಸುದ್ದಿಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಡುವುದು ಹೆಚ್ಚಾಗಿದ್ದು, ಈ ಸಂಬಂಧ ಒಟ್ಟು 13 ಪ್ರಕರಣಗಳು ದಾಖಲಾಗಿವೆ.

'13 ಮಂದಿಯ ವಿರುದ್ಧವೂ ಕಾನೂನು ಕ್ರಮ ಜರುಗಿಸಲಾಗಿದೆ. ನೋಟಿಸ್ ನೀಡಲಾಗಿದೆ. ಚುನಾವಣೆ ಬಳಿಕವೂ ಕೋಮು ಸಾಮರಸ್ಯಕ್ಕೆ ಭಂಗ ಉಂಟು ಮಾಡುವಂತಹ ಸುಳ್ಳು ಸುದ್ದಿಗಳನ್ನು ಫೇಸ್‌ಬುಕ್ ಮೊದಲಾದ ಸಾಮಾಜಿಕ ಜಾಲತಾಣಗಳಲ್ಲಿ ನಕಲಿ ಖಾತೆಗಳ ಮೂಲಕ ಹರಡಲಾಗುತ್ತಿದೆ. ಇದನ್ನು ಸೂಕ್ಷ್ಮವಾಗಿ ಅವಲೋಕಿಸಲಾಗುತ್ತಿದ್ದು, ನಿಗಾ ವಹಿಸಲಾಗಿದೆ. ಸುಳ್ಳು ಸುದ್ದಿ ಹರಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದು ಎಸ್ಪಿ ಕೆ.ರಾಮರಾಜನ್ ಎಚ್ಚರಿಕೆ ನೀಡಿದ್ದಾರೆ.

ಕಾಂಗ್ರೆಸ್‌ನ ಉಚಿತ ವಿದ್ಯುತ್ ಗ್ಯಾರಂಟಿ; ಗ್ರಾಹಕರ ಕಾದು ನೋಡುವ ತಂತ್ರ

ವಿದ್ಯುತ್ ಬಿಲ್ ಪಾವತಿಗೆ ಹಿಂದೇಟು

• ಸಂಧ್ಯಾ ಹೆಗಡೆ

ಮಂಗಳೂರು: ರಾಜ್ಯದಲ್ಲಿ ಕಾಂಗ್ರೆಸ್ ಬಹುಮತ ಗಳಿಸಿದ ಬೆನ್ನಲ್ಲೇ 'ವಿದ್ಯುತ್ ಬಿಲ್ ಪಾವತಿಸಬೇಡಿ (do not pay electricity bill)' ಅಭಿಯಾನ ಅಲ್ಲಲ್ಲಿ ಆರಂಭವಾಗಿರುವುದು ಮೆಸ್ಕಾಂಗೆ ತಲೆನೋವಾಗಿ ಪರಿಣಮಿಸಿದೆ.

ಚುನಾವಣೆ ಪೂರ್ವದಲ್ಲಿ ಕಾಂಗ್ರೆಸ್ ಘೋಷಿಸಿದ್ದ ಪ್ರಣಾಳಿಕೆಯಲ್ಲಿ 200 ಯೂನಿಟ್‌ವರೆಗೆ ಪ್ರತಿ ಮನೆಗೆ ಉಚಿತವಾಗಿ ವಿದ್ಯುತ್ ನೀಡುವುದಾಗಿ ಹೇಳಿತ್ತು. ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ ಅಧಿಕಾರ ಹಿಡಿಯಬಹುದೆಂಬ ನಿರೀಕ್ಷೆಯಲ್ಲಿ ಚುನಾವಣೆಗೆ ಒಂದು ವಾರ ಪೂರ್ವದಿಂದಲೇ ಅನೇಕರು ಕಾದುನೋಡುವ ತಂತ್ರ ಅನುಸರಿಸಿದ್ದರು. ಕಾಂಗ್ರೆಸ್‌ಗೆ ನಿಚ್ಚಳ ಬಹುಮತ ದೃಢವಾದ ಮೇಲೆ ಉಚಿತ ಘೋಷಣೆಯ ಅನುಷ್ಠಾನದ ನಿರೀಕ್ಷೆಯಲ್ಲಿ ಜನರು ವಿದ್ಯುತ್ ಬಿಲ್ ಪಾವತಿಸುತ್ತಿಲ್ಲ. ಹೀಗಾಗಿ, ಮೆಸ್ಕಾಂ ಕಚೇರಿಗೆ ಬಿಲ್ ಪಾವತಿಸಲು ಬರುವವರ ಸಂಖ್ಯೆ ಕಡಿಮೆಯಾಗಿದೆ ಎಂದು ಮೂಲಗಳು ತಿಳಿಸಿವೆ.

> **ಕೆಲವು ಗ್ರಾಹಕರು ಬಿಲ್ ಬಗ್ಗೆ ಕೇಳುತ್ತಾರೆ. ಆದರೆ, ಪಾವತಿಸುವುದಿಲ್ಲ ಎಂದು ಹೇಳಿಲ್ಲ, ಬಿಲ್ ಸಂಗ್ರಹದಲ್ಲಿ ಅಂತಹ ವ್ಯತ್ಯಾಸವೇನೂ ಆಗಿಲ್ಲ**
> **ಲೋಹಿತ್ ಬಿ.ಎಸ್,** ಕಾರ್ಯನಿರ್ವಾಹಕ ಎಂಜಿನಿಯರ್, ಮಂಗಳೂರು ವಿಭಾಗ

'ಕಚೇರಿಗೆ ಬರುವ ಗ್ರಾಹಕರು ಬಿಲ್ ಪಾವತಿಸಬೇಕೇ, ಬೇಡವೇ ಎಂದು ಕೌಂಟರ್‌ಗಳಲ್ಲಿ ವಿಚಾರಿಸಿ ವಾಪಸಾಗುತ್ತಿದ್ದಾರೆ. ಕಚೇರಿಗಳಲ್ಲಿ ಬಿಲ್ ಪಾವತಿ ಕೌಂಟರ್ ಎದುರು ಸರದಿಯೇ ಇಲ್ಲ. ನಾನು ಕೂಡ ಉಚಿತ ಸೌಲಭ್ಯ ಸಿಗಬಹುದು ಎಂದು ಬಿಲ್ ಬಾಕಿ ಉಳಿಸಿಕೊಂಡಿದ್ದೆ. ಕೊನೆಯ ದಿನ ಸಮೀಪಿಸಿದ ಕಾರಣ ಪಾವತಿಸಿದ್ದೇನೆ. ನಮ್ಮ ಮನೆಯಲ್ಲಿ ತಿಂಗಳಿಗೆ ಸರಾಸರಿ 90ರಿಂದ 100 ಯೂನಿಟ್ ವಿದ್ಯುತ್ ಬಳಕೆಯಾಗುತ್ತದೆ. ಕಾಂಗ್ರೆಸ್ ಘೋಷಿಸಿರುವ ಸ್ಲ್ಯಾಬ್ ಒಳಗೆ ಇರುವ ಕಾರಣ, ಮುಂದಿನ ತಿಂಗಳು ಉಚಿತ ಸಿಗಬಹುದೆಂಬ ನಿರೀಕ್ಷೆಯಲ್ಲಿದ್ದೇನೆ' ಎಂದು ಬಿಲ್ ಪಾವತಿಸಲು ಹೋಗಿದ್ದ ಗ್ರಾಹಕರೊಬ್ಬರು ಪ್ರತಿಕ್ರಿಯಿಸಿದರು.

'ಈ ತಿಂಗಳಿನ ವಿದ್ಯುತ್ ಬಿಲ್ ಪಾವತಿಸುವ ಬಗ್ಗೆ ಮಣ್ಣಗುಡ್ಡದ ಮೆಸ್ಕಾಂ ಕಚೇರಿಗೆ ಕರೆ ಮಾಡಿ ವಿಚಾರಿಸಿದಾಗ, 'ನಮಗೆ ಈವರೆಗೆ ಯಾವುದೇ ನಿರ್ದೇಶನ ಬಂದಿಲ್ಲ' ಎಂದು ಕರೆ ಸ್ವೀಕರಿಸಿದ ಕಚೇರಿ ಸಿಬ್ಬಂದಿ ಹೇಳಿದರು. ಸರ್ಕಾರ ಅಧಿಕೃತವಾಗಿ ಘೋಷಣೆ ಮಾಡುವ ತನಕ ನಾನು ಕಾಯುತ್ತೇನೆ. ಬಿಲ್ ಪಾವತಿಸುವುದಿಲ್ಲ' ಎನ್ನುತ್ತಾರೆ ಗ್ರಾಹಕ ಕೆ. ಮಹೇಶ್.

'ಬಿಲ್ ಪಾವತಿ ಸಂಬಂಧ ಕಚೇರಿಗೆ ಹಲವಾರು ಕರೆಗಳು ಬರುತ್ತಿದ್ದು, ಸರ್ಕಾರದ ನಿರ್ದೇಶನ ಬರುವವರೆಗೆ ನಾವು ಏನನ್ನೂ ಹೇಳಲು ಸಾಧ್ಯವಿಲ್ಲ. ಸರ್ಕಾರದ ನಿರ್ದೇಶನ ಬಂದ ಮೇಲೆ ಅದರಂತೆ ಮುಂದುವರಿಯುತ್ತೇವೆ. ಒಂದು ವಾರದಿಂದ ಬಿಲ್ ಪಾವತಿಸುವವರ ಸಂಖ್ಯೆ ಇಳಿಮುಖವಾಗಿದೆ' ಎಂದು ಮೆಸ್ಕಾಂ ಸಿಬ್ಬಂದಿಯೊಬ್ಬರು ಪ್ರತಿಕ್ರಿಯಿಸಿದರು.

'ಮೆಸ್ಕಾಂ ಮಂಗಳೂರು ವಿಭಾಗದ ವ್ಯಾಪ್ತಿಯಲ್ಲಿ ಸುಮಾರು 2.20 ಲಕ್ಷ ವಿದ್ಯುತ್ ಸಂಪರ್ಕಗಳಿದ್ದು, ಅವುಗಳಲ್ಲಿ 1.75 ಲಕ್ಷ ಗೃಹ ಬಳಕೆಯ ಸಂಪರ್ಕಗಳಿವೆ. ಏಪ್ರಿಲ್ ತಿಂಗಳಿನಲ್ಲಿ ₹28.73 ಲಕ್ಷ ಬಿಲ್ ಪೈಕಿ, ₹23.58 ಲಕ್ಷ ಸಂಗ್ರಹವಾಗಿದೆ. ಮೇ 1ರಿಂದ 15ರ ವರೆಗೆ ₹18.98 ಲಕ್ಷ ಸಂಗ್ರಹವಾಗಬೇಕಿತ್ತು. ₹10.95 ಲಕ್ಷ ಮಾತ್ರ ಸಂಗ್ರಹವಾಗಿದೆ' ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ವಿದ್ಯುತ್ ಬಿಲ್ ತುಂಬಲು ಗ್ರಾಮಸ್ಥರ ನಕಾರ

ಚಿತ್ರದುರ್ಗ: 'ಉಚಿತ ವಿದ್ಯುತ್ ಕೊಡುವುದಾಗಿ ಹೇಳಿರುವ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಿದೆ. ಹಾಗಾಗಿ ನಾವು ಇನ್ನು ಮುಂದೆ ವಿದ್ಯುತ್ ಬಿಲ್ ಪಾವತಿಸುವುದಿಲ್ಲ' ಎಂದು ತಾಲ್ಲೂಕಿನ ಜಾಲಿಕಟ್ಟೆ ಗ್ರಾಮಸ್ಥರು ಹೇಳಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದೆ.

ಸಿದ್ದಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳ ವಿದ್ಯುತ್ ಬಿಲ್ ಸಂಗ್ರಹ ಪ್ರತಿನಿಧಿ ಜಾಲಿಕಟ್ಟೆ ಗ್ರಾಮಕ್ಕೆ ಏಪ್ರಿಲ್ ತಿಂಗಳ ವಿದ್ಯುತ್ ಬಿಲ್ ಸಂಗ್ರಹಕ್ಕೆ ಸೋಮವಾರ ತೆರಳಿದ್ದ ಸಂದರ್ಭ ಅವರೊಂದಿಗೆ ವಾದಕ್ಕಿಳಿದಿರುವ ಕೆಲವರು, 'ವಿದ್ಯುತ್ ಉಚಿತ ಎಂದು ಘೋಷಿಸಿದ್ದ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಿದೆ. ಆದಕಾರಣ ನಾವು ಬಿಲ್ ಪಾವತಿಸುವುದಿಲ್ಲ' ಎಂದು ಹೇಳಿದ್ದಾರೆ.

'ಆದೇಶ ಬರುವವರೆಗೂ ಹಣ ಪಾವತಿಸಬೇಕು' ಎಂದು ಪ್ರತಿನಿಧಿ ತಿಳಿಹೇಳಿದರೂ ಅವರ ಮಾತಿಗೆ ಜಗ್ಗದ ಗ್ರಾಮಸ್ಥರು, 'ಆದೇಶದ ಬಗ್ಗೆ ಕಾಂಗ್ರೆಸ್‌ನವರಿಗೆ ಕೇಳಿ. ಗ್ರಾಮದಲ್ಲಿ ಯಾರೂ ಈ ತಿಂಗಳಿನಿಂದ ಬಿಲ್ ಪಾವತಿಸುವುದಿಲ್ಲ' ಎಂದು ಹೇಳಿ ಕಳುಹಿಸಿದ್ದಾರೆ.

ಈ ಕುರಿತು ಬೆಸ್ಕಾಂನ ಸಹಾಯಕ ಕಾರ್ಯಪಾಲಕ ಎಂಜಿನಿಯರ್ (ಗ್ರಾಮಾಂತರ) ಕಿರಣ್ ರೆಡ್ಡಿ ಅವರು ಪ್ರತಿಕ್ರಿಯೆ ನೀಡಿದ್ದು, 'ಉಚಿತ ವಿದ್ಯುತ್ ನೀಡುವುದಾಗಿ ಸರ್ಕಾರ ಆದೇಶ ಹೊರಡಿಸುವವರೆಗೂ ಗ್ರಾಹಕರು ವಿದ್ಯುತ್ ಬಿಲ್ ಪಾವತಿಸಬೇಕು' ಎಂದು ತಿಳಿಸಿದ್ದಾರೆ.

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಎಸ್‌ಎಸ್‌ಎಲ್‌ಸಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಚೆಕ್ ಅಥವಾ ಡಿ.ಡಿ.ರೂಪದಲ್ಲಿ ಹಣವನ್ನು 'Deccan Herald-Prajavani relief Trust'ಗೆ ಕಳುಹಿಸಬಹುದು. ದಾನಿಗಳು ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ಆಧಾರ್/ಪ್ಯಾನ್ ಕಾರ್ಡ್ ಪ್ರತಿಯನ್ನು dept.finc@printersmysore.co.inಗೆ ಮೇಲ್ ಕಳುಹಿಸಿ.

ಆನ್‌ಲೈನ್/ಚೆಕ್ ಮೂಲಕವೂ ಹಣ ವರ್ಗಾಯಿಸಬಹುದು. ₹1,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಸೆಕ್ಷನ್ 80 ಜಿ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ
https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ
'Deccan Herald-Prajavani Relief Trust'
Canara Bank, Cantonment Branch
A/c no. - 0404101200385
IFSC code - CNRB0000404
MICR Code - 560015009

ಸೂಚನೆ
ದಾನಿಗಳು ಲಕೋಟೆ ಮೇಲೆ ಶೈಕ್ಷಣಿಕ ನೆರವಿಗೆ ಕೊಡುಗೆ ಎಂದು ನಮೂದಿಸಬೇಕು

ವಿಳಾಸ
ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮ ಗಾಂಧಿ ರಸ್ತೆ ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2023 ರ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ, ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಜತೆಗೆ ವಿಳಾಸ, ಮೊಬೈಲ್ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು. ಲಕೋಟೆಯ ಮೇಲೆ **'ಶೈಕ್ಷಣಿಕ ನೆರವಿಗೆ ಅರ್ಜಿ'** ಎಂದು ಬರೆಯಬೇಕು.

ಶೈಕ್ಷಣಿಕ ನೆರವು, ವಿದ್ಯಾರ್ಥಿ ಮಾತು

ಬಡ ವಿದ್ಯಾರ್ಥಿಗಳ ಪಾಲಿಗೆ ಆಶಾಕಿರಣ

'ಪ್ರಜಾವಾಣಿ' ನೀಡಿರುವ ವಿದ್ಯಾರ್ಥಿ ಪ್ರೋತ್ಸಾಹನಿಧಿ ನನ್ನಂತಹ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳ ಮಕ್ಕಳ ಶಿಕ್ಷಣಕ್ಕೆ ನೆರವಾಗುತ್ತಿದೆ. ಈ ಮೊತ್ತವನ್ನು ನನ್ನ ಮುಂದಿನ ಶಿಕ್ಷಣಕ್ಕಾಗಿ ಬಳಸಿಕೊಳ್ಳುವೆ. ಕಷ್ಟಕಾಲದಲ್ಲಿ ಈ ನೆರವು ಬಡ ಮಕ್ಕಳ ಪಾಲಿನ ಆಶಾಕಿರಣವಾಗುತ್ತಿದೆ.

– **ಸಿರಿ ವೀರಭದ್ರ ಹೆಗಡೆ,** ಸಿದ್ದಾಪುರ

ಪುಸ್ತಕ ಖರೀದಿಸಿದೆ

'ಪ್ರಜಾವಾಣಿ' ಕೊಟ್ಟಿರುವ ವಿದ್ಯಾರ್ಥಿ ವೇತನದಲ್ಲಿ ಪುಸ್ತಕಗಳನ್ನು ಖರೀದಿಸಿದೆ. ಬಡ ಪ್ರತಿಭಾವಂತ ವಿದ್ಯಾರ್ಥಿಗಳ ಭವಿಷ್ಯರೂಪಿಸಲು ಈ ವಿದ್ಯಾರ್ಥಿವೇತನ ನೀಡುತ್ತಿರುವುದು ಮಾದರಿಯಾಗಿದೆ. ಶಿಕ್ಷಣಕ್ಕೆ ನೆರವಾದ 'ಪ್ರಜಾವಾಣಿ'ಗೆ ಧನ್ಯವಾದಗಳು.

–**ಆದಿತ್ಯಾ ಬಿ.,** ಮಂಗಳೂರು

ಬಾಂಬೆ ಜಯಶ್ರೀ ಆರೋಗ್ಯದಲ್ಲಿ ಚೇತರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯಕಿ ಬಾಂಬೆ ಜಯಶ್ರೀ ಅವರ ಆರೋಗ್ಯದಲ್ಲಿ ಚೇತರಿಕೆ ಕಂಡು ಬರುತ್ತಿದೆ' ಎಂದು ಅವರ ಕುಟುಂಬದವರು ಸೋಮವಾರ ಹೇಳಿದ್ದಾರೆ.

'ರಕ್ತನಾಳ ಊತದ ಸಮಸ್ಯೆಯಿಂದ ಬಳಲುತ್ತಿದ್ದ ಅವರು ಚಿಕಿತ್ಸೆಗಾಗಿ ಬ್ರಿಟನ್‌ನ ಆಸ್ಪತ್ರೆಯೊಂದಕ್ಕೆ ದಾಖಲಾಗಿದ್ದರು. ನುರಿತ ವೈದ್ಯರ ತಂಡವು ಅವರಿಗೆ ಚಿಕಿತ್ಸೆ ನೀಡಿದ್ದು, ಆರೋಗ್ಯದ ಮೇಲೆ ತೀವ್ರ ನಿಗಾ ಇಟ್ಟಿತ್ತು. ಹೀಗಾಗಿ ಅವರ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದೆ' ಎಂದು ತಿಳಿಸಿದ್ದಾರೆ.

'ಅಮ್ಮನಿಗೆ ಬ್ರಿಟನ್‌ನಲ್ಲಿ ಅತ್ಯುತ್ತಮ ಚಿಕಿತ್ಸೆ ದೊರೆತಿದೆ. ಸದ್ಯ ಅವರು ಸಂಬಂಧಿಕರೊಬ್ಬರ ಮನೆಯಲ್ಲಿ ಇದ್ದಾರೆ. ನಿಧಾನವಾಗಿ ಚೇತರಿಸಿಕೊಳ್ಳುತ್ತಿದ್ದಾರೆ. ಬೇಗನೆ ಗುಣಮುಖರಾಗಿ ಬರಲಿ ಎಂದು ಜಗತ್ತಿನ ವಿವಿಧೆಡೆ ಇರುವ ಅವರ ಅಭಿಮಾನಿಗಳು ಪ್ರಾರ್ಥಿಸಿದ್ದಾರೆ. ಅವರಿಗೆಲ್ಲಾ ನಾವು ಆಭಾರಿಯಾಗಿದ್ದೇವೆ' ಎಂದು ಜಯಶ್ರೀ ಅವರ ಮಗ ಅಮೃತ್ ರಾಮನಾಥ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷರ ವಿರುದ್ಧ ಮಾನನಷ್ಟ ಮೊಕದ್ದಮೆ

ಖರ್ಗೆಗೆ ನೋಟಿಸ್

ಸಂಗ್ರೂರ್ (ಪಂಜಾಬ್) (ಪಿಟಿಐ): ಕರ್ನಾಟಕ ವಿಧಾನಸಭಾ ಚುನಾವಣಾ ಪ್ರಚಾರದ ವೇಳೆ ನಿಷೇಧಿತ ಪಿಎಫ್‌ಐ ಜತೆಗೆ ಬಜರಂಗ ದಳ ಸಂಘಟನೆಯನ್ನು ಹೋಲಿಸಿರುವ ಪ್ರಕರಣದಲ್ಲಿ ₹100 ಕೋಟಿ ಪರಿಹಾರ ಕೇಳಿ ಸಲ್ಲಿಸಿರುವ ಮಾನನಷ್ಟ ಮೊಕದ್ದಮೆಯೊಂದರಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಗೆ ಇಲ್ಲಿನ ನ್ಯಾಯಾಲಯವು ನೋಟಿಸ್ ಜಾರಿ ಮಾಡಿದೆ.

ಹಿಂದೂ ಸುರಕ್ಷಾ ಪರಿಷತ್ ರಾಷ್ಟ್ರೀಯ ಅಧ್ಯಕ್ಷ ಹಿತೇಶ್ ಭಾರದ್ವಾಜ್ ಅವರು ಮೊಕದ್ದಮೆ ದಾಖಲಿಸಿದ್ದಾರೆ.

ಪಿಎಫ್‌ಐ ಸಂಘಟನೆಯನ್ನು ಕೇಂದ್ರ ಸರ್ಕಾರ ಕಳೆದ ವರ್ಷ ನಿಷೇಧಿಸಿದೆ.

ಅರ್ಜಿದಾರರ ಪರ ವಕೀಲ ಲಲಿತ್ ಗರ್ಗ್ ಅವರು, ಕೆಲವು ದಿನಗಳ ಹಿಂದೆ ಭಾರದ್ವಾಜ್ ನ್ಯಾಯಾಲಯದಲ್ಲಿ ಮಾನನಷ್ಟ ಮೊಕದ್ದಮೆ ದಾಖಲಿಸಿದ್ದರು ಎಂದು ಸೋಮವಾರ ತಿಳಿಸಿದರು.

ಕರ್ನಾಟಕ ವಿಧಾನಸಭೆ ಚುನಾವಣೆಗೆ ರಾಜ್ಯದ ಜನರ ಮುಂದಿಟ್ಟ ಪ್ರಣಾಳಿಕೆಯಲ್ಲಿ ಪ್ರತಿವಾದಿಯು, ಹಿಂದೂ ಸುರಕ್ಷಾ ಪರಿಷತ್‌ನ ಘಟಕ ಬಜರಂಗದಳ ವಿರುದ್ಧ ಮಾನಹಾನಿಕರ ಹೇಳಿಕೆಗಳನ್ನು ನೀಡಿದ್ದಾರೆ. ಪಿಎಫ್‌ಐ ನಂತಹ ನಿಷೇಧಿತ ಸಂಘಟನೆಗೆ ಹೋಲಿಸಿದ್ದಾರೆ. ಬಜರಂಗ ದಳವು ಒಂದು ಸಾಮಾಜಿಕ ಸಂಘಟನೆ. ಸಾಕಷ್ಟು ಮಾನವೀಯ ಕೆಲಸಗಳನ್ನು ಮಾಡಿದೆ. ಆದರೆ, ಇಂತಹ ಸಂಘಟನೆಯ ಗೌರವ ಮತ್ತು ಘನತೆಗೆ ಚ್ಯುತಿ ಉಂಟು ಮಾಡುವಂತಹ ಹೇಳಿಕೆ ನೀಡಿದ್ದಾರೆ. ಇದರಿಂದ ಕೋಟ್ಯಂತರ ಹಿಂದೂಗಳ ಭಾವನೆಗೆ ಧಕ್ಕೆಯಾಗಿದೆ. ಹನುಮಾನ್ ದೇವರ ಭಕ್ತರ ಮನಸಿಗೆ ಗಾಸಿಯಾಗಿದೆ. ಪ್ರತಿವಾದಿಯು ₹100 ಕೋಟಿ ಪರಿಹಾರ ನೀಡಬೇಕು ಎಂದು ಅರ್ಜಿದಾರರು ಮೊಕದ್ದಮೆ ಹೂಡಿದ್ದಾರೆ.

ಕೇರಳ: ₹25,000 ಕೋಟಿ ಮೌಲ್ಯದ ಮಾದಕವಸ್ತು ವಶ

ಕೊಚ್ಚಿ (ಪಿಟಿಐ): ಭಾರತದ ಸಮುದ್ರ ಭಾಗದಲ್ಲಿ ದೋಣಿಯೊಂದರಿಂದ 2,500 ಕಿಲೊಗ್ರಾಂ ಮೆಥಂಫೆಟಾಮೈನ್ ವಶಕ್ಕೆ ತೆಗೆದುಕೊಳ್ಳಲಾಗಿದೆ. ಇದರ ಮೌಲ್ಯ ಸುಮಾರು ₹25,000 ಕೋಟಿ ಎಂದು ಎನ್‌ಸಿಬಿ ತಿಳಿಸಿದೆ.

'ಎರಡು ದಿನಗಳ ಹಿಂದೆ ನೌಕಾಪಡೆ ಜೊತೆ ಜಂಟಿ ಕಾರ್ಯಾಚರಣೆ ನಡೆಸಲಾಗಿತ್ತು. ಮತ್ತೇರಿಸುವ ಈ ರಾಸಾಯನಿಕದ ಮೌಲ್ಯವನ್ನು ಮೊದಲಿಗೆ ₹12,000 ಕೋಟಿ ಎಂದು ಅಂದಾಜಿಸಲಾಗಿತ್ತು. ಇದು ಅತ್ಯಂತ ಉತ್ತಮ ಗುಣಮಟ್ಟದ್ದಾಗಿದೆ. ಹಾಗಾಗಿ ಅದರ ಬೆಲೆ ಇನ್ನೂ ಹೆಚ್ಚೇ ಇರಬಹುದು' ಎಂದು ಅಧಿಕಾರಿಗಳು ಹೇಳಿದ್ದಾರೆ.

ಬಜರಂಗ ದಳ ಗೂಂಡಾಗಳ ಗುಂಪು: ದಿಗ್ವಿಜಯ್

ಜಬಲ್‌ಪುರ (ಮಧ್ಯಪ್ರದೇಶ) (ಪಿಟಿಐ): 'ಹಿಂದುತ್ವ ಎಂಬುದು ಧರ್ಮವಲ್ಲ. ಅದನ್ನು ಒಪ್ಪದವರ ಮೇಲೆ ದಾಳಿ ನಡೆಸಲಾಗುತ್ತಿದೆ' ಎಂದು ಕಾಂಗ್ರೆಸ್ ರಾಜ್ಯಸಭಾ ಸದಸ್ಯ ದಿಗ್ವಿಜಯ್ ಸಿಂಗ್ ಸೋಮವಾರ ಹೇಳಿದ್ದಾರೆ.

ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು 'ನಾವು ಸನಾತನ ಧರ್ಮದಲ್ಲಿ ನಂಬಿಕೆ ಹೊಂದಿದ್ದೇವೆ. ಏಕೆಂದರೆ ಅದು ಸಾಮರಸ್ಯ ಹಾಗೂ ಸರ್ವರ ಕಲ್ಯಾಣವನ್ನು ಬೋಧಿಸುತ್ತದೆ. ಹಿಂದುತ್ವವನ್ನು ನಾವು ಧರ್ಮ ಎಂದು ಪರಿಗಣಿಸುವುದಿಲ್ಲ' ಎಂದಿದ್ದಾರೆ.

'ವಿಶ್ವ ಹಿಂದೂ ಪರಿಷತ್‌ನ ಯುವ ಘಟಕವಾಗಿರುವ ಬಜರಂಗ ದಳ ಗೂಂಡಾಗಳ ಗುಂಪು' ಎಂದು ಟೀಕಿಸಿದ್ದಾರೆ. 'ಧರ್ಮಕ್ಕೆ ಜಯವಾಗಲಿ', 'ಅಧರ್ಮ ಅಳಿಯಲಿ', 'ವಿಶ್ವದ ಕಲ್ಯಾಣವಾಗಲಿ' ಎಂಬ ಘೋಷವಾಕ್ಯಗಳನ್ನು ಸನಾತನ ಧರ್ಮವು ಒಳಗೊಂಡಿರುತ್ತದೆ. ಆದರೆ ಹಿಂದುತ್ವದಲ್ಲಿ ಇದನ್ನು ಕಾಣಲು ಸಾಧ್ಯವಿಲ್ಲ. ಸಿದ್ಧಾಂತ ಒಪ್ಪದವರ ಮೇಲೆ ಕಟ್ಟಿಗೆಗಳಿಂದ ಹಲ್ಲೆ ನಡೆಸುವುದು, ಅಂತಹವರ ಮನೆಗಳನ್ನು ಧ್ವಂಸಗೊಳಿಸುವುದು ಹಾಗೂ ಹಣ ಲೂಟಿ ಮಾಡುವುದೇ ಹಿಂದುತ್ವ' ಎಂದು ಆರೋಪಿಸಿದ್ದಾರೆ.

'ಪ್ರಧಾನಿ ಮೋದಿ ಹಾಗೂ ಬಿಜೆಪಿಯವರು ಬಜರಂಗ ದಳವನ್ನು ಬಜರಂಗ ಬಲಿಯೊಂದಿಗೆ (ಹನುಮಾನ್) ಸಮೀಕರಿಸುತ್ತಿರುವುದು ನೋವಿನ ಸಂಗತಿ. ಇದು ದೈವಕ್ಕೆ ಮಾಡಿದ ಅಪಚಾರ. ಅದಕ್ಕಾಗಿ ಬಿಜೆಪಿಯವರು ಕ್ಷಮೆ ಕೋರಲಿ' ಎಂದಿದ್ದಾರೆ.

'ಪ್ರಬಲ ಪ್ರಾದೇಶಿಕ ಪಕ್ಷಗಳಿಗೆ ಮನ್ನಣೆ ಇರಲಿ'

ಕೋಲ್ಕತ್ತ (ಪಿಟಿಐ): 'ಕಾಂಗ್ರೆಸ್ ತಾನು ಪ್ರಬಲವಾಗಿರುವ ರಾಜ್ಯಗಳಲ್ಲಿ ಹೋರಾಟ ನಡೆಸಬೇಕು, ಪ್ರಾದೇಶಿಕ ಪಕ್ಷಗಳಿಗೆ ಬೆಂಬಲ ನೀಡುವ ಬಗ್ಗೆಯೂ ಚಿಂತಿಸಬೇಕು' ಎಂದು ತೃಣಮೂಲ ಪಕ್ಷದ ನಾಯಕಿ, ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದ್ದಾರೆ.

ಮಮತಾ

'ಕರ್ನಾಟಕದಲ್ಲಿ ನಾನು ನಿಮಗೆ ಬೆಂಬಲಿಸುತ್ತೇನೆ. ಆದರೆ, ಇಲ್ಲಿ ನನ್ನ ವಿರುದ್ಧ ದಿನವೂ ಹೋರಾಟ ನಡೆಸುತ್ತೀರಿ. ಇದು, ನೀತಿ ಆಗಬಾರದು. ಒಳ್ಳೆಯದು ಆಗಬೇಕಾದರೆ, ಕೆಲವು ಕಡೆ ತ್ಯಾಗ ಮಾಡಲು ನೀವು ಸಿದ್ಧರಿರಬೇಕು' ಎಂದು ಸಲಹೆ ಮಾಡಿದರು.

ಕರ್ನಾಟಕದ ಚುನಾವಣಾ ಫಲಿತಾಂಶ ಹಿನ್ನೆಲೆಯಲ್ಲಿ ಅವರು, 'ಪ್ರಾದೇಶಿಕ ಪಕ್ಷಗಳು ಪ್ರಬಲವಾಗಿರುವ ಕಡೆ ಬಿಜೆಪಿ ಹೋರಾಟದ ಸಾಮರ್ಥ್ಯವನ್ನು ಕಳೆದುಕೊಂಡಿದೆ' ಎಂದರು.

'ಆಯಾ ರಾಜ್ಯಗಳಲ್ಲಿ ಪ್ರಬಲವಾಗಿರುವ ಪಕ್ಷಗಳಿಗೆ ಪ್ರಾಧಾನ್ಯತೆ ಸಿಗಬೇಕು. ಎಲ್ಲಿ ಕಾಂಗ್ರೆಸ್ ಪ್ರಬಲವಾಗಿದೆಯೋ ಅಲ್ಲಿ ಬಿಜೆಪಿ ವಿರುದ್ಧ ಹೋರಾಟ ನಡೆಸಲಿ. ನಾವು (ಪ್ರಾದೇಶಿಕ ಪಕ್ಷಗಳು) ಬೆಂಬಲಿಸುತ್ತೇವೆ. ಅದರಲ್ಲಿ ತಪ್ಪೇನೂ ಇಲ್ಲ. ಬಿಜೆಪಿ ವಿರುದ್ಧ ಹೋರಾಡಲು ನಾವು ಕೂಡಾ ಇತರೆ ಪಕ್ಷಗಳಿಗೂ ಬೆಂಬಲಿಸಬೇಕು ಎಂಬುದು ಕಾಂಗ್ರೆಸ್ಸಿಗರಲ್ಲಿ ಇರಬೇಕು' ಎಂದರು.

ಉದಾಹರಣೆಗೆ ಪಶ್ಚಿಮ ಬಂಗಾಳದಲ್ಲಿ ನಾವು, ದೆಹಲಿಯಲ್ಲಿ ಎಎಪಿ ಹೋರಾಟ ನೀಡಬೇಕು ಎಂದರು.

ಶಾಸಕರ ಅನರ್ಹತೆ: ಸೂಕ್ತ ಸಮಯದಲ್ಲಿ ಕ್ರಮ–ಸ್ಪೀಕರ್

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರದ 16 ಶಾಸಕರ ಅನರ್ಹತೆಗೆ ಸಂಬಂಧಿಸಿದಂತೆ ತಾವು ಸೂಕ್ತ ವಿಧಿವಿಧಾನಗಳನ್ನು ಅನುಸರಿಸಲಿದ್ದು, ಸುಪ್ರೀಂ ಕೋರ್ಟ್ ಸೂಚನೆಯಂತೆ ಸೂಕ್ತ ಸಮಯದೊಳಗೆ ಪ್ರಕ್ರಿಯೆ ಪೂರ್ಣಗೊಳಿಸುವುದಾಗಿ ವಿಧಾನಸಭೆಯ ಸ್ಪೀಕರ್ ರಾಹುಲ್ ನರ್ವೇಕರ್ ಸೋಮವಾರ ಹೇಳಿದ್ದಾರೆ.

ಲಂಡನ್ ಪ್ರವಾಸದಿಂದ ಮರಳಿದ ಅವರು ಸುದ್ದಿಗಾರರ ಜೊತೆಗೆ ಮಾತನಾಡಿ, 'ನ್ಯಾಯ ವಿಳಂಬವಾದರೆ ನ್ಯಾಯ ನಿರಾಕರಿಸಿದಂತೆ ಎಂಬ ಮಾತು ಇದೆ. ನಾನು ಯಾವುದೇ ಒತ್ತಡದಲ್ಲಿ ಕೆಲಸ ಮಾಡುವುದಿಲ್ಲ. ಹೊರಗಿನ ಹೇಳಿಕೆಗಳ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ' ಎಂದಿದ್ದಾರೆ.

ರಾಂಧವ ವಿರುದ್ಧ ಎಫ್‌ಐಆರ್‌ಗೆ ಸೂಚನೆ

ಕೋಟಾ, ರಾಜಸ್ಥಾನ (ಪಿಟಿಐ): ಪ್ರಧಾನಿ ವಿರುದ್ಧ ನೀಡಿದ್ದ ಹೇಳಿಕೆಗಾಗಿ ರಾಜಸ್ಥಾನದ ಕಾಂಗ್ರೆಸ್ ಉಸ್ತುವಾರಿ ಸುಖ್‌ಜಿಂದರ್ ಸಿಂಗ್ ರಾಂಧವ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ರಾಜಸ್ಥಾನ ಹೈಕೋರ್ಟ್ ಪೊಲೀಸರಿಗೆ ನಿರ್ದೇಶಿಸಿದೆ. ರಾಂಧವ ಅವರು ಜೈಪುರದಲ್ಲಿ ನಡೆದಿದ್ದ ಪಕ್ಷದ ರ‍್ಯಾಲಿಯಲ್ಲಿ 'ಅದಾನಿ ಮತ್ತು ಅಂಬಾನಿಯನ್ನು ತೆಗೆಯುವ ಮೊದಲು ಮೋದಿಯನ್ನು ಮುಗಿಸಬೇಕು ಎಂದು ಹೇಳಿದ್ದರು' ಎನ್ನಲಾಗಿದೆ.

ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಚಿವಾಲಯ,

ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.

NO: E-RD 172 GRC 2022 — **Date:29.03.2023**

ಅಧಿಸೂಚನೆ

ಪೊಲೀಸ್ ಅಧೀಕ್ಷಕರು, ಆರ್ಥಿಕ ಅಪರಾಧಗಳು, ಸಿಐಡಿ ಬೆಂಗಳೂರು ಮತ್ತು ಪೊಲೀಸ್ ಇನ್ಸ್‌ಪೆಕ್ಟರ್ ಸಿ.ಟಿ ಮತ್ತು ಆರ್ ವಿಭಾಗ ಸಿ.ಐ.ಡಿ, ಬೆಂಗಳೂರು ಇವರ ವರದಿಗಳನ್ನು ಪರಿಗಣಿಸಿದ ತರುವಾಯ ಹಾಗೂ ಠೇವಣಿದಾರರ ದೂರುಗಳ ಬಗ್ಗೆ ಯುಕ್ತ ತನಿಖೆಯ ತರುವಾಯ ಶ್ರೀ ವಸಿಷ್ಠ ಕ್ರೆಡಿಟ್ ಸೌಹಾರ್ದ ಸಹಕಾರಿ ಲಿಮಿಟೆಡ್, ಬೆಂಗಳೂರು ಇವರು ಠೇವಣಿದಾರರಿಂದ ಗುಟ್ಟಾಗಿ ಹಾಗೂ ಕಾನೂನುಬಾಹಿರವಾಗಿ ಠೇವಣಿಗಳನ್ನು ಅಥವಾ ಸಾರ್ವಜನಿಕರಿಂದ ಹಣವನ್ನು ಸಂಗ್ರಹಿಸುವ ಮೋಸದ ವ್ಯವಹಾರಗಳಲ್ಲಿ ತೊಡಗಿರುವುದು ಹಾಗೂ ಆ ತರುವಾಯ ಅವಧಿ ಮುಗಿದ ಮೇಲೆ ಅಥವಾ ಠೇವಣಿದಾರರು ಅಥವಾ ಫಿರ್ಯಾದುದಾರು ಸಲ್ಲಿಸಿದ ಬೇಡಿಕೆ ಮೇಲಾಗಲಿ ಆಶ್ವಾಸನೆ ನೀಡಿದ ಬಡ್ಡಿ ಹಾಗೂ ಇತರೆ ಖಾತರಿ ಪ್ರಯೋಜನಗಳನ್ನು ನೀಡಲು ವಿಫಲವಾಗಿರುವುದು ಹಾಗೂ ಅವರಿಗೆ ಆಶ್ವಾಸನೆ ನೀಡಿದ ಸೇವೆಗಳನ್ನು ಒದಗಿಸಲು ವಿಫಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಶ್ರೀ ವಸಿಷ್ಠ ಕ್ರೆಡಿಟ್ ಸೌಹಾರ್ದ ಸಹಕಾರಿ ಲಿಮಿಟೆಡ್, ಬೆಂಗಳೂರು ಹಾಗೂ ಅವರ ಸಹವರ್ತಿ ಜನರು ಠೇವಣಿದಾರರಿಂದ ಅಥವಾ ಫಿರ್ಯಾದುದಾರರಿಂದ ಸಂಗ್ರಹಿಸಲಾದ ಹಣದಿಂದ ಜಮೀನು, ಚರ ಹಾಗೂ ಸ್ಥಿರಾಸ್ತಿಗಳನ್ನು, ನಗದು ಹಾಗೂ ಇತರೆ ವಸ್ತುಗಳನ್ನು ಅರ್ಜಿಸಿರುವುದು ಹಾಗೂ ಆ ಮೂಲಕ ಠೇವಣಿ ಹಾಗೂ ಹಣವನ್ನು ಪಡೆದಿರುವ ಉದ್ದೇಶಿತ ಉದ್ದೇಶಗಳಿಗೆ ಬಳಸದೆ ಬೇರೆ ಕಡೆ ವರ್ಗಾಯಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಶ್ರೀ ವಸಿಷ್ಠ ಕ್ರೆಡಿಟ್ ಸೌಹಾರ್ದ ಸಹಕಾರಿ ಲಿಮಿಟೆಡ್, ಬೆಂಗಳೂರು ಹಾಗೂ ಅವರ ಸಹವರ್ತಿ ಜನರು ಇವರ ಕೃತ್ಯಗಳು ಮುಗ್ಧ ಜನರಿಗೆ ವಂಚಿಸುವ ಉದ್ದೇಶದಿಂದ ಠೇವಣಿದಾರರ ಅಥವಾ ಫಿರ್ಯಾದುದಾರರ ಹಿತಾಸಕ್ತಿಗೆ ವಿರುದ್ಧವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ನಂಬಲು ಸರ್ಕಾರವು ಕಾರಣಗಳನ್ನು ಹೊಂದಿದ್ದು, ಶ್ರೀ ವಸಿಷ್ಠ ಕ್ರೆಡಿಟ್ ಸೌಹಾರ್ದ ಸಹಕಾರಿ ಲಿಮಿಟೆಡ್, ಬೆಂಗಳೂರು ನ ಠೇವಣಿದಾರರ ಹಿತಾಸಕ್ತಿಯನ್ನು ಸಂರಕ್ಷಿಸುವುದು ಅಗತ್ಯವಾಗಿರುತ್ತದೆ.

ಆದ್ದರಿಂದ, ಸರ್ಕಾರವು ಸಕ್ಷಮ ಪ್ರಾಧಿಕಾರ, ಶ್ರೀ ವಸಿಷ್ಠ ಕ್ರೆಡಿಟ್ ಸೌಹಾರ್ದ ಸಹಕಾರಿ ಲಿಮಿಟೆಡ್, ಬೆಂಗಳೂರು ಇವರ ವರದಿಯನ್ನು ಪರಿಗಣಿಸಿ ಹಾಗೂ ಠೇವಣಿದಾರರ ಹಿತಾಸಕ್ತಿಯನ್ನು ಸಂರಕ್ಷಿಸುವುದು ತುರ್ತು ಅಗತ್ಯವಿದೆ ಎಂದು ಸ್ವಯಂ ಮನವರಿಕೆ ಮಾಡಿಕೊಂಡು ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿನ ಠೇವಣಿದಾರರ ಹಿತಾಸಕ್ತಿಯ ಸಂರಕ್ಷಣಾ ಅಧಿನಿಯಮ, 2004(2005ರ ಕರ್ನಾಟಕ ಅಧಿನಿಯಮ, 30)ರ 3ನೇ ಪ್ರಕರಣದ (2)ನೇ ಉಪ–ಪ್ರಕರಣದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಈ ಕೆಳಕಂಡಂತೆ ಆದೇಶವನ್ನು ಮಾಡುತ್ತದೆ:

"ಆದೇಶ"

ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿಯ ಸಂರಕ್ಷಣಾ ಅಧಿನಿಯಮ, 2004 (2005ರ ಕರ್ನಾಟಕ ಅಧಿನಿಯಮ, 30)ರ 3ನೇ ಪ್ರಕರಣದ (2)ನೇ ಉಪ–ಪ್ರಕರಣದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ಈ ಮೇಲ್ಕಂಡ ಸನ್ನಿವೇಶಗಳ ಹಿನ್ನಲೆಯಲ್ಲಿ ಠೇವಣಿದಾರರ ಹಿತಾಸಕ್ತಿಯನ್ನು ಸಂರಕ್ಷಿಸುವ ಸಲುವಾಗಿ ಶ್ರೀ ವಸಿಷ್ಠ ಕ್ರೆಡಿಟ್ ಸೌಹಾರ್ದ ಸಹಕಾರಿ ಲಿಮಿಟೆಡ್, ಬೆಂಗಳೂರು ಗೆ ಸೇರಿದೆ ಎನ್ನಲಾದ ಸ್ಥಿರಾಸ್ತಿ ಮತ್ತು ಚರಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದು ಅವಶ್ಯಕವಾಗಿದೆ ಎಂದು ಮನಗಂಡಿರುವುದರಿಂದ, ಸದರಿ ಹಣಕಾಸು ಸಂಸ್ಥೆಯ ಅಂಥ ಹಣ ಅಥವಾ ಅಂಥ ಇತರೆ ಸ್ವತ್ತುಗಳು ಅಥವಾ ಸಂಸ್ಥೆಯ ಪ್ರವರ್ತಕರ, ಪಾಲುದಾರರ, ನಿರ್ದೇಶಕರ, ವ್ಯವಸ್ಥಾಪಕರ ಅಥವಾ ಸದಸ್ಯರ ಅಥವಾ ಯಾರೇ ಇತರೆ ವ್ಯಕ್ತಿಯ ವೈಯಕ್ತಿಕ ಆಸ್ತಿಗಳು ಠೇವಣಿಗಳನ್ನು, ಬಡ್ಡಿ ಅಥವಾ ಇತರೆ ಖಾತ್ರಿ ಪ್ರಯೋಜನಗಳನ್ನು ಠೇವಣಿದಾರರಿಗೆ ಮರುಸಂದಾಯ ಮಾಡುವುದಕ್ಕೆ ಸಂಬಂಧಿಸಿದಂತೆ ಪ್ರಯಾಪ್ತವಾಗಿಲ್ಲವೆಂದು ಗೊತ್ತಾದಲ್ಲಿ ಶ್ರೀ ವಸಿಷ್ಠ ಕ್ರೆಡಿಟ್ ಸೌಹಾರ್ದ ಸಹಕಾರಿ ಲಿಮಿಟೆಡ್, ಬೆಂಗಳೂರು ಸಂಗ್ರಹಿಸಲಾದ ಠೇವಣಿಗಳಿಂದ ತನ್ನ ಹೆಸರಿನಲ್ಲಾಗಲಿ ಅಥವಾ ಯಾರೇ ಇತರೆ ವ್ಯಕ್ತಿಗಳ ಹೆಸರಿನಲ್ಲಿ ಅರ್ಜಿಸಿದೆ ಎನ್ನಲಾದ ಈ ಆದೇಶದ ಅನುಬಂಧದಲ್ಲಿ ನಿರ್ದಿಷ್ಟಪಡಿಸಲಾದಂತೆ ಸ್ಥಿರಾಸ್ತಿಗಳನ್ನು ಸರ್ಕಾರವು ಈ ಮೂಲಕ ಜಪ್ತಿ ಮಾಡಿಕೊಳ್ಳುತ್ತದೆ.

ಟಿಪ್ಪಣಿ: ವಿಶೇಷ ನ್ಯಾಯಾಲಯದ ಮುಂದಿನ ಆದೇಶದವರೆಗೆ ಬಾಕಿ ಇರಿಸಿ, ಮೇಲೆ ಹೇಳಿದ ಸ್ಥಿರ ಸ್ವತ್ತುಗಳನ್ನು ಅಧಿಕೃತ ರಾಜ್ಯಪತ್ರದಲ್ಲಿ ಈ ಆದೇಶವು ಪ್ರಕಟಣೆಗೊಂಡ ದಿನಾಂಕದಿಂದ ಸರ್ಕಾರವು ನೇಮಕ ಮಾಡಿರುವ ಸಕ್ಷಮ ಪ್ರಾಧಿಕಾರದಲ್ಲಿ ಕೂಡಲೇ ನಿಯುತವಾಗತಕ್ಕದ್ದು.

ಕರ್ನಾಟಕ ರಾಜ್ಯಪಾಲರ
ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಸಹಿ/–
(ರಮೇಶ ಸಂಗಾ)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ವಿಶೇಷ ಕೋಶ)

ಅನುಬಂಧ–1

ಕ್ರಮ ಸಂ.	ಸ್ವತ್ತಿನ ವಿವರ (ಚಕ್ಕುಬಂದಿ ಒಳಗೊಂಡಂತೆ)	ದಾಖಲೆಗಳ ಪ್ರಕಾರ ಸ್ವತ್ತಿನ ಮಾಲಿಕ	ದಾಖಲಾತಿ ವಿವರ	ಖರೀದಿ ದರ (ರೂ.ಗಳಲ್ಲಿ)	ಪ್ರಸ್ತುತ ಮಾರುಕಟ್ಟೆ ದರ	ಷರಾ
1	ಹೊಯ್ಸಳ ವಿಜಯ ಎಕ್ಲೇವ್–II ಫ್ಲಾಟ್ ನಂ.206, ಪಿ.ಐ.ಡಿ ನಂ.100–260–29 / 1–2/19 ವಿಸ್ತೀರ್ಣ – 2,145 ಚದರಡಿ ವಿಳಾಸ: ಸೈಟ್ ನಂ.29/1–2, 60 ಅಡಿ ರಸ್ತೆ, ಭೂಪಸಂದ್ರ ನ್ಯೂ ಎಕ್ಸ್‌ಟೆನ್ಶನ್, ಬಿಬಿಎಂಪಿ ಹಳೆ ವಾರ್ಡ್ ಸಂಖ್ಯೆ.100, ಹೊಸ ವಾರ್ಡ್ ಸಂಖ್ಯೆ. 19, ಸಂಜಯನಗರ ಪೋಸ್ಟ್ ಬೆಂಗಳೂರು. ಒಟ್ಟು ಅವಿಭಜಿತ ಪಾಲು: 675 ಚದರಡಿ ಚೆಕ್ಕುಬಂಧಿ:– ಪೂರ್ವಕ್ಕೆ : ಖಾಸಗಿ ಸ್ವತ್ತು, ಪಶ್ಚಿಮಕ್ಕೆ : 60 ಅಡಿ ರಸ್ತೆ, ಉತ್ತರಕ್ಕೆ : ಖಾಸಗಿ ಸ್ವತ್ತು, ದಕ್ಷಿಣಕ್ಕೆ : ಸ್ವತ್ತಿನ ನಂ. 29/1–1	ಶ್ರೀಮತಿ. ಸಂಧ್ಯಾ ಮಂಜುನಾಥ, ಅಧ್ಯಕ್ಷರು ಶ್ರೀ ವಸ್ತಿಷ್ಠ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ. ನಂ.54, ನೇಸರ 3ನೇ ಮುಖ್ಯ ರಸ್ತೆ, ವೈಯಾಲಿಕಾವಲ್ ಬೆಂಗಳೂರು–560 003.	ಉಪ ನೋಂದಣಾಧಿಕಾರಿ ಗಾಂಧಿನಗರ (ಹೆಬ್ಬಾಳ), ಬೆಂಗಳೂರು ಇಲ್ಲಿ ನೋಂದಣಿಯಾಗಿರುತ್ತದೆ. ಸೇಲ್ ಡೀಡ್ ನಂ. 2865/2018–19 ದಿನಾಂಕ: 17.01.2019	ರೂ. 1,50,56,000/– (ಒಂದು ಕೋಟಿ ಐವತ್ತೈದು ಲಕ್ಷದ ಐವತ್ತಾರು ಸಾವಿರ ಮಾತ್ರ)	–	ಸಂಧ್ಯಾ ಮಂಜುನಾಥ್ ಇವರು ದಿನಾಂಕ: 17.01.2019 ರಂದು ಶುದ್ಧ ಕ್ರಯ ಪತ್ರದ ಮೂಲಕ ಡಾ॥ ಜಿ.ವಿ ಅಯ್ಯಂಗಾರ್ ಬಿ.702 ಸಾಲರಪುರಿಯ ಐರೀಸ್ ನಂ.62/3, 8ನೇ ಮುಖ್ಯ ರಸ್ತೆ ಮಲ್ಲೇಶ್ವರಂ, ಬೆಂಗಳೂರು–560 055 ರವರಿಂದ ಸದರಿ ಫ್ಲಾಟ್ ನಂ.206, ವಿಸ್ತೀರ್ಣ – 2,145 ಚದರಡಿ ಸ್ವತ್ತನ್ನು ಖರೀದಿಸಿರುತ್ತಾರೆ. ಒಟ್ಟು ಸ್ವತ್ತಿನಲ್ಲಿ ಸದರಿಯವರಿಗೆ 675 ಚದರಡಿ ಅವಿಭಜಿತ ಪಾಲು ಇರುತ್ತದೆ.
2	ಬೆಂಗಳೂರು ಬಸವನಗುಡಿ ವಲಯ ಗವಿಪುರಂ ಹಳ್ಳಿ ಅಲ್ಲಮ ಪ್ರಭು ರಸ್ತೆ, ನಂ.184 ಖಾತಾ ನಂ.BMP/REV/2004–05/KE/12883, ಹಳೆ ಸಂಖ್ಯೆ. 9/10:193, ಸ್ವತ್ತಿನ ವಿಸ್ತೀರ್ಣ:– ಪೂರ್ವ ಪಶ್ಚಿಮ : 60 ಚದರಡಿ ಉತ್ತರ ದಕ್ಷಿಣ : 40 ಚದರಡಿ ಒಟ್ಟು ವಿಸ್ತೀರ್ಣ: 2400 ಚದರಡಿ ಚೆಕ್ಕುಬಂಧಿ:– ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ರಾಮಣ್ಣ ಮನೆ ನಂ.8, ಉತ್ತರಕ್ಕೆ : ಅಪ್ಪು ಮನೆ ಸ್ವತ್ತು, ದಕ್ಷಿಣಕ್ಕೆ : ರಸ್ತೆ.	ಕೆ.ಸಿ ಪ್ರಕಾಶ್, ಬಿನ್ ಕೆ. ಚಿದಂಬರಯ್ಯ ಉಪಾಧ್ಯಕ್ಷರು ಶ್ರೀರಾಮಾಂಜನೇಯ ರಸ್ತೆ, ಹನುಮಂತನಗರ ಬೆಂಗಳೂರು– 560 050	ಹಿರಿಯ ಉಪ ನೋಂದಣಾಧಿಕಾರಿ, ಬಸವನಗುಡಿ, ಇಲ್ಲಿ ನೋಂದಣಿಯಾಗಿರುತ್ತದೆ. ಕ್ರಯ ಪತ್ರ ಸಂಖ್ಯೆ. 4981/2004–05 ದಿನಾಂಕ: 02.12.2004	15,84,000/–	28,23,000/– AS per EC	–
3	ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ತುರಹಳ್ಳಿ , ಭಾರತ್ ಹೌಸಿಂಗ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್ ಲೇಜೌಟ್. ಬಿಬಿಎಂಪಿ ಖಾತಾ ನಂ.767, ಸೈಟ್ ನಂ.350 ಸ್ವತ್ತಿನ ವಿಸ್ತೀರ್ಣ:– ಪೂರ್ವ ಪಶ್ಚಿಮ : 60 ಅಡಿ, ಉತ್ತರ ದಕ್ಷಿಣ : 80.0 + 42.0/2 ಅಡಿ, ಒಟ್ಟು ವಿಸ್ತೀರ್ಣ: 3660.00 ಚದರಡಿ, ಚೆಕ್ಕುಬಂಧಿ:– ಪೂರ್ವಕ್ಕೆ : ಸೈಟ್ ನಂ.347, ಪಶ್ಚಿಮಕ್ಕೆ : ರಸ್ತೆ ಉತ್ತರಕ್ಕೆ : ಸೈಟ್ ನಂ.349, ದಕ್ಷಿಣಕ್ಕೆ : ರಸ್ತೆ.	ಶ್ರೀ ಸದ್ಗುರು ಸೇವಾ ಟ್ರಸ್ಟ್ (ರಿ) ಪ್ರಧಾನ ಕಛೇರಿ ಶ್ರೀ ಶ್ರೀಮಾತ ಕಲ್ಯಾಣ ಮಂದಿರ, ಎಸ್.ಬಿ.ಎಂ ಕಾಲೋನಿ ಸೀತಾ ಸರ್ಕಲ್ ಬೆಂಗಳೂರು–560 050 ಕೆ.ಸಿ ಪ್ರಕಾಶ್ ಟ್ರಸ್ಟಿ ಕಾರ್ಯನಿರ್ವಾಹಕರು ನಂ.1, ಶ್ರೀ ರಾಮಂಜನೇಯ ರಸ್ತೆ, ಹನುಮಂತನಗರ, ಬೆಂಗಳೂರು	ಹಿರಿಯ ಉಪ ನೋಂದಣಾಧಿಕಾರಿ, ಬಸವನಗುಡಿ (ಬನಶಂಕರಿ) ಇಲ್ಲಿ ನೋಂದಣಿಯಾಗಿರುತ್ತದೆ. ದಾನ ಪತ್ರ ಸಂಖ್ಯೆ. 6470/2008–09 ದಿನಾಂಕ: 28.03.2009	–	–	ದಾನ ಪತ್ರದಲ್ಲಿರುವಂತೆ ನೋಂದಣಿ ಮಾಡುವ ಅವಧಿ ಅಂದರೆ2008–2009ನೇ ಸಾಲಿನಲ್ಲಿ ಸ್ವತ್ತಿನ ಮಾರುಕಟ್ಟೆ ದರ ರೂ. 36,24,000/– ಇರುತ್ತದೆ.
4	ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ತುರಹಳ್ಳಿ, ಭಾರತ್ ಹೌಸಿಂಗ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್ ಲೇಜೌಟ್ ಬಿಬಿಎಂಪಿ ಖಾತಾ ನಂ.765, ಸೈಟ್ ನಂ.348 ಸ್ವತ್ತಿನ ವಿಸ್ತೀರ್ಣ:– ಪೂರ್ವ ಪಶ್ಚಿಮ : 60 ಅಡಿ ಉತ್ತರ ದಕ್ಷಿಣ : 33.0 + 77.0/2 ಅಡಿ ಒಟ್ಟು ವಿಸ್ತೀರ್ಣ: 3300.00 ಚದರಡಿ ಚೆಕ್ಕುಬಂಧಿ:– ಪೂರ್ವಕ್ಕೆ : ಸೈಟ್ ನಂ.343, 345 & 346, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ :ಖಾಸಗಿ ಸ್ವತು, ದಕ್ಷಿಣಕ್ಕೆ : ಸೈಟ್ ನಂ.349	ಶ್ರೀ ಸದ್ಗುರು ಸೇವಾ ಟ್ರಸ್ಟ್ (ರಿ) ಪ್ರಧಾನ ಕಛೇರಿ ಶ್ರೀ ಶ್ರೀಮಾತ ಕಲ್ಯಾಣ ಮಂದಿರ, ಎಸ್.ಬಿ.ಎಂ ಕಾಲೋನಿ, ಸೀತಾ ಸರ್ಕಲ್ ಬೆಂಗಳೂರು– 560 050 ಕೆ.ಸಿ ಪ್ರಕಾಶ್ ಟ್ರಸ್ಟಿ ಕಾರ್ಯ ನಿರ್ವಾಹಕರು ನಂ.1, ಶ್ರೀ ರಾಮಂಜನೇಯ ರಸ್ತೆ, ಹನುಮಂತನಗರ, ಬೆಂಗಳೂರು	ಹಿರಿಯ ಉಪನೋಂದಣಾಧಿಕಾರಿ, ಬಸವನಗುಡಿ (ಬನಶಂಕರಿ) ಇಲ್ಲಿ ನೋಂದಣಿ ಯಾಗಿರುತ್ತದೆ. ದಾನ ಪತ್ರ ಸಂಖ್ಯೆ. 6467/2008–09 ದಿನಾಂಕ: 28.03.2009	–	–	ನ್ಯಾಷನಲ್ ಕೋ–ಆಪರೇಟಿವ್ ಬ್ಯಾಂಕಿನಲ್ಲಿ ಅಡಮಾನ ಮಾಡಲಾಗಿದೆ. ದಾನ ಪತ್ರದಲ್ಲಿರುವಂತೆ ನೋಂದಣಿ ಮಾಡುವ ಅವಧಿ ಅಂದರೆ2008–2009ನೇ ಸಾಲಿನಲ್ಲಿ ಸ್ವತ್ತಿನ ಮಾರುಕಟ್ಟೆ ದರ ರೂ.29,70,000/– ಇರುತ್ತದೆ.
5	ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ತುರಹಳ್ಳಿ ಬಿಬಿಎಂಪಿ ಖಾತಾ ನಂ.766, ಸೈಟ್ ನಂ.349 ಸ್ವತ್ತಿನ ವಿಸ್ತೀರ್ಣ:– ಪೂರ್ವ ಪಶ್ಚಿಮ : 60 ಅಡಿ, ಉತ್ತರ ದಕ್ಷಿಣ : 40 ಅಡಿ, ಒಟ್ಟು ವಿಸ್ತೀರ್ಣ: 2400.00 ಚದರಡಿ ಚೆಕ್ಕುಬಂಧಿ:– ಪೂರ್ವಕ್ಕೆ : ಸೈಟ್ ನಂ.346, 347, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ಸೈಟ್ ನಂ.348, ದಕ್ಷಿಣಕ್ಕೆ : ಸೈಟ್ ನಂ.350	ಶ್ರೀ ಸದ್ಗುರು ಸೇವಾ ಟ್ರಸ್ಟ್ (ರಿ) ಪ್ರಧಾನ ಕಛೇರಿ ಶ್ರೀ ಶ್ರೀಮಾತ ಕಲ್ಯಾಣ ಮಂದಿರ,ಎಸ್.ಬಿ.ಎಂ ಕಾಲೋನಿ, ಸೀತಾ ಸರ್ಕಲ್,ಬೆಂಗಳೂರು– 560 050 ಕೆ.ಸಿ ಪ್ರಕಾಶ್ ಟ್ರಸ್ಟಿ ಕಾರ್ಯ ನಿರ್ವಾಹಕರು ನಂ.1, ಶ್ರೀ ರಾಮಂಜನೇಯ ರಸ್ತೆ, ಹನುಮಂತನಗರ, ಬೆಂಗಳೂರು	ಹಿರಿಯ ಉಪ ನೋಂದಣಾಧಿಕಾರಿ, ಬಸವನಗುಡಿ(ಬನಶಂಕರಿ) ಇಲ್ಲಿ ನೋಂದಣಿಯಾಗಿರುತ್ತದೆ. ದಾನ ಪತ್ರ ಸಂಖ್ಯೆ. 6469/2008–09 ದಿನಾಂಕ: 28.03.2009	–	–	ನ್ಯಾಷನಲ್ ಕೋ–ಆಪರೇಟಿವ್ ಬ್ಯಾಂಕಿನಲ್ಲಿ ಅಡಮಾನ ಮಾಡಲಾಗಿದೆ. ದಾನ ಪತ್ರದಲ್ಲಿರುವಂತೆ ನೋಂದಣಿ ಮಾಡುವ ಅವಧಿ ಅಂದರೆ2008–2009ನೇ ಸಾಲಿನಲ್ಲಿ ಸ್ವತ್ತಿನ ಮಾರುಕಟ್ಟೆ ದರ ರೂ. 21,60,000/– ಇರುತ್ತದೆ.
6	ಹೊಸ ಮುನ್ಸಿಪಲ್ ನಂ.40, ಹಳೆಯ ಮುನ್ಸಿಪಲ್ ನಂ.202, ಪಿ.ಐ.ಡಿ ನಂ.16–40–40, ಹೊಸ ಪಿ.ಐ.ಡಿ ನಂ. 075–ಡಬ್ಲ್ಯೂ0212–6, 3ನೇ ಕ್ರಾಸ್, ಲಕ್ಷ್ಮೀನಗರ ಲಗ್ಗೆರೆ ವಿಲೇಜ್ ಯಶವಂತಪುರ ಹೋಬಳಿ, ಬೆಂಗಳೂರು–560 079, ಬಿಬಿಎಂಪಿ ವಾರ್ಡ್ ನಂ.16, ಕಮಲಾನಗರ ವಿಸ್ತೀರ್ಣ: ಪೂರ್ವ ಪಶ್ಚಿಮ : 40 ಅಡಿ ಉತ್ತರ ದಕ್ಷಿಣ : 45 ಅಡಿ ಒಟ್ಟು : 1800 ಚದರಡಿ ಚೆಕ್ಕುಬಂಧಿ:– ಪೂರ್ವಕ್ಕೆ ; ಖಾಸಗಿ ಸ್ವತ್ತು, ಪಶ್ಚಿಮಕ್ಕೆ : ರಸ್ತೆ ಉತ್ತರಕ್ಕೆ :ಖಾಸಗಿ ಸ್ವತ್ತು, ದಕ್ಷಿಣಕ್ಕೆ : ರಸ್ತೆ.	ಶ್ರೀ. ಮೈಸೂರು ಕುಮಾರ್ ಹಾಗೂ ಶ್ರೀಮತಿ ಎ. ಸರ್ವಮಂಗಳ	ಉಪ ನೋಂದಣಾಧಿಕಾರಿ, ರಾಜಾಜಿನಗರ ಇಲ್ಲಿ ನೋಂದಣಿಯಾಗಿರುತ್ತದೆ ಕ್ರಯ ಪತ್ರ ಸಂಖ್ಯೆ. ಆರ್.ಜೆ.ಎನ್ 1–03465–2013–14 ದಿನಾಂಕ: 19.09.2013	75,00,000/–	–	ದಿನಾಂಕ: 28.09.2013 ರಂದು ರೂ.40,00,000/– ರೂಗಳನ್ನು ಸಾಲವಾಗಿ ಪಡೆದು ಅದರಲ್ಲಿ 30,83,814/– ರೂಗಳನ್ನು ಮಾತ್ರ ಪಾವತಿ ಮಾಡಿರುತ್ತಾರೆ. ಇನ್ನುಳಿದ ಅಸಲು ಮೊತ್ತ ಮತ್ತು ಬಡ್ಡಿ ಪಾವತಿಸಲು ಬಾಕಿ ಇರುತ್ತದೆ.
7	ಸೈಟ್ ನಂ.18, ಹಳೆ ಖಾತಾ ನಂ.171/ಬಿ ಪತ್ರ ನಂ.172/1–ಬಿ, ಖಾತಾ ನಂ.172/1 ಪ್ರಸ್ತುತ ಬಿಬಿಎಂಪಿ ಖಾತಾ ನಂ.200/1/234/172/1ಎ/18, ಹಳೆಯ ಸ್ವತ್ತು ನಂ.37, ಅಬ್ಬಯ್ಯ ರೆಡ್ಡಿ ಲೇಔಟ್, ಕಗ್ಗದಾಸಪುರ ವಿಲೇಜ್, ಕೆ.ಆರ್.ಪುರಂ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು ವಿಸ್ತೀರ್ಣ: ಪೂರ್ವ ಪಶ್ಚಿಮ : 40 ಅಡಿ ಉತ್ತರ ದಕ್ಷಿಣ : 70 ಅಡಿ ಒಟ್ಟು : 2800 ಚದರಡಿ ಚೆಕ್ಕುಬಂಧಿ:– ಪೂರ್ವಕ್ಕೆ : ಸೈಟ್ ನಂ.19 ಮತ್ತು 20, ಪಶ್ಚಿಮಕ್ಕೆ : ಸೈಟ್ ನಂ.17, ಉತ್ತರಕ್ಕೆ :ರಸ್ತೆ, ದಕ್ಷಿಣಕ್ಕೆ : ಖಾಸಗಿ ಸ್ವತ್ತು.	ಶ್ರೀ ಪುರುಷೋತ್ತಮ ರಾಜು (ತೇಜಶ್ರೀ ಬಿಲ್ಡರ್ಸ್)	ಹಿರಿಯ ಉಪ ನೋಂದಣಾಧಿಕಾರಿ, ರಾಜಾಜಿನಗರ (ಇಂದಿರಾ ನಗರ) ಇಲ್ಲಿ ನೋಂದಣಿಯಾಗಿರುತ್ತದೆ General Power of Attorney ಸಂಖ್ಯೆ. ಐಎನ್‌ಆರ್–4–00695–2012–13 ದಿನಾಂಕ: 22.11.2012	–	–	ದಿನಾಂಕ: 22.08.2013 ರಂದು ರೂ.30,05,000/– ರೂಗಳನ್ನು ಸಾಲವಾಗಿ ಪಡೆದು ಅದರಲ್ಲಿ ರೂ.2000/– ರೂಗಳನ್ನು ಮಾತ್ರ ಪಾವತಿ ಮಾಡಿರುತ್ತಾರೆ. ಇನ್ನೂಳಿದ ಅಸಲು ಮೊತ್ತ ಮತ್ತು ಬಡ್ಡಿ ಪಾವತಿಸಲು ಬಾಕಿ ಇರುತ್ತದೆ.
8	ಸೈಟ್ ನಂ.1630/ಎ, (ಬಿಡಿಎ ಸೈಟ್) 17ನೇ ಬಿ ಮುಖ್ಯ ರಸ್ತೆ, ಸಾರಕ್ಕಿ, 2ನೇ ಹಂತ ಜೆ.ಪಿ.ನಗರ ಎಕ್ಸ್‌ಟೆನ್ಷನ್ ಬೆಂಗಳೂರು –560 078 ವಿಸ್ತೀರ್ಣ: ಪೂರ್ವ ಪಶ್ಚಿಮ : 31.45 ಮೀಟರ್ ಉತ್ತರ ದಕ್ಷಿಣ : 11.40 ಮೀಟರ್ ಒಟ್ಟು : 3858 ಚದರಡಿ ಚೆಕ್ಕುಬಂಧಿ:– ಪೂರ್ವಕ್ಕೆ : ಸೈಟ್ ನಂ.1635/ಎ ಪಶ್ಚಿಮಕ್ಕೆ : ರಸ್ತೆ ಉತ್ತರಕ್ಕೆ : ಸೈಟ್ ನಂ.1629, 1628 & 1627 ದಕ್ಷಿಣಕ್ಕೆ : ಸೈಟ್ ನಂ.1630, 1631 & 1632	ಮೆ॥ ಜ್ಞಾನಜ್ಯೋತಿ ವಿದ್ಯಾ ಕೇಂದ್ರ	ಬಿಎನ್ಜಿ(ಯು)–ಕೆಎನ್ಜಿಆರ್ /6526/1999–2000	19,29,000/–	–	ದಿನಾಂಕ: 30.03.2005 ರಂದು ರೂ. 47,00,000/– ರೂಗಳನ್ನು ಸಾಲವಾಗಿ ಪಡೆದು ಅದರಲ್ಲಿ ರೂ. 10,30,486/– ರೂಗಳನ್ನು ಮಾತ್ರ ಪಾವತಿ ಮಾಡಿರುತ್ತಾರೆ ಇನ್ನುಳಿದ ಅಸಲು ಮೊತ್ತ ಮತ್ತು ಬಡ್ಡಿ ಪಾವತಿಸಲು ಬಾಕಿ ಇರುತ್ತದೆ.
9	ಸರ್ವೆ ನಂ.437, ನಂ.570, ಹೊಸ ಮುನ್ಸಿಪಲ್ ನಂ.10, ಸಜ್ಜನರಾವ್ ರಸ್ತೆ, ವಿಶ್ವೇಶ್ವರಪುರಂ ಬೆಂಗಳೂರು–560 004 (ಷೆಡ್ಯೂಲ್–ಡಿ) ಸ್ತೀರ್ಣ: ಪೂರ್ವ ಪಶ್ಚಿಮ : 30 ಅಡಿ ಉತ್ತರ ದಕ್ಷಿಣ : 60 ಅಡಿ ಒಟ್ಟು 1800 ಚದರಡಿ ಚೆಕ್ಕುಬಂಧಿ:– ಪೂರ್ವಕ್ಕೆ : ಬುಗಲ್ ಮಠ ರಸ್ತೆ ಪಶ್ಚಿಮಕ್ಕೆ : ಷೆಡ್ಯೂಲ್ ಬಿ ಅಂಡ್ ಸಿ ಸ್ವತ್ತು ಉತ್ತರಕ್ಕೆ : ಸ್ವತ್ತಿನ ನಂ. 571 ದಕ್ಷಿಣಕ್ಕೆ : ಸೈಟ್ ನಂ.569	ಕೆ.ಎನ್.ಶಂಕರ್ ಮತ್ತು ಇತರರು	ಸಿ.ಪಿ.ಎಫ್ 844 90–95, ನಂ.1767 ದಿನಾಂಕ: 19.07.2000	36,00,000/–	13,68,00,000/–	ದಿನಾಂಕ: 18.02.2020 ರಂದು 21,00,00,000/– ರೂಗಳನ್ನು ಸಾಲವಾಗಿ ಪಡೆದಿರುತ್ತಾರೆ.

ಸಹಿ/–
(ರಮೇಶ ಸಂಗಾ)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ವಿಶೇಷ ಕೋಶ)

ವಾಸಾಸಂಇ/ವಾಪ್ರ/033/2023–24

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ಎಲ್ಲರನ್ನೂ ಸಂತೋಷವಾಗಿ ಇರಿಸಲು ಪ್ರಯತ್ನಿಸಿದರೆ ನೀವು ಯಾರನ್ನೂ ತೃಪ್ತಿಪಡಿಸಲಾರಿರಿ. ಪರರ ಸಂತೋಷಕ್ಕಾಗಿ ನಿಮ್ಮ ಜೀವನವನ್ನು ನಡೆಸಲು ಸಾಧ್ಯವಿಲ್ಲ.

–ಸುಧಾ ಮೂರ್ತಿ

ವಿದ್ಯುತ್ ದರ ಏರಿಕೆ ಜನರ ಮೇಲೆ ಎಳೆದ ಬರೆ

ಅಗತ್ಯ ವಸ್ತುಗಳ ಬೆಲೆ ಹೆಚ್ಚಳದ ಪರಿಣಾಮವಾಗಿ ಸಾಮಾನ್ಯ ಜನ ಸಂಕಷ್ಟದಲ್ಲಿದ್ದಾರೆ. ಈ ಸಂದರ್ಭದಲ್ಲಿ ಜನರ ಮೇಲೆ ವಿದ್ಯುತ್ ದರ ಏರಿಕೆಯ ಭಾರವೂ ಬಿದ್ದಿದೆ. ವರಮಾನದ ಕೊರತೆ ಮತ್ತು ನಷ್ಟವನ್ನು ಸರಿದೂಗಿಸಿಕೊಳ್ಳಲು ಪ್ರತಿ ಯೂನಿಟ್ ದರವನ್ನು ₹ 1.39ರಷ್ಟು ಹೆಚ್ಚಿಸುವಂತೆ ರಾಜ್ಯದ ಐದು ವಿದ್ಯುತ್ ಸರಬರಾಜು ಕಂಪನಿಗಳು (ಎಸ್ಕಾಂ) ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ (ಕೆಇಆರ್‌ಸಿ) ಪ್ರಸ್ತಾವ ಸಲ್ಲಿಸಿದ್ದವು. ಈ ಪ್ರಸ್ತಾವಗಳ ಕುರಿತು ಆಯೋಗವು ಸಾರ್ವಜನಿಕ ವಿಚಾರಣೆಗಳನ್ನು ನಡೆಸಿತ್ತು. ಆಯೋಗದ ಎದುರು ಹಾಜರಾಗಿದ್ದ ಬಹುತೇಕ ಗ್ರಾಹಕರು ದರ ಹೆಚ್ಚಳದ ಪ್ರಸ್ತಾವಗಳನ್ನು ವಿರೋಧಿಸಿದ್ದರು. ಪ್ರತಿ ಯೂನಿಟ್ ವಿದ್ಯುತ್ ದರವನ್ನು 70 ಪೈಸೆಯಷ್ಟು ಹೆಚ್ಚಳ ಮಾಡಲು ಅನುಮತಿ ನೀಡಿ ಮೇ 12ರಂದು ಕೆಇಆರ್‌ಸಿ ಆದೇಶ ಹೊರಡಿಸಿದೆ. ಕಳೆದ ವರ್ಷದ ಏಪ್ರಿಲ್‌ನಲ್ಲಿ ಪ್ರತಿ ಯೂನಿಟ್ ವಿದ್ಯುತ್‌ನ ದರವನ್ನು 35 ಪೈಸೆಯಷ್ಟು ಹೆಚ್ಚಿಸಲಾಗಿತ್ತು. ಅಕ್ಟೋಬರ್‌ನಲ್ಲಿಯೂ ಇಂಧನ ಹೊಂದಾಣಿಕೆ ಶುಲ್ಕದ ಪರಿಷ್ಕರಣೆಯ ಮೂಲಕ ಪ್ರತಿ ಯೂನಿಟ್‌ಗೆ 24 ಪೈಸೆಯಿಂದ 43 ಪೈಸೆಯವರೆಗೂ ದರ ಹೆಚ್ಚಳ ಮಾಡಲಾಗಿತ್ತು. ಡಿಸೆಂಬರ್ ತಿಂಗಳಿನಲ್ಲಿ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ಮತ್ತು ಮಂಗಳೂರು ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಮಾತ್ರ ಇಂಧನ ಹೊಂದಾಣಿಕೆ ಶುಲ್ಕ ಪರಿಷ್ಕರಣೆ ಮಾಡಿ ದರ ಕಡಿಮೆ ಮಾಡಲಾಗಿತ್ತು. ಈಗ ಪುನಃ ದರ ಹೆಚ್ಚಳಕ್ಕೆ ಅನುಮತಿ ನೀಡಿರುವ ಕೆಇಆರ್‌ಸಿ, ಏಪ್ರಿಲ್ 1ರಿಂದ ಪೂರ್ವಾನ್ವಯವಾಗುವಂತೆ ಹೊಸ ದರವನ್ನು ವಿಧಿಸುವುದಕ್ಕೂ ಒಪ್ಪಿಗೆ ನೀಡಿದೆ. ರಾಜ್ಯದ ಬಹುತೇಕ ಎಲ್ಲ ಕುಟುಂಬಗಳೂ ವಿದ್ಯುತ್ ಅನ್ನು ಬಳಸುತ್ತಿವೆ. ಕೆಇಆರ್‌ಸಿಯ ನಿರ್ಧಾರದಿಂದ ಅಂತಹ ಎಲ್ಲ ಕುಟುಂಬಗಳ ಮೇಲೆ ಆರ್ಥಿಕ ಹೊರೆ ಬೀಳಲಿದೆ. ಆಯೋಗವೇ ಅಂದಾಜಿಸಿರುವಂತೆ, ಗ್ರಾಹಕರ ಪ್ರತಿ ತಿಂಗಳ ವಿದ್ಯುತ್ ಶುಲ್ಕದ ಮೊತ್ತದಲ್ಲಿ ಶೇಕಡ 8.31ರಷ್ಟು ಹೆಚ್ಚಳ ಆಗಲಿದೆ. ಎಲ್‌ಪಿಜಿ ಸಿಲಿಂಡರ್ ದರ ಸೇರಿದಂತೆ ಎಲ್ಲ ಅಗತ್ಯ ವಸ್ತುಗಳು ಮತ್ತು ಸೇವೆಗಳ ದರ ಹೆಚ್ಚುತ್ತಲೇ ಇದೆ. ಇದರಿಂದಾಗಿ ಜನ ತತ್ತರಿಸಿದ್ದಾರೆ. ವಿದ್ಯುತ್ ದರ ಹೆಚ್ಚಳಕ್ಕೆ ಕೆಇಆರ್‌ಸಿ ಅನುಮೋದನೆ ನೀಡಿರುವುದನ್ನು ಜನವಿರೋಧಿ ನಡೆ ಎಂದೇ ಪರಿಗಣಿಸಬೇಕಾಗುತ್ತದೆ.

ಇಂಧನ ಇಲಾಖೆಯು ಮಧ್ಯ ಪ್ರವೇಶಿಸಿ, ಎಸ್ಕಾಂಗಳು ವಿದ್ಯುತ್ ದರ ಹೆಚ್ಚಳವನ್ನು ಜಾರಿ ಮಾಡದಂತೆ ತಡೆಯಬೇಕು

ರಾಜ್ಯದ ಐದೂ ಎಸ್ಕಾಂಗಳಿಗೆ 2023–24ನೇ ಆರ್ಥಿಕ ವರ್ಷಕ್ಕೆ ₹ 62,133.47 ಕೋಟಿ ವರಮಾನದ ಅಗತ್ಯವಿದೆ ಎಂದು ಅಂದಾಜಿಸಲಾಗಿದೆ. ಈ ಪೈಕಿ ಕೊರತೆಯಾಗುವ ₹ 8,951.20 ಕೋಟಿಯನ್ನು ಭರಿಸುವುದಕ್ಕಾಗಿ ದರ ಹೆಚ್ಚಳ ಮಾಡುವಂತೆ ಎಸ್ಕಾಂಗಳು ಕೋರಿದ್ದವು. ಈ ಅರ್ಜಿಗಳ ವಿಚಾರಣೆಯನ್ನು ಫೆಬ್ರುವರಿಯಲ್ಲೇ ನಡೆಸಿದ್ದ ಕೆಇಆರ್‌ಸಿ, ನಿರ್ಧಾರ ಪ್ರಕಟಣೆಯನ್ನು ಬಾಕಿ ಇರಿಸಿಕೊಂಡಿತ್ತು. ಬೆಲೆ ಏರಿಕೆ ಈ ಚುನಾವಣೆಯಲ್ಲಿ ಪ್ರಮುಖ ವಿಚಾರವಾಗಿತ್ತು. ಜನರು ಮತ ಚಲಾವಣೆಯಲ್ಲೂ ಬೆಲೆ ಏರಿಕೆ ವಿರುದ್ಧ ಆಕ್ರೋಶ ಹೊರಹಾಕಿದ್ದರು. ಕೇಂದ್ರ ಮತ್ತು ರಾಜ್ಯಗಳಲ್ಲಿ ಬಿಜೆಪಿ ಅಧಿಕಾರ ಹಿಡಿದ ಬಳಿಕ ಬೆಲೆ ಏರಿಕೆ ಹೆಚ್ಚಳ ಆಗಿದೆ ಎಂಬ ವಿರೋಧ ಪಕ್ಷಗಳ ವಾದವನ್ನು ಒಪ್ಪುವಂತೆ ಮತ ಚಲಾವಣೆಯಲ್ಲಿಯೂ ನಿಲುವು ತಳೆದಿದ್ದರು. ಮತದಾನದವರೆಗೂ ವಿದ್ಯುತ್ ದರ ಹೆಚ್ಚಳದ ಪ್ರಸ್ತಾವಗಳನ್ನು ಬಾಕಿ ಇರಿಸಿಕೊಂಡಿದ್ದ ಕೆಇಆರ್‌ಸಿ, ಮತ ಎಣಿಕೆಯ ಮುನ್ನಾದಿನ ಅನುಮೋದನೆ ನೀಡಿರುವ ನಡೆಯೇ ಅದು ಜನಜೀವನದ ಮೇಲೆ ಬೀರಬಹುದಾದ ಪರಿಣಾಮಗಳನ್ನು ಸೂಚಿಸುವಂತಿದೆ. ಕಲ್ಲಿದ್ದಲು ಖರೀದಿ ಮತ್ತು ಸಾಗಣೆ ವೆಚ್ಚ, ವಿದ್ಯುತ್ ಖರೀದಿ ವೆಚ್ಚ, ನೌಕರರ ವೇತನ ಮತ್ತು ಭತ್ಯೆಗಳ ಪರಿಷ್ಕರಣೆ, ಹೂಡಿಕೆ ಮತ್ತು ಬ್ಯಾಂಕ್ ಸಾಲದ ಮೇಲಿನ ಬಡ್ಡಿ, ಸವಕಳಿ ಪ್ರಮಾಣದಲ್ಲಿನ ಹೆಚ್ಚಳವನ್ನು ಸರಿದೂಗಿಸುವುದಕ್ಕೆ ವಿದ್ಯುತ್ ದರ ಏರಿಕೆ ಅನಿವಾರ್ಯ ಎಂದು ಕೆಇಆರ್‌ಸಿ ಸಮರ್ಥಿಸಿಕೊಂಡಿದೆ. ರಾಜ್ಯದ ಎಸ್ಕಾಂಗಳಲ್ಲಿ ವಿದ್ಯುತ್ ಪ್ರಸರಣ ಮತ್ತು ವಿತರಣಾ ನಷ್ಟದ ಪ್ರಮಾಣ ಶೇಕಡ 12.95ರಷ್ಟಿದೆ ಎಂಬುದನ್ನೂ ಆಯೋಗ ತನ್ನ ಆದೇಶದಲ್ಲಿ ತಿಳಿಸಿದೆ. ಇದಲ್ಲದೇ ರೈತರ ಕೃಷಿ ನೀರಾವರಿ ಪಂಪ್‌ಸೆಟ್‌ಗಳಿಗೆ ಪೂರೈಸುವ ವಿದ್ಯುತ್, ಗ್ರಾಮ ಪಂಚಾಯಿತಿಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ವಿದ್ಯುತ್ ಬಿಲ್ ಮೊತ್ತವೂ ಸೇರಿದಂತೆ ಹತ್ತಾರು ಸಾವಿರ ಕೋಟಿ ರೂಪಾಯಿಗಳನ್ನು ರಾಜ್ಯ ಸರ್ಕಾರವು ಎಸ್ಕಾಂಗಳಿಗೆ ಬಾಕಿ ಇರಿಸಿಕೊಂಡಿದೆ. ಈ ಎಲ್ಲವೂ ಎಸ್ಕಾಂಗಳು ಅನುಭವಿಸುತ್ತಿರುವ ನಷ್ಟ ಮತ್ತು ವರಮಾನದ ಕೊರತೆಗೆ ಕಾರಣ. ಈ ಸಮಸ್ಯೆಗಳನ್ನು ಪರಿಹರಿಸಿ, ನಷ್ಟವನ್ನು ತಡೆಯುವುದಕ್ಕೆ ಕೆಇಆರ್‌ಸಿ ಕ್ರಮ ಕೈಗೊಳ್ಳಬೇಕಿತ್ತು. ಪ್ರಸರಣ ಮತ್ತು ವಿತರಣಾ ನಷ್ಟ ತಡೆಯಲು ಸಾಧ್ಯವಾಗದಿರುವುದು ಎಸ್ಕಾಂಗಳ ವೈಫಲ್ಯ. ಅದರ ಹೊರೆಯನ್ನು ಏಕೆ ಗ್ರಾಹಕರ ಮೇಲೆ ವರ್ಗಾಯಿಸಬೇಕು? ಜನರ ಆರ್ಥಿಕ ಹೊರೆಯನ್ನು ಕಡಿಮೆ ಮಾಡುವುದಕ್ಕಾಗಿ 200 ಯೂನಿಟ್‌ಗಳವರೆಗೆ ಉಚಿತವಾಗಿ ವಿದ್ಯುತ್ ಪೂರೈಸುವ ಭರವಸೆಯನ್ನು ಕಾಂಗ್ರೆಸ್ ಪಕ್ಷವು ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿತ್ತು. ಈಗ ಅದೇ ಪಕ್ಷ ಬಹುಮತ ಗಳಿಸಿದೆ. ಹೊಸ ಸರ್ಕಾರ ರಚನೆ ಆಗುವವರೆಗಾದರೂ ಕೆಇಆರ್‌ಸಿ ತನ್ನ ನಿರ್ಧಾರ ಪ್ರಕಟಣೆಯನ್ನು ತಡೆಹಿಡಿಯಬೇಕಿತ್ತು. ಈಗಲೂ ಕಾಲ ಮಿಂಚಿಲ್ಲ. ಇಂಧನ ಇಲಾಖೆಯು ಮಧ್ಯ ಪ್ರವೇಶಿಸಿ, ಎಸ್ಕಾಂಗಳು ದರ ಹೆಚ್ಚಳವನ್ನು ಜಾರಿ ಮಾಡುವುದನ್ನು ತಡೆಯಬೇಕು. ನೂತನ ಸಂಪುಟ ಅಸ್ತಿತ್ವಕ್ಕೆ ಬಂದ ಬಳಿಕ, ದರ ಹೆಚ್ಚಳದ ಬದಲಿಗೆ ಪರ್ಯಾಯ ಕ್ರಮಗಳನ್ನು ತೆಗೆದುಕೊಂಡು ಜನರನ್ನು ಆರ್ಥಿಕ ಹೊರೆಯಿಂದ ರಕ್ಷಿಸುವ ಬದ್ಧತೆಯನ್ನು ಪ್ರದರ್ಶಿಸಬೇಕು.

ದಿನದ ಟ್ವೀಟ್

ಮತದಾರನಿಗೆ ಬೇಕಿರುವುದು...



ಕಾಂಗ್ರೆಸ್ಸಿಗರೇ, ನಿಮ್ಮ ಐದು ಗ್ಯಾರಂಟಿಗಳು ಹಾಗಿರಲಿ. ಈಗ ಬೇಕಿರುವುದು ಒಂದೇ ಗ್ಯಾರಂಟಿ. ಮತದಾರನಿಗೆ ಮತದಾನ ಮಾಡಿದ್ದಕ್ಕೆ ಪಾಪಪ್ರಜ್ಞೆ ಮೂಡಿಸದಂಥ ಬದ್ಧತೆ ಮತ್ತು ಶುದ್ಧತೆಯಿಂದ ನಾಡನ್ನು ನಾಳೆಗಳಿಗೆ ಮುನ್ನಡೆಸುವ ಏಕಮತ.

ನಾಗತಿಹಳ್ಳಿ ಚಂದ್ರಶೇಖರ, ಚಲನಚಿತ್ರ ನಿರ್ದೇಶಕ

ಕಿಡಿನುಡಿ

ಪ್ರಜಾಪ್ರಭುತ್ವದಲ್ಲಿ ಗೆಲುವು, ಸೋಲು ಸಾಮಾನ್ಯ. ಆದರೆ ಗೆಲುವಿನ ಮದದಲ್ಲಿ ಕಾಂಗ್ರೆಸ್ ಗೂಂಡಾಗಳು ಬಿಜೆಪಿ ಕಾರ್ಯಕರ್ತರ ಪ್ರಾಣಹಾನಿ, ಆಸ್ತಿಪಾಸ್ತಿಗೆ ನಷ್ಟ ಉಂಟು ಮಾಡುವುದನ್ನು ನೋಡಿಯೂ ಪೊಲೀಸ್ ಇಲಾಖೆ ಕ್ರಮ ತೆಗೆದುಕೊಳ್ಳದೇ ಹೋದರೆ, ನಮ್ಮ ಕಾರ್ಯಕರ್ತರ ಸಹನೆ ಮೀರಿದರೆ ಅದಕ್ಕೆ ರಾಜ್ಯ ಸರ್ಕಾರವೇ ಹೊಣೆ.

ನಳಿನ್‌ಕುಮಾರ್ ಕಟೀಲ್, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

25 ವರ್ಷಗಳ ಹಿಂದೆ

ಶನಿವಾರ, 16-5-1998

• ರಾಷ್ಟ್ರ ಭದ್ರತೆಗೆ ಅಗತ್ಯವಾದರೆ ಅಣ್ವಸ್ತ್ರ ಬಳಕೆ: ಪ್ರಧಾನಿ ಘೋಷಣೆ

ನವದೆಹಲಿ, ಮೇ 15 (ಪಿಟಿಐ)– 'ರಾಷ್ಟ್ರ ಭದ್ರತೆಗೆ ಭಂಗ ಬಂದರೆ ಅಣ್ವಸ್ತ್ರ ಬಳಸಲು ಹಿಂಜರಿಯುವುದಿಲ್ಲ, ಬೃಹತ್ ಅಣುಬಾಂಬ್‌ನೊಂದಿಗೆ ಭಾರತ ಈಗ ಅಣ್ವಸ್ತ್ರ ಹೊಂದಿರುವ ರಾಷ್ಟ್ರವಾಗಿದೆ' ಎಂದು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಘೋಷಿಸಿದ್ದಾರೆ.

'ಅಣ್ವಸ್ತ್ರಗಳನ್ನು ನಾವಾಗಿಯೇ ಯಾರ ಮೇಲೂ ಬಳಸುವುದಿಲ್ಲ. ಆದರೆ, ರಾಷ್ಟ್ರದ ರಕ್ಷಣೆಗೆ ಅಗತ್ಯವಾದರೆ ಅವುಗಳನ್ನು ಪ್ರಯೋಗಿಸಲು ಹಿಂಜರಿಯುವುದಿಲ್ಲ' ಎಂದು ಪ್ರಧಾನಿ ಇಂದು ಬೆಳಿಗ್ಗೆ ತಮ್ಮ ಮನೆಯ ಮುಂದೆ ಸೇರಿದ್ದ ಬಿಜೆಪಿ ಕಾರ್ಯಕರ್ತರನ್ನು ಉದ್ದೇಶಿಸಿ ಹೇಳಿದರು.

ಅಣ್ವಸ್ತ್ರ ಪರೀಕ್ಷೆ ನಡೆಸಿದ್ದಕ್ಕಾಗಿ ಕೆಲವು ದೇಶಗಳು ಭಾರತದ ವಿರುದ್ಧ ದಿಗ್ಬಂಧನ ಹೇರಿರುವುದನ್ನು ಪ್ರಸ್ತಾಪಿಸಿದ ಪ್ರಧಾನಿಯವರು, 'ಈ ದೇಶಗಳು ತಮ್ಮ ನಿರ್ಧಾರವನ್ನು ಪುನರ್‌ಪರಿಶೀಲಿಸಬೇಕು' ಎಂದು ಮನವಿ ಮಾಡಿದರು.

50 ವರ್ಷಗಳ ಹಿಂದೆ

ಬುಧವಾರ, 16-5-1973

• ಭಿನ್ನಮತೀಯರ ಸಹಿ ಸಂಗ್ರಹಣೆ ಪಕ್ಷ ವಿರೋಧಿ ಚಟುವಟಿಕೆ

ಬೆಂಗಳೂರು, ಮೇ 15– ಭಿನ್ನಮತೀಯರು ಸಹಿ ಸಂಗ್ರಹಿಸುವುದು 'ಸ್ಪಷ್ಟವಾಗಿ ಪಕ್ಷ ವಿರೋಧಿ ಚಟುವಟಿಕೆ'.

ಇದು ಮುಖ್ಯಮಂತ್ರಿ ಶ್ರೀ ಡಿ. ದೇವರಾಜ ಅರಸು ಅವರ ಅಭಿಪ್ರಾಯವಾಗಿದೆ.

ಸಂಜೆ ದೆಹಲಿಗೆ ತೆರಳಿದ ಮುಖ್ಯಮಂತ್ರಿ, ಭಿನ್ನಮತೀಯರು ಚಟುವಟಿಕೆ ನಡೆಸುತ್ತಿರುವ ರೀತಿಯ ಬಗ್ಗೆ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದರು.

ಬಹಿರಂಗವಾಗಿಯಾಗಲೀ ರಹಸ್ಯವಾಗಿಯಾಗಲೀ ಮಂತ್ರಿಗಳ ವಿರುದ್ಧ ಇರಬಹುದಾದ ಆಪಾದನೆಗಳನ್ನು ತಮಗೆ ತಿಳಿಸಬೇಕೆಂದು ಮೇಲಿಂದ ಮೇಲೆ ಹೇಳಿದ್ದರೂ ಭಿನ್ನಮತೀಯರು ಮೌನದಿಂದ ಇರುವುದರ ತರ್ಕ ತಮಗೆ ಅರ್ಥವಾಗದೆಂದು ಅರಸು ಅವರು ವರದಿಗಾರರಿಗೆ ತಿಳಿಸಿದರು.

• ರೈತರ ಸಹಕಾರ ಸಿಗದಿದ್ದರೆ ಆಹಾರಧಾನ್ಯ ಆಮದು: ಚವಾಣ್ ಎಚ್ಚರಿಕೆ

ನವದೆಹಲಿ, ಮೇ 15– ಸರ್ಕಾರದ ಆಹಾರ ಧಾನ್ಯ ಸಂಗ್ರಹಣೆ ಕಾರ್ಯಕ್ರಮದಲ್ಲಿ ರೈತರು ಅಥವಾ ಸಹಕಾರ ತೋರದಿದ್ದರೆ ಆಹಾರ ಧಾನ್ಯವನ್ನು ಆಮದು ಮಾಡಿಕೊಳ್ಳಲು ಸರ್ಕಾರ ಹಿಂತೆಗೆಯುವುದಿಲ್ಲವೆಂದು ಕೇಂದ್ರ ಹಣಕಾಸು ಸಚಿವ ಯಶವಂತರಾವ್ ಬಲವಂತರಾವ್ ಚವಾಣ್ ಅವರು ಇಂದು ಲೋಕಸಭೆಯಲ್ಲಿ ಎಚ್ಚರಿಕೆ ನೀಡಿದರು.

ಮಾರುಕಟ್ಟೆಗೆ ಬಿಡದೆ ಆಹಾರಧಾನ್ಯವನ್ನು ತಮ್ಮಲ್ಲಿಯೇ ಬಚ್ಚಿಟ್ಟುಕೊಳ್ಳುವ ತಪ್ಪು ಮಾರ್ಗಕ್ಕೆ ರೈತರನ್ನು ಎಳೆಯಬಾರದೆಂದೂ ಅವರು ತಿಳಿಸಿದರು.

ಕೇಂದ್ರ ಸರ್ಕಾರ ಈ ಸಂಗತಿಯನ್ನು ವಿಶ್ವಸಂಸ್ಥೆಯಲ್ಲಿ ಪ್ರಸ್ತಾಪಿಸಲಿರುವುದು ಮಹತ್ವದ ಬೆಳವಣಿಗೆ

ಹೆಚ್ಚುತ್ತಿರುವ ಹಿಂದೂಫೋಬಿಯಾ ಸಮಸ್ಯೆ

ಸೂರ್ಯ–ನಮಸ್ಕಾರ

ಎ. ಸೂರ್ಯಪ್ರಕಾಶ್

ಹಿಂದೂಗಳ ಕುರಿತು ಅನಗತ್ಯ ಭೀತಿ ಮತ್ತು ದ್ವೇಷಭಾವನೆ (ಹಿಂದೂಫೋಬಿಯಾ) ಹರಡುವ ಯತ್ನವು ಜಗತ್ತಿನ ಎಲ್ಲೆಡೆ ಹೆಚ್ಚಾಗುತ್ತಿರುವುದನ್ನು ತಡೆಯಲು ಕೇಂದ್ರ ಸರ್ಕಾರವು ಇನ್ನಷ್ಟು ಕೆಲಸ ಮಾಡಬೇಕು. ಹಿಂದೂಫೋಬಿಯಾ ಹರಡುವ ಕೆಲಸದಲ್ಲಿ ಇಸ್ಲಾಮಿಕ್ ತೀವ್ರವಾದಿಗಳು ಮುಂಚೂಣಿಯಲ್ಲಿದ್ದಾರೆ. ಇವರ ಜೊತೆ ಅಮೆರಿಕ ಮತ್ತು ಯುರೋಪಿನಲ್ಲಿ ಇರುವ ಭಾರತ ವಿರೋಧಿ ವಿದ್ವಾಂಸರೂ ಇದ್ದಾರೆ.

ಹೆನ್ರಿ ಜಾಕ್ಸನ್ ಸೊಸೈಟಿ (ಎಚ್‌ಜೆಎಸ್) ಬ್ರಿಟನ್ನಿನ ಶಾಲಾ ವಿದ್ಯಾರ್ಥಿಗಳು ಮತ್ತು ಅವರ ಪಾಲಕರ ನಡುವೆ ನಡೆಸಿದ ಸಮೀಕ್ಷೆಯು, ಹೆಚ್ಚುತ್ತಿರುವ ಈ ಸಮಸ್ಯೆಗೆ ತಾಜಾ ಸಾಕ್ಷ್ಯ ನೀಡಿದೆ. ಸಮೀಕ್ಷೆಯು ತನ್ನ ಸಾರಾಂಶದಲ್ಲಿ, 'ಬ್ರಿಟನ್ನಿನ ಶಾಲೆಗಳಲ್ಲಿ ಹಿಂದೂಗಳನ್ನು ಗುರಿಯಾಗಿಸಿ ನಡೆಯುತ್ತಿರುವ ತಾರತಮ್ಯದ ಬಗ್ಗೆ ತನಿಖೆ ನಡೆಸಿ ಸಿದ್ಧಪಡಿಸಿದ ಮೊದಲ ವರದಿ ಇದು. ಹಿಂದೂ ದ್ವೇಷವನ್ನು ಗುರುತಿಸಿ, ಅದನ್ನು ತಡೆಯಲು ಶಾಲೆಗಳು ಸಜ್ಜಾಗಿಲ್ಲವೆಂಬುದನ್ನು, ಸಜ್ಜಾಗಿಲ್ಲದಿರುವಿಕೆ ಎಷ್ಟರಮಟ್ಟಿಗೆ ಇದೆ ಎಂಬುದನ್ನು ಇಲ್ಲಿ ಹೇಳಲಾಗಿದೆ' ಎಂದು ಬರೆದಿದೆ.

ಬೇರೆ ದೇಶಗಳಿಂದ ಬಂದವರ ಬಗ್ಗೆ ಪೂರ್ವಗ್ರಹ, ಅಸಹಿಷ್ಣುತೆ ಪ್ರಮುಖ ಸಮಸ್ಯೆ ಎಂದು ಸಮೀಕ್ಷೆ ಹೇಳುತ್ತದೆ. ಶ್ವೇತವರ್ಣೀಯ ವಿದ್ಯಾರ್ಥಿಗಳು ಹಿಂದೂ ಸಹಪಾಠಿಗಳನ್ನು ತಮ್ಮ ಚಟುವಟಿಕೆಗಳಲ್ಲಿ ಸೇರಿಸಿಕೊಳ್ಳುವುದಿಲ್ಲ. ಹಿಂದೂ ವಿದ್ಯಾರ್ಥಿಗಳು ಬಹುದೇವತೋಪಾಸಕರಾದ ಕಾರಣ, ಅವರನ್ನು ನಿಂದಿಸುತ್ತಾರೆ. ಮೂರ್ತಿಪೂಜೆಯನ್ನು, ಬಹುದೇವತೆಗಳ ಆರಾಧನೆಯನ್ನು ಅಣಕಿಸಲಾಗುತ್ತದೆ. ಇಸ್ಲಾಮಿಕ್ ತೀವ್ರವಾದ ಹಾಗೂ ಅದು ಹಿಂದೂ ಮಕ್ಕಳ ಮೇಲೆ ಉಂಟು ಮಾಡುತ್ತಿರುವ ಪರಿಣಾಮ ಕೂಡ ಕಳವಳಕಾರಿ. ಹಿಂದೂ ವಿದ್ಯಾರ್ಥಿಗಳನ್ನು ಮುಸ್ಲಿಂ ವಿದ್ಯಾರ್ಥಿಗಳು 'ಕಾಫಿರ'ರು ಎಂದು ಕರೆಯುತ್ತಾರೆ, ಇಸ್ಲಾಂಗೆ ಮತಾಂತರವಾಗಲು ಹೇಳುತ್ತಾರೆ. ಇಲ್ಲವಾದರೆ, ನರಕದಲ್ಲಿ ಜೀವಿಸಲು ಸಿದ್ಧರಾಗಿ ಎನ್ನುತ್ತಿದ್ದಾರೆ.

ಬ್ರಿಟನ್ನಿನ ಒಂದು ಸಾವಿರ ಶಾಲೆಗಳಿಂದ ಅಭಿಪ್ರಾಯ ಸಂಗ್ರಹಿಸಲಾಗಿರುವ ಕಾರಣ ಈ ಸಮೀಕ್ಷೆಯು ಬಹಳ ದೊಡ್ಡದು. ಬ್ರಿಟನ್ನಿನಲ್ಲಿ ಶೇಕಡ 1.7ರಷ್ಟು ಜನ ಹಿಂದೂಗಳು, ಅಲ್ಲಿನ ಮೂರನೆಯ ಅತಿದೊಡ್ಡ ಧರ್ಮ ಹಿಂದೂ ಧರ್ಮ. ಆದರೆ, ಭಾರತ ಮೂಲದ ಬ್ರಿಟಿಷ್ ಹಿಂದೂಗಳ ಅನುಭವ ಏನು ಎಂಬ ಬಗ್ಗೆ ಹೆಚ್ಚಿನ ಸಂಶೋಧನೆಗಳು ಆಗಿಲ್ಲ. 2022ರ ಸೆಪ್ಟೆಂಬರ್‌ನಲ್ಲಿ ಬರ್ಮಿಂಗ್‌ಹ್ಯಾಂ ಮತ್ತು ಲೈಸೆಸ್ಟರ್‌ನಲ್ಲಿ ಹಿಂದೂಗಳ ಮೇಲೆ ದಾಳಿಗಳು ನಡೆದವು, ಅವರ ಆಸ್ತಿ ಹಾಗೂ ಪೂಜಾಸ್ಥಳಗಳನ್ನು ಹಾಳು ಮಾಡಲಾಯಿತು. ಹಿಂದೂ ಧಾರ್ಮಿಕ ಆಚರಣೆಗಳನ್ನು ಅನುಸರಿಸುವ ರಿಷಿ ಸುನಕ್ ಬ್ರಿಟನ್ನಿನ ಪ್ರಧಾನಿ ಎಂದು ತಮ್ಮ ಬೆನ್ನನ್ನು ತಾವೇ ತಟ್ಟಿಕೊಳ್ಳುತ್ತಿರುವ ಹಿಂದೂಗಳು ಈ ವಾಸ್ತವದ ಬಗ್ಗೆ ಅರಿವು ಹೊಂದಿರಬೇಕು.

ಈ ವರದಿಯು ಕಂಡುಕೊಂಡಿರುವ ಸಂಗತಿಗಳು ಕಳವಳ ಮೂಡಿಸುವಂತಿವೆ. ವರದಿ ಆಧರಿಸಿ ಕೇಂದ್ರ ಸರ್ಕಾರವು ತಕ್ಷಣವೇ ಕ್ರಮ ಕೈಗೊಳ್ಳಬೇಕಿದೆ. ತಮ್ಮ ಮಕ್ಕಳು ಹಿಂದೂ ದ್ವೇಷವನ್ನು ಎದುರಿಸಿದ್ದಾರೆ, ಅದರ ಪರಿಣಾಮವಾಗಿ ಸಮಸ್ಯೆಗೆ ಸಿಲುಕಿದ್ದಾರೆ ಎಂದು ಸಮೀಕ್ಷೆಯಲ್ಲಿ ಭಾಗಿಯಾಗಿದ್ದ ಶೇಕಡ 51ರಷ್ಟು ಹಿಂದೂ ಪಾಲಕರು ಹೇಳಿದ್ದಾರೆ. ಹಿಂದೂ ಧರ್ಮ ಕುರಿತ ಬೋಧನೆಯು, ಹಿಂದೂ ವಿದ್ಯಾರ್ಥಿಗಳನ್ನು ಗುರಿಯಾಗಿಸಿದ ಧಾರ್ಮಿಕ ತಾರತಮ್ಯಕ್ಕೆ ಇಂಬುಕೊಡುವ ರೀತಿಯಲ್ಲಿ ಇದೆ ಎಂದು ಕೂಡ ಸಮೀಕ್ಷೆ ಕಂಡುಕೊಂಡಿದೆ.

ಹಿಂದೂಗಳನ್ನು ಗುರಿಯಾಗಿಸಿಕೊಂಡು ಹಿಂಸಾಚಾರ ನಡೆಯುತ್ತಿದೆ. ಎಂಟು ಬಾರಿ ಹಲ್ಲೆ ನಡೆದಿರುವುದನ್ನು, ಅವುಗಳ ಪೈಕಿ ಒಂದು ಬಾರಿ ವಿದ್ಯಾರ್ಥಿನಿಯೊಬ್ಬಳ ಮೇಲೆ ಗೋಮಾಂಸ ಎಸೆದಿದ್ದನ್ನು ಸಮೀಕ್ಷೆ ಉಲ್ಲೇಖಿಸಿದೆ. ಹಿಂದೂ ಧರ್ಮವನ್ನು ಶಾಲೆಗಳಲ್ಲಿ ಬೋಧಿಸುವ ಕ್ರಮದ ಪರಿಣಾಮವಾಗಿ ವಿದ್ಯಾರ್ಥಿಯೊಬ್ಬ 'ಹಿಂದೂ ನಿಂದನೆ'ಗೆ ಗುರಿಯಾಗಿದ್ದನ್ನು, ಆ ವಿದ್ಯಾರ್ಥಿಯು ಮೂರು ಬಾರಿ ಶಾಲೆ ಬದಲಿಸಬೇಕಾಗಿ ಬಂದಿದ್ದನ್ನು ಸಮೀಕ್ಷೆ ಗುರುತಿಸಿದೆ.

ಹಿಂದೂ ಧರ್ಮದ ಬಗೆಗಿನ ಬೋಧನೆಯ ಗುಣಮಟ್ಟವು ಹಿಂದೂ ವಿದ್ಯಾರ್ಥಿಗಳ ಪಾಲಕರಿಗೆ ಹೆಚ್ಚು ಕಳವಳ ಮೂಡಿಸುವಂತೆ ಇದೆ ಎಂಬುದು ವರದಿಯಲ್ಲಿ ಇರುವ ಅಂಶ. 'ಹಿಂದೂ ಧರ್ಮವನ್ನು ಅಬ್ರಹಾಮಿಕ್ ನಂಬಿಕೆಗಳ ದೃಷ್ಟಿಕೋನದಿಂದ ಕಲಿಸಲಾಗುತ್ತಿದೆ. ದೇವರ ವಿಚಾರವಾಗಿ ಸರಿಯಲ್ಲದ ರೀತಿಯಲ್ಲಿ ಆದ್ಯತೆ ನೀಡಲಾಗಿದೆ. ಪ್ರಮುಖ ಪರಿಕಲ್ಪನೆಗಳನ್ನು ತಪ್ಪಾಗಿ ಅರ್ಥ ಮಾಡಿಕೊಳ್ಳಲಾಗಿದೆ. ತಪ್ಪು ಕಲ್ಪನೆಗಳೇ ತರಗತಿಗಳಲ್ಲಿ ವಿದ್ಯಾರ್ಥಿಗಳನ್ನು ಗುರಿಯಾಗಿಸಿ ನಡೆಯುವ ನಿಂದನೆಗೆ ನೇರ ಕಾರಣ' ಎಂದು ಪಾಲಕರು ಹೇಳಿದ್ದನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಬ್ರಿಟನ್ನಿನ ಕನ್ಸರ್ವೇಟಿವ್ ಪಕ್ಷದ ಸಂಸದ ಬೆನ್ ಎವೆರಿಟ್ ಅವರು ವರದಿಗೆ ಮುನ್ನುಡಿ ಬರೆದಿದ್ದಾರೆ. 'ಹಿಂದೂ ಧರ್ಮದ ಕುರಿತ ಬೋಧನೆಯಲ್ಲಿ ಇರುವ ಸಮಸ್ಯಾತ್ಮಕ ನಡೆಯು ಪೂರ್ವಗ್ರಹ ಬೆಳೆಸಲು ಕಾರಣ ಆಗುತ್ತಿರಬಹುದು' ಎಂದು ಅವರು ಭಾವಿಸಿದ್ದಾರೆ. ಸಮೀಕ್ಷೆಯು ಕಂಡುಕೊಂಡಿರುವ ಅಂಶಗಳು ಬಹಳ ಮಹತ್ವವಾದವು ಎಂದು ಕೂಡ ಅವರು ಹೇಳಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದ ಅಡಿಯಲ್ಲಿ ದೇಶದ ವಿದೇಶಾಂಗ ವ್ಯವಹಾರಗಳನ್ನು ನೋಡಿಕೊಳ್ಳುವವರು ಈ ಸಮಸ್ಯೆಯ ಕುರಿತಂತೆ ಎಚ್ಚೆತ್ತಿದ್ದಾರೆ. ಹಿಂದೂಫೋಬಿಯಾ ಸಮಸ್ಯೆಯನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿನ ಅತ್ಯುನ್ನತ ವೇದಿಕೆಯಾಗಿರುವ ವಿಶ್ವಸಂಸ್ಥೆಯಲ್ಲಿ ಪ್ರಸ್ತಾಪಿಸಲು ಸರ್ಕಾರ ತೀರ್ಮಾನ ಮಾಡಿರುವುದು ಮೈಲಿಗಲ್ಲು ಎಂಬಂತಹ ಬೆಳವಣಿಗೆ. ಅಂತರರಾಷ್ಟ್ರೀಯ ಭಯೋತ್ಪಾದನಾ ವಿರೋಧಿ ಸಮ್ಮೇಳನದಲ್ಲಿ ಮಾತನಾಡುವ ಸಂದರ್ಭದಲ್ಲಿ, ವಿಶ್ವಸಂಸ್ಥೆಯಲ್ಲಿ ಭಾರತದ ಕಾಯಂ ಪ್ರತಿನಿಧಿಯಾಗಿರುವ ಟಿ.ಎಸ್.ತಿರುಮೂರ್ತಿ ಅವರು, 'ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳಿಗೆ ಇಸ್ಲಾಮೊಫೋಬಿಯಾ, ಕ್ರಿಶ್ಚಿಯಾನೊಫೋಬಿಯಾ ಮತ್ತು ಸೆಮೆಟಿಕ್ ವಿರೋಧಿ ಭಾವನೆಗಳ ಬಗ್ಗೆ ಅರಿವಿದೆ. ಆದರೆ, ದೇಶಗಳು ಹಿಂದೂಫೋಬಿಯಾ ಬಗ್ಗೆ ಯಾವತ್ತೂ ಮಾತನ್ನೇ ಆಡದಿದ್ದುದು ಏಕೆ' ಎಂದು ಪ್ರಶ್ನಿಸಿದ್ದಾರೆ.

ಹಿಂದೂ, ಬೌದ್ಧ, ಸಿಖ್ ಧರ್ಮಗಳ ವಿಚಾರವಾಗಿ ಇರುವ ಫೋಬಿಯಾ ಹಾಗೂ ಆ ಒಂದು ಸಮಸ್ಯೆಯನ್ನು ಗುರುತಿಸುವ ಕೆಲಸವೇ ಆಗದಿರುವುದು ಯಾವ ಕಾರಣಕ್ಕಾಗಿ ಎಂದು ತಿರುಮೂರ್ತಿ ಅವರು ಪ್ರಶ್ನಿಸಿದ್ದಾರೆ. ವಿಶ್ವಸಂಸ್ಥೆಯಲ್ಲಿ ಧರ್ಮಗಳ ಕುರಿತ ಚರ್ಚೆಯಲ್ಲಿ ಹೆಚ್ಚಿನ ಸಮತೋಲನ ಸಾಧ್ಯವಾಗಬೇಕು ಎಂದಾದರೆ, ಈ ಧರ್ಮಗಳನ್ನು ಗುರಿಯಾಗಿಸಿಕೊಂಡಿರುವ ದ್ವೇಷ ಭಾವನೆ, ಪೂರ್ವಗ್ರಹಗಳನ್ನು ಕೂಡ ಗುರುತಿಸುವ ಕೆಲಸ ಆಗಬೇಕು.

ಈ ದೇಶದ ಬಹುಸಂಖ್ಯೆಯ ಜನ ಅನುಸರಿಸುವ ಧರ್ಮದ ಪರವಾಗಿ ಕೇಂದ್ರ ಸರ್ಕಾರವು ದನಿ ಎತ್ತಿರುವುದು ಇದು ಮೊದಲ ಬಾರಿ. ಪಂಡಿತ್ ಜವಾಹರಲಾಲ್ ನೆಹರೂ ಅವರ ಕಾಲದಿಂದಲೂ ನಕಲಿ ಜಾತ್ಯತೀತ ವಾದದ ಚಿಪ್ಪಿನೊಳಗೆ ಬೆಚ್ಚಗೆ ಅವಿತುಕೊಳ್ಳುತ್ತಿದ್ದ ದೇಶದ ವಿದೇಶಾಂಗ ವ್ಯವಹಾರಗಳ ಅಧಿಕಾರಿಗಳು ಅದರಿಂದ ಹೊರಬಂದು, ಹಿಂದೂ ಧರ್ಮಕ್ಕೆ ಎದುರಾಗಿರುವ ಅಪಾಯಗಳ ಬಗ್ಗೆ ಮಾತನಾಡಿರುವುದು ಕೂಡ ಇದೇ ಮೊದಲು.

ದೇಶದ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ಬ್ರಿಟನ್ನಿನ ಲೈಸೆಸ್ಟರ್ ಮತ್ತು ಬರ್ಮಿಂಗ್‌ಹ್ಯಾಂನಲ್ಲಿ ಹಿಂದೂಗಳ ಸ್ಥಳಗಳ ಮೇಲೆ ನಡೆದ ದಾಳಿ ಕುರಿತ ವಿಚಾರ ಪ್ರಸ್ತಾಪಿಸಿದ್ದಾರೆ. ಹಿಂದೂಗಳ ಪೂಜಾ ಸ್ಥಳಗಳನ್ನು ರಕ್ಷಿಸುವಂತೆ ತಮ್ಮ ಬ್ರಿಟನ್ನಿನ ಸಹವರ್ತಿಗೆ ಆಗ್ರಹಿಸಿದ್ದಾರೆ. ಅದೇನೇ ಇದ್ದರೂ, ಈಗ ಎಚ್‌ಜೆಎಸ್ ವರದಿಯಲ್ಲಿ ಹೇಳಿರುವ ಅಂಶಗಳು ಎಚ್ಚರಿಕೆಯ ಕರೆಗಂಟೆ ಇದ್ದಂತೆ. ಅಮೆರಿಕ ಮತ್ತು ಯುರೋಪಿನಲ್ಲಿ ಲಕ್ಷಾಂತರ ಮಂದಿ ಹಿಂದೂಗಳು ನೆಲೆ ಕಂಡುಕೊಂಡಿದ್ದಾರೆ. ಕೇಂದ್ರ ಸರ್ಕಾರವು ಈ ವರದಿಯಲ್ಲಿನ ಅಂಶಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು. ಪಾಶ್ಚಿಮಾತ್ಯ ದೇಶಗಳಲ್ಲಿ ಆಗುತ್ತಿರುವ ಕೆಲವು ಬೆಳವಣಿಗೆಗಳನ್ನು ನಿಗ್ರಹಿಸಲು ಕಾರ್ಯತಂತ್ರವೊಂದನ್ನು ರೂಪಿಸಬೇಕು.

ಚುರುಮುರಿ



ಅಧಿಕಾರದ ಅಪ್ಪರ್‌ಕ್ರಿಯೆ

• ಲಿಂಗರಾಜು ಡಿ.ಎಸ್.

ದೇವಲೋಕದ ಒಂದು ಸೀನ್. ಪರಮಾತ್ಮ ಮತ್ತು ನಾರದ ಚರ್ಚೆಯಲ್ಲಿದ್ದಾರೆ. 'ಪರಮಾತ್ಮ, ಇದೇನು ನಿನ್ನ ಲೀಲೆ! ಧರಣಿಮಂಡಲ ಮಧ್ಯದಲ್ಲಿರುವ ಕರ್ನಾಟ ದೇಶದ ಪುಣ್ಯಕೋಟಿಗಳನ್ನು ಆಳಲು ಮತ್ತೆ ಹುಲಿಗಳನ್ನೇ ಬಿಟ್ಟಿರುವೆಯಲ್ಲಾ?' ಅಂದರು ನಾರದರು.

'ಹುಲಿಗಳೆಲ್ಲಾ ಘೋರ ತಪಸ್ಸು ಮಾಡಿ, ಈ ಬಾರಿ ತಮಗೇ ಅಧಿಕಾರ ಪ್ರಾಪ್ತವಾಗಬೇಕೆಂಬ ವರ ಪಡೆದಿದ್ದಾರೆ. ನಾನು ಅಸಹಾಯಕ ನಾರದರೇ' ಪರಮಾತ್ಮ ಕೈಚೆಲ್ಲಿದ.

'ಜನಸಾಮಾನ್ಯರ ಕಷ್ಟಗಳು ಎಂದು ಕೊನೆಗೊಳ್ಳುವುವು ದೇವಾ?'

'ನಾರದರೇ, ಸಾಮಾನ್ಯ ಜನ ಜಿಎಸ್‌ಟಿ, ಐಟಿ, ಲಂಚಾವತಾರ, ಟ್ರಾಫಿಕ್, ಬೆಲೆ ಏರಿಕೆಯ ನರಕದಲ್ಲಿ ಪ್ರತಿದಿನ ಬೇಯುತ್ತಲೇ ಇದ್ದಾರೆ. ಇದು ತಾತ್ಕಾಲಿಕ, ಇವರೆಲ್ಲಾ ನೇರವಾಗಿ ಸ್ವರ್ಗಕ್ಕೆ ಬಂದು ಸೇರುತ್ತಾರೆ' ಅಂದ ಪರಮಾತ್ಮ.

'ಹಾಗಾದರೆ ಪ್ರಭು, ಅಧಿಕಾರಕ್ಕಾಗಿ ಅಕ್ರಮಗಳ ದಾರಿ ಹಿಡಿದು ಅಪ್ಪರ್‌ಕ್ರಿಯೆ ಮಾಡುವ ರಾಜಕಾರಣಿಗಳು ಏನಾಗಲಿದ್ದಾರೆ?'

'ನಾರದರೇ, ಅಧಿಕಾರ ಸಿಕ್ಕ ಹುರುಪಿನಲ್ಲಿ ರಾಜಕಾರಣಿಗಳು ಜನರ ದುಡ್ಡಿಗೆ ಬಾಯಿ ಹಾಕಿ ಕಾಸಿಗಾಗಿ ಪಕ್ಷಾಂತರ, ಕುರ್ಚಿಗಾಗಿ ಕಿತ್ತಾಟ, ಕಮಿಷನ್, ಲಂಚಾವತಾರ, ಕುತಂತ್ರದ ರಾಜಕೀಯ ಆರಂಭಿಸಿದ ದಿನದಿಂದಲೇ ಅವರ ಪಾಪದ ಕೊಡ ತುಂಬುತ್ತಾ ಬರಲಿದೆ'.

'ಆದರೆ ಪರಮಾತ್ಮ, ಪಾಪಪ್ರಜ್ಞೆ ಇಲ್ಲದೇ ಚಾಳಿದಾಸರಾಗಿ ಸಕಲ ಸುಖ ಪ್ರಾರಬ್ಧಗಳನ್ನು ರಾಜಕಾರಣಿಗಳು ಇಲ್ಲಿಯೇ ಅನುಭವಿಸುತ್ತಾರಲ್ಲಾ? ಅವರಿಗೇನೂ ಶಿಕ್ಷೆ ಇಲ್ಲವೇ?'

'ಏಕಿಲ್ಲ ನಾರದರೇ! ಖೂಳ ರಾಜಕಾರಣಿಗಳಿಗೆ ಮುಂದಿನ ಜನ್ಮವಿಲ್ಲ! ಅವರು ನೇರವಾಗಿ ಯಮಲೋಕಕ್ಕೆ ತೆರಳಿ, 28 ರೀತಿಯ ನರಕಗಳಲ್ಲಿ ಕ್ರೂರ ಶಿಕ್ಷೆಗಳನ್ನು ಅನುಭವಿಸುತ್ತಾ ಅಲ್ಲೇ ಕಾಯಂ ಆಗಿ ಇರಲಿದ್ದಾರೆ'.

'ಅಂದರೆ ಜನರಿಗೆ ಒಳಿತು ಮಾಡುವ ರಾಜಕಾರಣಿ ಮಾತ್ರ ಪಾಪ- ಕರ್ಮಗಳಿಂದ ಪಾರಾಗುತ್ತಾನೆ. ಮತದಾರರೇ ರಾಜಕಾರಣಿಗಳಿಗೆ ಪಾಠ ಕಲಿಸುವಂತೆ ಮಾಡುವ ನಿನ್ನಂತಹ ಮಹಾನ್ ರಾಜಕಾರಣಿ ಇನ್ಯಾರಿದ್ದಾರೆ ದೇವ? ರಾಜಕೀಯವನ್ನು ಮತದ ಮೂಲಕ ತಿದ್ದುವ ನೀನೇ ದೇವರದೇವ!' ನಾರದರು ಕೈಮುಗಿದರು.

ಸಂಗತ

ಉಡುಗೊರೆ ಮತ್ತು 'ಮೌಲ್ಯ' ನಿರ್ಣಯ

ಕೌಟುಂಬಿಕ ಕಾರ್ಯಕ್ರಮಕ್ಕಾಗಿ ಲಕ್ಷಾಂತರ ರೂಪಾಯಿಯನ್ನು ಧಾರಾಳವಾಗಿ ವ್ಯಯಿಸುವವರು, ಆಹ್ವಾನಿತರಿಂದ ಉಡುಗೊರೆಯನ್ನು ನಿರೀಕ್ಷಿಸುವುದು ಸರಿಯಲ್ಲ

• ರಾಜಕುಮಾರ ಕುಲಕರ್ಣಿ

ಇತ್ತೀಚೆಗೆ ಬಂಧುಗಳ ಮನೆಯ ಮದುವೆ ಕಾರ್ಯಕ್ರಮಕ್ಕೆ ಹೋಗಿದ್ದ ನನ್ನ ಸ್ನೇಹಿತರೊಬ್ಬರು, ಅಲ್ಲಿ ತಮಗೆ ಸೂಕ್ತ ಗೌರವ, ಮನ್ನಣೆ ದೊರೆಯಲಿಲ್ಲ ಎಂದು ನೊಂದುಕೊಂಡರು. ವಧು- ವರರಿಗೆ ಕಡಿಮೆ ಮೌಲ್ಯದ ಉಡುಗೊರೆ ನೀಡಿದ್ದೇ ಮದುವೆ ಮನೆಯಲ್ಲಿ ತಮ್ಮನ್ನು ಕೀಳಾಗಿ ಕಾಣಲು ಕಾರಣವಾಯಿತೆಂದು ಹೇಳಿದರು. ಮದುವೆಯಂತಹ ಕೌಟುಂಬಿಕ ಕಾರ್ಯಕ್ರಮಗಳಲ್ಲಿ ಸಾಮಾನ್ಯವಾಗಿ ಆಹ್ವಾನಿತರು ಉಡುಗೊರೆ ನೀಡುವುದು ಒಂದು ಸಂಪ್ರದಾಯ. ಉತ್ತರ ಕರ್ನಾಟಕ ಭಾಗದಲ್ಲಿ ಇದಕ್ಕೆ 'ಆಹೇರಿ' ಎನ್ನುತ್ತಾರೆ. ಇನ್ನು ಕೆಲವು ಕಡೆ ಇದನ್ನು 'ಮುಯ್ಯಿ ಬರೆಸುವುದು' ಎಂದೂ ಕರೆಯುವುದುಂಟು.

ಹಿಂದೆಲ್ಲ ಬಡ ಕುಟುಂಬಗಳಿಗೆ ಇಂತಹ ಕಾರ್ಯಕ್ರಮಗಳ ನಿರ್ವಹಣೆಗೆ ಅನುಕೂಲವಾಗಲೆಂದು ಉಡುಗೊರೆಯ ರೂಪದಲ್ಲಿ ಆರ್ಥಿಕ ನೆರವು ನೀಡಲಾಗುತ್ತಿತ್ತು. ಸಹಾಯವೆಂದರೆ ಸ್ವಾಭಿಮಾನ ಅಡ್ಡ ಬರಬಹುದೆಂದು, ಇದನ್ನು 'ಉಡುಗೊರೆ' ಎಂದು ಕರೆಯಲಾಯಿತು. ಹೀಗೆ ಕೈಸೇರುವ ಹಣ, ಆ ಕುಟುಂಬವು ಕಾರ್ಯಕ್ರಮಕ್ಕಾಗಿ ಮಾಡಿದ ಸಾಲದ ಹೊರೆಯನ್ನು ಸ್ವಲ್ಪ ಮಟ್ಟಿಗೆ ತಗ್ಗಿಸುತ್ತಿತ್ತು. ಆದರೆ ಇಂದು ಉಡುಗೊರೆ ಕೊಡುವುದು ಮತ್ತು ಪಡೆಯುವುದು ಅನುಕೂಲಸ್ಥ ಕುಟುಂಬಗಳನ್ನು ಕೂಡ ಸೋಂಕಿನಂತೆ ಆವರಿಸಿಕೊಂಡಿದೆ.

ಮದುವೆ, ಗೃಹಪ್ರವೇಶ, ತೊಟ್ಟಿಲು ಶಾಸ್ತ್ರ, ಸೀಮಂತದಂಥ ಕಾರ್ಯಕ್ರಮಗಳಲ್ಲಿ ಅತಿಥಿಗಳಿಂದ ದೊರೆಯುವ ಉಡುಗೊರೆಗಳ ಪಟ್ಟಿ ಮಾಡಲು ಮನೆಯ ಸದಸ್ಯರು ಅಥವಾ ಬಂಧುಗಳು ಕುಳಿತುಕೊಳ್ಳುವ ಪರಿಪಾಟ ಉತ್ತರ ಕರ್ನಾಟಕ ಭಾಗದಲ್ಲಿ ಇನ್ನೂ ಚಾಲ್ತಿಯಲ್ಲಿದೆ. ಕಲ್ಯಾಣ ಮಂಟಪ ಅಥವಾ ಕಾರ್ಯಕ್ರಮ ನಡೆಯುವ ಸಭಾಂಗಣದ ದ್ವಾರದಲ್ಲೇ ಇವರು ಕೂರುವುದರಿಂದ, ಬಂದು ಹೋಗುವ ಅತಿಥಿಗಳು ಒಂದು ರೀತಿಯ ಮುಜುಗರದ ಸನ್ನಿವೇಶವನ್ನು ಎದುರಿಸಬೇಕಾಗುತ್ತದೆ. ಉಣಬಡಿಸಿದ ಭೋಜನಕ್ಕೆ ಪ್ರತಿಯಾಗಿ ಪ್ರತಿಫಲವನ್ನು ಅಪೇಕ್ಷಿಸುತ್ತಿರುವರೇನೋ ಎಂದು ಭಾಸವಾಗುತ್ತದೆ.

ಹತ್ತಾರು ಜನರೆದುರು ಕಡಿಮೆ ಮೌಲ್ಯದ ಹಣ ಅಥವಾ ಉಡುಗೊರೆ ಬರೆಸುವಾಗ ಸಂಕೋಚ ಉಂಟಾಗುವುದು ಸಹಜ. ಕೆಲವೊಮ್ಮೆ ಬರೆದುಕೊಳ್ಳುವವರ ವ್ಯಂಗ್ಯದ ತೀಕ್ಷ್ಣನೋಟದಿಂದ ಅತಿಥಿಗಳು ಕೀಳರಿಮೆಗೆ ಒಳಗಾಗುವುದುಂಟು. 'ಉಳ್ಳವರು ಶಿವಾಲಯವ ಮಾಡುವರು, ನಾನೇನು ಮಾಡಲಿ ಬಡವನಯ್ಯಾ' ಎನ್ನುವ ವಚನದ ಸಾಲನ್ನು ಇಲ್ಲಿಯೂ ಅನ್ವಯಿಸಿ ಹೇಳಬಹುದು.

ಆರ್ಥಿಕ ಭಾರವನ್ನು ತಗ್ಗಿಸಲು ಬಟ್ಟೆಯನ್ನು ಉಡುಗೊರೆಯಾಗಿ ಕೊಡುವುದು ಸಾಮಾನ್ಯವಾಗಿದೆ. ಸಾಧಾರಣ ಗುಣಮಟ್ಟದ ಇಂಥ ಬಟ್ಟೆಗಳು ಮುಂದೊಂದು ದಿನ ಉಡುಗೊರೆಯ ರೂಪದಲ್ಲೇ ವಿಲೇವಾರಿಯಾಗುತ್ತವೆ. ಬಟ್ಟೆ ಅಂಗಡಿಗಳಲ್ಲೂ ಇಂಥ ಉದ್ದೇಶಕ್ಕಾಗಿಯೇ ಪ್ರತ್ಯೇಕ ವಿಭಾಗವಿದ್ದು, ಗ್ರಾಹಕರಿಗೆ ಉತ್ತಮ ಗುಣಮಟ್ಟದ ಬಟ್ಟೆ ಬೇಕೋ ಆಹೇರಿ ಬಟ್ಟೆ ಬೇಕೋ ಎಂದು ಮಳಿಗೆಯ ಮಾಲೀಕರು ವಿಚಾರಿಸುತ್ತಾರೆ. ಕೆಲವೊಮ್ಮೆ ಗ್ರಾಹಕರೇ ಆಹೇರಿಗಾಗಿ ಸಾಧಾರಣ ಗುಣಮಟ್ಟದ ಬಟ್ಟೆಗಳಿವೆಯೇ ಎಂದು ಬಾಯಿಬಿಟ್ಟು ಕೇಳುವುದುಂಟು.

ದಂಡಿಯಾಗಿ ಹರಿದುಬರುವ ಬಟ್ಟೆಯ ಮಹಾಪೂರವನ್ನು ತಡೆಗಟ್ಟಲು ಈಗ ಬಟ್ಟೆಯನ್ನು ಸ್ವೀಕರಿಸದಿರುವ ಹೊಸ ವರಸೆಯೊಂದು ಶುರುವಾಗಿದೆ. ಲಗ್ನಪತ್ರಿಕೆ ಅಥವಾ ಆಹ್ವಾನಪತ್ರದಲ್ಲಿ 'ಬಟ್ಟೆ ಉಡುಗೊರೆ ಸ್ವೀಕರಿಸುವುದಿಲ್ಲ' ಎಂದು ಸ್ಪಷ್ಟವಾಗಿ ನಮೂದಿಸಿರುತ್ತಾರೆ. ಹಣ, ಚಿನ್ನ ಅಥವಾ ಬೆಳ್ಳಿಯನ್ನು ಕೊಡಬಹುದೆಂದು ಇದರರ್ಥ. ಕುಟುಂಬದ ಕಾರ್ಯಕ್ರಮಕ್ಕಾಗಿ ಲಕ್ಷಾಂತರ ರೂಪಾಯಿಯನ್ನು ಧಾರಾಳವಾಗಿ ವ್ಯಯಿಸುವವರು ಹಣ ಅಥವಾ ಒಡವೆ ರೂಪದ ಉಡುಗೊರೆಯನ್ನು ಆಹ್ವಾನಿತರಿಂದ ನಿರೀಕ್ಷಿಸುವುದು ಸರಿಯಲ್ಲ.

ಉಡುಗೊರೆ ಎನ್ನುವುದು ಗೋಡೆಗೆ ಬಡಿದ ಚೆಂಡಿದ್ದಂತೆ. ಕೊಡುವಾಗ ಯಾವ ರೂಪದಲ್ಲಿತ್ತೋ ಮುಂದೊಂದು ದಿನ ಅದೇ ರೂಪದಲ್ಲಿ ಮರಳಿ ಬರುತ್ತದೆ. ಹೀಗಾಗಿ, ಪಡೆಯುವವರ ಆರ್ಥಿಕ ಸ್ಥಾನಮಾನವನ್ನು ಆಧರಿಸಿ ತಾವು ಕೊಡಬೇಕಾದದ್ದನ್ನು ಕೊಡುವವರು ನಿರ್ಧರಿಸುತ್ತಾರೆ. ಇನ್ನು ಕೆಲವರು, ಮುಂದೆ ತಮ್ಮತ್ತ ಉಡುಗೊರೆಗಳ ಮಹಾಪೂರವೇ ಹರಿದು ಬರಲೆಂದು ಅಪೇಕ್ಷಿಸಿ ಕೊಡುತ್ತಾರೆ. ಹಾಗೆಂದು ಇವರೇನು ಕೊಡುಗೈ ದಾನಿಗಳಲ್ಲ. ಇವರ ಧಾರಾಳತನ ಉಡುಗೊರೆ ಕೊಟ್ಟು, ತೆಗೆದುಕೊಳ್ಳುವುದಕ್ಕಷ್ಟೇ ಸೀಮಿತ. ಬೃಹದಾಕಾರದ ಪುಷ್ಪಗುಚ್ಛಗಳನ್ನು ಕೊಡುವ ಪರಿಪಾಟವನ್ನು ಕೆಲವರು ರೂಢಿಸಿಕೊಂಡಿರುತ್ತಾರೆ. ಸಾವಿರಾರು ರೂಪಾಯಿಗಳನ್ನು ಪಾವತಿಸಿ ಖರೀದಿಸಿದ ಪುಷ್ಪಗುಚ್ಛಗಳು ಕೆಲವೇ ಗಂಟೆಗಳಲ್ಲಿ ಕಸದಗುಂಡಿ ಸೇರುತ್ತವೆ. ಪುಸ್ತಕಗಳು ಮತ್ತು ಸಸಿಗಳನ್ನು ಕೊಡುವ ಸುಸಂಸ್ಕೃತರೂ ಅಲ್ಲೊಮ್ಮೆ ಇಲ್ಲೊಮ್ಮೆ ಅಪರೂಪಕ್ಕೆಂಬಂತೆ ಕಾಣಸಿಗುತ್ತಾರೆ. ಪುಸ್ತಕಗಳಿಂದ ಉಡುಗೊರೆಯ ಮೌಲ್ಯ ಕೂಡ ಹೆಚ್ಚುತ್ತದೆ. ಪುಸ್ತಕ ಸಂಸ್ಕೃತಿ ಮತ್ತು ಪರಿಸರ ಪ್ರೇಮದ ಬಗ್ಗೆ ಅರಿವು ಮೂಡಿಸುವ ಈ ಪ್ರಯತ್ನ ಅಭಿನಂದನಾರ್ಹ. ಆದರೆ ಇಂಥವರ ಸಂಖ್ಯೆ ತೀರಾ ವಿರಳ ಎನ್ನುವುದು ಬೇಸರದ ಸಂಗತಿ.

ಸಂಬಂಧಿಕರ ಮಗನಿಗೆ ಮದುವೆಯಲ್ಲಿ ಹತ್ತು ಗ್ರಾಂ ಚಿನ್ನದ ಸರವನ್ನು ಉಡುಗೊರೆಯಾಗಿ ನೀಡಿದ ನನ್ನ ಪರಿಚಿತರು ಹೇಳಿದ್ದು ಹೀಗೆ- 'ನನ್ನ ಸಂಬಂಧಿಕರದು ಭಾರೀ ಅನುಕೂಲಸ್ಥ ಕುಟುಂಬ. ಈ ಹತ್ತು ಗ್ರಾಂ ಚಿನ್ನ ಅವರಿಗೆ ಯಾವ ಲೆಕ್ಕಕ್ಕೂ ಇಲ್ಲ. ಅದೇ 60 ಸಾವಿರ ರೂಪಾಯಿಯನ್ನು ಅಸಹಾಯಕರಿಗೆ ನೆರವಿನ ರೂಪದಲ್ಲಿ ನೀಡಿದ್ದರೆ ಮನಸ್ಸಿಗೆ ತೃಪ್ತಿ, ಸಮಾಧಾನ ಸಿಗುತ್ತಿತ್ತು'. ಧನ, ಕನಕವನ್ನಾಧರಿಸಿ ಉಡುಗೊರೆಯ ಮೌಲ್ಯ ನಿರ್ಧಾರವಾಗುತ್ತಿರುವ ಹೊತ್ತಿನಲ್ಲಿ ಹೀಗೆ ಯೋಚಿಸುವವರ ಸಂಖ್ಯೆ ಇನ್ನಷ್ಟು ವೃದ್ಧಿಸಬೇಕಿದೆ.

ವಾಚಕರ ವಾಣಿ

ಪ್ರಜಾಪ್ರಭುತ್ವದ ಘನತೆಗೆ ಧಕ್ಕೆ ತರುವ ನಡೆ

ಮುಖ್ಯಮಂತ್ರಿ ಯಾರಾಗಬೇಕು ಎಂಬುದು ಪಕ್ಷಕ್ಕೆ ಸಂಬಂಧಿಸಿದ ವಿಚಾರ. ಇದಕ್ಕೆ ಸಂವಿಧಾನಬದ್ಧವಾದ ಪ್ರಜಾಸತ್ತಾತ್ಮಕ ವ್ಯವಸ್ಥೆ ಇದೆ. ಜಗದ್ಗುರುಗಳು ಎನ್ನಿಸಿಕೊಂಡ ಸ್ವಾಮೀಜಿಗಳು ಜಾತಿನಾಯಕರ ಪರವಾಗಿ ಬೀದಿಗಿಳಿದು ಹೋರಾಟ ಮಾಡುವುದು ಧರ್ಮಾಧಾರಿತ ನಡೆಯಲ್ಲ. ರಾಜ್ಯದ ಬಜೆಟ್ಟಿನಲ್ಲಿ ಮಠಗಳಿಗೆ ಅನುದಾನ ಕೊಡುವುದಕ್ಕೆ ಪ್ರಾರಂಭಿಸಿದ ಮೇಲೆ ಮಠಗಳ ನೈತಿಕತೆಯನ್ನು ರಾಜಕಾರಣಿಗಳು ಹಾಳುಮಾಡಿದರು. ಈಗ ಅದರ ಘೋರ ಪರಿಣಾಮವಾಗಿ ಕೆಲವು ಸ್ವಾಮಿಗಳು ಪ್ರಜಾಪ್ರಭುತ್ವದ ಘನತೆಯನ್ನು ಹಾಳುಮಾಡಲು ಹೊರಟಿದ್ದಾರೆ. ಇದು ದೇಶದ ದುರಂತ. ಪ್ರಜಾಪ್ರಭುತ್ವದ ಅವನತಿ.

ಎಸ್.ಜಿ.ಸಿದ್ಧರಾಮಯ್ಯ, ರುದ್ರಪ್ಪ ಹನಗವಾಡಿ, ಬೆಂಗಳೂರು

ಹೀಗಿದೆ ಜನರ ನಿರೀಕ್ಷೆಗಳ ಭಾರ...

ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದಾಗಲೆಲ್ಲಾ ಜನ ತೋರುವ ಪ್ರೀತಿ, ಅಭಿಮಾನಕ್ಕೆ ಎಣೆ ಇರುವುದಿಲ್ಲ, ಅಂತೆಯೇ ಅದಕ್ಕೆ ಪ್ರತಿಯಾಗಿ ಜನಪ್ರತಿನಿಧಿಗಳು ನೀಡುವ ಭರವಸೆಗಳೂ ಕಡಿಮೆ ಇರುವುದಿಲ್ಲ, ಆದರೆ ನಂತರದ ಕೆಲವೇ ದಿನಗಳಲ್ಲಿ ಹಿಂದಿನ ಸರ್ಕಾರದಂತೆಯೇ ಹೊಸ ಸರ್ಕಾರವೂ ದುರಾಡಳಿತದಲ್ಲಿ ಮುಳುಗಿಹೋಗುತ್ತದೆ ಎಂಬುದು ಜನಸಾಮಾನ್ಯರ ಅನುಭವ. ಆದರೆ ಈಗ ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಹೊಸ ಸರ್ಕಾರ ಹೀಗಾಗದೇ ಇರಬೇಕಾದರೆ ಜನರ ನಿರೀಕ್ಷೆಗಳಿಗೆ ತಕ್ಕಂತೆ ಅದು ಸ್ಪಂದಿಸಬೇಕಾಗುತ್ತದೆ. ಅಂತಹ ಪ್ರಮುಖ ನಿರೀಕ್ಷೆಗಳೆಂದರೆ: ಭ್ರಷ್ಟಾಚಾರದ ನಿಯಂತ್ರಣ, ಲೋಕಾಯುಕ್ತರಿಗೆ ಪೂರ್ಣ ಅಧಿಕಾರ, ದಕ್ಷ ಸಚಿವರ ನೇಮಕ, ಆಡುವ ಮಾತುಗಳಲ್ಲಿ ಘನತೆ ಮರೆಯದ, ಸ್ವಜನಪಕ್ಷಪಾತ ತೋರದ, ಭ್ರಷ್ಟರನ್ನು ರಕ್ಷಿಸದ, ಸ್ವಾಮೀಜಿಗಳನ್ನು ಆಡಳಿತ ವ್ಯಾಪ್ತಿಯೊಳಗೆ ಬಿಟ್ಟುಕೊಳ್ಳದ, ಅತಿವೃಷ್ಟಿಯ ಸಂತ್ರಸ್ತರ ಪರವಾಗಿ ತಕ್ಷಣ ಅಭಿವೃದ್ಧಿ ಕಾರ್ಯ ಆರಂಭಿಸುವ, ಸೋಮಾರಿ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಚುರುಕು ಮುಟ್ಟಿಸುವ, ಗುತ್ತಿಗೆದಾರರಿಂದ ಪಡೆಯುವ ಪರ್ಸೆಂಟೇಜ್‌ಗೆ ಕಡಿವಾಣ ಹಾಕುವ, ಅಗತ್ಯ ವಸ್ತುಗಳ ಬೆಲೆ ಏರಿಕೆ ನಿಯಂತ್ರಿಸುವ, ವಾಸ್ತುವಿನ ಹೆಸರಿನಲ್ಲಿ ವಿಧಾನಸೌಧದ ಗೋಡೆಯ ರೂಪುರೇಷೆಯನ್ನೇ ಬದಲಿಸುವ ಕಂದಾಚಾರವನ್ನು ತಡೆಗಟ್ಟುವ ರೀತಿಯಲ್ಲಿ ಜನನಾಯಕರು ಕಾರ್ಯಪ್ರವೃತ್ತರಾಗಬೇಕಾಗಿದೆ.

ಆಡಳಿತಾರೂಢ ಸರ್ಕಾರದ ಭ್ರಷ್ಟಾಚಾರ ಅಥವಾ ಅತಿಕ್ರಮಗಳ ಬಗ್ಗೆ ವಿರೋಧ ಪಕ್ಷವು ಧ್ವನಿ ಎತ್ತಿದರೆ, 'ನೀವು ನಿಮ್ಮ ಆಡಳಿತದಲ್ಲಿ ಮಾಡಲಿಲ್ಲವೇ?' ಎಂಬಂಥ ಮೂರ್ಖ ಪ್ರಶ್ನೆಯನ್ನು ಕೇಳಬಾರದು. ಹೊಸ ಪಕ್ಷವು ಅಧಿಕಾರಕ್ಕೆ ಬರುವುದು ಹಿಂದಿನ ಸರ್ಕಾರದ ಆಡಳಿತ ವೈಖರಿಯನ್ನು ಅನುಸರಿಸಲು ಅಲ್ಲ ಎಂಬುದನ್ನು ಸದಾ ನೆನಪಿನಲ್ಲಿ ಇಟ್ಟುಕೊಳ್ಳಬೇಕು. ಹಾಗಾದಾಗ ಮಾತ್ರ ಹೊಸ ಸರ್ಕಾರದ ಬಗ್ಗೆ ಹೆಮ್ಮೆಪಡಲು ಸಾಧ್ಯವಾದೀತು.

ಎಂ.ಕೆ.ವಾಸುದೇವರಾಜು, ಮೈಸೂರು

ಖಜಾನೆ ಖಾಲಿ ಮಾಡುವ ಯೋಜನೆ ಬೇಡ

ರಾಜಕೀಯ ಪಕ್ಷಗಳು ತಮ್ಮ ಚುನಾವಣಾಪೂರ್ವ ಪ್ರಣಾಳಿಕೆಗಳಲ್ಲಿ, ಸಾರ್ವಜನಿಕವಾಗಿ ಉಪಯೋಗವಾಗುವಂತಹ ಮೂಲ ಸೌಕರ್ಯಗಳನ್ನು ಯಶಸ್ವಿಯಾಗಿ ಕಾರ್ಯರೂಪಕ್ಕೆ ತರುವ ಆಶ್ವಾಸನೆ ಕೊಡಲಿ. ಅದುಬಿಟ್ಟು, ಮತದಾರರನ್ನು ಸೆಳೆಯಲು ಉಚಿತ ಘೋಷಣೆಗಳಿಗೆ ಮುಂದಾಗಿ, ಸರ್ಕಾರದ ಖಜಾನೆ ಖಾಲಿ ಮಾಡುವ ಯೋಜನೆಗಳನ್ನು ಜಾರಿಗೊಳಿಸುವುದು ಬೇಡ. ಏಕೆಂದರೆ ಇಂತಹ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನಿಸಿ ಸಂಕಷ್ಟ ಅನುಭವಿಸಿದ ಕೆಲವು ದೇಶಗಳ ಉದಾಹರಣೆಗಳು ನಮ್ಮ ಮುಂದೆ ಇವೆ. ಇವು ನಮಗೆ ಪಾಠವಾಗಲಿ.

ಎಂ.ಪರಮೇಶ್ವರ, ಮದ್ದಿಹಳ್ಳಿ, ಹಿರಿಯೂರು

ವಿತಂಡವಾದ ಇನ್ನೂ ಸೋತಿಲ್ಲ!

ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಬಹುಮತ ಪಡೆಯುವಲ್ಲಿ ಬಿಜೆಪಿ ಸೋತಿದೆ. ಆದರೆ, ಅದರ ವಿತಂಡವಾದ ಮಾತ್ರ ಇನ್ನೂ ಸೋತಿಲ್ಲ. ಉದಾಹರಣೆಗೆ, 'ಇದು ಮೋದಿಯವರ ಸೋಲಲ್ಲ' ಎಂಬುದು ಒಂದು ವಿತಂಡವಾದವೇ. ಗೆದ್ದಿದ್ದರೆ ಇಷ್ಟರಲ್ಲಿ, ಅಮೋಘ ಮೋದಿ ಮಹೋತ್ಸವವೇ ಏರ್ಪಡುತ್ತಿತ್ತು. ಗೆದ್ದರೆ ಅದು ಮೋದಿ ಗೆಲುವು, ಸೋತರೆ ಅದು ಸ್ಥಳೀಯ ನಾಯಕರ ಸೋಲು! 'ಕಾಂಗ್ರೆಸ್ಸಿಗೆ ವೋಟು ಹಾಕಿರುವವರು ಅವಿದ್ಯಾವಂತರು' ಎಂಬುದು ಮತ್ತೊಂದು ವಿಂತಡವಾದ. ಈ ಹಿಂದೆ ಇದೇ ಮತದಾರರು ಪ್ರಜ್ಞಾವಂತರಾಗಿದ್ದರು, ಏಕೆಂದರೆ, ಆಗ ಅವರು ಬಿಜೆಪಿಗೆ ಮತ ನೀಡಿದ್ದರು! ಮತ್ತೊಂದು, 'ಉಚಿತವಾಗಿ ಸವಲತ್ತುಗಳನ್ನು ನೀಡಿದರೆ ಜನ ಸೋಮಾರಿಗಳಾಗುತ್ತಾರೆ' ಎಂಬ ವಿತಂಡವಾದ. ಆದರೆ ಹೀಗೆ ಉಚಿತವಾಗಿ ನೀಡುವ ವಸ್ತುಗಳಿಂದಷ್ಟೇ ಜನರ ಬದುಕು ಉದ್ಧಾರವಾಗಿಬಿಡುವುದೇ? ಉಳಿದೆಲ್ಲ ಖರ್ಚುಗಳಿಗೆ ಅವರು ದುಡಿಯಲೇಬೇಕಲ್ಲವೆ?

ಮಗದೊಂದು ವಿತಂಡವಾದ: 'ಉಚಿತವಾಗಿ ನೀಡಿದಲ್ಲಿ ಸರ್ಕಾರದ ಖಜಾನೆ ಖಾಲಿಯಾಗಿ, ರಾಜ್ಯದ ಪ್ರಗತಿ ಕುಂಠಿತವಾಗುತ್ತದೆ'. ಅದಕ್ಕೊಂದು ಲೆಕ್ಕಾಚಾರವಿಲ್ಲವೆ? ಅಷ್ಟು ಊಹಾಶಕ್ತಿಯು 'ಗ್ಯಾರಂಟಿ' ಭರವಸೆಗಳನ್ನು ನೀಡುವವರಿಗೆ ಇಲ್ಲವೇ? ಸೋತ ಪಕ್ಷದವರು ಇಂಥವನ್ನೆಲ್ಲ ಬಿಟ್ಟು, ವಿರೋಧ ಪಕ್ಷವಾಗಿ ಜವಾಬ್ದಾರಿಯಿಂದ ಕೆಲಸ ನಿರ್ವಹಿಸುವ ಕಡೆ ಗಮನಕೊಡಲಿ.

ರಾಮಚಂದ್ರ ಎಸ್. ಕುಲಕರ್ಣಿ, ಧಾರವಾಡ

ಹಾಲು, ಹಣ್ಣಿನ ದುರ್ಬಳಕೆ ತರವೇ?

ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಸಿ.ಟಿ.ರವಿ ಅವರು ಸೋಲುವುದಕ್ಕೆ ಪರೋಕ್ಷವಾಗಿ ಕಾರಣರಾದ ಜೆಡಿಎಸ್‌ನ ಎಸ್.ಎಲ್.ಭೋಜೇಗೌಡ ಅವರ ಮೇಲೆ ಅವರ ಪಕ್ಷದ ಕಾರ್ಯಕರ್ತರು ಹಾಲು ಸುರಿದು ಸಂಭ್ರಮ ವ್ಯಕ್ತಪಡಿಸಿರುವುದು ವರದಿಯಾಗಿದೆ. ಚುನಾವಣೆಯಲ್ಲಿ ಗೆದ್ದವರ ಮೇಲೆ, ಸೋಲಲು ಪರೋಕ್ಷ ಕಾರಣರಾದವರ ಮೇಲೆ ಹಾಗೂ ಚಿತ್ರನಟರ ಕಟೌಟುಗಳ ಮೇಲೆ ಹಾಲಿನ ಅಭಿಷೇಕ ಮಾಡುವುದು ಅಲ್ಲಲ್ಲಿ ನಡೆಯುತ್ತಾ ಇರುತ್ತದೆ. ಆದರೆ ಈ ರೀತಿ ಹಾಲನ್ನು ಪೋಲು ಮಾಡುವುದು ಎಷ್ಟು ಸರಿ? ಸ್ವಂತ ದುಡಿಮೆಯ ಹಣದಿಂದಲೇ ಹಾಲನ್ನು ಕೊಂಡಿದ್ದರೂ ಅದು ಈ ರೀತಿ ವ್ಯರ್ಥ ಆಗಬಾರದು. ಇತ್ತೀಚಿನ ವರ್ಷಗಳಲ್ಲಿ ರಾಜಕಾರಣಿಗಳಿಗೆ ಸೇಬಿನ ಭಾರಿ ಹಾರಗಳನ್ನು ಕ್ರೇನ್ ಮೂಲಕ ಹಾಕುವ ಹೊಸ ಸಂಪ್ರದಾಯವನ್ನು ನೋಡುತ್ತಿದ್ದೇವೆ.

ಸಂತೋಷ ವ್ಯಕ್ತಪಡಿಸಲು ಹತ್ತಾರು ದಾರಿಗಳು ಇರುತ್ತವೆ. ಈ ರೀತಿ ಹಾಲು ಅಥವಾ ಹಣ್ಣುಗಳನ್ನು ವ್ಯರ್ಥ ಮಾಡಲು ಮನಸ್ಸಾದರೂ ಹೇಗೆ ಬರುತ್ತದೆ? ನಾವು ರೈತರ ಪರ ಎನ್ನುವ ಎಲ್ಲ ರಾಜಕಾರಣಿಗಳೂ ಇದಕ್ಕೆ ಸಹಕರಿಸುವ ಮೂಲಕ ರೈತರಿಗೆ ಅಪಮಾನ ಮಾಡುತ್ತಿದ್ದಾರೆ. ಇಂತಹ ಅಪಸವ್ಯಗಳನ್ನು ಅವರೇ ಮೊದಲು ನಿಯಂತ್ರಿಸಲಿ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕಾಂಗ್ರೆಸ್ ಬೆನ್ನಿಗೆ ನಿಂತ ಅಹಿಂದ ಮತದಾರರು

ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಜಯಭೇರಿ ಬಾರಿಸುವಲ್ಲಿ ಅಲ್ಪಸಂಖ್ಯಾತ–ಹಿಂದುಳಿದ ಮತ್ತು ದಲಿತ (ಅಹಿಂದ) ಸಮುದಾಯಗಳ ಮತದಾರರು ನಿರ್ಣಾಯಕ ಪಾತ್ರವಹಿಸಿದ್ದಾರೆ. ಪ್ರಬಲ ಜಾತಿಗಳು ಬಿಜೆಪಿಯನ್ನೇ ಬೆಂಬಲಿಸಿದರೂ ಅಹಿಂದ ಮತಗಳು ಒಟ್ಟಾಗಿದ್ದು, ಕಾಂಗ್ರೆಸ್‌ಗೆ ಅನುಕೂಲವಾಗಿ ಪರಿಗಣಿಸಿದೆ ಎನ್ನುತ್ತದೆ ಲೋಕನೀತಿ–ಸಿಎಸ್‌ಡಿಎಸ್ ಸಮೀಕ್ಷಾ ವರದಿ

ಜಾತಿ ಮತ್ತು ಧಾರ್ಮಿಕ ಸಮುದಾಯಗಳಲ್ಲಿ ಪಕ್ಷಗಳ ಆಯ್ಕೆ

	ಕಾಂಗ್ರೆಸ್‌ಗೆ ಮತ ನೀಡಿದವರು	ಬಿಜೆಪಿಗೆ ಮತ ನೀಡಿದವರು	ಜೆಡಿಎಸ್‌ಗೆ ಮತ ನೀಡಿದವರು	ಇತರರಿಗೆ ಮತ ನೀಡಿದವರು
ಪ್ರಬಲಜಾತಿಗಳು	22%	60%	14%	4%
ಲಿಂಗಾಯತ	29%	56%	9%	6%
ಒಕ್ಕಲಿಗ	49%	24%	17%	10%
ಕುರುಬ	56%	33%	8%	3%
ಇತರೆ ಒಬಿಸಿ	34%	37%	17%	12%
ದಲಿತರು	63%	23%	10%	4%
ಬುಡಕಟ್ಟು ಸಮುದಾಯಗಳು	45%	39%	13%	3%
ಮುಸ್ಲಿಮರು	70%	10%	14%	6%

• ಸಂಜಯ್ ಕುಮಾರ್

ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಬೇರೆ ಬೇರೆ ಜಾತಿ ಸಮುದಾಯಗಳು ಬೆಂಬಲ ನೀಡಿದ್ದರ ಫಲವಾಗಿ ಕಾಂಗ್ರೆಸ್ ಜಯಭೇರಿ ಬಾರಿಸಿದೆ. ಮುಸ್ಲಿಮರ ಮತಗಳು ಕಾಂಗ್ರೆಸ್ ಪರವಾಗಿ ಧ್ರುವೀಕರಣ ಆಗಿದ್ದರಿಂದಲೇ ಕಾಂಗ್ರೆಸ್ ಗೆಲ್ಲಲು ಕಾರಣ ಎಂದು ಕೆಲವರು ನಂಬಿದ್ದಾರೆ. 2018ರಲ್ಲಿ ಕಾಂಗ್ರೆಸ್‌ಗೆ ಮತ ಹಾಕಿದ್ದ ಮುಸ್ಲಿಮರ ಪ್ರಮಾಣಕ್ಕೆ (ಶೇ 59) ಹೋಲಿಸಿದರೆ, 2023ರಲ್ಲಿ ಕಾಂಗ್ರೆಸ್‌ಗೆ ಮತ ಹಾಕಿದ ಮುಸ್ಲಿಮರ ಪ್ರಮಾಣ (ಶೇ 70) ಹೆಚ್ಚು. ಇದನ್ನು ಗಮನಿಸಿದರೆ, ಮುಸ್ಲಿಮರು ದೊಡ್ಡ ಸಂಖ್ಯೆಯಲ್ಲಿ ಕಾಂಗ್ರೆಸ್‌ಗೆ ಮತ ನೀಡಿರುವುದು ನಿಜ ಎಂಬುದು ಗೊತ್ತಾಗುತ್ತದೆ. ಆದರೆ, ಪ್ರಬಲ ಜಾತಿಗಳು ಮತ್ತು ಲಿಂಗಾಯತರನ್ನು ಬಿಟ್ಟು ಉಳಿದೆಲ್ಲ ಜಾತಿ ಸಮುದಾಯಗಳ ಬೆಂಬಲ ಕಾಂಗ್ರೆಸ್‌ಗೆ ದೊರೆತಿದೆ ಎಂಬುದನ್ನು ಇದು ತೋರಿಸುತ್ತದೆ.

ಲಿಂಗಾಯತರಲ್ಲಿ ಶೇ 59ರಷ್ಟು ಮಂದಿ ಬಿಜೆಪಿಗೆ ಮತ ನೀಡಿದ್ದರೆ, ಕಾಂಗ್ರೆಸ್‌ಗೆ ಮತ ನೀಡಿದವರ ಪ್ರಮಾಣ ಶೇ 29ರಷ್ಟು. ಲಿಂಗಾಯತ ಸಮುದಾಯದ ಪ್ರಮುಖ ನಾಯಕ ಜಗದೀಶ ಶೆಟ್ಟರ್ ಅವರು ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದ್ದರೂ ಆ ಸಮುದಾಯದ ಮತದಾರರು ಬಿಜೆಪಿಯಿಂದ ಕಾಂಗ್ರೆಸ್‌ನತ್ತ ದೊಡ್ಡ ಸಂಖ್ಯೆಯಲ್ಲಿ ಹೋಗಿಲ್ಲ. ಶೆಟ್ಟರ್ ಬಿಜೆಪಿ ತೊರೆದಿದ್ದರೂ ಲಿಂಗಾಯತ ಸಮುದಾಯದ ಮತದಾರರಲ್ಲಿ ಬಹುತೇಕ ಮಂದಿ ಬಿಜೆಪಿಗೇ ಮತ ನೀಡಿದ್ದಾರೆ ಎಂಬುದನ್ನು ಈ ದತ್ತಾಂಶಗಳು ಹೇಳುತ್ತವೆ. ಹುಬ್ಬಳ್ಳಿ–ಧಾರವಾಡ ಕೇಂದ್ರ ವಿಧಾನಸಭಾ ಕ್ಷೇತ್ರದಲ್ಲಿ ಶೆಟ್ಟರ್ ಸೋತಿದ್ದು, ಕಾಂಗ್ರೆಸ್ ಪರವಾಗಿ ಲಿಂಗಾಯತ ಮತದಾರರನ್ನು ಸೆಳೆಯುವುದು ಅವರಿಗೆ ಸಾಧ್ಯವಾಗಲಿಲ್ಲ ಎಂಬುದನ್ನು ತೋರಿಸುತ್ತದೆ. ಪ್ರಬಲ ಜಾತಿಯ ಮತದಾರರು ಕಾಂಗ್ರೆಸ್‌ಗಿಂತ ಬಿಜೆಪಿಯನ್ನೇ ಹೆಚ್ಚು ಬೆಂಬಲಿಸಿದ್ದಾರೆ.

ಆದರೆ, ಇತರೆ ಹಿಂದುಳಿದ ವರ್ಗಗಳ ಮತ ಬಿಜೆಪಿ (ಶೇ 37) ಮತ್ತು ಕಾಂಗ್ರೆಸ್ (ಶೇ 34) ಮಧ್ಯೆ ವಿಭಜನೆಯಾಗಿದೆ. ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಕುರುಬ ಸಮುದಾಯದವರು. ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ದಲಿತ ಸಮುದಾಯದವರು. ಕುರುಬ, ದಲಿತ ಮ್ತು ಬುಡಕಟ್ಟು ಸಮುದಾಯಗಳ ಮತದಾರರು ದೊಡ್ಡ ಪ್ರಮಾಣದಲ್ಲಿ ಕಾಂಗ್ರೆಸ್ ಅನ್ನು ಬೆಂಬಲಿಸಿದ್ದಾರೆ. ಈ ಹಿಂದಿನ ಚುನಾವಣೆಗಳಲ್ಲೂ ಈ ಸಮುದಾಯಗಳು ಕಾಂಗ್ರೆಸ್ ಬೆಂಬಲಕ್ಕೇ ಇದ್ದವು. ಆದರೆ ಈ ಚುನಾವಣೆಯಲ್ಲಿ ಈ ಎಲ್ಲ ಸಮುದಾಯಗಳು ದೊಡ್ಡಸಂಖ್ಯೆಯಲ್ಲಿ ಕಾಂಗ್ರೆಸ್‌ಗೆ ಮತ ಹಾಕಿದ್ದಾರೆ. ಇದುವೇ ಫಲಿತಾಂಶದ ನಿರ್ಣಾಯಕ ಅಂಶವಾಗಿದೆ.

ಒಕ್ಕಲಿಗ ಮತದಾರರು ಕಾಂಗ್ರೆಸ್‌ನತ್ತ ಹೋಗಿದ್ದೇ ಜೆಡಿಎಸ್‌ನ ಸ್ಥಾನಗಳು ಕುಸಿಯಲು ಕಾರಣ. ಮುಸ್ಲಿಂ ಮತದಾರರನ್ನು ಹಿಡಿದಿಟ್ಟುಕೊಳ್ಳುವಲ್ಲಿಯೂ ಜೆಡಿಎಸ್ ವಿಫಲವಾಗಿದೆ. ಈ ಎರಡೂ ಸಮುದಾಯಗಳು ಜೆಡಿಎಸ್‌ನ ಬೆನ್ನೆಲುಬಾಗಿದ್ದವು. 51 ಕ್ಷೇತ್ರಗಳಿರುವ ಮೈಸೂರು ಕರ್ನಾಟಕ ಭಾಗದಲ್ಲಿ, 2018ರ ಚುನಾವಣೆಯಲ್ಲಿ ಜೆಡಿಎಸ್ 24 ಕ್ಷೇತ್ರಗಳನ್ನು ಗೆದ್ದುಕೊಂಡಿತ್ತು ಮತ್ತು ಶೇ 37.5ರಷ್ಟು ಮತಗಳನ್ನು ಪಡೆದುಕೊಂಡಿತ್ತು. ಈ ಬಾರಿ ಇಲ್ಲಿ ಚಲಾವಣೆಯಾದ ಮತಗಳಲ್ಲಿ ಜೆಡಿಎಸ್‌ನ ಮತ ಪ್ರಮಾಣವು ಶೇ 29.5ಕ್ಕೆ ಕುಸಿದಿದೆ. ಕರ್ನಾಟಕದ ಮತದಾರರು ಜಾತಿ ಮತ್ತು ಧರ್ಮದ ಆಧಾರದಲ್ಲಿ ವಿಭಜನೆಯಾಗಿದ್ದಾರೆ ಎಂಬುದನ್ನು ಇದು ತೋರಿಸುತ್ತದೆ. ಬಿಜೆಪಿಯ ಸಾಂಪ್ರದಾಯಿಕ ಮತದಾರರಾದ ಬ್ರಾಹ್ಮಣ ಮತ್ತು ಲಿಂಗಾಯತರು, ಬಿಜೆಪಿಯನ್ನೇ ಬೆಂಬಲಿಸಿದ್ದಾರೆ. ಅಹಿಂದ (ಅಲ್ಪಸಂಖ್ಯಾತ–ಹಿಂದುಳಿದ ಮತ್ತು ದಲಿತ) ಸಮುದಾಯಗಳು ಕಾಂಗ್ರೆಸ್‌ನತ್ತ ಹೋಗಿವೆ ಎಂಬುದನ್ನು ಇದು ತೋರಿಸುತ್ತದೆ.

ಲೇಖಕರು: ಪ್ರಾಧ್ಯಾಪಕ ಮತ್ತು ಲೋಕನೀತಿ–ಸಿಎಸ್‌ಡಿಎಸ್‌ನ ಸಹ ನಿರ್ದೇಶಕ

ರಾಜ್ಯ ಸರ್ಕಾರ ಮಾತ್ರವಲ್ಲ, ಕೇಂದ್ರ ಸರ್ಕಾರದ ಕಾರ್ಯವೈಖರಿಗೂ ಇತ್ತು

ಆಡಳಿತ ವಿರೋಧಿ ಅಲೆ...

• ಆಲಿಯಾ ಮಲಿಕ್, ದೇವೇಶ್ ಕುಮಾರ್

ರಾಜ್ಯದಲ್ಲಿ ಬಿಜೆಪಿ ಸರ್ಕಾರದ ಸೋಲಿಗೆ ಆಡಳಿತ ವಿರೋಧಿ ಅಲೆಯೇ ಪ್ರಮುಖ ಕಾರಣವಾಗಿತ್ತು. ಜನಮಾನಸದಲ್ಲಿ ಬಿಜೆಪಿ ಸರ್ಕಾರದ ಬಗ್ಗೆ ಇದ್ದ ಆಡಳಿತ ವಿರೋಧಿ ಅಲೆಯನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಕಾಂಗ್ರೆಸ್ ಗೆಲುವು ಸಾಧಿಸುವಲ್ಲಿ ಯಶಸ್ವಿಯಾಗಿದೆ. ಸೂಕ್ಷ್ಮ ವಿಷಯಗಳನ್ನೂ ಗಂಭೀರವಾಗಿ ಪರಿಗಣಿಸಿ ಕಾಂಗ್ರೆಸ್ ನಡೆಸಿದ ಪ್ರಚಾರವು ಯಶಸ್ವಿಯಾಗಿದೆ, ಈ ಕಾರಣದಿಂದಲೇ ಕಾಂಗ್ರೆಸ್ 135 ಸ್ಥಾನಗಳನ್ನು ಗೆದ್ದಿದೆ. ಹಾಗಿದ್ದರೆ, ಬಿಜೆಪಿ ಸರ್ಕಾರದ ವಿರುದ್ಧದ ಆಡಳಿತ ವಿರೋಧಿ ಅಲೆಯು ಕಾಂಗ್ರೆಸ್ ಪರವಾದ ಫಲಿತಾಂಶ ಬರುವಷ್ಟು ಪ್ರಬಲವಾಗಿತ್ತೇ? ಮತದಾನಕ್ಕೂ ಮೊದಲು ನಡೆಸಿದ ಸಮೀಕ್ಷೆಯಲ್ಲಿ ಕೇಳಿದ ಪ್ರಶ್ನೆಗಳಲ್ಲಿ ಇದೂ ಸಹ ಒಂದು.

ಮತ ಯಾರಿಗೆ ಹಾಕಬೇಕು ಎಂಬುದನ್ನು ನಿರ್ಣಯಿಸುವಾಗ, ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಕಾರ್ಯವೈಖರಿಯನ್ನು ಪರಿಗಣಿಸುತ್ತೀರಾ ಎಂದು ಸಮೀಕ್ಷೆಯಲ್ಲಿ ಭಾಗಿಯಾಗಿದ್ದವರನ್ನು ಪ್ರಶ್ನಿಸಲಾಗಿತ್ತು. ಸಮೀಕ್ಷೆಯಲ್ಲಿ ಭಾಗಿಯಾಗಿದ್ದವರಲ್ಲಿ ಬಹುತೇಕ ಮಂದಿ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಕಾರ್ಯವೈಖರಿಯನ್ನು ಪರಿಗಣಿಸುತ್ತೇವೆ ಎಂದೇ ಹೇಳಿದ್ದಾರೆ. ಆದರೆ, ಮತ ಯಾರಿಗೆ ನೀಡಬೇಕು ಎಂದು ನಿರ್ಧರಿಸುವಾಗ ಸ್ಥಳೀಯ ಅಭ್ಯರ್ಥಿಗಳು ಅಥವಾ ಹಾಲಿ ಶಾಸಕರ ಕಾರ್ಯವೈಖರಿಯನ್ನು ಪರಿಗಣಿಸುತ್ತೇವೆ ಎಂದವರ ಪ್ರಮಾಣ ತೀರಾ ಕಡಿಮೆ.

ಸಮೀಕ್ಷೆಯಲ್ಲಿ ಭಾಗಿಯಾಗಿದ್ದ ಏಳರಲ್ಲಿ ಒಬ್ಬರು ಮಾತ್ರ, ರಾಜ್ಯ ಸರ್ಕಾರದ ಕಾರ್ಯವೈಖರಿಯನ್ನು ಪರಿಗಣಿಸುತ್ತೇವೆ ಎಂದು ಹೇಳಿದ್ದರು. ಹಾಗಿದ್ದರೆ, ಆಡಳಿತ ವಿರೋಧಿ ಅಲೆಯು ಕೇವಲ ರಾಜ್ಯ ಸರ್ಕಾರಕ್ಕೆ ಮಾತ್ರ ಇತ್ತೇ? ಎಂದರೆ, ಇಲ್ಲ ಎನ್ನುತ್ತದೆ ಈ ಸಮೀಕ್ಷೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧವೂ ಮತದಾರನಿಗೆ ಬೇಸರ, ಅತೃಪ್ತಿ ಇತ್ತು. ಈ ಅಂಶ ಕೂಡ ಕಾಂಗ್ರೆಸ್ ಅನ್ನು ಆಯ್ಕೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಆದ್ದರಿಂದ, ಕೇವಲ ರಾಜ್ಯ ಸರ್ಕಾರದ ಕಾರ್ಯಕ್ಷಮತೆಯನ್ನು ಮಾತ್ರ ಮತದಾರ ಪರಿಗಣಿಸಲಿಲ್ಲ. ಕೇಂದ್ರ ಸರ್ಕಾರದ ಕಾರ್ಯಕ್ಷಮತೆಯನ್ನೂ ಮತದಾರ ಪರಿಗಣಿಸಿದ್ದಾನೆ ಎನ್ನುತ್ತದೆ ಈ ಸಮೀಕ್ಷೆ.

ಐವರಲ್ಲಿ ಇಬ್ಬರು ಈ ಎರಡು ಸರ್ಕಾರಗಳ ಕಾರ್ಯಕ್ಷಮತೆ ಕುರಿತು ಅತೃಪ್ತಿ ವ್ಯಕ್ತಪಡಿಸಿದ್ದರೆ, ನಾಲ್ವರಲ್ಲಿ ಒಬ್ಬರು ಎರಡೂ ಸರ್ಕಾರಗಳ ಕಾರ್ಯವೈಖರಿಯನ್ನು ಸಂಪೂರ್ಣವಾಗಿ ತಿರಸ್ಕರಿಸಿದ್ದಾರೆ. ಈ ಅತೃಪ್ತಿ ಮತ್ತು ತಿರಸ್ಕಾರವು ಕಾಂಗ್ರೆಸ್‌ಗೆ ಮತ ನೀಡುವಲ್ಲಿ ಪ್ರಮುಖ ಪಾತ್ರವಹಿಸಿವೆ.

ರಾಜ್ಯದಲ್ಲಿನ ಬಿಜೆಪಿ ಸರ್ಕಾರದ ಕುರಿತು ಸಂಪೂರ್ಣ ಅತೃಪ್ತಿ ಇದ್ದ ಸರಿಸುಮಾರು ಶೇ 61ರಷ್ಟು ಮತದಾರ ಕಾಂಗ್ರೆಸ್‌ಗೆ ಮತನೀಡಿದ್ದರೆ, ಕೇಂದ್ರ ಸರ್ಕಾರದ ಕಾರ್ಯವೈಖರಿ ಕುರಿತು ಸಂಪೂರ್ಣ ಅತೃಪ್ತಿ ಇದ್ದ ಶೇ 65ರಷ್ಟು ಜನರೂ ಕಾಂಗ್ರೆಸ್ ಅನ್ನು ಆಯ್ಕೆ ಮಾಡಿದ್ದಾರೆ. ಜೊತೆಗೆ, ಕೇಂದ್ರದ ಮೋದಿ ನೇತೃತ್ವದ ಸರ್ಕಾರದ ಕುರಿತು ಅಲ್ಪತೃಪ್ತಿ ಹೊಂದಿದ್ದ 10ರಲ್ಲಿ ನಾಲ್ಕು ಮಂದಿ ಈ ಬಾರಿ ಕಾಂಗ್ರೆಸ್‌ಗೆ ಮತ ನೀಡಿದ್ದಾರೆ.

ಲೇಖಕರು: ಆಲಿಯಾ ಮಲಿಕ್, ದೇವೇಶ್ ಕುಮಾರ್

ಮತ ನಿರ್ಣಾಯಕ ಅಂಶಗಳು

ಪ್ರಶ್ನೆ: ಮತ ನೀಡುವಾಗ ರಾಜ್ಯದ ಬೊಮ್ಮಾಯಿ ಸರ್ಕಾರದ ಆಡಳಿತವನ್ನು ಪರಿಗಣಿಸುತ್ತೀರೋ ಅಥವಾ ಕೇಂದ್ರದ ಪ್ರಧಾನಿ ಮೋದಿ ಆಡಳಿತವನ್ನು ಪರಿಗಣಿಸುತ್ತೀರೊ?

ಸಮೀಕ್ಷೆಯಲ್ಲಿ ಭಾಗಿಯಾದವರು ನೀಡಿದ ಉತ್ತರ

ಬೊಮ್ಮಾಯಿ ಆಡಳಿತ	14%
ಮೋದಿ ಆಡಳಿತ	26%
ರಾಜ್ಯ–ಕೇಂದ್ರದ ಆಡಳಿತ	27%
ಶಾಸಕರ ಕಾರ್ಯವೈಖರಿ	12%
ಪ್ರತಿಕ್ರಿಯಿಸದವರು	21%

ರಾಜ್ಯ ಮತ್ತು ಕೇಂದ್ರ ಸರ್ಕಾರದ ಆಡಳಿತ...

	ಬೊಮ್ಮಾಯಿ ಆಡಳಿತ	ಮೋದಿ ಆಡಳಿತ
ಪೂರ್ಣ ತೃಪ್ತಿ	22%	25%
ಅಲ್ಪತೃಪ್ತಿ	34%	32%
ಅಲ್ಪ ಅತೃಪ್ತಿ	19%	17%
ಪೂರ್ಣ ಅತೃಪ್ತಿ	23%	24%
ಪ್ರತಿಕ್ರಿಯಿಸದವರು	2%	2%

ಸರ್ಕಾರಗಳ ಕಾರ್ಯವೈಖರಿ ಮತ್ತು ಮತದಾರನ ಆಯ್ಕೆ

		ಕಾಂಗ್ರೆಸ್‌ಗೆ ಮತ ನೀಡಿದವರು	ಬಿಜೆಪಿಗೆ ಮತ ನೀಡಿದವರು	ಯಾರಿಗೆ ಮತ ನೀಡಿದ್ದೇವೆಂದು ಹೇಳದವರು
ರಾಜ್ಯ ಸರ್ಕಾರದ ಕಾರ್ಯವೈಖರಿ	ಪೂರ್ಣ ತೃಪ್ತಿ	15%	69%	16%
	ಅಲ್ಪತೃಪ್ತಿ	38%	42%	20%
	ಅಲ್ಪ ಅತೃಪ್ತಿ	63%	18%	19%
	ಪೂರ್ಣ ಅತೃಪ್ತಿ	61%	11%	28%
ಕೇಂದ್ರ ಸರ್ಕಾರದ ಕಾರ್ಯವೈಖರಿ	ಪೂರ್ಣ ತೃಪ್ತಿ	12%	74%	14%
	ಅಲ್ಪತೃಪ್ತಿ	43%	38%	19%
	ಅಲ್ಪ ಅತೃಪ್ತಿ	58%	19%	23%
	ಪೂರ್ಣ ಅತೃಪ್ತಿ	65%	7%	28%

ರಾಜ್ಯ ಸರ್ಕಾರದ ಕಾರ್ಯವೈಖರಿ ತೃಪ್ತಿದಾಯಕ ಎಂದವರಲ್ಲಿ ಹೆಚ್ಚಿನ ಮಂದಿ ಬಿಜೆಪಿಗೇ ಮತ ನೀಡಿದ್ದಾರೆ. ತೃಪ್ತಿ ನೀಡಿಲ್ಲ ಎಂದವರು ಕಾಂಗ್ರೆಸ್‌ಗೆ ಮತ ನೀಡಿದ್ದಾರೆ

ಕೇಂದ್ರ ಸರ್ಕಾರದ ಕಾರ್ಯವೈಖರಿ ತೃಪ್ತಿದಾಯಕ ಎಂದವರಲ್ಲಿ ಹೆಚ್ಚಿನ ಮಂದಿ ಬಿಜೆಪಿಗೇ ಮತ ನೀಡಿದ್ದಾರೆ. ತೃಪ್ತಿ ನೀಡಿಲ್ಲ ಎಂದವರು ಕಾಂಗ್ರೆಸ್‌ಗೆ ಮತ ನೀಡಿದ್ದಾರೆ

ಆಧಾರ: ಲೋಕನೀತಿ–ಸಿಎಸ್‌ಡಿಎಸ್ ಪ್ರಜಾವಾಣಿ ಗ್ರಾಫಿಕ್ಸ್: ಶಶಿಕಿರಣ್ ದೇಸಾಯಿ ಬಿ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

‘ಮಣಿಪುರದಲ್ಲಿ ಕುಕಿ ಮತ್ತು ನಾಗಾ ಉಗ್ರರು ಅತ್ಯಾಧುನಿಕ ಬಂಧೂಕು ಬಳಸಿಕೊಂಡು ದಾಳಿ ನಡೆಸುತ್ತಿದ್ದಾರೆ. ಮಣಿಪುರದ ಹಿಂದೂಗಳ ಮಾರಣಹೋಮ ನಡೆಸುತ್ತಿದ್ದಾರೆ. ಇವರ ಕೈಯಲ್ಲಿ ಅತ್ಯಾಧುನಿಕ ಶಸ್ತ್ರಾಸ್ತ್ರಗಳು ಬಂದಿದ್ದು ಹೇಗೆ? ಶಸ್ತ್ರಾಸ್ತ್ರಗಳನ್ನು ತಂದುಕೊಟ್ಟವರು ಯಾರು?’ ಎಂಬ ವಿವರ ಮತ್ತು ಪ್ರಶ್ನೆಗಳಿರುವ ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಈ ಪೋಸ್ಟ್‌ಗಳ ಜತೆಗೆ ಇಬ್ಬರು ಯುವಕರು ಅತ್ಯಾಧುನಿಕ ಬಂದೂಕು ಹಿಡಿದು ಗುಂಡು ಹಾರಿಸುತ್ತಿರುವ ಮತ್ತು ಆ ಬಂಧೂಕುಗಳಿಂದ ನೂರಾರು ಗುಂಡುಗಳು ಬೆಂಕಿ ಹಾರಿದಂತೆ ಸಿಡಿಯುತ್ತಿರುವ ದೃಶ್ಯಗಳಿರುವ ವಿಡಿಯೊವನ್ನು ಸಹ ಹಂಚಿಕೊಳ್ಳಲಾಗಿದೆ. ಆದರೆ, ಈ ವಿಡಿಯೊ ಜತೆಗೆ ಹಂಚಿಕೊಂಡಿರುವ ಮಾಹಿತಿ ಸುಳ್ಳು.

ಇದು ಕುಕಿ ಮತ್ತು ನಾಗಾ ಜನರು ಅತ್ಯಾಧುನಿಕ ಬಂದೂಕುಗಳನ್ನು ಬಳಸಿ ನಡೆಸಿದ ದಾಳಿಯ ವಿಡಿಯೊ ಅಲ್ಲ ಎಂದು ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. ‘ಅಸಲಿಗೆ ಇದು ಈಗಿನ ವಿಡಿಯೊ ಅಲ್ಲವೇ ಅಲ್ಲ. ಈ ವಿಡಿಯೊ ಇನ್‌ಸ್ಟಾಗ್ರಾಂನಲ್ಲಿ ಮೊದಲು ಪ್ರಸಾರವಾಗಿದ್ದು 2020ರಲ್ಲಿ. ಇದೊಂದು ಆನ್‌ಲೈನ್ ವಾರ್‌ಗೇಮ್‌ನ ವಿಡಿಯೊ. @threatty_ ಎಂಬ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಈ ವಿಡಿಯೊವನ್ನು ಹಂಚಿಕೊಳ್ಳಲಾಗಿತ್ತು. ಆನ್‌ಲೈನ್ ವಾರ್‌ಗೇಮ್‌ಗಾಗಿ ಆಟಿಕೆ ರೈಫಲ್‌ಗಳನ್ನು ಬಳಸಿಕೊಂಡು ಈ ವಿಡಿಯೊ ಸೃಷ್ಟಿಸಲಾಗಿದೆ ಎಂದು ವಿಡಿಯೊ ಜತೆಗೆ ವಿವರಣೆ ನೀಡಲಾಗಿತ್ತು. ಈ ರೈಫಲ್‌ಗಳನ್ನು ಏರ್‌ಸಾಫ್ಟ್ ಎಕ್ಸ್‌ಟ್ರೀಂ ಎಂಬ ಕಂಪನಿಯು ಮಾರಾಟ ಮಾಡುತ್ತದೆ. ಈ ರೈಫಲ್‌ಗಳ ಮೂಲಕ ಬೆಂಡಿನ ಗುಂಡುಗಳನ್ನು ಪಟಾಕಿಯಂತೆ ಹಾರಿಸಬಹುದು ಎಂದು ಕಂಪನಿಯ ಜಾಲತಾಣದಲ್ಲಿ ವಿವರಣೆ ನೀಡಲಾಗಿದೆ. ಹೀಗೆ ಆನ್‌ಲೈನ್ ವಾರ್‌ಗೇಮ್‌ನ ವಿಡಿಯೊವನ್ನು ಬಳಸಿಕೊಂಡು, ಮಣಿಪುರದ ಕುಕಿ ಮತ್ತು ನಾಗಾ ಜನರ ವಿರುದ್ಧ ಸುಳ್ಳು ಸುದ್ದಿ ಸೃಷ್ಟಿಸಲಾಗಿದೆ’ ಎಂದು ದಿ ಲಾಜಿಕಲ್ ಇಂಡಿಯನ್ ತನ್ನ ಫ್ಯಾಕ್ಟ್‌ಚೆಕ್‌ನಲ್ಲಿ ವಿವರಿಸಿದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಮೂರು ಮಂಗಗಳು

ವಸ್ತುವಿಜ್ಞಾನದಿಂ ಜೀವನಸಮೃದ್ಧಿ ಮಿಗೆ |
ವಿಸ್ತರಿಸೆ ವಿಶ್ವೈಕ್ಯಭಾವ ಜನಮನದೊಳ್ ||
ದೃಷ್ಟಲೋಕದ ಬೆಡಗದೃಷ್ಟವನು ಮರೆಸದಿರೆ |
ಸ್ವಸ್ತಿ ಲೋಕಕ್ಕೆಲ್ಲ – ಮಂಕುತಿಮ್ಮ || 884 ||

ಪದ-ಅರ್ಥ: ವಿಸ್ತರಿಸೆ = ವಿಸ್ತಾರವಾದಾಗ, ವಿಶ್ವೈಕ್ಯಭಾವ = ಪ್ರಪಂಚವೆಲ್ಲ ಒಂದೇ ಎಂಬ ಭಾವ, ದೃಷ್ಟಲೋಕದ = ದೃಷ್ಟ(ಕಣ್ಣಿಗೆ ಕಾಣುವ) + ಲೋಕದ, ಬೆಡಗದೃಷ್ಟವನು = ಬೆಡಗು(-ಸಂಭ್ರಮ) + ಅದೃಷ್ಟವನ್ನು (ಕಾಣದಿರುವುದನ್ನು), ಮರೆಸದಿರೆ = ಮರೆಯಿಸದೆ ಇದ್ದರೆ, ಸ್ವಸ್ತಿ = ಶುಭ, ಮಂಗಳ.

ವಾಚ್ಯಾರ್ಥ: ವಿಜ್ಞಾನದಿಂದ ವಸ್ತುಗಳ ಜ್ಞಾನ ಮತ್ತು ಜೀವನ ಸಮೃದ್ಧಿ ಹೆಚ್ಚಾದಾಗ, ಎಲ್ಲ ಜನರ ಮನಸ್ಸಿನಲ್ಲಿ ಪ್ರಪಂಚದ ಸೃಷ್ಟಿಯೆಲ್ಲ ಒಂದೇ ಮೂಲದ್ದು ಎಂಬ ಭಾವ ವಿಸ್ತರಿಸಿದಾಗ, ಕಣ್ಣಿಗೆ ಕಾಣುವ ಜಗತ್ತಿನ ಮೆರುಗು ಕಣ್ಣಿಗೆ ಕಾಣದ ಬ್ರಹ್ಮವಸ್ತುವಿನ ಚಿಂತನೆಯನ್ನು ಮರೆಯಿಸದೆ ಇದ್ದರೆ ಲೋಕಕ್ಕೆ ಮಂಗಳ.

ವಿವರಣೆ: ವಿಜ್ಞಾನದ ಪ್ರಗತಿ ಅತ್ಯಂತ ವೇಗದಲ್ಲಿ ನಡೆದದ್ದು ನಮ್ಮ ಗಮನಕ್ಕೆ ಬಂದಿದೆ. ಬದುಕು, ಪ್ರವಾಸ, ವ್ಯವಸ್ಥೆಗಳ ಸುಲಭವಾಗಿ ದೊರಕುವಂತಾಗಿದೆ. ವೈಜ್ಞಾನಿಕ ಅವಿಷ್ಕಾರಗಳು ನಮ್ಮ ಬದುಕಿನ ಎಲ್ಲ ವಿಭಾಗಗಳಲ್ಲಿ ಸೇರಿಕೊಂಡಿವೆ. ಇದರಿಂದ ಜೀವನ ಸಮೃದ್ಧಿಯಾದಂತಿದೆ. ಮನುಷ್ಯನ ಜೀವಿತಾವಧಿ ಕೂಡ ಹೆಚ್ಚಾಗಿದೆ. ಇದೇ ಪ್ರಪಂಚವೆಂಬುದು ಒಂದು ಪುಟ್ಟ ಗ್ರಾಮದಂತಾಗಿದೆ. ಎಲ್ಲ ಕಡೆಯ ವಿಷಯಗಳು ಕ್ಷಣ ಮಾತ್ರದಲ್ಲಿ ನಮ್ಮನ್ನು ತಲುಪುವುದು ಸಾಧ್ಯವಾಗಿದೆ. ಇದೆಲ್ಲ ನಮ್ಮ ಅನುಭವಕ್ಕೆ ಬಂದಿದೆ. ಕಗ್ಗ ಇದನ್ನು ಹೇಳುತ್ತಲೇ, ಇದರೊಂದಿಗೆ ಇನ್ನೆರಡು ವಿಶೇಷಗಳು ಸೇರಿಕೊಂಡರೆ ಜಗತ್ತಿಗೆ ಒಳ್ಳೆಯದಾಗುತ್ತದೆ ಎಂದು ತಿಳಿಸುತ್ತದೆ. ಅದರಲ್ಲಿ ಮೊದಲನೆಯದು ವಿಶ್ವೈಕ್ಯ ಭಾವ. ನಮ್ಮ ಪೂರ್ವಸೂರಿಗಳು “ಉದಾರ ಚರಿತಾನಾಂ ತು ವಸುಧೈವ ಕುಟುಂಬಕಂ” (ಉದಾರವಾದ ನಡೆತೆಯುಳ್ಳವರಿಗೆ ಸಮಸ್ತ ಭೂಮಿಯೂ ಸ್ವಂತ ಸಂಸಾರವೇ) ಎಂದಿದ್ದಾರೆ. ಬಿಡಿಬಿಡಿಯಾಗಿ ಕಂಡಾಗ ಅತ್ಯಂತ ಚಿಕ್ಕವನೆಂದು ಕಾಣುವ ಮನುಷ್ಯನಿಗೂ, ವಿಶಾಲವಾದ ಪ್ರಪಂಚಕ್ಕೂ ತಪ್ಪದ ಸಂಬಂಧವಿದೆ. ಮನುಷ್ಯರು ಮಾತ್ರವಲ್ಲ ಸಕಲ ಜೀವ ಕೋಟಿಯೂ ಈ ಸ್ನೇಹ ವಾತ್ಸಲ್ಯದ ಆವರಣದಲ್ಲೇ ಬರುತ್ತದೆ. ಅದೇ ಭೂತದಯೆ, ಲೋಕಕಾರುಣ್ಯ. ಅದೇ ವಿಶ್ವಾತ್ಮ ಭಾವ. ಪ್ರತಿಯೊಬ್ಬರ ಮನದಲ್ಲಿಯೂ ಈ ಭಾವ ವಿಸ್ತರಿಸಬೇಕು. ಇದರೊಂದಿಗೆ, ಕಣ್ಣಿಗೆ ರಾಚುವ ಈ ಪ್ರಪಂಚದ ವೈಭವದ ಮೆರುಗಿನ ಹಿಂದೆ, ಅದನ್ನು ನಡೆಯಿಸುವ, ಅದಕ್ಕೆ ಕಾರಣವಾದ ಆದರೆ ಕಣ್ಣಿಗೆ ಕಾಣದ ಆತ್ಮವಸ್ತುವಿದೆಯೆಂಬುದನ್ನು ಮರೆಯಬಾರದು. ನಮ್ಮ ಪಂಚೇಂದ್ರಿಯಗಳಿಗೆ ಗೊತ್ತಾಗುವ ವಿಷಯಗಳು ಜಗತ್ತೆಲ್ಲ ಹರಡಿವೆ. ಆದರೆ ಭಗವಂತ ಕಾಣುವುದಿಲ್ಲ, ಅದಕ್ಕೇ ಅವನು ಅದೃಷ್ಟ. ಅದಕ್ಕೇ ಅವನ ವಿಷಯದಲ್ಲಿ ಎಷ್ಟು ಜಿಜ್ಞಾಸೆ, ಎಷ್ಟು ಪ್ರಶ್ನೆಗಳು? ಯಾವಾಗ ಆ ಅದೃಷ್ಟವೇ, ಆ ಪರಮಸತ್ಯವೇ ಈ ದೃಷ್ಟ ಪ್ರಪಂಚಕ್ಕೆ ಕಾರಣ ಎಂದು ಹೊಳೆಯುತ್ತದೋ, ಅಂದೇ ಈ ಲೋಕಕ್ಕೇ ಶಾಂತಿ, ಮಂಗಳ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಮೇ 16, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ವೈಶಾಖ ಕೃಷ್ಣದ್ವಾದಶಿ ಗಂ. 23-37 ನಕ್ಷತ್ರ: ಉತ್ತರಾಭಾದ್ರ ಗಂ. 08-15, ಯೋಗ: ಪ್ರೀತಿ ಗಂ. 23-15 ಕರಣ: ಕೌಲವ ಗಂ. 12-18, ವೃಷಭ ಮಾಸದ 01 ನೇ ದಿನ, ಮಳೆನಕ್ಷತ್ರ: ಕೃತ್ತಿಕ 2.
ರಾಹುಕಾಲ : ಮಧ್ಯಾಹ್ನ 03-00 – 04-30
ಸೂರ್ಯೋದಯ : 06-08 ಸೂರ್ಯಾಸ್ತ : 06-46
ಮುಸ್ಲಿಂ ದಿನಾಂಕ : 25 ಶವ್ವಾಲ್
ಅದೃಷ್ಟ ಸಂಖ್ಯೆ : 3, 11

ಮೇಷ: ರಕ್ತ ಸಂಬಂಧ ಕಾಯಿಲೆಯಿಂದ ಬಳಲುತ್ತಿರುವವರಿಗೆ ಔಷಧಿಯು ಪ್ರತಿಕ್ರಿಯಿಸಿ ಚೇತರಿಕೆಯ ಹಂತಕ್ಕೆ ಹೋಗುವಿರಿ. ವ್ಯವಹಾರದಲ್ಲಿ ಕಠಿಣ ಸವಾಲನ್ನು ಯಶಸ್ವಿಯಾಗಿ ಎದುರಿಸುವ ಸಾಮರ್ಥ್ಯ ಹೊಂದುವಿರಿ.

ವೃಷಭ: ಹಣಕಾಸು ಪರಿಸ್ಥಿತಿ ಉತ್ತಮವಾಗುವುದರಿಂದ ಒತ್ತಡ ತರುವಂಥ ಯಾವುದೇ ಕೆಲಸಗಳಿದ್ದರೂ ನಿರರ್ಗಳವಾಗಿ ಬಗೆಹರಿಯುವುದು. ದಕ್ಷಿಣಾ-ಮೂರ್ತಿಯನ್ನು ಪೂಜಿಸುವುದರಿಂದ ನೆಮ್ಮದಿ ದೊರೆಯುವುದು.

ಮಿಥುನ: ಏನನ್ನಾದರೂ ಸಾಧಿಸಲೇಬೇಕೆಂಬ ನಿಮ್ಮ ಆಸೆ-ಆಕಾಂಕ್ಷೆಗೆ ಆತ್ಮವಿಶ್ವಾಸದ ಕೊರತೆಯಂತೂ ಕಾಣಿಸದು. ಪ್ರಯತ್ನ ಮುಖ್ಯ. ಈ ದಿನ ಕೆಲಸದ ಒತ್ತಡದಿಂದ ದೂರಾಗಿ ಮಿತ್ರರೊಡನೆ ಉಲ್ಲಾಸದಿಂದ ಕಾಲ ಕಳೆಯುವಿರಿ.

ಕರ್ಕಾಟಕ: ವಿದ್ಯಾಭ್ಯಾಸದಲ್ಲಿ ಒಳ್ಳೆಯ ಫಲಿತಾಂಶವನ್ನು ಪಡೆದು ನೀವು ಹೆಚ್ಚಿನ ವ್ಯಾಸಂಗಕ್ಕೆ ವಿದೇಶಕ್ಕೆ ತೆರಳುವ ಅವಕಾಶವಿದೆ. ಸ್ವಕಾರ್ಯ ಹಾಗೂ ಸ್ವಪ್ರತಿಭೆ-ಯಿಂದಲೇ ಪ್ರಭಾವಿತರಾಗುವಂತಾಗಲಿದೆ.

ಸಿಂಹ: ಹಿರಿಯ ಅಧಿಕಾರಿಗಳು ಪರಿಶ್ರಮ ಹಾಗೂ ಜವಾಬ್ದಾರಿಯುತ ನಡವಳಿಕೆಗಳನ್ನು ಗಮನಿಸಿ ನಿಮ್ಮ ಆರ್ಥಿಕ ಮಟ್ಟವನ್ನು ಮೇಲಕ್ಕೆತ್ತುವರು. ಹಣದ ಅಡಚಣೆ ಇರುವುದಿಲ್ಲ. ಒಂಟಿತನ ಹೋಗಲಾಡಿಸಲು ಮನಸ್ಸು ಹರಿಸುವಿರಿ.

ಕನ್ಯಾ: ಭೂ ಖರೀದಿಯಂತಹ ಅಥವಾ ಗೃಹ ನಿರ್ಮಾಣ ಕಾರ್ಯದಂತಹ ಯೋಚನೆಗಳು ಕಾರ್ಯರೂಪಕ್ಕೆ ಬರಲಿದೆ. ತಾಯಿಯ ಆರೋಗ್ಯದಲ್ಲಿ ಏರಿಳಿತಗಳು ಸಂಭವಿಸುವುದು. ಬಟ್ಟೆ ವ್ಯಾಪಾರ ನಡೆಸುವವರಿಗೆ ಹೆಚ್ಚಿನ ಲಾಭ

ತುಲಾ: ಸಹೋದರರಿಂದ ಹಿತವಚನ ಕೇಳಬೇಕಾದೀತು, ಭಿನ್ನಾಭಿಪ್ರಾಯ ಮೂಡಿದಲ್ಲಿ ಶಾಂತ ಸ್ವಭಾವದಿಂದ ವರ್ತಿಸುವುದು ಉತ್ತಮವಾಗಿರುತ್ತದೆ. ಹಿತ-ಶತ್ರುಗಳಿಂದ ವಂಚನಾ ಪ್ರಸಂಗವಿದ್ದರೂ ನಿಮಗೆ ಅನುಭವಕ್ಕೆ ಬರುವುದಿಲ್ಲ.

ವೃಶ್ಚಿಕ: ಸಮಸ್ಯೆಗಳನ್ನು ಸೌಹಾರ್ದಯುತವಾಗಿ ಮತ್ತು ನ್ಯಾಯ ಸಮ್ಮತವಾಗಿ ಬಗೆಹರಿಸಿಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ಮಗನಿಗೆ ಉದ್ಯೋಗ ದೊರೆತು ಸಂತೋಷವಾಗುತ್ತದೆ. ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಲು ಅಧ್ಯಯನ ಅಗತ್ಯ.

ಧನು: ಸಾರ್ವಜನಿಕರ ಸೇವೆ ಮಾಡುವವರಿಗೆ ಅನುಯಾಯಿಗಳಿಂದ ಸಹಕಾರ ಕೆಲವರಿಂದ ಅಸಹಕಾರ ಎರಡನ್ನೂ ಸ್ವಾಗತಿಸುವ ಅನಿವಾರ್ಯ. ಪರೋಪಕಾರ ಸ್ವಭಾವದಿಂದಾಗಿ ವೈಯಕ್ತಿಕ ಸ್ಥಾನ- ಮಾನಗಳು ಲಭಿಸುವುದು.

ಮಕರ: ಕಾರ್ಯ ಸಾಧನೆಗೆ ಅಧಿಕ ತಿರುಗಾಟದಿಂದ ಆಯಾಸ ಮತ್ತು ಆಹಾರದಲ್ಲಿ ವಿಷದ ಅಂಶವು ಸೇರಿ ಆರೋಗ್ಯ ಹದಗೆಡುವ ಸಾಧ್ಯತೆಯಿದೆ. ವಿದ್ಯಾರ್ಥಿಗಳಿಗೆ ಪರಿಶ್ರಮಕ್ಕೆ ಮೀರಿದ ಫಲಗಳು ಪ್ರಾಪ್ತಿ.

ಕುಂಭ: ವೃತ್ತಿಯಲ್ಲಿ ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಳ್ಳುವ ಜವಾಬ್ದಾರಿ ನಿಮ್ಮದ್ದಾಗಲಿದೆ. ನಿಮ್ಮ ಅಭಿಪ್ರಾಯಗಳಿಗೆ ಕುಟುಂಬದವರು ಸಮ್ಮತಿಯನ್ನು ಕೊಡಲಿದ್ದಾರೆ. ನಿಮ್ಮ ಒಳ್ಳೆಯತನ ದುರುಪಯೋಗವಾಗದಂತೆ ಎಚ್ಚರ ವಹಿಸಿ.

ಮೀನ: ಬಹುಜನರಲ್ಲಿ ನಿಷ್ಠುರ ಮಾಡಿಕೊಂಡಿರುವ ನೀವು ಎಲ್ಲರ ವಿಶ್ವಾಸ ಪುನಃ ಸಂಪಾದಿಸಬೇಕಾಗುವುದು. ಅವಿವಾಹಿತರಿಗೆ ಧಾರ್ಮಿಕ ಕಾರ್ಯ ಮಾಡಿದ ಫಲವಾಗಿ ಅನಾಯಾಸ ರೀತಿಯಲ್ಲಿ ಕಂಕಣ ಭಾಗ್ಯ ಕೂಡಿ ಬರಲಿದೆ.

ಪದಬಂಧ 5320

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2. ಈತ ನೆಲೆಗೊಳಿಸುವವನು (3)
4. ನೋಡುವಿಕೆ ಅಥವಾ ಭೇಟಿಯಾಗುವುದು (3)
5. ಒಂದು ಸಂಖ್ಯೆಯನ್ನು ಇನ್ನೊಂದರಿಂದ ಗುಣಿಸುವಿಕೆ (4)
6. ಅಳತೆಯು ಈ ಪರಿ ಬಂದಿದೆ (4)
8. ತಿರುಗಿದಾಗ ಕೊಟ್ಟ ತೊಂದರೆ! (2)
10. ಬಾವಿಯಿಂದನೀರೆತ್ತುವ ಸಾಧನ ತಿರುವುಮುರುವಾಗಿದೆ (2)
13. ತತ್ವ ಜ್ಞಾನಿ ಇಲ್ಲಿದ್ದಾನೆ (4)
14. ಸುಮಾರು ಮೂರು ಮೈಲುಗಳ ಒಂದು ಅಳತೆ (4)
15. ತಿರುಗಿ ಪಡೆದ ವೇತನ! (3)
16. ಕಣದಲ್ಲಿ ನಡೆದ ಲಗ್ನ (3)

ಮೇಲಿಂದ ಕೆಳಕ್ಕೆ
1. ಹೊಟ್ಟೆಯ ಪಾಡಿಗಾಗಿ ತೋರುವ ವೈರಾಗ್ಯ (6)
2. ಬೇರೊಂದು ಸ್ಥಳಕ್ಕೆ ಹೋಗುವಿಕೆ (5)
3. ಭೂಪಟ ಇಲ್ಲಿದೆ (3)
5. ಒಳ್ಳೆಯ ಗುಣಗಳಿಂದ ಕೂಡಿರುವವ (4)
7. ಆದಾಯ ವೆಚ್ಚಗಳ ವಿವರಗಳನ್ನು ತೋರಿಸುವ ಪಟ್ಟಿಕೆ (6)
9. ಜನ ನಡೆದು ನಡೆದು ತಾನಾಗಿ ರೂಪುಗೊಂಡ ದಾರಿ (4)
11. ಒಂದುಗೂಡಿಸುವುದನ್ನ ಹೀಗೂ ಹೇಳಬಹುದು (5)
12. ರಂಧ್ರ ಕೊರೆಯುವ ಸಾಧನ (3)



5319 ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಗಡವ 4.ಜಗಳ
6.ರಸಪೂರ್ಣ 8.ಕಮಂಡಲು
10.ನವೀನ 13.ಕಸೂತಿ
15.ಹಸುಗೂಸು 19.ಮದಗಜ
21.ಒನಕೆ 22.ಲಿಲಾವು

ಮೇಲಿಂದ ಕೆಳಕ್ಕೆ:
1.ಗಯ್ಯಾಳಿ 2.ವರಮಾನ
3.ವರ್ಪೂ 5.ಗರುಡ
7.ಣಕ 9.ಲುನಹೊ
11.ನರಕ 12.ವಿರಹ
14.ತಿಲಾಂಜಲಿ 16.ಸುದಿನ
17.ಸುಮ 18.ಚಡಾವು
20.ದಟ್ಟಿ

ಸುಡೊಕು 5706

		7	1		2		6	
				3		8		9
2		4				1		7
	6	8		5			4	1
						7	9	
9	4			2				
3	7			8		9		5
		6					8	
	8		3		5	6		2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5705 ಸುಡೊಕು

4	5	7	3	6	8	9	1	2
9	8	1	5	7	2	3	4	6
6	3	2	9	4	1	7	5	8
3	7	4	2	8	9	1	6	5
5	2	9	4	1	6	8	3	7
1	6	8	7	3	5	2	9	4
2	9	3	8	5	4	6	7	1
7	4	6	1	2	3	5	8	9
8	1	5	6	9	7	4	2	3

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,315
ಇಂದಿನ ಅಂತ್ಯ	18,399
▲	84
ದಿನದ ಗರಿಷ್ಠ	18,458

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹515
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹520

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1650 (1650)
ಸೋಯಾ (ರಿಫೈನ್ಡ್)	₹947 (957)
ಸೂರ್ಯಕಾಂತಿ (ರಿಫೈನ್ಡ್)	₹965 (980)
ಪಾಮೋಲಿನ್	₹922 (928)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹800-1100
ಮಧ್ಯಮ	₹500-800
ಸಣ್ಣ	₹300-500

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹200-400
ದ್ವಿತಳಿ (ಬಿ.ವಿ)	₹100-593

ರುಪೇ ಕಾರ್ಡ್‌: ಸಿವಿವಿ ಇಲ್ಲದೆ ಪಾವತಿ

ನವದೆಹಲಿ (ಪಿಟಿಐ): ಕಾರ್ಡ್ ಟೋಕನೈಸೇಷನ್ ವ್ಯವಸ್ಥೆ ಆಯ್ಕೆ ಮಾಡಿಕೊಂಡಿರುವ ರುಪೇ ಕಾರ್ಡ್ ಹೊಂದಿರುವ ಗ್ರಾಹಕರು 'ಸಿವಿವಿ' ಇಲ್ಲದೇ ವಹಿವಾಟು ನಡೆಸಬಹುದು ಎಂದು ರಾಷ್ಟ್ರೀಯ ಪಾವತಿಗಳ ನಿಗಮವು (ಎನ್‌ಪಿಸಿಐ) ಸೋಮವಾರ ಹೇಳಿದೆ.

ಪಾವತಿ ವೇಳೆ 'ಸಿವಿವಿ' ನಮೂದಿಸುವ ಅಗತ್ಯ ಇಲ್ಲದೇ ಇರುವುದರಿಂದ ಗ್ರಾಹಕರು ತಮ್ಮ ಬಳಿಯಲ್ಲಿ ಕಾರ್ಡ್ ಇಟ್ಟುಕೊಂಡಿರುವ ಅಥವಾ ಕಾರ್ಡ್‌ನ ಮಾಹಿತಿಗಳನ್ನು ನೆನಪಿಟ್ಟುಕೊಳ್ಳುವ ಅಗತ್ಯ ಇಲ್ಲ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಡೆಬಿಟ್ ಮತ್ತು ಕ್ರೆಡಿಟ್ ಕಾರ್ಡ್‌ಗಳ ವಿವರಗಳನ್ನು ಪಾವತಿ ವಹಿವಾಟಿನ ಪಾಲುದಾರರು 'ಟೋಕನ್' ರೂಪದಲ್ಲಿ ಮಾತ್ರ ಸಂಗ್ರಹಿಸುವುದೇ ಟೋಕನೈಸೇಷನ್ ವ್ಯವಸ್ಥೆಯಾಗಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ		ಕೋಕ	22099-32289	ತಟ್ಟಿಬೆಟ್ಟೆ	37199-41099
ಬಂಟ್ವಾಳ		ಕೆಂಪುಗೋಟು	20289-34699	**ಶಿರಸಿ**	
ಕೋಕ	12500-25000	ರಾಶಿ	34699-48609	ಬೆಟ್ಟೆ	35799-43099
ಹೊಸತು	27500-40000	ಸಿಪ್ಪೆಗೋಟು	6300-21070	ಬಿಳಿಗೋಟು	24191-32899
ಹಳತು	48000-53000	**ಶಿವಮೊಗ್ಗ**		ಚಾಲಿ	34169-38119
ಕಾರ್ಕಳ		ಬೆಟ್ಟೆ	48509-52700	ಕೆಂಪುಗೋಟು	32199-36699
ಹೊಸತು	30000-40500	ಗೊರಬಲು	18000-34669	ರಾಶಿ	43699-46108
ಹಳತು	40000-53000	ರಾಶಿ	34009-48599	**ಯಲ್ಲಾಪುರ**	
ಕುಮಟಾ		ಸರಕು	50569-80696	ಬಿಳಿಗೋಟು	26899-33822
ಚಿಪ್ಪು	29999-32599	**ಸಿದ್ದಾಪುರ**		ಚಾಲಿ	34412-37500
ಕೋಕ	20109-30099	ಬಿಳಿಗೋಟು	27889-32022	ಕೋಕ	18099-30899
ಫ್ಯಾಕ್ಟರಿ	12019-23311	ಚಾಲಿ	35199-37269	ಕೆಂಪುಗೋಟು	28299-34399
ಹಳೆಚಾಲಿ	36899-39701	ಕೋಕ	26219-32319	ರಾಶಿ	41375-50899
ಹೊಸಚಾಲಿ	35599-37601	ಕೆಂಪುಗೋಟು	29312-31219	ತಟ್ಟಿಬೆಟ್ಟೆ	36900-45179
ಸಾಗರ		ರಾಶಿ	43659-46899		
ಬಿಳಿಗೋಟು	21299-31150				
ಚಾಲಿ	30490-36999				

ಏಪ್ರಿಲ್‌ನಲ್ಲಿ ಆಹಾರ, ಇಂಧನ ದರ ಇಳಿಕೆ ಪರಿಣಾಮ

ಸಗಟು ಹಣದುಬ್ಬರ 34 ತಿಂಗಳ ಕನಿಷ್ಠ

ನವದೆಹಲಿ (ಪಿಟಿಐ): ಸಗಟು ಹಣದುಬ್ಬರವು ಏಪ್ರಿಲ್‌ನಲ್ಲಿ ಶೇಕಡ (–) 0.92ಕ್ಕೆ ಇಳಿಕೆ ಕಾಣುವ ಮೂಲಕ 34 ತಿಂಗಳ ಕನಿಷ್ಠ ಮಟ್ಟ ತಲುಪಿದೆ.

2020ರ ಜೂನ್‌ನಲ್ಲಿ ಸಗಟು ದರ ಸೂಚ್ಯಂಕವು (ಡಬ್ಲ್ಯುಪಿಐ) ಶೇ (–) 1.81ರಷ್ಟು ಇತ್ತು. ಅದಾದ ನಂತರ, ಸಗಟು ಹಣದುಬ್ಬರವು ಶೂನ್ಯಕ್ಕಿಂತ ಕಡಿಮೆ ಆಗಿರುವುದು ಈ ವರ್ಷದ ಏಪ್ರಿಲ್‌ನಲ್ಲಿ.

ಜಾಗತಿಕ ಮಟ್ಟದಲ್ಲಿ ಸರಕುಗಳ ದರ ಇಳಿಕೆ ಆಗಿರುವುದರಿಂದ ಆಹಾರ, ಇಂಧನ ದರ ಮತ್ತು ತಯಾರಕರ ಇತರ ವೆಚ್ಚಗಳು ಕಡಿಮೆ ಆಗಿವೆ. ಹೀಗಾಗಿ ಏಪ್ರಿಲ್‌ನಲ್ಲಿ ಸಗಟು ಹಣದುಬ್ಬರವು ಶೂನ್ಯಕ್ಕಿಂತ ಕಡಿಮೆ ಮಟ್ಟಕ್ಕೆ ಇಳಿಕೆಯಾಗಿದೆ. 2023ರ ಮಾರ್ಚ್‌ನಲ್ಲಿ ಸಗಟು ಹಣದುಬ್ಬರ 29 ತಿಂಗಳ ಕನಿಷ್ಠ ಮಟ್ಟವಾದ ಶೇ 1.34ರಷ್ಟು ಆಗಿತ್ತು. ಸಗಟು ಹಣದುಬ್ಬರ ನಕಾರಾತ್ಮಕ ಮಟ್ಟದಲ್ಲಿ ಇದ್ದರೆ ತಾಂತ್ರಿಕವಾಗಿ ಅದನ್ನು 'ಹಣದುಬ್ಬರವಿಳಿತ' ಎಂದು ಕರೆಯಲಾಗುತ್ತದೆ.

2022ರ ಏಪ್ರಿಲ್‌ನಲ್ಲಿ ಸಗಟು ಹಣದುಬ್ಬರವು ಶೇ 15.38ರ ಗರಿಷ್ಠ ಮಟ್ಟದಲ್ಲಿ ಇತ್ತು.

ಮುಖ್ಯಾಂಶಗಳು

- 11ನೇ ತಿಂಗಳಿನಿಂದಲೂ ಇಳಿಕೆ ಹಾದಿಯಲ್ಲಿ ಡಬ್ಲ್ಯುಪಿಐ
- ಏಪ್ರಿಲ್‌ನಲ್ಲಿ ಚಿಲ್ಲರೆ ಹಣದುಬ್ಬರವೂ ಇಳಿಕೆ ಕಂಡಿದೆ



ಮೂಲ ಲೋಹಗಳು, ಆಹಾರ ಉತ್ಪನ್ನಗಳು, ಜವಳಿ, ಆಹಾರೇತರ ಉತ್ಪನ್ನಗಳು, ರಾಸಾಯನಿಕ ಮತ್ತು ರಾಸಾಯನಿಕ ಉತ್ಪನ್ನಗಳು, ರಬ್ಬರ್ ಮತ್ತು ಪ್ಲಾಸ್ಟಿಕ್ ಉತ್ಪನ್ನಗಳ ದರ ಇಳಿಕೆ ಆಗಿರುವುದರಿಂದ ಏಪ್ರಿಲ್‌ನಲ್ಲಿ ಹಣದುಬ್ಬರದ ಪ್ರಮಾಣ ಕಡಿಮೆ ಆಗಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯವು ಸೋಮವಾರ ತಿಳಿಸಿದೆ.

ಚಿಲ್ಲರೆ ಹಣದುಬ್ಬರದ ಬಳಿಕ ಇದೀಗ ಸಗಟು ಹಣದುಬ್ಬರವೂ ಇಳಿಕೆ ಆಗಿದೆ. ಚಿಲ್ಲರೆ ಹಣದುಬ್ಬರ ಏಪ್ರಿಲ್‌ನಲ್ಲಿ 18 ತಿಂಗಳ ಕನಿಷ್ಠ ಮಟ್ಟಕ್ಕೆ (ಶೇ 4.70) ಇಳಿಕೆಯಾಗಿದೆ.

ಹಣದುಬ್ಬರವಿಳಿತದ ಸ್ಥಿತಿಯು ಮುಂದಿನ ಎರಡರಿಂದ ಮೂರು ತಿಂಗಳವರೆಗೆ ಮುಂದುವರಿಯುವ ನಿರೀಕ್ಷೆ ಇದ್ದು, ಪೂರ್ತಿ ವರ್ಷಕ್ಕೆ ಶೇ1–2ರ ಆಸುಪಾಸಿನಲ್ಲಿ ಇರಲಿದೆ ಎಂದು ಕೇರ್‌ಎಡ್ಜ್ ರೇಟಿಂಗ್ಸ್‌ನ ಮುಖ್ಯ ಆರ್ಥಿಕ ತಜ್ಞೆ ರಜನಿ ಸಿನ್ಹಾ ಹೇಳಿದ್ದಾರೆ.

ಪಶ್ಚಿಮ ಮ್ಯಾನ್ಮಾರ್‌ನಲ್ಲಿ 'ಮೋಕಾ' ಚಂಡಮಾರುತದ ಅಟ್ಟಹಾಸ

ಜನವಸತಿ ಪ್ರದೇಶಗಳಿಗೆ ಉಪ್ಪುನೀರು

ಢಾಕಾ (ಎಪಿ): ಬಂಗಾಳ ಕೊಲ್ಲಿಯಲ್ಲಿ ಎದ್ದಿರುವ 'ಮೋಕಾ' ಚಂಡಮಾರುತ ಮ್ಯಾನ್ಮಾರ್‌ನ ಪಶ್ಚಿಮ ಭಾಗದ ಕರಾವಳಿ ಪ್ರದೇಶವನ್ನು ಅಪ್ಪಳಿಸಿದ್ದು, ಜನವಸತಿ ಪ್ರದೇಶಕ್ಕೆ ಅಪಾರ ಪ್ರಮಾಣದಲ್ಲಿ ನುಗ್ಗಿರುವ ಸಮುದ್ರ ನೀರಿನಲ್ಲಿ ಸಾವಿರಾರು ಮಂದಿ ಸಿಲುಕಿದ್ದಾರೆ.

ಚಂಡಮಾರುತದಿಂದ ಸಂಭವಿಸಿದ ಹಲವು ಅನಾಹುತಗಳಿಗೆ ಸಿಲುಕಿ ಆರು ಮಂದಿ ಮೃತಪಟ್ಟಿದ್ದು, 700 ಮಂದಿ ಗಾಯಗೊಂಡಿದ್ದಾರೆ. 20 ಸಾವಿರಕ್ಕೂ ಅಧಿಕ ಮಂದಿ ನಿರಾಶ್ರಿತರಾಗಿದ್ದಾರೆ. ಸಾವಿರಾರು ಮಂದಿ ಶಾಲೆಗಳು, ಪಗೋಡಾಗಳು, ಬೌದ್ಧ ಧರ್ಮಛತ್ರಗಳಲ್ಲಿ ಆಶ್ರಯ ಪಡೆದಿದ್ದಾರೆ.

ಮ್ಯಾನ್ಮಾರ್‌ನ ರಖಿನ್ ರಾಜ್ಯಕ್ಕೆ ಅಪ್ಪಳಿಸಿರುವ ಚಂಡಮಾರುತದ ಅಬ್ಬರ ಕೊಂಚ ತಗ್ಗಿದೆ. ಜನರು ಈಗಲೂ ಸಮುದ್ರದಿಂದ ನುಗ್ಗಿಬಂದ ನೀರಿನಲ್ಲಿ ಸಿಲುಕಿದ್ದಾರೆ. ಕೆಲವೆಡೆ ಆಳೆತ್ತರಕ್ಕೆ ಉಪ್ಪುನೀರು ನಿಂತಿದೆ. ಕೆಲವೆಡೆ 3.5 ಮೀಟರ್‌ನಷ್ಟು ಎತ್ತರಕ್ಕೂ ಸಮುದ್ರದ ನೀರು ನಿಂತಿದೆ.

ಭಾನುವಾರ ಸಂಜೆ ಸಿಟ್ವೆ ಉಪ ನಗರದ ಮೇಲೆ ಮೊದಲಿಗೆ ಚಂಡಮಾರುತ ಅಪ್ಪಳಿಸಿತು. ಗಾಳಿಯ ವೇಗ ಗಂಟೆಗೆ 209 ಕಿ.ಮೀ.ನಷ್ಟಿತ್ತು. ರಖಿನ್ ರಾಜ್ಯದ 17 ಕಡೆಗಳಲ್ಲಿ ಆಸ್ತಿಗೆ ಭಾರಿ ಪ್ರಮಾಣದಲ್ಲಿ ಹಾನಿಯಾಗಿದೆ.

ಪ್ರಬಲ ಗಾಳಿಯಿಂದಾಗಿ ಮೊಬೈಲ್ ಫೋನ್ ಟವರ್‌ಗಳು ನೆಲಕ್ಕೆ ಉರುಳಿದ್ದು, ಸಂಪರ್ಕ ಕಡಿತವಾಗಿದೆ. ಹೀಗಾಗಿ ಹಾನಿಯನ್ನು ಫೋಟೊ, ವಿಡಿಯೊ ಮೂಲಕ ಸೆರೆಹಿಡಿಯುವುದೂ ಸಾಧ್ಯವಾಗಿಲ್ಲ.

ಮ್ಯಾನ್ಮಾರ್‌ನ ದೊಡ್ಡ ನಗರ ಯಾಂಗಾನ್ ನೈರುತ್ಯ ಭಾಗದಲ್ಲಿ 425 ಕಿ.ಮೀ.ದೂರದಲ್ಲಿರುವ ಸಿಟ್ವೆ, ಕ್ಯಾಕ್‌ಪ್ಯು, ಜಿವಾ ಉಪನಗರಗಳಲ್ಲಿ ಭಾರಿ ಹಾನಿ ಸಂಭವಿಸಿದೆ.

2008ರ ಮೇ ತಿಂಗಳಲ್ಲಿ ಮ್ಯಾನ್ಮಾರ್‌ಗೆ ಅಪ್ಪಳಿಸಿದ್ದ 'ನರ್ಗಿಸ್' ಚಂಡಮಾರುತದಿಂದ 1.38 ಲಕ್ಷ ಜನರು ಮೃತಪಟ್ಟಿದ್ದರು ಹಾಗೂ ಸಾವಿರಾರು ಮನೆಗಳು, ಕಟ್ಟಡಗಳು ನಾಮಾವಶೇಷಗೊಂಡಿದ್ದವು.

ಮಿಜೋರಾಂ: 230 ಮನೆಗಳಿಗೆ ಹಾನಿ

ಐಜ್ವಾಲ್ (ಪಿಟಿಐ): ಮಿಜೋರಾಂನ ಕೆಲವು ಭಾಗಗಳಲ್ಲಿ ಮೋಕಾ ಚಂಡಮಾರುತದಿಂದ ತೊಂದರೆ ಸಂಭವಿಸಿದ್ದು, 236ಕ್ಕೂ ಅಧಿಕ ಮನೆಗಳು ಹಾನಿಗೊಂಡಿವೆ. 50ಕ್ಕೂ ಅಧಿಕ ಗ್ರಾಮಗಳ 5,749 ಜನರು ತೊಂದರೆಗೆ ಸಿಲುಕಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಮ್ಯಾನ್ಮಾರ್‌ಗೆ ಗಡಿ ಹಂಚಿಕೊಂಡಿರುವ ಸಿಯಾಹಾ ಜಿಲ್ಲೆಯಲ್ಲಿ 101 ಮನೆಗಳಿಗೆ ಹಾನಿ ಉಂಟಾಗಿದ್ದರೆ, ಎರಡು ಪರಿಹಾರ ಶಿಬಿರಗಳೂ ಹಾನಿಗೊಂಡಿವೆ.

ಮ್ಯಾನ್ಮಾರ್‌ನ ರಖಿನ್ ರಾಜ್ಯದ ಸಿಟ್ವೆ ಪಟ್ಟಣದಲ್ಲಿ ಚಂಡಮಾರುತಕ್ಕೆ ಸಿಲುಕಿ ಉರುಳಿ ಬಿದ್ದ ಮರಗಳು, ವಿದ್ಯುತ್ ಕಂಬಗಳ ಸಮೀಪ ಸೋಮವಾರ ಜನರು ದ್ವಿಚಕ್ರ ವಾಹನಗಳಲ್ಲಿ ಸಾಗಿದರು –ಎಪಿ/ಪಿಟಿಐ ಚಿತ್ರ

ಬ್ರಿಟನ್‌ಗೆ ಝೆಲೆನ್‌ಸ್ಕಿ ಹಠಾತ್ ಭೇಟಿ

ಲಂಡನ್ (ಪಿಟಿಐ): ಕಳೆದ ಕೆಲ ದಿನಗಳಿಂದ ಯುರೋಪಿಯನ್ ದೇಶಗಳ ಪ್ರವಾಸದಲ್ಲಿರುವ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಸೋಮವಾರ ಬ್ರಿಟನ್‌ಗೆ ಭೇಟಿ ನೀಡಿದ್ದು, ಬ್ರಿಟಿಷ್ ಪ್ರಧಾನಿ ರಿಷಿ ಸುನಕ್ ಅವರು ಝೆಲೆನ್‌ಸ್ಕಿ ಅವರನ್ನು ಸ್ವಾಗತಿಸಿ, ಯುದ್ಧದಲ್ಲಿ ಹಾನಿಗೊಳಗಾದ ಉಕ್ರೇನ್‌ಗೆ ತಮ್ಮ ಬೆಂಬಲವನ್ನು ಪುನರುಚ್ಚರಿಸಿದರು.

ಜರ್ಮನಿ, ಇಟಲಿ ಪ್ರವಾಸದ ನಂತರ ಭಾನುವಾರ ಪ್ಯಾರಿಸ್‌ಗೆ ಹಠಾತ್ ಭೇಟಿ ನೀಡಿದ್ದ ಝೆಲೆನ್‌ಸ್ಕಿ, ಬ್ರಿಟನ್‌ಗೂ ಹಠಾತ್ ಭೇಟಿ ನೀಡಿದರು. ಟೋಕಿಯೋದಲ್ಲಿ ನಡೆಯಲಿರುವ ಜಿ7 ಶೃಂಗಸಭೆಗೂ ಮೊದಲು, ಈ ವಾರ ಸುನಕ್ ಪ್ರಯಾಣಿಸಲಿರುವ ಐಸ್‌ಲ್ಯಾಂಡ್‌ನಲ್ಲಿನ ಕೌನ್ಸಿಲ್ ಆಫ್ ಯುರೋಪ್ ಶೃಂಗಸಭೆಗೂ ಮುನ್ನ ಈ ಭೇಟಿ ನಡೆದಿದೆ.

ಸುದ್ದಿ 2 ನಿಮಿಷ

ರಫ್ತು, ಆಮದು ವಹಿವಾಟು ಇಳಿಕೆ

ನವದೆಹಲಿ (ಪಿಟಿಐ): ಭಾರತದಿಂದ ಆಗುವ ರಫ್ತುಗಳ ಪ್ರಮಾಣವು ಏಪ್ರಿಲ್‌ನಲ್ಲಿ ಶೇಕಡ 12.7ರಷ್ಟು ಕಡಿಮೆ ಆಗಿದ್ದು, 34.66 ಬಿಲಿಯನ್ ಡಾಲರ್‌ಗೆ (₹2.85 ಲಕ್ಷ ಕೋಟಿ) ತಲುಪಿದೆ. ಇದೇ ಹೊತ್ತಿನಲ್ಲಿ ದೇಶದ ವ್ಯಾಪಾರ ಕೊರತೆ ಅಂತರವು 20 ತಿಂಗಳ ಕನಿಷ್ಠ ಮಟ್ಟವಾದ 15.24 ಬಿಲಿಯನ್ ಡಾಲರ್‌ಗೆ (₹1.25 ಲಕ್ಷ ಕೋಟಿ) ತಗ್ಗಿದೆ.

ಭಾರತವು ಹೆಚ್ಚಿನ ಪ್ರಮಾಣದಲ್ಲಿ ರಫ್ತು ಮಾಡುವ ಅಮೆರಿಕ ಮತ್ತು ಯುರೋಪಿನಲ್ಲಿ ಬೇಡಿಕೆ ತಗ್ಗಿರುವುದು ಒಟ್ಟು ರಫ್ತು ಕಡಿಮೆ ಆಗುವುದಕ್ಕೆ ಪ್ರಮುಖ ಕಾರಣ. ಪರಿಸ್ಥಿತಿ ಸುಧಾರಿಸಲು ಕೆಲವು ತಿಂಗಳುಗಳು ಬೇಕಾಗಬಹುದು ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

'ಯುರೋಪಿನಲ್ಲಿ ಬೇಡಿಕೆ ಅಷ್ಟೇನೂ ಚೆನ್ನಾಗಿಲ್ಲ. ಅಮೆರಿಕದಲ್ಲಿಯೂ ಬೇಡಿಕೆ ಕಡಿಮೆ ಆಗಿದೆ. ಮುಂದಿನ 2–3 ತಿಂಗಳಮಟ್ಟಿಗೆ ಬೇಡಿಕೆಯು ತೀರಾ ಆಶಾದಾಯಕವಾಗಿ ಇರುವುದಿಲ್ಲ' ಎಂದು ವಿದೇಶ ವ್ಯಾಪಾರದ ಮಹಾನಿರ್ದೇಶಕ (ಡಿಜಿಎಫ್‌ಟಿ) ಸಂತೋಷ್ ಕುಮಾರ್ ಸಾರಂಗಿ ತಿಳಿಸಿದ್ದಾರೆ.

ಸೆಪ್ಟೆಂಬರ್ ನಂತರ ಪರಿಸ್ಥಿತಿ ಬದಲಾಗಲಿದೆ ಎಂದು ಅವರು ಹೇಳಿದ್ದಾರೆ. ಏಪ್ರಿಲ್ ತಿಂಗಳಲ್ಲಿ ಆಮದು ಪ್ರಮಾಣವು ಶೇ 14ರಷ್ಟು ಕಡಿಮೆ ಆಗಿದ್ದು, 49.9 ಬಿಲಿಯನ್ ಡಾಲರ್‌ಗೆ (₹4.10 ಲಕ್ಷ ಕೋಟಿ) ತಲುಪಿದೆ.

ಹೂಡಿಕೆ: ಸೆನ್ಸೆಕ್ಸ್, ನಿಫ್ಟಿ ಏರಿಕೆ

ಮುಂಬೈ (ಪಿಟಿಐ): ದೇಶದ ಬಂಡವಾಳ ಮಾರುಕಟ್ಟೆಗಳಲ್ಲಿ ವಿದೇಶಿ ಹೂಡಿಕೆ ಅಬಾಧಿತವಾಗಿ ಮುಂದುವರಿದಿರುವ ಪರಿಣಾಮವಾಗಿ ಪ್ರಮುಖ ಷೇರುಪೇಟೆ ಸೂಚ್ಯಂಕಗಳಾದ ಸೆನ್ಸೆಕ್ಸ್ ಮತ್ತು ನಿಫ್ಟಿ ಸೋಮವಾರ ಸರಿಸುಮಾರು ಶೇಕಡ 0.50ರಷ್ಟು ಏರಿಕೆ ಕಂಡವು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 317 ಅಂಶ, ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 84 ಅಂಶ ಏರಿಕೆ ಕಂಡವು. ಟಾಟಾ ಮೋಟರ್ಸ್ ಷೇರುಗಳು ಸೋಮವಾರ ಶೇ 2.83ರಷ್ಟು ಏರಿಕೆ ಕಂಡಿವೆ.

'ಹಣದುಬ್ಬರ ಕಡಿಮೆ ಆಗುತ್ತಿರುವುದು, ವಿದೇಶಿ ಹೂಡಿಕೆಯು ಸ್ಥಿರವಾಗಿ ಹರಿದುಬರುತ್ತಿರುವುದು ಮತ್ತು ಮುಂದಿನ ತ್ರೈಮಾಸಿಕದಲ್ಲಿಯೂ ಕಂಪನಿಗಳ ಗಳಿಕೆ ಚೆನ್ನಾಗಿರುತ್ತದೆ ಎಂಬ ನಿರೀಕ್ಷೆಯಲ್ಲಿ ದೇಶಿ ಸೂಚ್ಯಂಕಗಳು ಏರಿಕೆ ಕಾಣುತ್ತಿವೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ವಿದೇಶಿ ಹೂಡಿಕೆದಾರು ಮೇ ತಿಂಗಳಲ್ಲಿ ದೇಶದ ಷೇರುಪೇಟೆಗಳಲ್ಲಿ ಹೆಚ್ಚು ಹಣ ತೊಡಗಿಸುತ್ತಿದ್ದಾರೆ. ತಿಂಗಳ ಮೊದಲ ಹದಿನೈದು ದಿನಗಳಲ್ಲಿ ಅವರು ಒಟ್ಟು ₹ 23,152 ಕೋಟಿ ಹೂಡಿಕೆ ಮಾಡಿದ್ದಾರೆ.

10 ವರ್ಷ ಸೆರೆಯಲ್ಲಿರಿಸುವ ತಂತ್ರ ರೂಪಿಸಿದ್ದ ಸೇನೆ: ಇಮ್ರಾನ್

ಲಾಹೋರ್(ಪಿಟಿಐ): 'ದೇಶದ್ರೋಹ ಆರೋಪ ಹೊರಿಸಿ ನನ್ನನ್ನು ಮುಂದಿನ 10 ವರ್ಷಗಳ ಕಾಲ ಜೈಲಿನಲ್ಲಿರಿಸಲು ಸೇನೆಯು ತಂತ್ರ ರೂಪಿಸಿತ್ತು' ಎಂದು ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಸೋಮವಾರ ಆರೋಪಿಸಿದ್ದಾರೆ.

ಮೋಸಗಾರರ ಷಡ್ಯಂತ್ರಗಳ ವಿರುದ್ಧ ಕೊನೆಯ ಉಸಿರು ಇರುವವರೆಗೂ ಹೋರಾಡುವುದಾಗಿ ಅವರು ಸರಣಿ ಟ್ವೀಟ್ ಮಾಡಿದ್ದಾರೆ.

ಇಮ್ರಾನ್ ಖಾನ್ ಅವರಿಗೆ ಈಚೆಗೆ ಜಾಮೀನು ನೀಡಿದ್ದ ಇಸ್ಲಾಮಾಬಾದ್ ಹೈಕೋರ್ಟ್, ಸೋಮವಾರ ಲಾಹೋರ್ ಹೈಕೋರ್ಟ್‌ಗೆ ಹಾಜರಾಗಲು ಸೂಚಿಸಿತ್ತು. ಅದರಂತೆ ಅವರು ಕೋರ್ಟ್‌ಗೆ ಹಾಜರಾಗಿದ್ದಾರೆ.

'ಈಗ ಸಂಪೂರ್ಣ ಲಂಡನ್ ತಂತ್ರ ಬಹಿರಂಗಗೊಂಡಿದೆ. ನಾನು ಜೈಲಿನೊಳಗೆ ಇರುವಾಗ ಹಿಂಸಾಚಾರ ನೆಪದಲ್ಲಿ ಅವರು ನ್ಯಾಯಾಧೀಶರ, ತೀರ್ಪುಗಾರರ ಮತ್ತು ದಂಡನೆ ವಿಧಿಸುವವರ ಪಾತ್ರ ನಿರ್ವಹಿಸಿದ್ದಾರೆ. ಬುಶ್ರಾ (ಇಮ್ರಾನ್ ಖಾನ್ ಪತ್ನಿ) ಅವರನ್ನು ಜೈಲಿಗೆ ಹಾಕಿ ನನಗೆ ಹಿಂಸೆ ನೀಡಲು ಈಗ ತಂತ್ರ ಹೆಣೆಯಲಾಗುತ್ತಿದೆ' ಎಂದು ಇಮ್ರಾನ್ ಹೇಳಿದ್ದಾರೆ.

ಲಾಹೋರ್‌ನಲ್ಲಿರುವ ತಮ್ಮ ನಿವಾಸದಲ್ಲಿ ಪಾಕಿಸ್ತಾನ ತೆಹ್ರೀಕ್‌–ಇ–ಇನ್ಸಾಫ್ (ಪಿಟಿಐ) ಪಕ್ಷದ ಮುಖಂಡರ ಸಭೆ ನಡೆಸಿದ ಬಳಿಕ ಖಾನ್ ಅವರು ಟ್ವೀಟ್ ಮಾಡಿದ್ದಾರೆ.

ಜಾಮೀನು ಅರ್ಜಿ ವಿಚಾರಣೆ ಇಂದು: ಭಯೋತ್ಪಾದನಾ ಚಟುವಟಿಕೆಗಳಲ್ಲಿ ಭಾಗಿಯಾಗಿರುವ ಆರೋಪದ ಪ್ರಕರಣಕ್ಕೆ ಸಂಬಂಧಿಸಿ ಇಮ್ರಾನ್ ಅವರು ಸೋಮವಾರ ಲಾಹೋರ್ ಹೈಕೋರ್ಟ್‌ಗೆ ಹಾಜರಾಗಿದ್ದು, ಅವರ ಜಾಮೀನು ಅರ್ಜಿಯ ವಿಚಾರಣೆಯನ್ನು ಮಂಗಳವಾರ ನಡೆಸುವುದಾಗಿ ನ್ಯಾಯಾಲಯ ಹೇಳಿದೆ.

ಪತ್ನಿ ಬುಶ್ರಾ ಕೂಡ ಇಮ್ರಾನ್ ಜೊತೆಗಿದ್ದರು. ಬುಶ್ರಾ ಅವರಿಗೆ ನ್ಯಾಯಾಲಯವು ಮೇ 23ರ ವರೆಗೆ ನಿರೀಕ್ಷಣಾ ಜಾಮೀನು ನೀಡಿದೆ.

ಜಗತ್ತಿನ ಅತಿ ಹಿರಿಯ ನಾಯಿ –ಎಎಫ್‌ಪಿ ಚಿತ್ರ

ಗಿನ್ನೆಸ್ ದಾಖಲೆಯ ನಾಯಿಗೆ 31ನೇ ಹುಟ್ಟುಹಬ್ಬ

ಕಾಂಕ್ವೈರಸ್ (ಪೋರ್ಚುಗಲ್) (ಎಪಿ): ಜಗತ್ತಿನ ಅತಿ ಹಿರಿಯ ನಾಯಿ ಎಂದು ಗಿನ್ನೆಸ್ ದಾಖಲೆಗೆ ಸೇರಿರುವ 'ಬೊಬಿ' ಇತ್ತೀಚೆಗೆ ತನ್ನ 31ನೇ ವರ್ಷದ ಹುಟ್ಟುಹಬ್ಬವನ್ನು ಆಚರಿಸಿಕೊಂಡಿತು.

1992ರಲ್ಲಿ ಜನಿಸಿದ ಬೊಬಿ, ಸದ್ಯ ನಡೆದಾಡಲು ಕಷ್ಟಪಡುತ್ತಿದೆ, ಅದರ ದೃಷ್ಟಿಯು ಮಂಜಾಗಿದೆ. ಹೆಚ್ಚು ಕಾಲ ಮಲಗೇ ಇರುತ್ತದೆ ಎಂದು ಮಾಲೀಕ ಲಿಯೊನಲ್ ಕೋಸ್ಟಾ ತಿಳಿಸಿದ್ದಾರೆ.

ಸ್ವಚ್ಛಂದ ಪರಿಸರದಲ್ಲಿ ಬದುಕಿದ್ದೇ ಈ ನಾಯಿಯ ದೀರ್ಘ ಬದುಕಿಗೆ ಕಾರಣ ಎಂದು ಹೇಳಲಾಗುತ್ತಿದೆ. ಈ ನಾಯಿಯನ್ನು ಚೈನ್‌ನಿಂದ ಕಟ್ಟಿ ಹಾಕಿದ್ದೇ ಇಲ್ಲ. ಅದು ಮುಕ್ತವಾಗಿ ಸುತ್ತಮುತ್ತಲಿನ ಕಾಡಿನಲ್ಲಿ ಸುತ್ತಾಡುತ್ತಿತ್ತು ಎಂದು ಅವರು ಹೇಳಿದ್ದಾರೆ.

ಮುಂಬೈ ಧಾರಣೆ

ಶೇಂಗಾ

15–5–2023

ಜಾವಾ 70/80(ಹೊಸ)	11750-11800
ಜಾವಾ 80/90(ಹೊಸ)	11150-11200
ದಪ್ಪ ಮಧ್ಯಪ್ರದೇಶ(ಹೊಸ)	11300-11400
ದಪ್ಪ ಗುಜರಾತ್(ಹೊಸ)	12300-12400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1660 (1660)
ಒಂದು ವಾರದ ಡೆಲಿವರಿ	1655 (1655)
ಸೋಯಾ ಕಚ್ಚಾ	850 (857)
ಪಾಮ್ ವಾರದ ಡೆಲಿವರಿ	920 (926)
ಸೂರ್ಯಕಾಂತಿ ಎಣ್ಣೆ ಕಚ್ಚಾ	880 (890)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
61,000 (60,800)
ಬೆಳ್ಳಿ ಕೆ.ಜಿ 72,500 (72,100)

ಆವರಣದಲ್ಲಿ ಶುಕ್ರವಾರದ ಧಾರಣೆ

IDFC MUTUAL FUND

Bandhan Mutual Fund

ಹೆಸರಷ್ಟೇ ಬದಲಾಗಿದೆ.
ಬದಲಾಗಲಿಲ್ಲ ಬದ್ಧತೆ.

ಐಡಿಎಫ್‌ಸಿ ಮ್ಯೂಚುವಲ್ ಫಂಡ್ ಈಗ ಆಗಿದೆ ಬಂಧನ್ ಮ್ಯೂಚುವಲ್ ಫಂಡ್.
ಬಂಧನ್ ಸಮೂಹದ ಪರಂಪರೆ, ಸದ್ಭಾವನೆ ಮತ್ತು ಒಳಗೊಳ್ಳುವಿಕೆಯ ಬೆಂಬಲದೊಂದಿಗೆ ನೀವು ಸದಾ ನಮ್ಮಿಂದ ನಿರೀಕ್ಷಿಸುತ್ತಿರುವ ಅದೇ ಉತ್ಸಾಹ, ಪರಿಣಿತಿ ಮತ್ತು ಹೂಡಿಕೆದಾರರಿಗೆ ಪ್ರಥಮ ಆದ್ಯತೆಯೊಂದಿಗೆ ನಾವು ಭವಿಷ್ಯದತ್ತ ವಿಶ್ವಾಸದೊಂದಿಗೆ ಹೆಜ್ಜೆ ಹಾಕುತ್ತಿದ್ದೇವೆ,
ಇಲ್ಲಿದೆ ಹೊಸ ಶುಭಾರಂಭ.

IDFC MUTUAL FUND ಈಗ ಆಗಿದೆ Bandhan Mutual Fund

www.bandhanmutual.com

ಮ್ಯೂಚುವಲ್ ಫಂಡ್ ಹೂಡಿಕೆಯು ಮಾರುಕಟ್ಟೆಯ ಅಪಾಯಗಳಿಗೆ ಒಳಪಟ್ಟಿರುತ್ತವೆ.ಎಲ್ಲ ಯೋಜನೆಗೆ ಸಂಬಂಧಿಸಿದ ದಾಖಲೆಗಳನ್ನು ಗಮನವಿಟ್ಟು ಓದಿ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611227266/ 9611221244

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ವ್ಯಾಪಾರ

Business to Business

Consultants

WANTED 1.50 to 100 acres dry land 2. coconut farm in south 9845203777 agents welcome

ಪ್ರವಾಸ

Travel

21.5.2023ರಿಂದ 4 ದಿನ ಶಿರಡಿ, ಪಂಡರಾಪುರ,ಕೂಡಲಸಂಗಮ, ಕೊಲ್ಲಾಪುರ, ಶನಿಸಿಂಗಾಪುರ. 20.6.2023ರಿಂದ 10 ದಿನ ಬಾಂಬೆ,ಶಿರಡಿ, ಗೋವಾ,ಗೋಕರ್ಣ, ಕೊಲ್ಲಾಪುರ,ತ್ರೈಬುಕೇಶ್ವರ, ಕೂಡಲಸಂಗಮ,ಪಂಡರಾಪುರ. 6.7.2023ರಿಂದ 10 ದಿನ ವಿಮಾನದಲ್ಲಿ ಇಬ್ಬರಿಗೆ 1 ರೂಮ್ ವೈಷ್ಣೋದೇವಿ, ಕುಲುಮನಾಲಿ,ಶಿಮ್ಲಾ, ವಾಗಬಾರ್ಡರ್, ದೆಹಲಿ,ಅಮೃತಸರ್. ಶ್ರೀಗುರುರಾಜ ಟ್ರಾವಲ್ಸ್, ಕೋಲಾರ್. 9900124333, 9611082432, 8123099913

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ಬೆಂಗಳೂರು

EDUCATION CORNER
ಕ್ಲಾಸಿಫೈಡ್ಸ್

PLACEMENT OF OUR STUDENTS IN LEADING COMPANIES (2022-23)
ADMISSIONS ARE OPEN

We are proud of our students who have been placed in leading Companies in India and around the world.
Our industry and career focused courses include - Aircraft Maintenance Engineering, Business and Management Courses - • B.Com • BBA • BCA • M.Com • MBA
Diploma Courses in • Aeronautical • Mechanical • Automobile • Computer Science.



Estd. 1986
HINDUSTAN ACADEMY
BANGALORE, KARNATAKA
P. B. No. 3776, Aswathanagar, Marathahalli, Bangalore - 560037
Ph: 080-25238650, 25232217 • Toll free: 18004258650
Email: admissions@hindustanacademy.edu.in
www.hindustanacademy.edu.in
8971404357 • 9740037853

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

3ನೇ ವರ್ಷದ ಪುಣ್ಯ ಸ್ಮರಣೆ

ಶ್ರೀ. ತಿಪ್ಪೇಸ್ವಾಮಿ, ನಿವೃತ್ತ ಶಿಕ್ಷಕರು, ಚಂಗಾವರ, ಶಿರಾ ತಾಲ್ಲೂಕು, ತುಮಕೂರು ಜಿಲ್ಲೆ
ಪುಣ್ಯಸ್ಮರಣೆಯನ್ನು ದಿ. 16.05.2023 ರಂದು ನೆರವೇರಿಸಲಾಗುವುದು
ನೀವು ನಮ್ಮನಗಲಿ ಇಂದಿಗೆ 3 ವರ್ಷವಾಯಿತು ನಿಮ್ಮ ಸವಿನೆನಪು ನಮ್ಮ ಮನದಲ್ಲಿ ಸದಾ ಹಚ್ಚಹಸಿರಾಗಿರುತ್ತದೆ
ದುಃಖತಪ್ತರು: ಪತ್ನಿ, ಮಕ್ಕಳು, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಮತ್ತು ಕುಟುಂಬದವರು

ಚಿರಸ್ಮರಣೆ

ಶ್ರೀ ಎ.ವಿ.ಕೆ ಮೂರ್ತಿ ಮತ್ತು ಶ್ರೀಮತಿ ಎ.ಕೆ ಪ್ರಮೀಳ
ನೀವು ನಮ್ಮನ್ನಗಲಿ ಇಂದಿಗೆ 46 - 6 ವರ್ಷಗಳಾದರೂ ನಿಮ್ಮ ಸವಿನೆನಪು ಸದಾ ಹಸಿರಾಗಿರುತ್ತದೆ. ನೀವು ತೋರಿದ ಬೆಳಕಿನಲ್ಲೇ ಮುನ್ನಡೆಯುತ್ತಿರುವ ಮೌನಿ,ಕುಮಾರ್, ಸರೂ,ಪ್ರತಿಭಾ,ಮನಿಂದರ್,ರಂಜನಿ, ಬಾಬು, ಅಶ್ವಿನಿ ಅನು, ಸ್ವಪ್ನ ವಿನಯ್,ಪದ್ಮಾಂಜಲಿ ಕಿರಣ್, ಕೃತಿ,ನಿಪುಣ್,ಪ್ರೀತಮ್,ಗೌತಮ್.
ಪದ್ಮಾಂಜಲಿ ಸಿಮೆಂಟ್ಸ್,
ಎಸಿಸಿ.ಅಧಿಕೃತ ಮಾರಾಟಗಾರರು.ಸ್ಟೀಲ್ ಮತ್ತು ಹಾರ್ಡ್‌ವೇರ್ ಡೀಲರ್ಸ್ ನಂ. 6 & 7, 24 ನೇ ಮುಖ್ಯರಸ್ತೆ. ಜೆ.ಪಿ.ನಗರ 6 ನೇ ಹಂತ, ಬೆಂ-78.
ಫೋನ್ :- 080 - 26630444 9945007988 / 9845210247

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಮಣಿಪುರ: ಕುಕಿ ಬುಡಕಟ್ಟು ಶಾಸಕರ ಹಕ್ಕೊತ್ತಾಯ ತಿರಸ್ಕರಿಸಿದ ಸಿ.ಎಂ ಬಿರೇನ್ ಸಿಂಗ್

ಪ್ರತ್ಯೇಕ ಆಡಳಿತ ವ್ಯವಸ್ಥೆಗೆ ನಕಾರ

ಇಂಫಾಲ್ (ಪಿಟಿಐ): 'ಮಣಿಪುರದಲ್ಲಿ ಕುಕಿ ಬುಡಕಟ್ಟು ಜನರಿಗೆ ಪ್ರತ್ಯೇಕ ಆಡಳಿತ ವ್ಯವಸ್ಥೆ ರೂಪಿಸುವ ಯಾವುದೇ ಪ್ರಸ್ತಾವ ರಾಜ್ಯ ಸರ್ಕಾರದ ಮುಂದಿಲ್ಲ' ಎಂದು ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ಸ್ಪಷ್ಟಪಡಿಸಿದ್ದಾರೆ.

ಚಿನ್, ಕುಕಿ, ಮಿಜೊ ಮತ್ತು ಜೋಮಿ ಬುಡಕಟ್ಟು ಜನರು ಹೆಚ್ಚಿರುವ ಜಿಲ್ಲೆಗಳಲ್ಲಿ ಪ್ರತ್ಯೇಕ ಆಡಳಿತ ವ್ಯವಸ್ಥೆ ರೂಪಿಸಬೇಕು ಎಂದು ಕುಕಿ ಸಮುದಾಯ ಪ್ರತಿನಿಧಿಸುವ ಹತ್ತು ಶಾಸಕರು ಹಕ್ಕೊತ್ತಾಯ ಮಂಡಿಸಿದ್ದಾರೆ. ಇವರಲ್ಲಿ ಆಡಳಿತಾರೂಢ ಬಿಜೆಪಿ ಸರ್ಕಾರದ ಏಳು ಶಾಸಕರು ಇದ್ದಾರೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, 'ಮಣಿಪುರದ ಒಗ್ಗಟ್ಟಿಗೆ ಯಾವುದೇ ಬೆದರಿಕೆ ಇಲ್ಲ. ರಾಜ್ಯದ ಏಕತೆ ಕಾಪಾಡಲು ಸರ್ಕಾರ ಬದ್ಧವಾಗಿದೆ. ಜನಜೀವನ ಸಹಜ ಸ್ಥಿತಿಗೆ ಮರಳಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನೂ ಕೈಗೊಂಡಿದೆ. ಇದಕ್ಕೆ ಕೇಂದ್ರವೂ ಸಹಕರಿಸುತ್ತಿದೆ. ಹಾಗಾಗಿ, ಶಾಸಕರ ಬೇಡಿಕೆಗೆ ಮನ್ನಣೆ ನೀಡುವುದಿಲ್ಲ' ಎಂದು ಘೋಷಿಸಿದರು.

'ನಾನು ಸೇರಿ ಮೂವರು ಸಚಿವರು, ರಾಜ್ಯಸಭಾ ಸದಸ್ಯರು ದೆಹಲಿಯಲ್ಲಿ ಭಾನುವಾರ ಕೇಂದ್ರದ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿ ರಾಜ್ಯದ ಸದ್ಯದ ಸ್ಥಿತಿಗತಿ ಕುರಿತು ವಿವರಿಸಿದ್ದೇವೆ. ಮಣಿಪುರದ ಜನರ ಮನಸ್ಥಿತಿ ಬಗ್ಗೆಯೂ ಮನವರಿಕೆ ಮಾಡಿಕೊಟ್ಟಿದ್ದೇವೆ. ಶಸ್ತ್ರಸಜ್ಜಿತ ಬಂಡುಕೋರರು ಹಿಂಸಾಚಾರದಲ್ಲಿ ಭಾಗಿಯಾಗಿರುವ ಬಗ್ಗೆಯೂ ಚರ್ಚಿಸಿದ್ದೇವೆ' ಎಂದರು.

ಹಿಂಸಾಚಾರದಿಂದ ಹಲವು ಅಮಾಯಕರು ಜೀವತೆತ್ತಿದ್ದಾರೆ. ಅಪಾರ ಪ್ರಮಾಣದ ಸ್ವತ್ತುಗಳು ನಾಶವಾಗಿವೆ. ಸಂತ್ರಸ್ತರಿಗೆ ಪುನರ್ವಸತಿ ಸೌಲಭ್ಯ ಕಲ್ಪಿಸಲು ಸರ್ಕಾರ ಸಿದ್ಧವಿದೆ. ಜನರು ಧರಣಿ ಅಥವಾ ಯಾತ್ರೆ ಹಮ್ಮಿಕೊಳ್ಳಬಾರದು. ವದಂತಿಗಳಿಗೆ ಕಿವಿಗೊಡಬಾರದು. ನಾಗರಿಕ ಸಂಘ–ಸಂಸ್ಥೆಗಳೂ ಶಾಂತಿ ನೆಲೆಸಲು ಸಹಕರಿಸಬೇಕು ಎಂದು ಕೋರಿದರು.

ಹಿಂಸಾಚಾರದ ವೇಳೆ ಕೆಲ ಗುಂಪು ಹೆದ್ದಾರಿಗಳಲ್ಲಿ ಸಂಚಾರ ಬಂದ್ ಮಾಡಿದ್ದವು. ಇದರಿಂದ ನಾಗರಿಕರಿಗೆ ತೊಂದರೆಯಾಗಿದೆ. ಆದರೆ, ತಪ್ಪಿತಸ್ಥರ ವಿರುದ್ಧ ಸರ್ಕಾರ ಯಾವುದೇ ಕ್ರಮ ಕೈಗೊಳ್ಳುವುದಿಲ್ಲ ಎಂದರು.

ಕುಕಿ, ಮೈತೇಯಿ ಬಂಡುಕೋರರ ಕೈವಾಡ ಶಂಕೆ

ಗುವಾಹಟಿ (ಪ್ರಜಾವಾಣಿ ವಾರ್ತೆ): ಮಣಿಪುರದಲ್ಲಿ ಹಿಂಸಾಚಾರ ಭುಗಿಲೇಳಲು ಕುಕಿ ಮತ್ತು ಮೈತೇಯಿ ಬಂಡುಕೋರರು ಸಂಚು ರೂಪಿಸಿರಬಹುದು ಎಂದು ರಾಜ್ಯ ಸರ್ಕಾರ ಹಾಗೂ ಸೇನೆ ಶಂಕೆ ವ್ಯಕ್ತಪಡಿಸಿವೆ.

'ಸೇನೆ ಮತ್ತು ಸ್ಥಳೀಯ ಪೊಲೀಸರು ನಡೆಸಿದ ಜಂಟಿ ಕಾರ್ಯಾಚರಣೆ ವೇಳೆ ಹಿಂಸಾಚಾರ ಪೀಡಿತ ಸ್ಥಳಗಳಲ್ಲಿ ಕುಕಿ ಬಂಡುಕೋರರಿಗೆ ಸೇರಿದ ಶಸ್ತ್ರಾಸ್ತ್ರಗಳು ಪತ್ತೆಯಾಗಿರುವುದು ಇದಕ್ಕೆ ಪುಷ್ಟಿ ನೀಡಿದೆ' ಎಂದು ಮುಖ್ಯಮಂತ್ರಿ ಬಿರೇನ್ ಸಿಂಗ್ ತಿಳಿಸಿದ್ದಾರೆ.

'ಹಿಂಸಾಚಾರ ಉಲ್ಬಣಕ್ಕೆ ಅಕ್ರಮ ಶಸ್ತ್ರಾಸ್ತ್ರಗಳನ್ನು ಬಳಸಿದವರ ವಿರುದ್ಧ ಸರ್ಕಾರ ಕಠಿಣ ಕ್ರಮ ಜರುಗಿಸಲಿದೆ' ಎಂದು ಖಡಕ್ ಎಚ್ಚರಿಕೆ ನೀಡಿದ್ದಾರೆ.

ಮತ್ತೊಂದೆಡೆ ಶಾಂತಿ ಮಾತುಕತೆಯಿಂದ ಮೈತೇಯಿ ಬಂಡುಕೋರರ ಗುಂಪುಗಳು ಹೊರಗುಳಿದಿವೆ. ಹಾಗಾಗಿ, ಹಿಂಸಾಚಾರದಲ್ಲಿ ಈ ಗುಂಪುಗಳ ಕೈವಾಡ ಇರುವ ಬಗ್ಗೆ ಸೇನೆಯು ಶಂಕಿಸಿದೆ.

ಮಣಿಪುರದಲ್ಲಿ 25ಕ್ಕೂ ಹೆಚ್ಚು ಕುಕಿ ಬಂಡುಕೋರರ ಗುಂಪುಗಳು ಸಕ್ರಿಯವಾಗಿವೆ. 2008ರಿಂದಲೂ ಸರ್ಕಾರದ ವಿರುದ್ಧ ಗುಪ್ತವಾಗಿ ಕಾರ್ಯಾಚರಣೆ ನಡೆಸುತ್ತಿವೆ.

ಸುದ್ದಿಗೋಷ್ಠಿಯಲ್ಲಿ ಮುಖ್ಯಮಂತ್ರಿ ಬಿರೇನ್ ಸಿಂಗ್ ಮಾತನಾಡಿದರು –ಪಿಟಿಐ ಚಿತ್ರ

ಬಂಡುಕೋರರು ಪ್ರತ್ಯೇಕ ಶಿಬಿರಗಳಲ್ಲಿ ನೆಲೆಗೊಂಡಿದ್ದಾರೆ. ಸರ್ಕಾರದ ಜೊತೆಗಿನ ಒಪ್ಪಂದದ ಅನ್ವಯ ಇವರ ಬಗೆಗಿನ ಮಾಹಿತಿ ಮತ್ತು ಶಸ್ತ್ರಾಸ್ತ್ರಗಳನ್ನು ಸರ್ಕಾರದ ವಶಕ್ಕೆ ನೀಡಿದ್ದಾರೆ.

'ಸೇನೆ ಸೇರಿದಂತೆ ಇತರ ಭದ್ರತಾ ಪಡೆಯ ಅಧಿಕಾರಿಗಳು ಬಂಡುಕೋರರು ನೆಲೆಸಿರುವ ಶಿಬಿರಗಳಿಗೆ ಭೇಟಿ ನೀಡಿ ಪರಿಶೀಲಿಸಿದ್ದಾರೆ. ಅಲ್ಲಿ ಅವರು ಇರುವರೇ ಅಥವಾ ಬೇರೆಡೆ ತೆರಳಿದ್ದಾರೆಯೇ ಎಂಬುದನ್ನು ಪರಿಶೀಲಿಸಲಿದ್ದಾರೆ' ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ.

5,822 ಮಂದಿ ಮಿಜೋರಾಂಗೆ ಪಲಾಯನ

ಐಜ್ವಾಲ್ (ಪಿಟಿಐ): ಗಲಭೆಪೀಡಿತ ಮಣಿಪುರದಿಂದ 5,822 ಮಂದಿ ಮಿಜೋರಾಂಗೆ ಪಲಾಯನ ಮಾಡಿದ್ದು, ಅಲ್ಲಿನ ವಿವಿಧ ಜಿಲ್ಲೆಗಳಲ್ಲಿ ಆಶ್ರಯ ಪಡೆದಿದ್ದಾರೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಚಿನ್– ಕುಕಿ– ಮಿಜೊ ಸಮುದಾಯಕ್ಕೆ ಸೇರಿರುವ ಈ ಜನರು ಮಿಜೋರಾಂನ ಆರು ಜಿಲ್ಲೆಗಳಲ್ಲಿ ಸ್ಥಾಪಿಸಿರುವ ತಾತ್ಕಾಲಿಕ ನಿರಾಶ್ರಿತರ ಶಿಬಿರಗಳಲ್ಲಿ ಆಶ್ರಯ ಪಡೆದಿದ್ದಾರೆ ಎಂದೂ ವಿವರಿಸಿದ್ದಾರೆ.

ಮತ್ತೆ ಗುಂಡಿನ ದಾಳಿ: 10 ಮನೆಗಳು ಭಸ್ಮ

ರಾಜ್ಯದಲ್ಲಿ ಶಾಂತಿ ಸ್ಥಾಪನೆಗೆ ಸರ್ಕಾರ ಹರಸಾಹಸಪಡುತ್ತಿರುವ ಬೆನ್ನಲ್ಲೇ ಶನಿವಾರ ರಾತ್ರಿ ಕೆಲವೆಡೆ ಮತ್ತೆ ಘರ್ಷಣೆ ಸಂಭವಿಸಿದೆ.

ಬಿಷ್ಣುಪುರ ಜಿಲ್ಲೆಯ ತೋರ್ಬಂಗ್ ಪ್ರದೇಶದಲ್ಲಿ ಶಂಕಿತ ಉಗ್ರರು ಗುಂಡಿನ ದಾಳಿ ನಡೆಸಿದ್ದು, 10 ಮನೆಗಳಿಗೆ ಬೆಂಕಿ ಹಚ್ಚಿದ್ದಾರೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಹಿಂಸಾಚಾರದಲ್ಲಿ ಇಲ್ಲಿಯವರೆಗೆ 73 ಜನರು ಮೃತಪಟ್ಟಿದ್ದು, 231 ಮಂದಿ ಗಾಯಗೊಂಡಿದ್ದಾರೆ. ಧಾರ್ಮಿಕ ಸ್ಥಳಗಳು ಸೇರಿದಂತೆ 1,700 ಮನೆಗಳಿಗೆ ಹಾನಿಯಾಗಿದೆ. ಸೇನೆ ಮತ್ತು ಅರೆಸೇನಾ ಪಡೆಯ 10 ಸಾವಿರಕ್ಕೂ ಹೆಚ್ಚು ಯೋಧರು ಹಿಂಸಾಚಾರ ಪೀಡಿತ ನೆಲದಲ್ಲಿ ಮೊಕ್ಕಾಂ ಹೂಡಿದ್ದಾರೆ.

ಮೊಬೈಲ್, ಇಂಟರ್ ನೆಟ್ ಬಳಕೆಗೆ ವಿಧಿಸಿರುವ ನಿರ್ಬಂಧ, ಕರ್ಫ್ಯೂ ಮುಂದುವರಿದಿದೆ.

ಜೈಪುರದಲ್ಲಿ ಸೋಮವಾರ ಕಾಂಗ್ರೆಸ್ ನಾಯಕ ಸಚಿನ್ ಪೈಲಟ್ ಹಮ್ಮಿಕೊಂಡಿದ್ದ ಜನ ಸಂಘರ್ಷ ಯಾತ್ರೆಯಲ್ಲಿ ಪಾಲ್ಗೊಂಡಿದ್ದ ಕಾರ್ಯಕರ್ತರು

ರಾಜಸ್ಥಾನ ಸರ್ಕಾರಕ್ಕೆ ತಿಂಗಳಾಂತ್ಯದ ಗಡುವು

3 ಬೇಡಿಕೆ ಇಟ್ಟ ಪೈಲಟ್

ಜೈಪುರ (ಪಿಟಿಐ): ರಾಜಸ್ಥಾನದಲ್ಲಿ ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದಿರುವ ಭ್ರಷ್ಟಾಚಾರ ಕುರಿತು ಉನ್ನತಮಟ್ಟದ ತನಿಖೆ ನಡೆಸುವುದು ಸೇರಿದಂತೆ ಮೂರು ಬೇಡಿಕೆಗಳ ಈಡೇರಿಕೆಗೆ ಕಾಂಗ್ರೆಸ್‌ನ ಭಿನ್ನಮತೀಯ ನಾಯಕ ಸಚಿನ್ ಪೈಲಟ್ ಅವರು, ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರಿಗೆ ಈ ತಿಂಗಳ ಕೊನೆಯವರೆಗಿನ ಗಡುವು ನೀಡಿದ್ದಾರೆ.

ರಾಜಸ್ಥಾನ ಲೋಕಸೇವಾ ಆಯೋಗವನ್ನು (ಆರ್‌ಪಿಎಸ್‌ಸಿ) ವಿಸರ್ಜಿಸಬೇಕು. ಸರ್ಕಾರಿ ಹುದ್ದೆಗಳ ನೇಮಕಾತಿ ರದ್ದತಿಯಿಂದ ಸಂಕಷ್ಟಕ್ಕೆ ಸಿಲುಕಿರುವ ಅಭ್ಯರ್ಥಿಗಳಿಗೆ ಸೂಕ್ತ ಪರಿಹಾರ ಘೋಷಿಸಬೇಕು ಎಂಬುದು ಅವರು ಮಂಡಿಸಿರುವ ಮತ್ತೆರಡು ಬೇಡಿಕೆಗಳಾಗಿವೆ.

ಅಜ್ಮೀರ್‌ನಿಂದ ಜೈಪುರದವರೆಗೆ ಪೈಲಟ್ ಹಮ್ಮಿಕೊಂಡಿದ್ದ ಯಾತ್ರೆಯು ಸೋಮವಾರ ಮುಕ್ತಾಯಗೊಂಡಿದ್ದು, 15 ಶಾಸಕರು ಬೆಂಬಲ ಘೋಷಿಸಿದ್ದಾರೆ. ಬೇಡಿಕೆ ಈಡೇರಿಸದಿದ್ದರೆ ರಾಜ್ಯದಾದ್ಯಂತ ಹೋರಾಟವನ್ನು ತೀವ್ರಗೊಳಿಸಲಾಗುವುದು ಎಂದು ಪೈಲಟ್ ಎಚ್ಚರಿಕೆ ನೀಡಿದ್ದಾರೆ.

ಕರ್ನಾಟಕದಲ್ಲಿನ ಹೋರಾಟ ಸ್ಮರಣೆ

'ಕರ್ನಾಟಕದಲ್ಲಿ ಬಿಜೆಪಿ ಸರ್ಕಾರದ ಭ್ರಷ್ಟಾಚಾರದ ವಿರುದ್ಧ ಕಾಂಗ್ರೆಸ್ ಹೋರಾಟ ನಡೆಸಿತ್ತು. ಇದರಿಂದ ಅಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸರ್ಕಾರ ಅಧಿಕಾರ ಕಳೆದುಕೊಂಡಿತು. ಅಲ್ಲಿ ಕಾಂಗ್ರೆಸ್‌ಗೆ ಬಹುಮತ ಸಿಕ್ಕಿದೆ' ಎಂದು ಸಚಿನ್ ಪೈಲಟ್ ಹೇಳಿದರು.

'ಕರ್ನಾಟಕ ಮತ್ತು ರಾಜಸ್ಥಾನದ ಸ್ಥಿತಿ ಭಿನ್ನವಾಗಿಲ್ಲ. ಇಲ್ಲಿ ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬರಲು ಬಿಜೆಪಿ ಆಡಳಿತದಲ್ಲಿ ನಡೆದಿರುವ ಭ್ರಷ್ಟಾಚಾರದ ಬಗ್ಗೆ ತನಿಖೆ ನಡೆಸಬೇಕು' ಎಂದು ಪ್ರತಿಪಾದಿಸಿದರು.

'ಅದಾನಿ ಕುರಿತು 2016ರಿಂದ ತನಿಖೆ ಇಲ್ಲ'

ನವದೆಹಲಿ (ಪಿಟಿಐ): ಅದಾನಿ ಸಮೂಹದ ಕುರಿತು ತಾನು 2016ರಿಂದ ತನಿಖೆಗೆ ನಡೆಸುತ್ತಿಲ್ಲ ಎಂದು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಅದಾನಿ ಸಮೂಹಕ್ಕೆ ಸೇರಿದ ಕೆಲ ಕಂಪನಿಗಳ ಬಗ್ಗೆ ಸೆಬಿ ತನಿಖೆ ನಡೆಸುತ್ತಿದೆ ಎಂದು 2021ರ ಜುಲೈನಲ್ಲಿ ತಾನು ಸಂಸತ್ತಿಗೆ ನೀಡಿದ್ದ ಉತ್ತರವು ಸರಿಯಾಗಿಯೇ ಇತ್ತು ಎಂದು ಕೇಂದ್ರ ಹಣಕಾಸು ಸಚಿವಾಲಯ ಸಮರ್ಥಿಸಿಕೊಂಡಿದೆ. ಅದಾನಿ ಸಮೂಹದ ವಿರುದ್ಧ ನಡೆಸುತ್ತಿರುವ ತನಿಖೆಯನ್ನು ಪೂರ್ಣ ಗೊಳಿಸಲು ಇನ್ನೂ ಆರು ತಿಂಗಳ ಸಮಯಾವಕಾಶ ಬೇಕು ಎಂದು ಸೆಬಿ ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಿದೆ. ಈ ಮನವಿಯಲ್ಲಿ ಸೆಬಿ, 2016ರಿಂದಲೂ ತಾನು ಅದಾನಿ ಸಮೂಹದ ಕುರಿತು ತನಿಖೆ ನಡೆಸುತ್ತಿದ್ದೇನೆ ಎಂಬುದು ಸತ್ಯವಲ್ಲ ಎಂದು ಹೇಳಿದೆ. ಈ ಹೇಳಿಕೆಯನ್ನು ಆಧರಿಸಿ ಕಾಂಗ್ರೆಸ್ ಮತ್ತು ಇತರ ವಿರೋಧ ಪಕ್ಷಗಳು 2021ರ ಜುಲೈನಲ್ಲಿ ಹಣಕಾಸು ಸಚಿವಾಲಯವು ಸಂಸತ್ತಿನಲ್ಲಿ ನೀಡಿದ್ದ ಉತ್ತರವನ್ನು ಉಲ್ಲೇಖಿಸಿ, ತಪ್ಪುದಾರಿಗೆ ಎಳೆಯುತ್ತಿರುವುದು ಯಾರು ಎಂದು ಪ್ರಶ್ನಿಸಿದ್ದವು. 'ಲೋಕಸಭೆಗೆ ನೀಡಿದ ಉತ್ತರವು ಸರಿಯಾಗಿದೆ' ಎಂದು ಇದಕ್ಕೆ ಉತ್ತರವಾಗಿ ಹಣಕಾಸು ಸಚಿವಾಲಯ ಟ್ವೀಟ್ ಮೂಲಕ ಹೇಳಿದೆ.

2021ರ ಜುಲೈನಲ್ಲಿ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಅವರು ನೀಡಿದ್ದ ಉತ್ತರವನ್ನು ಕಾಂಗ್ರೆಸ್ ವಕ್ತಾರ ಜೈರಾಮ್ ರಮೇಶ್ ಹಂಚಿಕೊಂಡಿದ್ದರು. 'ಅದಾನಿ ಸಮೂಹದ ಕೆಲವು ಕಂಪನಿಗಳ ಕುರಿತು ಸೆಬಿ ತನಿಖೆ ನಡೆಸುತ್ತಿದೆ' ಎಂದು ಆ ಉತ್ತರದಲ್ಲಿ ಹೇಳಲಾಗಿದೆ. ಅಮೆರಿಕದ ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆಯು ಜನವರಿಯಲ್ಲಿ ಅದಾನಿ ಸಮೂಹದ ವಿರುದ್ಧ ಹಲವು ಆರೋಪಗಳನ್ನು ಮಾಡಿತು. ಅದಾನಿ ಸಮೂಹವು ಎಲ್ಲ ಆರೋಪಗಳನ್ನು ಅಲ್ಲಗಳೆದಿದೆ.

ಆರೋಪಗಳ ಕುರಿತು ತನಿಖೆ ನಡೆಸುವಂತೆ ಕೋರಿ ಸಲ್ಲಿಕೆಯಾಗಿರುವ ಅರ್ಜಿ ವಿಚಾರಣೆ ನಡೆಸುತ್ತಿರುವ ಸುಪ್ರೀಂ ಕೋರ್ಟ್, ಅದಾನಿ ಸಮೂಹದ ವಿರುದ್ಧದ ತನಿಖೆಯನ್ನು ಎರಡು ತಿಂಗಳಲ್ಲಿ ಪೂರ್ಣಗೊಳಿಸುವಂತೆ ಹೇಳಿತ್ತು. ಆ ಗಡುವು ಈ ತಿಂಗಳ ಆರಂಭದಲ್ಲಿ ಕೊನೆಗೊಂಡಿದೆ. ಸೆಬಿ ಹೆಚ್ಚುವರಿ ಆರು ತಿಂಗಳ ಕಾಲಾವಕಾಶ ಕೇಳಿದೆ. ಆದರೆ, ಸೆಬಿ, ಅದಾನಿ ಸಮೂಹದ ಕುರಿತು 2016ರಿಂದಲೂ ತನಿಖೆ ನಡೆಸುತ್ತಿದೆ ಮತ್ತು ಅದಕ್ಕೆ ಹೆಚ್ಚುವರಿ ಕಾಲಾವಕಾಶ ಕೊಡಬಾರದು ಎಂದು ಅರ್ಜಿದಾರರು ವಾದಿಸಿದ್ದರು.

ಅಫ್ಗನ್ ರಾಯಭಾರಿ ಬದಲಾವಣೆ ವಿವಾದ

ಪ್ರಜಾವಾಣಿ ವಾರ್ತೆ

ನವದೆಹಲಿ: ಇಲ್ಲಿನ ಅಫ್ಗಾನಿಸ್ತಾನ ರಾಯಭಾರ ಕಚೇರಿಯ ಮೇಲೆ ನಿಯಂತ್ರಣ ಹೊಂದುವ ತಾಲಿಬಾನ್ ಆಡಳಿತದ ಪ್ರಯತ್ನಕ್ಕೆ ಕಚೇರಿಯಲ್ಲಿನ ರಾಜತಾಂತ್ರಿಕರು ಪ್ರತಿರೋಧ ಒಡ್ಡಿದ್ದಾರೆ. ಅಫ್ಗಾನಿಸ್ತಾನದ ಈ ಹಿಂದಿನ ಆಡಳಿತ ರಾಜತಾಂತ್ರಿಕರನ್ನು ನೇಮಿಸಿತ್ತು.

ರಾಯಭಾರ ಕಚೇರಿ ಹಕ್ಕು ಸಾಧಿಸುವ ವಿವಾದ ಈಗ ಕೇಂದ್ರ ಸರ್ಕಾರವನ್ನು ಇಕ್ಕಟ್ಟಿಗೆ ದೂಡಿದೆ. ಅಫ್ಗಾನಿಸ್ತಾನದಲ್ಲಿ ಆಡಳಿತ ಕೈವಶ ಮಾಡಿಕೊಂಡಿರುವ ತಾಲಿಬಾನ್ ಸರ್ಕಾರಕ್ಕೆ ಭಾರತ ಸರ್ಕಾರ ಇನ್ನೂ ಅಧಿಕೃತ ಮನ್ನಣೆ ನೀಡಿಲ್ಲ.

ಅಫ್ಗಾನಿಸ್ತಾನದ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಭಾರತದ ರಾಯಭಾರ ಕಚೇರಿಗೆ ಖಾದಿರ್ ಶಾ ಅವರನ್ನು ನೇಮಿಸಿತ್ತು. ಈಗಿನ ರಾಯಭಾರಿ ಫಾರಿದ್ ಅವರನ್ನು ಹಿಂದಿರುಗಲು ಸೂಚಿಸಿತ್ತು.

ನೇಮಕ ಕುರಿತಂತೆ ಶಾ ಸ್ವತಃ ಭಾರತ ಸರ್ಕಾರಕ್ಕೆ ಪತ್ರ ಬರೆದಿದ್ದರು. ಅದರಲ್ಲಿ ತಮ್ಮನ್ನು ಇಸ್ಲಾಮಿಕ್ ರಿಪಬ್ಲಿಕ್ ಆಫ್ ಅಫ್ಗಾನಿಸ್ತಾನ್ ನೇಮಿಸಿದೆ ಎಂದು ತಿಳಿಸಿದ್ದರು. ಆದರೆ, ತಾಲಿಬಾನ್ ಆಡಳಿತವು ಇತ್ತೀಚೆಗೆ ದೇಶದ ಹೆಸರನ್ನು ಇಸ್ಲಾಮಿಕ್ ಎಮಿರೇಟ್ ಆಫ್ ಅಫ್ಗಾನಿಸ್ತಾನ್ ಎಂದು ಬದಲಿಸಿತ್ತು. ಬದಲಾದ ಹೆಸರನ್ನು ಶಾ ಉಲ್ಲೇಖಿಸಿರಲಿಲ್ಲ. ಇದು ಕೂಡಾ ಈ ವಿವಾದಕ್ಕೆ ಕಾರಣವಾಗಿದೆ.

ರಿಜಿಜು, ಉಪರಾಷ್ಟ್ರಪತಿ ವಿರುದ್ಧ ವಿಚಾರಣೆಗೆ 'ಸುಪ್ರೀಂ' ನಿರಾಕರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೊಲಿಜಿಯಂ ಪದ್ಧತಿ, ನ್ಯಾಯಾಂಗದ ಕುರಿತು ನೀಡಿ ರುವ ಹೇಳಿಕೆಗಳ ಸಂಬಂಧ ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಹಾಗೂ ಕಾನೂನು ಸಚಿವ ಕಿರಣ್ ರಿಜಿಜು ವಿರುದ್ಧ ಬಾಂಬೆ ವಕೀಲರ ಸಂಘ ಸಲ್ಲಿಸಿದ್ದ ಅರ್ಜಿಯನ್ನು ವಿಚಾರಣೆಗೆ ಎತ್ತಿಕೊಳ್ಳಲು ಸುಪ್ರೀಂ ಕೋರ್ಟ್ ನಿರಾಕರಿಸಿತು.

'ಏನಿದು? ಯಾಕಾಗಿ ನೀವು ಬಂದಿದ್ದೀರಿ? ಹೈಕೋರ್ಟ್ ಒಂದು ಅರ್ಜಿಯನ್ನು ವಜಾ ಮಾಡಿದ ಕೂಡಲೇ ಸುಪ್ರೀಂ ಕೋರ್ಟ್‌ಗೆ ಬರುವ ಪದ್ಧತಿಯನ್ನು ಸಂಪನ್ನ ಮಾಡಲು ಬಂದಿ ದ್ದೀರಿ ಅಲ್ಲವೇ?' ಎಂದು ನ್ಯಾಯಮೂರ್ತಿಗಳಾದ ಎಸ್.ಕೆ. ಕೌಲ್ ಹಾಗೂ ಅಹ್ಸಾನುದ್ದೀನ್ ಅಮಾನುಲ್ಲಾ ಅವರಿದ್ದ ಪೀಠವು ಬಾಂಬೆ ವಕೀಲರ ಸಂಘಕ್ಕೆ ಹೇಳಿತು. 'ಸಾಂವಿಧಾನಿಕ ಹುದ್ದೆಯಲ್ಲಿ ಕಾರ್ಯನಿರ್ವಹಿಸಲು ಉಪ ರಾಷ್ಟ್ರಪತಿ ಧನಕರ್ ಹಾಗೂ ಸಚಿವ ರಿಜಿಜು ಅವರು ಅರ್ಹರಲ್ಲ. ಅವರ ನಡವಳಿಕೆ, ಸಾರ್ವಜನಿಕವಾಗಿ ಅವರು ನೀಡಿರುವ ಹೇಳಿಕೆಗಳು ಅವರು ಆ ಸ್ಥಾನಕ್ಕೆ ಅನರ್ಹರು ಎಂದು ಸಾಬೀತು ಪಡಿಸುತ್ತವೆ' ಎಂದು ವಕೀಲರ ಸಂಘ ವಾದಿಸಿತು. 'ಈ ಇಬ್ಬರಿಗೆ ಸಂವಿಧಾನದ ಕುರಿತು ನಂಬಿಕೆ ಇಲ್ಲ. ಜೊತೆಗೆ ನ್ಯಾಯಾಂಗದ ಕುರಿತೂ ಸಲ್ಲದ ಮಾತನಾಡಿದ್ದಾರೆ' ಎಂದಿತು.

ಈ ಮೊದಲು ಈ ಅರ್ಜಿಯನ್ನು ಹೈಕೋರ್ಟ್ ಫೆಬ್ರುವರಿ 1ರಂದು ವಜಾ ಮಾಡಿತ್ತು. ಹೈಕೋರ್ಟ್‌ನ ನಿರ್ಧಾರವು ಸರಿಯಾಗಿಯೇ ಇದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಅಲ್ಲದೆ 'ಸಾಂವಿಧಾನಿಕ ಹುದ್ದೆಯಲ್ಲಿರುವವರು ಅಸಮಂಜಸ ಹೇಳಿಕೆ ನೀಡಿದರೆ ಅದನ್ನು ವಿಶಾಲ ನೆಲೆಗಟ್ಟಿನಲ್ಲಿ ನಿರ್ವಹಿಸುವ ಸಾಮರ್ಥ್ಯ ಸುಪ್ರೀಂ ಕೋರ್ಟ್‌ಗೆ ಇದೆ' ಎಂದು ಅಭಿಪ್ರಾಯಪಟ್ಟಿದೆ.

ಹೈಕೋರ್ಟ್ ಈ ಹಿಂದೆ ಹೇಳಿದ್ದು...

- ಭಾರತದ ಸುಪ್ರೀಂ ಕೋರ್ಟ್‌ನ ವಿಶ್ವಾಸಾರ್ಹತೆಯು ಬಾನೆತ್ತರಕ್ಕಿದೆ. ಯಾರೋ ವ್ಯಕ್ತಿಗಳು ನೀಡುವ ಹೇಳಿಕೆಗಳಿಗೆ ಇದು ಅಳಿದು ಹೋಗುವುದಿಲ್ಲ
- ನೀವು ಹೇಳಿದ ರೀತಿಯಲ್ಲಿ ಸಾಂವಿಧಾನಿಕ ಹುದ್ದೆಯಲ್ಲಿ ಇರುವವರನ್ನು ಕೆಳಗಿಳಿಸಲು ಸಾಧ್ಯವಿಲ್ಲ. ನ್ಯಾಯಾಂಗದ ಕುರಿತ ವಿಮರ್ಶೆಗಳಿಗೂ ಅವಕಾಶವಿದೆ. ಸಂವಿಧಾನಕ್ಕೆ ಬದ್ಧವಾಗಿರುವುದು ಎಲ್ಲರ ಮೂಲಭೂತ ಕರ್ತವ್ಯವಾಗಿದೆ. ಇದರಲ್ಲಿ ಯಾವುದೇ ಸಂಶಯವಿಲ್ಲ. ಜೊತೆಗೆ ನ್ಯಾಯಾಂಗವನ್ನು ಎಲ್ಲರೂ ಗೌರವಿಸಬೇಕು.

ಬ್ಯಾಡ್ಮಿಂಟನ್: ಮಲೇಷ್ಯಾ ತಂಡದ ವಿರುದ್ಧ ಸೋಲು

ಸುದೀರ್‌ಮನ್ ಕಪ್: ಭಾರತ ಹೊರಕ್ಕೆ

ಸುಜೌ, ಚೀನಾ (ಪಿಟಿಐ): ನಿರೀಕ್ಷಿತ ಸಾಮರ್ಥ್ಯ ತೋರುವಲ್ಲಿ ವಿಫಲರಾದ ಭಾರತ ತಂಡದವರು ಸುದೀರ್‌ಮನ್ ಕಪ್ ಬ್ಯಾಡ್ಮಿಂಟನ್ ಟೂರ್ನಿಯಿಂದ ಹೊರಬಿದ್ದಿದ್ದಾರೆ.

ಸೋಮವಾರ ನಡೆದ ಮಿಶ್ರ ತಂಡ ಟೂರ್ನಿಯ 'ಸಿ' ಗುಂಪಿನ ಪಂದ್ಯದಲ್ಲಿ ಭಾರತ 0–4ರಿಂದ ಮಲೇಷ್ಯಾ ತಂಡಕ್ಕೆ ಮಣಿಯಿತು.

ಮಿಶ್ರ ಡಬಲ್ಸ್ ಪೈಪೋಟಿಯಲ್ಲಿ ಧ್ರುವ ಕಪಿಲ ಮತ್ತು ಅಶ್ವಿನಿ ಪೊನ್ನಪ್ಪ ಅವರು ವಿಶ್ವ ರ‍್ಯಾಂಕಿಂಗ್‌ನಲ್ಲಿ ಎಂಟನೇ ಸ್ಥಾನದಲ್ಲಿರುವ, ಮಲೇಷ್ಯಾದ ಗೊಹ್ ಸೂನ್ ಹುವಾಟ್ ಮತ್ತು ಲಾಯ್ ಶೆವೊನ್ ಜೆಮಿ ಅವರಿಗೆ ಸಾಟಿಯಾಗಲಿಲ್ಲ. 35 ನಿಮಿಷಗಳ ಕಾಲ ನಡೆದ ಹಣಾಹಣಿಯಲ್ಲಿ ಭಾರತದ ಜೋಡಿ 16-21, 17-21ರಿಂದ ಸೋತಿತು.

ಕಿದಂಬಿ ಶ್ರೀಕಾಂತ್ ಕೂಡ ನಿರೀಕ್ಷೆ ಹುಸಿಯಾಗಿಸಿದರು. ಪುರುಷರ ಸಿಂಗಲ್ಸ್ ಸ್ಪರ್ಧೆಯಲ್ಲಿ ಅವರು 16-21, 11-21ರಿಂದ ಲೀ ಜೀ ಜಿಯಾ ಎದುರು ಸೋಲು ಕಂಡರು.

ಮಹಿಳಾ ಸಿಂಗಲ್ಸ್ ವಿಭಾಗದ ಪೈಪೋಟಿಯನ್ನು ಪಿ.ವಿ. ಸಿಂಧು ಹೋರಾಟ ನೀಡಿ ಸೋತರು. ಭಾರತದ ಆಟಗಾರ್ತಿ 21-14, 10-21, 20-22ರಿಂದ ಗೊಹ್ ಸೂನ್ ಎದುರು ನಿರಾಸೆ ಅನುಭವಿಸಿದರು.

ಚಿರಾಗ್‌ಶೆಟ್ಟಿ ಮತ್ತು ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ

ಪುರುಷರ ಡಬಲ್ಸ್‌ನಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ–ಚಿರಾಗ್‌ಶೆಟ್ಟಿ ಜೋಡಿಯು 18–21, 19–21ರಿಂದ ಆ್ಯರೋನ್ ಚಿಯಾ– ಸೊಹ್ ವೂಯಿ ಯಿಕ್ ಎದುರು ಪರಾಭವಗೊಳ್ಳುವುದರೊಂದಿಗೆ ತಂಡದ ಅಭಿಯಾನ ಅಂತ್ಯವಾಯಿತು.

ಮೊದಲ ಪಂದ್ಯದಲ್ಲಿ ಭಾರತ ತಂಡವು ಚೀನಾ ತೈಪೆ ಎದುರು ಸೋತಿತ್ತು. ಬುಧವಾರ ನಡೆಯುವ ಗುಂಪಿನ ಕೊನೆಯ ಪಂದ್ಯದಲ್ಲಿ ಭಾರತ ತಂಡವು ಆಸ್ಟ್ರೇಲಿಯಾ ಸವಾಲು ಎದುರಿಸಲಿದೆ.

ಸಿ ಗುಂಪಿನಲ್ಲಿ ಅಗ್ರ ಎರಡು ಸ್ಥಾನ ಪಡೆದ ಚೀನಾ ತೈಪೆ ಮತ್ತು ಮಲೇಷ್ಯಾ ತಂಡಗಳು ಕ್ವಾರ್ಟರ್‌ಫೈನಲ್ ತಲುಪಿದವು.

ಎಫ್‌ಐಎಚ್ ಪ್ರೊ ಲೀಗ್ ಹಾಕಿ: ಭಾರತ ತಂಡಕ್ಕೆ ಹರ್ಮನ್ ಸಾರಥ್ಯ

ನವದೆಹಲಿ (ಪಿಟಿಐ): ಡ್ರ್ಯಾಗ್‌ಫ್ಲಿಕರ್ ಹರ್ಮನ್‌ಪ್ರೀತ್ ಸಿಂಗ್ ಅವರು ಎಫ್‌ಐಎಚ್ ಪ್ರೊ ಲೀಗ್ ಹಾಕಿ ಟೂರ್ನಿಯ ಯುರೋಪ್ ಲೆಗ್‌ನಲ್ಲಿ ಭಾರತ ತಂಡವನ್ನು ಮುನ್ನಡೆಸಲಿದ್ದಾರೆ.

ತಂಡದ ನೂತನ ಕೋಚ್ ಕ್ರೇಗ್ ಫುಲ್ಟನ್ ಅವರ ಮಾರ್ಗದರ್ಶನದಲ್ಲಿ ಭಾರತ ತಂಡಕ್ಕೆ ಇದು ಮೊದಲ ಪ್ರವಾಸವಾಗಿದ್ದು, 24 ಆಟಗಾರರನ್ನು ಸೋಮವಾರ ಹೆಸರಿಸಲಾಗಿದೆ.

ಈ ಹಿಂದೆ ಭಾರತದಲ್ಲಿ ನಡೆದ ಲೆಗ್‌ನಲ್ಲಿ ತಂಡವು ಜರ್ಮನಿ ಮತ್ತು ಆಸ್ಟ್ರೇಲಿಯಾ ವಿರುದ್ಧ ಅಜೇಯ ಸಾಧನೆ ಮಾಡಿತ್ತು. ಅದೇ ಲಯವನ್ನು ಮುಂದುವರಿಸುವ ತವಕದಲ್ಲಿ ಹರ್ಮನ್‌ಪ್ರೀತ್ ಬಳಗವಿದೆ.

ಯೂರೋಪ್ ಪ್ರವಾಸದಲ್ಲಿ ಭಾರತ ತಂಡವು ಬೆಲ್ಜಿಯಂ ಹಾಗೂ ಬ್ರಿಟನ್ ತಂಡಗಳನ್ನು ಲಂಡನ್‌ನಲ್ಲಿ ಎದುರಿಸಲಿದೆ. ಬಳಿಕ ನೆದರ್ಲೆಂಡ್ಸ್ ಮತ್ತು ಅರ್ಜೆಂಟೀನಾ ವಿರುದ್ಧ ನೆದರ್ಲೆಂಡ್ಸ್‌ನ ಇಂಡೊವನ್‌ನಲ್ಲಿ ಆಡಲಿದೆ.

ಹರ್ಮನ್‌ಪ್ರೀತ್ ಸಿಂಗ್

ಭಾರತ ತಂಡ: ಗೋಲ್‌ಕೀಪರ್ಸ್: ಕೃಷ್ಣ ಬಹದ್ದೂರ್ ಪಾಠಕ್, ಪಿಆರ್ ಶ್ರೀಜೇಶ್. **ಡಿಫೆಂಡರ್ಸ್:** ಹರ್ಮನ್‌ಪ್ರೀತ್ ಸಿಂಗ್ (ನಾಯಕ), ಅಮಿತ್ ರೋಹಿದಾಸ್, ಜರ್ಮನ್‌ಪ್ರೀತ್ ಸಿಂಗ್, ಮನ್‌ಪ್ರೀತ್ ಸಿಂಗ್, ಸುಮಿತ್, ಸಂಜಯ್, ಮನ್‌ದೀಪ್ ಮೋರ್, ಗುರಿಂದರ್ ಸಿಂಗ್. **ಮಿಡ್‌ಫೀಲ್ಡರ್ಸ್:** ಹಾರ್ದಿಕ್ ಸಿಂಗ್ (ಉಪನಾಯಕ), ದಿಲ್‌ಪ್ರೀತ್ ಸಿಂಗ್, ಮೊಯರಂಗತೇಮ್ ರವಿಚಂದ್ರ ಸಿಂಗ್, ಶಂಶೇರ್ ಸಿಂಗ್, ಆಕಾಶದೀಪ್ ಸಿಂಗ್, ವಿವೇಕ್ ಸಾಗರ್ ಪ್ರಸಾದ್. **ಫಾರ್ವರ್ಡ್ಸ್:** ಅಭಿಷೇಕ್, ಲಲಿತ್ ಕುಮಾರ್ ಉಪಾಧ್ಯಾಯ, ಎಸ್ ಕಾರ್ತಿ, ಗುರ್ಜಂತ್ ಸಿಂಗ್, ಸುಖಜೀತ್ ಸಿಂಗ್, ರಾಜ್‌ಕುಮಾರ್ ಪಾಲ್, ಮನದೀಪ್ ಸಿಂಗ್, ಸಿಮ್ರನ್‌ಜೀತ್ ಸಿಂಗ್.

ಸಂಕ್ಷಿಪ್ತ ಸುದ್ದಿ

ಲೋಹಾ ಇಸ್ಪ್ಯಾಟ್ ವಿರುದ್ಧ ಸಿಬಿಐ ಎಫ್‌ಐಆರ್

ನವದೆಹಲಿ (ಪಿಟಿಐ): ಎಸ್‌ಬಿಐ ನೇತೃತ್ವದ ಬ್ಯಾಂಕ್‌ಗಳ ಒಕ್ಕೂಟಕ್ಕೆ ₹ 1,017.93 ಕೋಟಿ ವಂಚಿಸಿದ ಪ್ರಕರಣ ಕುರಿತಂತೆ ಲೋಹಾ ಇಸ್ಪ್ಯಾಟ್ ಲಿಮಿಟೆಡ್‌ನ ಹಿಂದಿನ ಎಂ.ಡಿ, ಅಧ್ಯಕ್ಷ ರಾಜೇಶ್ ಗೌರಿಶಂಕರ್ ಪೊದ್ದಾರ್ ವಿರುದ್ಧ ಎಫ್‌ಐಆರ್ ದಾಖಲಿಸಿದೆ.

ಹೊಸ ಇನ್ನಿಂಗ್ಸ್ ಆರಂಭಿಸುವೆ: ಎಂ.ಆರ್. ಶಾ

ನವದೆಹಲಿ (ಪಿಟಿಐ): 'ನಿವೃತ್ತಿ ಯಾಗುವ ವ್ಯಕ್ತಿ ನಾನಲ್ಲ. ಬದುಕಿನಲ್ಲಿ ಮತ್ತೆ ಹೊಸ ಇನ್ನಿಂಗ್ಸ್ ಆರಂಭಿಸುತ್ತೇನೆ' ಎಂದು ಸುಪ್ರೀಂ ಕೋರ್ಟ್‌ನಿಂದ ಸೋಮವಾರ ನಿವೃತ್ತಿಯಾದ ನ್ಯಾಯಮೂರ್ತಿ ಎಂ.ಆರ್. ಶಾ ಭಾವುಕರಾಗಿ ಹೇಳಿದರು.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅಧ್ಯಕ್ಷತೆಯಲ್ಲಿ ಹಮ್ಮಿಕೊಂಡಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಶಾ ಅವರು, ಬಾಲಿವುಡ್ ನಟ ರಾಜ್‌ಕಪೂರ್ ನಟನೆಯ 'ಮೇರಾ ನಾಮ್ ಜೋಕರ್' ಚಿತ್ರದ 'ಜೀನಾ ಯಹಾ, ಮರ್‌ನಾ ಯಹಾ...' ಗೀತೆಯ ಸಾಲನ್ನು ಉದ್ಧರಿಸಿದರು.

ಯುಪಿಎಸ್‌ಸಿ ಅಧ್ಯಕ್ಷರಾಗಿ ಸೋನಿ ಇಂದು ಪ್ರಮಾಣ

ನವದೆಹಲಿ (ಪಿಟಿಐ): ಶಿಕ್ಷಣತಜ್ಞ ಮನೋಜ್ ಸೋನಿ ಅವರು ಕೇಂದ್ರ ಲೋಕಸೇವಾ ಆಯೋಗ ಅಧ್ಯಕ್ಷರಾಗಿ ಮಂಗಳವಾರ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಸೋನಿ 2017ರ ಜೂನ್ 28ರಂದು ಆಯೋಗದ ಸದಸ್ಯರಾಗಿ ನೇಮಕ ವಾಗಿದ್ದರು. ಯುಪಿಎಸ್‌ಸಿ ಅಧ್ಯಕ್ಷರ ಕರ್ತವ್ಯಗಳನ್ನು ಅವರು 2022ರ ಏಪ್ರಿಲ್ 5ರಿಂದ ನಿಭಾಯಿಸುತ್ತಿದ್ದರು.

ಸುದ್ದಿವಾಹಿನಿಯ ನಿರ್ವಾಹಕ ಬಂಧನ

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣದ ತನಿಖೆಗೆ ಸಂಬಂಧಿಸಿ ಇಂಡಿಯ ಅಹೆಡ್ ನ್ಯೂಸ್ ಸುದ್ದಿವಾಹಿನಿಯ ಜಾಹೀರಾತು ವಿಭಾಗದ ಮುಖ್ಯಸ್ಥ, ಕಾರ್ಯಕ್ರಮ ನಿರ್ವಾಹಕ ಅರವಿಂದ್ ಸಿಂಗ್ ಅವರನ್ನು ಸಿಬಿಐ ಬಂಧಿಸಿದೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದರು. 'ಚಾರಿಯಟ್ ಮೀಡಿಯಾ' ಎಂಬ ಸಂಸ್ಥೆಗೆ ಹವಾಲಾ ಮುಖಾಂತರ ₹17 ಕೋಟಿ ಹಣ ವರ್ಗಾಯಿಸಿದ ಆರೋಪದ ಮೇಲೆ ಅವರನ್ನು ಬಂಧಿಸಲಾಗಿದೆ ಎಂದು ತಿಳಿಸಿದ್ದಾರೆ.

'ಜೆನರಿಕ್ ಔಷಧಗಳನ್ನೇ ಬರೆದುಕೊಡಿ'

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರದ ಅಧೀನದಲ್ಲಿರುವ ಎಲ್ಲ ಆಸ್ಪತ್ರೆಗಳ ವೈದ್ಯರು ಮತ್ತು ಕೇಂದ್ರದ ಆರೋಗ್ಯ ಯೋಜನೆಗೆ ಒಳಪಡುವ ಕೇಂದ್ರಗಳ ವೈದ್ಯರು ಜನೌಷಧ ವಿಭಾಗಗಳಲ್ಲಿ ಲಭ್ಯವಿರುವ ಔಷಧಗಳನ್ನೇ (ಜೆನರಿಕ್) ಬರೆದು ಕೊಡಬೇಕು. ಆದೇಶವನ್ನು ಉಲ್ಲಂಘಿಸಿದಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದಯ ಕೇಂದ್ರ ಸರ್ಕಾರ ಎಚ್ಚರಿಸಿದೆ.

ವೈದ್ಯರು ಕೆಲವೊಮ್ಮೆ ಬ್ರಾಂಡೆಡ್ ಔಷಧಗಳನ್ನೇ ಬರೆದುಕೊಡುತ್ತಿರುವುದು ಕಂಡುಬಂದಿದೆ. ಇನ್ನು ಮುಂದೆ ಜೆನರಿಕ್ ಔಷಧಗಳನ್ನೇ ಕಡ್ಡಾಯವಾಗಿ ಬರೆದುಕೊಡಲು ಸೂಚಿಸಲಾಗಿದೆ ಎಂದು ಆರೋಗ್ಯ ಸೇವೆಯ ಮಹಾ ನಿರ್ದೇಶಕ ಡಾ.ಅತುಲ್ ಗೋಯಲ್ ತಿಳಿಸಿದ್ದಾರೆ.

ಎಬಿಎಫ್‌ಐ ಜತೆ ಬೇಸ್‌ಬಾಲ್ ಯುನೈಟೆಡ್ ಸಹಭಾಗಿತ್ವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದಲ್ಲಿ ಬೇಸ್‌ಬಾಲ್ ಕ್ರೀಡೆಯನ್ನು ಜನಪ್ರಿಯಗೊಳಿಸುವ ಉದ್ದೇಶದಿಂದ ಬೇಸ್‌ಬಾಲ್ ಯುನೈಟೆಡ್ (ವಿಶ್ವದ ಮೊದಲ ವೃತ್ತಿಪರ ಬೇಸ್‌ಬಾಲ್ ಲೀಗ್) ಸಂಸ್ಥೆಯು ಅಮೆಚೂರ್ ಬೇಸ್‌ಬಾಲ್ ಫೆಡರೇಷನ್ ಆಫ್ ಇಂಡಿಯಾ (ಎಬಿಎಫ್‌ಐ) ಜತೆ ಕೈಜೋಡಿಸಿದೆ.

ಭಾರತ ಮತ್ತು ಮಧ್ಯಪ್ರಾಚ್ಯ ದೇಶಗಳಲ್ಲಿ ಬೇಸ್‌ಬಾಲ್ ಕ್ರೀಡೆಯನ್ನು ಪರಿಚಯಿಸುವ ಗುರಿಯನ್ನು ಬೇಸ್ ಬಾಲ್ ಯುನೈಟೆಡ್ ಇಟ್ಟುಕೊಂಡಿದೆ. ಇದೇ ನವೆಂಬರ್‌ನಲ್ಲಿ ದುಬೈನಲ್ಲಿ ಮೊದಲ ಲೀಗ್ ನಡೆಯಲಿದೆ.

ಈ ಒಪ್ಪಂದದ ಮೂಲಕ ಎರಡೂ ಸಂಸ್ಥೆಗಳು ಬೇಸ್‌ಬಾಲ್‌ನತ್ತ ಹೆಚ್ಚಿನ ಕ್ರೀಡಾಪಟುಗಳನ್ನು ಆಕರ್ಷಿಸುವುದು, ರಾಷ್ಟ್ರೀಯ ತಂಡದ ತರಬೇತಿ, ಅಭಿಮಾನಿಗಳನ್ನು ಸೆಳೆಯುವುದು ಮತ್ತು ಈ ಕ್ರೀಡೆಗೆ ಸರ್ಕಾರದ ನೆರವು ದೊರಕಿಸಿಕೊಡುವ ನಿಟ್ಟಿನಲ್ಲಿ ಜತೆಯಾಗಿ ಕೆಲಸ ಮಾಡಲಿವೆ ಎಂದು ಪ್ರಕಟಣೆ ತಿಳಿಸಿದೆ.

'ಭಾರತದಲ್ಲಿ ಬೇಸ್‌ಬಾಲ್ ಕ್ರೀಡೆಯನ್ನು ಜನಪ್ರಿಯಗೊಳಿಸುವ ಉದ್ದೇಶದಿಂದ ಎಬಿಎಫ್‌ಐ ಜತೆ ಪಾಲುದಾರಿಕೆ ಹೊಂದಲು ನಮಗೆ ಹೆಮ್ಮೆಯಾಗುತ್ತಿದೆ' ಎಂದು ಬೇಸ್‌ಬಾಲ್ ಯುನೈಟೆಡ್‌ನ ಸಹ-ಮಾಲೀಕರಾದ ಕಾಶ್ ಶೇಖ್ ಹೇಳಿದ್ದಾರೆ.

ಗುಲ್‌ವೀರ್ ಸಿಂಗ್‌ಗೆ ಏಷ್ಯನ್ ಚಾಂಪಿಯನ್‌ಷಿಪ್ ಟಿಕೆಟ್

ರಾಂಚಿ (ಪಿಟಿಐ): ಉತ್ತರ ಪ್ರದೇಶದ ಗುಲ್‌ವೀರ್ ಸಿಂಗ್, ಸೋಮವಾರ ಇಲ್ಲಿ ಆರಂಭವಾದ ಫೆಡರೇಷನ್ ಕಪ್ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ 10 ಸಾವಿರ ಮೀಟರ್ಸ್ ಓಟದಲ್ಲಿ ಚಿನ್ನದ ಪದಕ ಜಯಿಸಿದರು. ಇದರೊಂದಿಗೆ ಏಷ್ಯನ್ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ಗೆ ಅರ್ಹತೆ ಗಿಟ್ಟಿಸಿದರು.

ಗುಲ್‌ವೀರ್ 29 ನಿಮಿಷ 5.90 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಆ ಮೂಲಕ ಏಷ್ಯನ್ ಕೂಟಕ್ಕೆ ಇದ್ದ ಅರ್ಹತಾ ಮಾನದಂಡವನ್ನು (29 ನಿ. 30 ಸೆ.) ಮೀರಿದರು.

ಮಹಿಳೆಯರ ವಿಭಾಗದಲ್ಲಿ ಮಹಾರಾಷ್ಟ್ರದ ಸಂಜೀವನಿ ಜಾಧವ್ (33 ನಿ. 32 ಸೆ.) ಅಗ್ರಸ್ಥಾನ ಗಳಿಸಿದರು.

'ಸಾಫ್ಟ್ ಸಿಗ್ನಲ್' ನಿಯಮ ರದ್ದುಗೊಳಿಸಿದ ಐಸಿಸಿ

ಲಂಡನ್ (ಎಎಫ್‌ಪಿ): ಸಾಕಷ್ಟು ಚರ್ಚೆ ಮತ್ತು ವಿವಾದಕ್ಕೆ ಕಾರಣವಾಗಿದ್ದ 'ಸಾಫ್ಟ್ ಸಿಗ್ನಲ್' ನಿಯಮವನ್ನು ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ) ರದ್ದುಗೊಳಿಸಿದೆ.

'ಮೈದಾನದ ಅಂಪೈರ್‌ಗಳು ತೀರ್ಪಿನ ಪರಿಶೀಲನೆಗಾಗಿ ಟಿ.ವಿ ಅಂಪೈರ್ ಮೊರೆಹೋಗುವ ಮುನ್ನ ಸಾಫ್ಟ್ ಸಿಗ್ನಲ್ ಕೊಡುವಂತಿಲ್ಲ. ಔಟ್ ಅಥವಾ ನಾಟೌಟ್ ಎಂಬ ನಿರ್ಧಾರವನ್ನು ತೆಗೆದುಕೊಳ್ಳದೆಯೇ ನೇರವಾಗಿ ಟಿ.ವಿ ಅಂಪೈರ್ ಮೊರೆ ಹೋಗಬೇಕು' ಎಂದು ಐಸಿಸಿ ಪ್ರಕಟಣೆ ಹೇಳಿದೆ.

ಏನಿದು ಸಾಫ್ಟ್ ಸಿಗ್ನಲ್: ಮೈದಾನದ ಅಂಪೈರ್‌ಗಳಿಗೆ ಕೆಲವೊಮ್ಮೆ ಸ್ಪಷ್ಟ ತೀರ್ಪು ನೀಡಲು ಆಗುವುದಿಲ್ಲ. ಉದಾಹರಣೆಗೆ, ಫೀಲ್ಡರ್ ಕ್ಯಾಚ್ ಪಡೆಯುವಾಗ ಚೆಂಡು ನೆಲಕ್ಕೆ ತಾಗಿದೆಯೇ, ಇಲ್ಲವೇ ಎಂಬುದು ನಿಖರವಾಗಿ ಕಾಣಿಸದೇ ಇದ್ದಾಗ ಟಿ.ವಿ ಅಂಪೈರ್‌ನ ನೆರವು ಪಡೆಯುವರು.

ಆದರೆ ಟಿ.ವಿ. ಅಂಪೈರ್‌ನ ಮೊರೆ ಹೋಗುವ ಮುನ್ನ ತನ್ನ ನಿರ್ಧಾರ ಏನೆಂಬುದನ್ನು (ಔಟ್ ಅಥವಾ ನಾಟೌಟ್) ಸಂಜ್ಞೆಯ ಮೂಲಕ (ಸಾಫ್ಟ್ ಸಿಗ್ನಲ್) ತಿಳಿಸುವರು. ಟಿ.ವಿ ಅಂಪೈರ್ ರಿಪ್ಲೇ ವೀಕ್ಷಿಸಿ ಅಂತಿಮ ತೀರ್ಪು ನೀಡುವರು. ಕೆಲವೊಮ್ಮೆ ಟಿ.ವಿ ರಿಪ್ಲೇನಲ್ಲೂ ಸ್ಪಷ್ಟವಾಗಿ ಕಾಣಿಸದೇ ಇದ್ದರೆ, ಮೈದಾನದ ಅಂಪೈರ್ 'ಸಾಫ್ಟ್ ಸಿಗ್ನಲ್' ಮೂಲಕ ನೀಡಿದ್ದ ತೀರ್ಪು ಅಂತಿಮವಾಗುತ್ತದೆ.

ಮೈದಾನದ ಅಂಪೈರ್ ನೀಡುವ 'ಸಾಫ್ಟ್ ಸಿಗ್ನಲ್', ಮೂರನೇ ಅಂಪೈರ್ (ಟಿ.ವಿ ಅಂಪೈರ್) ನೀಡುವ ಅಂತಿಮ ತೀರ್ಪಿನ ಮೇಲೆ ಪ್ರಭಾವ ಬೀರುವ ಸಾಧ್ಯತೆಯಿದೆ ಎಂದು ಕೆಲವು ಆಟಗಾರರು ಆತಂಕ ವ್ಯಕ್ತಪಡಿಸಿದ್ದರು. ಈ ನಿಯಮ ರದ್ದುಗೊಳಿಸಬೇಕು ಎಂದು ಬೆನ್ ಸ್ಟೋಕ್ಸ್ ಈಚೆಗೆ ಒತ್ತಾಯಿಸಿದ್ದರು.

ಫುಟ್‌ಬಾಲ್: ಬಿಎಫ್‌ಸಿಗೆ ಕಿರೀಟ

ನವಿ ಮುಂಬೈ (ಪಿಟಿಐ): ಪೆನಾಲ್ಟಿ ಶೂಟೌಟ್‌ನಲ್ಲಿ ಬೆಂಗಳೂರು ಎಫ್‌ಸಿ ತಂಡವು 4–3ರಿಂದ ಸುದೇವ ಡೆಲ್ಲಿ ಎಫ್‌ಸಿ ತಂಡವನ್ನು ಸೋಲಿಸಿ ರಿಲಯನ್ಸ್ ಫೌಂಡೇಷನ್ ಡೆವಲಪ್‌ಮೆಂಟಲ್ ಲೀಗ್ (ಆರ್‌ಎಫ್‌ಡಿಎಲ್) ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿತು.

ಭಾನುವಾರ ಇಲ್ಲಿ ನಡೆದ ಎರಡನೇ ಋತುವಿನ ಟೂರ್ನಿಯ ಫೈನಲ್ ಪಂದ್ಯವು ನಿಗದಿತ ಅವಧಿಯಲ್ಲಿ 2–2 ಗೋಲುಗಳಿಂದ ಸಮವಾಗಿತ್ತು.

ನಿಗದಿತ ಅವಧಿಯಲ್ಲಿ ಬೆಂಗಳೂರು ತಂಡಕ್ಕೆ ಹುಯಿದ್ರೋಮ್ ಸಿಂಗ್ ಮತ್ತು ಸತ್ಯೆಂದರ್ ಸಿಂಗ್ ಗೋಲು ಗಳಿಸಿದರು.

ಪ್ರತಿಭಟನೆ ಜಾಗತಿಕ ಮಟ್ಟಕ್ಕೆ ವಿಸ್ತರಿಸಲು ನಿರ್ಧಾರ

ನವದೆಹಲಿ (ಪಿಟಿಐ): ಲೈಂಗಿಕ ದೌರ್ಜನ್ಯ ಆರೋಪ ಎದುರಿಸುತ್ತಿರುವ ಬ್ರಿಜ್‌ಭೂಷಣ್ ಶರಣ್ ಸಿಂಗ್ ವಿರುದ್ಧ ಕ್ರಮಕ್ಕೆ ಒತ್ತಾಯಿಸಿ ನಡೆಸುತ್ತಿರುವ ಪ್ರತಿಭಟನೆಗೆ ಕುಸ್ತಿಪಟುಗಳು ವಿವಿಧ ದೇಶಗಳ ಒಲಿಂಪಿಕ್ ಪದಕ ವಿಜೇತರ ನೆರವು ಕೋರಲು ತೀರ್ಮಾನಿಸಿದ್ದಾರೆ. ಇದರೊಂದಿಗೆ ಪ್ರತಿಭಟನೆಯನ್ನು 'ವಿಶ್ವಮಟ್ಟದ ಆಂದೋಲನ'ವನ್ನಾಗಿ ರೂಪಿಸುವ ನಿರ್ಧಾರ ಕೈಗೊಂಡಿದ್ದಾರೆ.

ಬ್ರಿಜ್‌ಭೂಷಣ್ ಅವರನ್ನು ಬಂಧಿಸಬೇಕೆನ್ನುವ ನಮ್ಮ ಬೇಡಿಕೆ ಈಡೇರದಿದ್ದರೆ ಮೇ 21ರಂದು 'ದೊಡ್ಡ ನಿರ್ಧಾರ'ವೊಂದನ್ನು' ತೆಗೆದುಕೊಳ್ಳುವೆವು' ಎಂದೂ ಕುಸ್ತಿಪಟುಗಳು ಎಚ್ಚರಿಸಿದ್ದಾರೆ.

'ಪ್ರತಿಭಟನೆಯನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ಯಲಿದ್ದೇವೆ. ಇದಕ್ಕಾಗಿ ಬೇರೆ ಬೇರೆ ದೇಶಗಳ ಒಲಿಂಪಿಯನ್ಸ್ ಮತ್ತು ಒಲಿಂಪಿಕ್ ಪದಕ ವಿಜೇತರನ್ನು ಸಂಪರ್ಕಿಸಿ ಬೆಂಬಲ ಕೋರುವೆವು' ಎಂದು ಕುಸ್ತಿಪಟು ವಿನೇಶಾ ಫೋಗಟ್ ಹೇಳಿದ್ದಾರೆ.

ಡ್ರಗ್ಸ್ ಪ್ರಕರಣ: ಸಮೀರ್ ವಾಂಖೆಡೆ ಬೆದರಿಕೆ

ಶಾರುಕ್ ಬಳಿ ₹25 ಕೋಟಿ ಲಂಚಕ್ಕೆ ಬೇಡಿಕೆ

ನವದೆಹಲಿ (ಪಿಟಿಐ): 'ಆರ್ಯನ್ ಖಾನ್‌ನನ್ನು ಡ್ರಗ್ಸ್ ಪ್ರಕರಣದಿಂದ ಬಿಡುಗಡೆಗೊಳಿಸಲು ಆತನ ತಂದೆ, ಬಾಲಿವುಡ್ ನಟ ಶಾರುಕ್ ಖಾನ್ ಬಳಿ ₹25 ಕೋಟಿ ಲಂಚಕ್ಕೆ ಬೇಡಿಕೆ ಇಡಲಾಗಿತ್ತು. ಹಣ ಕೊಡದಿದ್ದರೆ ಆರ್ಯನ್‌ನನ್ನು ಪ್ರಕರಣದಲ್ಲಿ ಸಿಲುಕಿಸುವುದಾಗಿ ಬೆದರಿಸಲಾಗಿತ್ತು' ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

'ಮಾದಕ ವಸ್ತು ನಿಗ್ರಹ ದಳದ (ಎನ್‌ಸಿಬಿ) ಮುಂಬೈ ವಲಯದ ಮಾಜಿ ನಿರ್ದೇಶಕ ಸಮೀರ್ ವಾಂಖೆಡೆ ವಿರುದ್ಧ ಸಿಬಿಐ ದಾಖಲಿಸಿರುವ ಎಫ್‌ಐಆರ್‌ನಲ್ಲಿ ಈ ಅಂಶಗಳನ್ನು ಉಲ್ಲೇಖಿಸಲಾಗಿದೆ' ಎಂದು ಹೇಳಿದ್ದಾರೆ.

ಎನ್‌ಸಿಬಿಯ ವಿಶೇಷ ತನಿಖಾ ತಂಡ (ಎಸ್‌ಐಟಿ) ನಡೆಸಿದ್ದ ವಿಚಾರಣೆ ವೇಳೆ ಸಮೀರ್ ಅವರು ತಾವು ಕೈಗೊಂಡಿದ್ದ ವಿದೇಶಿ ಪ್ರವಾಸದ ಬಗ್ಗೆ ಸೂಕ್ತ ವಿವರಣೆ ನೀಡಿರಲಿಲ್ಲ. ಖರ್ಚು–ವೆಚ್ಚದ ಕುರಿತು ಸಮರ್ಪಕವಾದ ಲೆಕ್ಕ ಕೊಟ್ಟಿರಲಿಲ್ಲ. ಹೀಗಾಗಿ ಸಿಬಿಐ ಇದೇ 11ರಂದು ಸಮೀರ್ ಹಾಗೂ ಇತರ ನಾಲ್ವರ ವಿರುದ್ಧ ಎಫ್‌ಐಆರ್ ದಾಖಲಿಸಿತ್ತು.

'ವಾಂಖೆಡೆ ಅವರು ಹಲವು ಬಾರಿ ವಿದೇಶ ಪ್ರವಾಸ ಕೈಗೊಂಡಿದ್ದರು. ಇದಕ್ಕಾಗಿ ವ್ಯಯಿಸಲಾಗಿರುವ ಹಣದ ಮೂಲದ ಕುರಿತು ಅವರು ನಿಖರ ಮಾಹಿತಿ ಒದಗಿಸಿಲ್ಲ. ದುಬಾರಿ ಮೌಲ್ಯದ ಕೈಗಡಿಯಾರದ ಖರೀದಿ ಹಾಗೂ ಮಾರಾಟದಲ್ಲೂ ತೊಡಗಿಕೊಂಡಿದ್ದರು. ಈ ಕುರಿತು ತಾವು ಕರ್ತವ್ಯ ನಿರ್ವಹಿಸುತ್ತಿದ್ದ ಸಂಸ್ಥೆಗೆ ಯಾವುದೇ ಮಾಹಿತಿ ಒದಗಿಸಿರಲಿಲ್ಲ' ಎಂದು ತಿಳಿಸಲಾಗಿದೆ.

'ಕೆ.ಪಿ.ಗೋಸಾವಿ, ಆತನ ಸಹಚರ ಸಾನ್ವಿಲ್ ಡಿಸೋಜ ಹಾಗೂ ಇತರರು ಆರ್ಯನ್ ಕುಟುಂಬದವರ ಬಳಿ ₹25 ಕೋಟಿ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಬಳಿಕ ಅದನ್ನು ₹18 ಕೋಟಿಗೆ ಇಳಿಸಿದ್ದರು. ಮುಂಗಡವಾಗಿ ₹50 ಲಕ್ಷ ಪಡೆದಿದ್ದ ಇವರು ಕ್ರಮೇಣ ಒಂದಷ್ಟು ಮೊತ್ತವನ್ನು ಶಾರುಕ್ ಕುಟುಂಬಕ್ಕೆ ಹಿಂದಿರುಗಿಸಿದ್ದರು' ಎಂದು ಎಫ್‌ಐಆರ್‌ನಲ್ಲಿ ಹೇಳಲಾಗಿದೆ.

'2021ರ ಅಕ್ಟೋಬರ್ 2ರಂದು ಐಷಾರಾಮಿ ಹಡಗಿನಲ್ಲಿ ನಡೆದಿದ್ದ ಡ್ರಗ್ಸ್ ಪಾರ್ಟಿ ಮೇಲೆ ದಾಳಿ ನಡೆಸಿದ್ದ ಎನ್‌ಸಿಬಿ, ಆರ್ಯನ್ ಸೇರಿದಂತೆ ಅನೇಕರನ್ನು ಬಂಧಿಸಿತ್ತು. ಬಳಿಕ ಗೋಸಾವಿಯ ಖಾಸಗಿ ವಾಹನದಲ್ಲೇ ಅವರನ್ನೆಲ್ಲಾ ಎನ್‌ಸಿಬಿ ಕಚೇರಿಗೆ ಕರೆತರಲಾಗಿತ್ತು. ತಮಗೆ ಪರಿಚಿತರಾಗಿದ್ದ ಗೋಸಾವಿ ಹಾಗೂ ಪ್ರಭಾಕರ್ ಸೈಲ್ ಎಂಬುವರನ್ನು ಪ್ರಕರಣದ ಪ್ರತ್ಯಕ್ಷ ಸಾಕ್ಷ್ಯಗಳನ್ನಾಗಿ ಹೆಸರಿಸುವಂತೆ ಅಧಿಕಾರಿಗಳಿಗೆ ಸಮೀರ್ ಅವರೇ ನಿರ್ದೇಶನ ನೀಡಿದ್ದರು. ಆರೋಪಿಗಳ ವಿಚಾರಣೆಯ ಹೊಣೆಯನ್ನು ಗೋಸಾವಿಗೆ ವಹಿಸುವಂತೆ ಎನ್‌ಸಿಬಿಯ ಆಗಿನ ಅಧೀಕ್ಷಕ ವಿ.ವಿ.ಸಿಂಗ್ ಅವರಿಗೆ ವಾಂಖೆಡೆ ಸೂಚಿಸಿದ್ದರು' ಎಂದು ಹೇಳಲಾಗಿದೆ.

ಶುಭಮನ್ ಶತಕ, ಮಿಂಚಿದ ಶಮಿ

ಪ್ಲೇ ಆಫ್ ಹಂತ ಪ್ರವೇಶಿಸಿದ ಗುಜರಾತ್ ಟೈಟನ್ಸ್ ತಂಡ; ಹೊರಬಿದ್ದ ಸನ್‌ರೈಸರ್ಸ್ ಹೈದರಾಬಾದ್

ಅಹಮದಾಬಾದ್ (ಪಿಟಿಐ): ಆರಂಭ ಆಟಗಾರ ಶುಭಮನ್ ಗಿಲ್ ಗಳಿಸಿದ ಬಿರುಸಿನ ಶತಕ, ಮೊಹಮ್ಮದ್ ಶಮಿ ಮತ್ತು ಮೋಹಿತ್ ಶರ್ಮಾ ಅವರ ಮೊನಚಾದ ಬೌಲಿಂಗ್ ನೆರವಿನಿಂದ ಗುಜರಾತ್ ಟೈಟನ್ಸ್ ತಂಡ ಐಪಿಎಲ್ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ 34 ರನ್‌ಗಳಿಂದ ಗೆದ್ದಿತು.

ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಸೋಮವಾರ ಮೊದಲು ಬ್ಯಾಟ್ ಮಾಡಿದ ಟೈಟನ್ಸ್ 20 ಓವರ್‌ಗಳಲ್ಲಿ 9 ವಿಕೆಟ್‌ಗೆ 188 ರನ್ ಗಳಿಸಿದರೆ, ಸನ್‌ರೈಸರ್ಸ್ ತಂಡ 9 ವಿಕೆಟ್‌ಗಳಿಗೆ 154 ರನ್ ಗಳಿಸಲಷ್ಟೇ ಶಕ್ತವಾಯಿತು.

ಈ ಗೆಲುವಿನ ಮೂಲಕ ಹಾರ್ದಿಕ್ ಪಾಂಡ್ಯ ಬಳಗ 18 ಪಾಯಿಂಟ್ಸ್‌ಗಳೊಂದಿಗೆ ಪ್ಲೇ ಆಫ್ ಪ್ರವೇಶಿಸಿತಲ್ಲದೆ, ಅಗ್ರಸ್ಥಾನವನ್ನು ಮತ್ತಷ್ಟು ಬಲಪಡಿಸಿಕೊಂಡಿತು. ಹೈದರಾಬಾದ್ ತಂಡದ ಪ್ಲೇ ಆಫ್ ಸಾಧ್ಯತೆ ಅಸ್ತಮಿಸಿತು.

ಕೇವಲ 58 ಎಸೆತಗಳಲ್ಲಿ ಒಂದು ಸಿಕ್ಸರ್, 13 ಬೌಂಡರಿಗಳಿದ್ದ 101 ರನ್ ಸಿಡಿಸಿದ ಗಿಲ್ ಅವರು ಟೈಟನ್ಸ್ ತಂಡದ ಉತ್ತಮ ಮೊತ್ತಕ್ಕೆ ಕಾರಣರಾದರು. ಆ ಬಳಿಕ ಮೊಹಮ್ಮದ್ ಶಮಿ (21ಕ್ಕೆ 4) ಮತ್ತು ಮೋಹಿತ್ (28ಕ್ಕೆ 4) ಬಿಗುವಾದ ದಾಳಿ ನಡೆಸಿ ಎದುರಾಳಿ ತಂಡವನ್ನು ಕಟ್ಟಿಹಾಕಿದರು.

ಸವಾಲಿನ ಗುರಿ ಬೆನ್ನಟ್ಟಿದ ಏಡನ್ ಮರ್ಕರಂ ಬಳಗ 29 ರನ್ ಗಳಿಸುವಷ್ಟರಲ್ಲಿ 4 ವಿಕೆಟ್ ಕಳೆದುಕೊಂಡಿತು. ಶಮಿ ಆರಂಭಿಕ ಆಘಾತ ನೀಡಿದರೆ, ಮೋಹಿತ್ ಅವರು ಮಧ್ಯಮ ಕ್ರಮಾಂಕಕ್ಕೆ ಪೆಟ್ಟುಕೊಟ್ಟರು.

ಸನ್‌ರೈಸರ್ಸ್ ತಂಡದ ಹೆನ್ರಿಕ್ ಕ್ಲಾಸೆನ್ (64 ರನ್, 44 ಎ) ಮತ್ತು ಭುವನೇಶ್ವರ್ ಕುಮಾರ್ (27 ರನ್, 26 ಎ.) ಹೊರತುಪಡಿಸಿ ಇತರೆ ಎಲ್ಲರೂ ವಿಫಲರಾದರು. ಭುವನೇಶ್ವರ್ (30ಕ್ಕೆ5) ಬೌಲಿಂಗ್‌ನಲ್ಲೂ ಮಿಂಚಿದ್ದರು.

ಗಿಲ್, ಸುದರ್ಶನ್ ಆಸರೆ: ಕ್ಯಾನ್ಸರ್ ಜಾಗೃತಿ ಮೂಡಿಸಲು ತಿಳಿಗುಲಾಬಿ ಬಣ್ಣದ ಜೆರ್ಸಿ ಧರಿಸಿ ಆಡಲು ಇಳಿದ ಗುಜರಾತ್ ತಂಡಕ್ಕೆ ಭುವನೇಶ್ವರ್ ಮೊದಲ ಓವರ್‌ನಲ್ಲೇ ಆಘಾತ ನೀಡಿದ್ದರು. ವೃದ್ಧಿಮಾನ್ ಸಹಾ ಖಾತೆ ತೆರೆಯುವ ಮೊದಲೇ ಎರಡನೇ ಸ್ಲಿಪ್‌ನಲ್ಲಿ ಕ್ಯಾಚಿತ್ತರು. ಆದರೆ ಗಿಲ್ ಜೊತೆಗೂಡಿದ ಸಾಯಿ ಸುದರ್ಶನ್ (47, 6 ಬೌಂ, 1ಸಿ) ತಂಡವನ್ನು ಸುರಕ್ಷಿತ ಸ್ಥಿತಿಗೆ ತಲುಪಿಸಿದರು. ಭುವನೇಶ್ವರ್ ಮಾಡಿದ ಮೂರನೇ ಓವರ್‌ನಲ್ಲಿ ಸುದರ್ಶನ್ ಮತ್ತು ಗಿಲ್ ಮೂರು ಸೊಗಸಾದ ಬೌಂಡರಿ ಸೇರಿದಂತೆ 15 ರನ್ ಸೇರಿಸಿ ರನ್ ವೇಗಕ್ಕೆ ಚಾಲನೆ ನೀಡಿದರು.

ಸುದರ್ಶನ್ ಜೊತೆ ಗಿಲ್ ಎರಡನೇ ವಿಕೆಟ್‌ಗೆ ಸೇರಿಸಿದ 147 ರನ್‌ಗಳ ಬಲದಿಂದ ಒಂದು ಹಂತದಲ್ಲಿ ಟೈಟನ್ಸ್ ತಂಡ ಸುಲಭವಾಗಿ 200 ರನ್‌ಗಳ ಮೊತ್ತವನ್ನು ದಾಟುವಂತೆ ಕಂಡಿತ್ತು. ಆದರೆ ಕೊನೆಯ ಐದು ಓವರ್‌ಗಳಲ್ಲಿ ಸನ್‌ರೈಸರ್ಸ್ ತಂಡ ಎದುರಾಳಿಗಳ ಬಿರುಸಿನ ಆಟಕ್ಕೆ ಕಡಿವಾಣ ತೊಡಿಸಿತು. ಈ ಅವಧಿಯಲ್ಲಿ 34 ರನ್‌ಗಳಷ್ಟೇ ಬಂದವು. ಅಷ್ಟೇ ಅಲ್ಲ, ಏಳು ವಿಕೆಟ್‌ಗಳನ್ನೂ ಕಳೆದುಕೊಂಡಿತು.

ಉತ್ತಮ ಲಯದಲ್ಲಿರುವ ಗಿಲ್ ಅವರು ಡ್ರೈವ್, ಫ್ಲಿಕ್, ಪುಲ್ ಹೊಡೆತಗಳ ಮೂಲಕ ರನ್ ಪೇರಿಸುತ್ತ ಹೋದರು. ವಿಜಯ್ ಶಂಕರ್ ಬದಲು ಅವಕಾಶ ಪಡೆದ ಸುದರ್ಶನ್ ಅದನ್ನು ಪೂರ್ಣವಾಗಿ ಬಳಸಿಕೊಂಡರು. 10 ಓವರುಗಳಲ್ಲೇ ಮೊತ್ತ 100 ದಾಟಿತ್ತು. ಮಾರ್ಕೊ ಜೆನ್ಸೆನ್ 15ನೇ ಓವರ್‌ನಲ್ಲಿ ಕೊನೆಗೂ ಸುದರ್ಶನ್ ವಿಕೆಟ್ ಪಡೆದು ಜೊತೆಯಾಟ ಮುರಿದರು.

ಹಾರ್ದಿಕ್ ಪಾಂಡ್ಯ, ಡೇವಿಡ್ ಮಿಲ್ಲರ್, ರಾಹುಲ್ ತೆವಾಟಿಯಾ ಹೆಚ್ಚು ಹೊತ್ತು ನಿಲ್ಲಲಿಲ್ಲ. ಇನ್ನೊಂದೆಡೆ ತಂಡದ ಮೊತ್ತ ಹೆಚ್ಚಿಸುತ್ತ ಹೋದ ಗಿಲ್ 19ನೇ ಓವರ್‌ನಲ್ಲಿ ಮೂರಂಕಿಯ ಗಡಿ ದಾಟಿದರು. ಇದು ಐಪಿಎಲ್‌ನಲ್ಲಿ ಅವರ ಚೊಚ್ಚಲ ಶತಕ. ಕಳೆದ ವರ್ಷ ಗಳಿಸಿದ 96 ರನ್ ಈ ಹಿಂದಿನ ಅವರ ಅತ್ಯಧಿಕ ಸ್ಕೋರ್ ಆಗಿತ್ತು.

ಶುಭಮನ್ ಗಿಲ್ ಬ್ಯಾಟಿಂಗ್ —ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್

ಗುಜರಾತ್ ಟೈಟನ್ಸ್ 9ಕ್ಕೆ188 (20 ಓವರ್)
ಸಹಾ ಸಿ ಅಭಿಷೇಕ್ ಬಿ ಭುವನೇಶ್ವರ್ 0 (3ಎ)
ಗಿಲ್ ಸಿ ಸಮದ್ ಬಿ ಭುವನೇಶ್ವರ್ 101 (58ಎ, 4x13, 6x1)
ಸುದರ್ಶನ್ ಸಿ ನಟರಾಜನ್ ಬಿ. ಜೆನ್ಸೆನ್ 47 (36ಎ, 4x6, 6x1)
ಹಾರ್ದಿಕ್ ಸಿ ತ್ರಿಪಾಠಿ ಬಿ ಭುವನೇಶ್ವರ್ 8 (6ಎ, 4x1)
ಮಿಲ್ಲರ್ ಸಿ ಮರ್ಕರಂ ಬಿ ನಟರಾಜನ್ 7 (5ಎ, 4x1)
ತೆವಾಟಿಯಾ ಸಿ ಜೆನ್ಸೆನ್ ಬಿ ಫಾರೂಕಿ 3 (3ಎ)
ಶನಕ ಔಟಾಗದೇ 9 (7ಎ, 4X1)
ರಶೀದ್ ಸಿ ಕ್ಲಾಸೆನ್ ಬಿ ಭುವನೇಶ್ವರ್ 0 (1ಎ)
ಅಹ್ಮದ್ ರನೌಟ್ (ಕ್ಲಾಸೆನ್/ಭುವನೇಶ್ವರ್) 0 (1ಎ)
ಶಮಿ ಸಿ ಜೆನ್ಸೆನ್ ಬಿ ಭುವನೇಶ್ವರ್ 0 (1ಎ)
ಮೋಹಿತ್ ಔಟಾಗದೆ 0 (1ಎ)
ಇತರೆ: 13 (ಬೈ 1, ನೋಬಾಲ್ 2, ವೈಡ್ 10)
ವಿಕೆಟ್ ಪತನ: 1–0 (ವೃದ್ಧಿಮಾನ್ ಸಹಾ, 0.3), 2–147 (ಸಾಯಿ ಸುದರ್ಶನ್, 14.1), 3–156 (ಹಾರ್ದಿಕ್ ಪಾಂಡ್ಯ 15.2), 4–169 (ಡೇವಿಡ್ ಮಿಲ್ಲರ್, 16.4), 5–175 (ರಾಹುಲ್ ತೆವಾಟಿಯಾ, 17.3), 6–186 (ಶುಭಮನ್ ಗಿಲ್, 19.1), 7–186 (ರಶೀದ್ ಖಾನ್, 19.2), 8–186 (ನೂರ್ ಅಹ್ಮದ್, 19.3), 9–187 (ಮೊಹಮ್ಮದ್ ಶಮಿ, 19.5)
ಬೌಲಿಂಗ್: ಭುವನೇಶ್ವರ್ ಕುಮಾರ್ 4–0–30–5, ಮಾರ್ಕೊ ಜೆನ್ಸೆನ್ 4–0–39–1, ಫಜ್ಲುಲ್ಲಾ ಫಾರೂಕಿ 3–0–31–1, ಟಿ.ನಟರಾಜನ್ 4–0–34–1, ಏಡನ್ ಮರ್ಕರಂ 1–0–13–0, ಮಯಂಕ್ ಮಾರ್ಕಂಡೆ 3–0–27–0, ಅಭಿಷೇಕ್ ಶರ್ಮಾ 1–0–13–0

ಸನ್‌ರೈಸರ್ಸ್ ಹೈದರಾಬಾದ್ 9ಕ್ಕೆ 154 (20 ಓವರ್)
ಅನ್ಮೋಲ್‌ಪ್ರೀತ್ ಸಿ ರಶೀದ್ ಬಿ ಶಮಿ 5 (4ಎ, 4X1)
ಅಭಿಷೇಕ್ ಸಿ ಸಹಾ ಬಿ ದಯಾಳ್ 5 (5ಎ, 4X1)
ಮರ್ಕರಂ ಸಿ ಶನಕ ಬಿ ಶಮಿ 10 (10ಎ, 4X1)
ತ್ರಿಪಾಠಿ ಸಿ ತೆವಾಟಿಯಾ ಬಿ ಶಮಿ 1 (2ಎ)
ಕ್ಲಾಸೆನ್ ಸಿ ಮಿಲ್ಲರ್ ಬಿ ಶಮಿ 64 (44 ಎ., 4X4, 6X3)
ಸನ್ವೀರ್ ಸಿ ಸುದರ್ಶನ್ ಬಿ ಮೋಹಿತ್ 7 (6ಎ, 6X1)
ಸಮದ್ ಸಿ ಮಾವಿ (ಬದಲಿ) ಬಿ ಮೋಹಿತ್ 4 (3ಎ)
ಜೆನ್ಸೆನ್ ಸಿ ಪಾಂಡ್ಯ ಬಿ ಮೋಹಿತ್ 3 (6 ಎ)
ಭುವನೇಶ್ವರ್ ಸಿ ರಶೀದ್ ಬಿ ಮೋಹಿತ್ 27 (26 ಎ, 4X3)
ಮಾರ್ಕಂಡೆ ಔಟಾಗದೆ 18 (9 ಎ., 4X2, 6X1)
ಫರೂಕಿ ಔಟಾಗದೆ 1 (5 ಎ)
ಇತರೆ: 9 (ಲೆಗ್ ಬೈ 4, ವೈಡ್ 5)
ವಿಕೆಟ್ ಪತನ: 1-6 (ಅನ್ಮೋಲ್‌ಪ್ರೀತ್ ಸಿಂಗ್, 0.5), 2-11 (ಅಭಿಷೇಕ್ ಶರ್ಮಾ, 1.4), 3-12 (ರಾಹುಲ್ ತ್ರಿಪಾಠಿ, 2.1), 4-29 (ಏಡನ್ ಮರ್ಕರಂ, 4.2), 5-45 (ಸನ್ವೀರ್ ಸಿಂಗ್, 6.1), 6-49 (ಅಬ್ದುಲ್ ಸಮದ್, 6.4), 7–59 (ಮಾರ್ಕೊ ಜೆನ್ಸೆನ್, 8.6), 8–127 (ಹೆನ್ರಿಕ್ ಕ್ಲಾಸೆನ್; 16.5), 9–147 (ಭುವನೇಶ್ವರ್ ಕುಮಾರ್; 18.4)
ಬೌಲಿಂಗ್: ಮೊಹಮ್ಮದ್ ಶಮಿ 4–0–21–4, ಯಶ್ ದಯಾಳ್ 4–0–31–1, ರಶೀದ್ ಖಾನ್ 4–0–28–0, ಮೋಹಿತ್ ಶರ್ಮಾ 4–0–28–4, ನೂರ್ ಅಹಮದ್ 2.5–0–35–0, ರಾಹುಲ್ ತೆವಾಟಿಯಾ 1.1–0–7–0
ಫಲಿತಾಂಶ: ಟೈಟನ್ಸ್‌ಗೆ 34 ರನ್ ಗೆಲುವು

ಕೆಕೆಆರ್ ನಾಯಕ ನಿತೀಶ್ ರಾಣಾಗೆ ₹24 ಲಕ್ಷ ದಂಡ

ಚೆನ್ನೈ (ಪಿಟಿಐ): ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಭಾನುವಾರ ನಡೆದ ಪಂದ್ಯದಲ್ಲಿ ನಿಧಾನಗತಿಯಲ್ಲಿ ಓವರುಗಳನ್ನು ಮಾಡಿದ್ದಕ್ಕೆ ಕೋಲ್ಕತ್ತ ನೈಟ್ ರೈಡರ್ಸ್ ತಂಡದ ನಾಯಕ ನಿತೀಶ್ ರಾಣಾ ಅವರಿಗೆ ₹24 ಲಕ್ಷ ದಂಡ ವಿಧಿಸಲಾಗಿದೆ.

‘ಎರಡನೇ ಬಾರಿ ಈ ರೀತಿ ತಪ್ಪೆಸಗಿರುವ ಕಾರಣ ಐಪಿಎಲ್ ನಿಯಮಾವಳಿ ಪ್ರಕಾರ ರಾಣಾ ಅವರಿಗೆ ಇಷ್ಟೊಂದು ದಂಡ ವಿಧಿಸಲಾಗಿದೆ. ಇಂಪ್ಯಾಕ್ಟ್ ಸಬ್‌ಸ್ಟಿಟ್ಯೂಟ್ ಸೇರಿದಂತೆ ಆಡಿದ 11ರ ತಂಡದಲ್ಲಿದ್ದ ಪ್ರತಿಯೊಬ್ಬ ಆಟಗಾರನಿಗೆ ₹6 ಲಕ್ಷ ಅಥವಾ ಪಂದ್ಯ ಶುಲ್ಕದ ಶೇ 25ರಷ್ಟು ದಂಡ– ಇವೆರಡರಲ್ಲಿ ಯಾವುದು ಕಡಿಮೆಯೊ ಅದನ್ನು ದಂಡವಾಗಿ ವಿಧಿಸಲಾಗಿದೆ’ ಎಂದು ಐಪಿಎಲ್ ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಗಾಲ್ಫ್: ಅದಿತಿ ಅಶೋಕ್‌ಗೆ 5ನೇ ಸ್ಥಾನ

ಕ್ಲಿಫ್ಟನ್, ನ್ಯೂಜೆರ್ಸಿ (ಪಿಟಿಐ/ಎಎಫ್‌ಪಿ): ಬೆಂಗಳೂರಿನ ಅದಿತಿ ಅಶೋಕ್ ಅವರು ಎಲ್‌ಪಿಜಿಎ ಟೂರ್ ‘ಕಾಗ್ನಿಜೆಂಟ್ ಫೌಂಡರ್ಸ್ ಕಪ್’ ಗಾಲ್ಫ್ ಟೂರ್ನಿಯಲ್ಲಿ ಜಂಟಿ ಐದನೇ ಸ್ಥಾನ ಪಡೆದರು.

ಇಲ್ಲಿನ ಅಪ್ಪರ್ ಮಾಂಟ್‌ಕ್ಲೇರ್ ಕಂಟ್ರಿ ಕ್ಲಬ್ ಕೋರ್ಸ್‌ನಲ್ಲಿ ಭಾನುವಾರ ಕೊನೆಗೊಂಡ ಟೂರ್ನಿಯಲ್ಲಿ ಅದಿತಿ ಒಟ್ಟು 281 ಸ್ಕೋರ್ ಮಾಡಿದರು.

ಕೊನೆಯ ಸುತ್ತಿನಲ್ಲಿ ನಿಖರ ಪ್ರದರ್ಶನ ನೀಡುವಲ್ಲಿ ವಿಫಲರಾದ ಅವರು 73 ಸ್ಟ್ರೋಕ್‌ಗಳನ್ನು ತೆಗೆದುಕೊಂಡರು. ಮೊದಲ ಮೂರು ಸುತ್ತುಗಳನ್ನು ಕ್ರಮವಾಗಿ 69, 68, 71 ಸ್ಟ್ರೋಕ್‌ಗಳೊಂದಿಗೆ ಕೊನೆಗೊಳಿಸಿದ್ದರು.

ಕೊರಿಯಾದ ಜಿನ್ ಯಾಂಗ್ ಕೊ ಚಾಂಪಿಯನ್ ಆದರು. ನಾಲ್ಕು ಸುತ್ತುಗಳ ಬಳಿಕ ಕೊ ಮತ್ತು ಕಳೆದ ಬಾರಿಯ ಚಾಂಪಿಯನ್ ಆಸ್ಟ್ರೇಲಿಯಾದ ಮಿನ್‌ಜೀ ಲೀ ಅವರು ತಲಾ 275 ಸ್ಕೋರ್‌ಗಳೊಂದಿಗೆ ಸಮಬಲ ಸಾಧಿಸಿದ್ದರು. ‘ಪ್ಲೇ ಆಫ್’ನಲ್ಲಿ ಕೊ ಅವರಿಗೆ ಅದೃಷ್ಟ ಒಲಿಯಿತು.

ಪ್ಲೇ ಆಫ್ ಸ್ಥಾನ ಪಡೆಯಲು ಮಹತ್ವದ ಪಂದ್ಯ

ಮುಂಬೈಗೆ ಲಖನೌ ಸವಾಲು

ಲಖನೌ (ಪಿಟಿಐ): ಐಪಿಎಲ್ ಟೂರ್ನಿ ಅಂತಿಮ ಹಂತದತ್ತ ಕಾಲಿಟ್ಟಿರುವಂತೆ ಮುಂಬೈ ತಂಡ ಯಶಸ್ಸಿನ ಓಟದಲ್ಲಿದೆ. ಲಖನೌ ಸೂಪರ್ ಜೈಂಟ್ಸ್ ತಂಡ ಮಂಗಳವಾರ ನಡೆಯುವ ಪಂದ್ಯದಲ್ಲಿ ಮುಂಬೈ ತಂಡದ ಈ ನಾಗಾಲೋಟಕ್ಕೆ ಲಗಾಮು ಹಾಕುವ ಗುರಿಯೊಡನೆ ಕಣಕ್ಕಿಳಿಯಲಿದೆ.

ಒಂದು ಹಂತದಲ್ಲಿ ಪಾಯಿಂಟ್ ಪಟ್ಟಿಯ ಕೆಳಭಾಗದಲ್ಲಿದ್ದ ರೋಹಿತ್ ಶರ್ಮಾ ಪಡೆ, ಕಳೆದ ಕೆಲವು ಪಂದ್ಯಗಳ ಯಶಸ್ಸಿನಿಂದ ಈಗ 14 ಪಾಯಿಂಟ್‌ಗಳೊಡನೆ ಮೂರನೇ ಸ್ಥಾನಕ್ಕೆ ಜಿಗಿದಿದೆ. ಲಖನೌ ತಂಡ 12 ಪಂದ್ಯಗಳನ್ನು ಆಡಿದ್ದು 13 ಪಾಯಿಂಟ್ಸ್ ನೊಡನೆ ನಾಲ್ಕನೇ ಸ್ಥಾನದಲ್ಲಿದೆ.

ಎರಡೂ ತಂಡಗಳು ಗೆಲುವಿನೊಡನೆ ಪ್ಲೇ ಆಫ್ ಹಂತಕ್ಕೆ ಸ್ಥಾನ ಖಚಿತಪಡಿಸಲು, ಅಟಲ್ ಬಿಹಾರಿ ವಾಜಪೇಯಿ ಕ್ರೀಡಾಂಗಣದಲ್ಲಿ ಪೈಪೋಟಿಗಿಳಿಯಲಿವೆ.

ಆರಂಭದಲ್ಲಿ ಪರದಾಡಿದ್ದ ಪ್ರಮುಖ ಬ್ಯಾಟರ್ ಸೂರ್ಯಕುಮಾರ್ ಯಾದವ್ ಲಯಕ್ಕೆ ಮರಳಿದ್ದು, ಅವರ ಅಬ್ಬರದ ಆಟದಿಂದಾಗಿ ಮುಂಬೈ ಒಂದರ ಮೇಲೊಂದು ಗೆಲುವು ಸಾಧಿಸುತ್ತಿದೆ. ನಾಯಕ ರೋಹಿತ್ ಅವರಿಂದ ತಂಡ ಉತ್ತಮ ಆಟ ನಿರೀಕ್ಷಿಸುತ್ತಿದೆ.

ತಿಲಕ್ ವರ್ಮಾ ಗೈರುಹಾಜರಿಯನ್ನು ಇನ್ನೊಬ್ಬ ಬ್ಯಾಟರ್ ನೇಹಲ್ ವಡೇರಾ ಸಮರ್ಥವಾಗಿ ತುಂಬಿದ್ದು, ಚೇತೋಹಾರಿ ಪ್ರದರ್ಶನ ನೀಡುತ್ತಿದ್ದಾರೆ. ಬೌಲಿಂಗ್ ವಿಭಾಗದಲ್ಲಿ ಅನುಭವಿ ಪಿಯೂಷ್ ಚಾವ್ಲಾ ಪರಿಣಾಮಕಾರಿ ಆಗಿದ್ದಾರೆ. ಆಕಾಶ್ ಬಧ್ವಾಲ್ ವೇಗದ ದಾಳಿಗೆ ಬಲ ತುಂಬಿದ್ದಾರೆ. ದೌರ್ಬಲ್ಯ ಎಂದರೆ ಕೊನೆಯ ಕೆಲವು ಓವರ್‌ಗಳಲ್ಲಿ ರನ್ ಸೋರುತ್ತಿರುವುದು. ಜೋಫ್ರಾ ಅರ್ಚರ್ ಬದಲು ಸ್ಥಾನ ಪಡೆದಿರುವ ವೇಗದ ಬೌಲರ್ ಕ್ರಿಸ್ ಜೋರ್ಡಾನ್ ಅವರೂ ಧಾರಾಳಿ ಎನಿಸಿದ್ದಾರೆ.

ಲಖನೌ ತಂಡದ ಕಡೆ ಲೆಗ್ ಸ್ಪಿನ್ನರ್ ರವಿ ಬಿಷ್ಣೋಯಿ ಹೆಚ್ಚು ಪರಿಣಾಮಕಾರಿ ಆಗಿದ್ದಾರೆ. ಹೈದರಾಬಾದ್ ವಿರುದ್ಧ ನಾಯಕ ಕೃಣಾಲ್ ಪಾಂಡ್ಯ ಅವರ ಎಡಗೈ ಸ್ಪಿನ್ ಕೂಡ ನೆರವಿಗೆ ಬಂದಿತ್ತು. ಹಳೆಯಹುಲಿ ಅಮಿತ್ ಮಿಶ್ರಾ ಕೂಡ ಆಡುವ ಸಾಧ್ಯತೆಯಿದೆ.

ಪಂದ್ಯ ಆರಂಭ: ರಾತ್ರಿ 7.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಸಿನೆಮಾ ಆ್ಯಪ್

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಗುಜರಾತ್	13	9	4	0	18	0.835
ಚೆನ್ನೈ	13	7	5	1	15	0.381
ಮುಂಬೈ	12	7	5	0	14	-0.117
ಲಖನೌ	12	6	5	1	13	0.309
ಬೆಂಗಳೂರು	12	6	6	0	12	0.166
ರಾಜಸ್ಥಾನ	13	6	7	0	12	0.140
ಕೋಲ್ಕತ್ತ	13	6	7	0	12	-0.256
ಪಂಜಾಬ್	12	6	6	0	12	-0.268
ಹೈದರಾಬಾದ್	12	4	8	0	8	-0.575
ಡೆಲ್ಲಿ	12	4	8	0	8	-0.686

ಸೋಮವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ
https://www.prajavani.net/cricket

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)

ಆಟಗಾರ	ತಂಡ	ವಿಕೆಟ್
ಶಮಿ	ಗುಜರಾತ್	23

ಆರೆಂಜ್ ಕ್ಯಾಪ್ (ಹೆಚ್ಚು ರನ್)

ಆಟಗಾರ	ತಂಡ	ರನ್
ಡುಪ್ಲೆಸಿ	ಆರ್‌ಸಿಬಿ	631